ಮಂಗಳೂರು
ಬುಧವಾರ, 18 ಫೆಬ್ರವರಿ 2026
ಸಂಪುಟ 47, ಸಂಚಿಕೆ 321 ಪುಟಗಳು 14+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಛತ್ತೀಸ್‌ಗಢ: 22 ನಕ್ಸಲರ ಶರಣಾಗತಿ | ೦೭
ಮಾ.19: ಅಯೋಧ್ಯೆಗೆ ರಾಷ್ಟ್ರಪತಿ | ೦೭
ಟಿ20 ವಿಶ್ವಕಪ್‌ನಿಂದ ಆಸೀಸ್ ಔಟ್ | ೧೩

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಶತಭಿಷೆ

ದಿನದ ಮಾತು

ನಮಗೆ ಇಷ್ಟವಾದುದನ್ನು ನಾವು ಸುಲಭವಾಗಿ ನಂಬುತ್ತೇವೆ.
▲ ಲೋಕೋಕ್ತಿ

ಸ್ವರ್ಗ ಮತ್ತು ನರಕ ಲೋಕಗಳ ಕಲ್ಪನೆಯ ಹಿಂದಿನ ವಿಚಾರಗಳು

ಪದ ಸಂಚಲನ
◆ ಡಾ. ವಿಶ್ವನಾಥ ಸುಂಕಸಾಳ
◆ ಪುಟ ೬

ಕಿರುಸುದ್ದಿ

ಬಾಂಗ್ಲಾ ಪ್ರಧಾನಿ ಆಗಿ ರೆಹಮಾನ್ ಪ್ರಮಾಣ



◆ **ಢಾಕಾ:** ಬಾಂಗ್ಲಾದ ನೂತನ ಪ್ರಧಾನಿಯಾಗಿ, ಮಾಜಿ ಪ್ರಧಾನಿ ಖಲೀದಾ ಜಿಯಾ ಅವರ ಪುತ್ರ, ಬಿಎನ್‌ಪಿ ನಾಯಕ ತಾರೀಖ್ ರೆಹಮಾನ್ ಮಂಗಳವಾರ ಪ್ರಮಾಣವಚನ ಸ್ವೀಕರಿಸಿದರು. ಈ ಮೂಲಕ ಮುಹಮದ್ ಯೂನುಸ್ ನೇತೃತ್ವದ ಮಧ್ಯಂತರ ಸರಕಾರದಲ್ಲಿ ಕಳೆದ 18 ತಿಂಗಳು ಮೇರೆಮೀರಿದ್ದ ಅಲ್ಪಸಂಖ್ಯಾತ ಹಿಂದುಗಳ ಹತ್ಯೆಸಹಿತ ಹಿಂಸಾಚಾರ, ಅರಾಜಕತೆ, ರಾಜಕೀಯ ಅಸ್ಥಿರತೆಗೆ ಕೊನೆ ಬಿದ್ದಂತಾಗಿದೆ. ಬಾಂಗ್ಲಾದೇಶದ ಉನ್ನತ ರಾಜಕೀಯ ಮತ್ತು ಮಿಲಿಟರಿ ಅಧಿಕಾರಿಗಳ ಉಪಸ್ಥಿತಿಯಲ್ಲಿ , ಜತಿಯಾ ಸಂಸತ್‌ನ ಸೌತ್ ಪ್ಲಾಜಾದ ತೆರೆದ ಜಾಗದಲ್ಲಿ ನಡೆದ ಪ್ರಮಾಣ ಸ್ವೀಕಾರ ಸಮಾರಂಭದಲ್ಲಿ, ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಭಾರತವನ್ನು ಪ್ರತಿನಿಧಿಸಿದ್ದರು. ➡ಪುಟ ೪

ಉಭಯ ದೇಶಗಳ ಮಧ್ಯೆ ವಿಶೇಷ ವ್ಯೂಹಾತ್ಮಕ ಪಾಲುದಾರಿಕೆ | ವಾರ್ಷಿಕ 15 ಶತಕೋಟಿ ವ್ಯವಹಾರ

ಭಾರತ-ಫ್ರಾನ್ಸ್ ಹೂಡಿಕೆ ಬಂಧ

◆ **ಹೊಸದಿಲ್ಲಿ:** ಭಾರತ ಮತ್ತು ಫ್ರಾನ್ಸ್ ದೇಶಗಳು ಮಂಗಳವಾರ 'ವಿಶೇಷ ಜಾಗತಿಕ ವ್ಯೂಹಾತ್ಮಕ ಪಾಲುದಾರಿಕೆ'ಯನ್ನು ಹೊಂದುವ ಮೂಲಕ ತಮ್ಮ ಬಾಂಧವ್ಯಗಳನ್ನು ಇನ್ನಷ್ಟು ಎತ್ತರಕ್ಕೇರಿಸಿಕೊಂಡಿದ್ದು, ಈ ಮೂಲಕ ಉಭಯ ದೇಶಗಳ ನಡುವೆ ರಕ್ಷಣೆ, ವ್ಯಾಪಾರ ಮತ್ತು ನಿರ್ಣಾಯಕ ಖನಿಜಗಳಂತಹ ಪ್ರಮುಖ ಕ್ಷೇತ್ರಗಳಲ್ಲಿ ಸಹಕಾರಕ್ಕೆ ವಿಶೇಷ ಆದ್ಯತೆ ನೀಡಲು ನಿರ್ಧರಿಸಲಾಗಿದೆ.

ಜಾಗತಿಕ ಭೌಗೋಳಿಕ ರಾಜಕೀಯ ಪ್ರಕ್ಷುಬ್ಧತೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಈ ಸವಾಲನ್ನು ಎದುರಿಸುವ ನಿಟ್ಟಿನಲ್ಲಿ 'ಜಾಗತಿಕ ಸ್ಥಿರತೆಯ ಶಕ್ತಿ'ಯಾಗಿ ತಮ್ಮ ದ್ವಿಪಕ್ಷೀಯ ಬಾಂಧವ್ಯ ಗಟ್ಟಿಗೊಳಿಸುವುದಾಗಿ ಭಾರತ ಮತ್ತು ಫ್ರಾನ್ಸ್ ಘೋಷಿಸಿವೆ. ಇದೇ ವೇಳೆ, ಉಭಯ ದೇಶಗಳು 21 ಮಹತ್ವದ ಒಪ್ಪಂದಗಳಿಗೆ ಸಹಿ ಹಾಕಿದ್ದು, ವಾರ್ಷಿಕವಾಗಿ 15 ಬಿಲಿಯನ್ ಡಾಲರ್ ವ್ಯವಹಾರ ನಡೆಸುವ ಬೃಹತ್ ಒಪ್ಪಂದಗಳು ಇವಾಗಿವೆ.



ಇವು ನಿರ್ಣಾಯಕ ಖನಿಜಗಳು, ರಕ್ಷಣೆ, ಉನ್ನತ ತಂತ್ರಜ್ಞಾನ, ನವೀಕರಿಸಬಹುದಾದ ಇಂಧನ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿನ ಸಹಕಾರವನ್ನು ವರ್ಧಿಸುವ ಒಪ್ಪಂದಗಳಾಗಿವೆ. ಈ ಪೈಕಿ ಒಂದು ರಕ್ಷಣಾ ಸಹಕಾರ ಮತ್ತು ಭಾರತ್ ಇಲೆಕ್ಟ್ರಾನಿಕ್ ಲಿಮಿಟೆಡ್ ಮತ್ತು ಫ್ರೆಂಚ್ ರಕ್ಷಣಾ ದೈತ್ಯ ಸಾಫ್ರಾನ್ ನಡುವಣ ಜಂಟಿ ಉದ್ಯಮವೊಂದಕ್ಕೆ ಸಂಬಂಧಿಸಿದ್ದಾಗಿದೆ. ಈ ಯೋಜನೆಯಡಿ ಹ್ಯಾಮ್ಮರ್ ಕ್ಷಿಪಣಿಗಳನ್ನು ಭಾರತದಲ್ಲೇ ಉತ್ಪಾದಿಸಲು ಅವಕಾಶವಾಗಲಿದೆ. ಹಾಗೆಯೇ ಭಾರತೀಯ ಸೇನೆ ಮತ್ತು ಫ್ರಾನ್ಸ್‌ನ ಭೂ ಸೇನಾ ವ್ಯವಸ್ಥೆಗಳಲ್ಲಿ ಪರಸ್ಪರ ಅಧಿಕಾರಿಗಳನ್ನು ನಿಯೋಜಿಸುವ ಪ್ರತ್ಯೇಕ ಒಪ್ಪಂದವೊಂದಕ್ಕೂ ಸಹಿ ಮಾಡಲಾಯಿತು.ರಕ್ಷಣಾ ಸಂಗ್ರಹ, ಕೃತಕ ಬುದ್ಧಿಮತ್ತೆ, ಸ್ವಚ್ಛ ಇಂಧನ, ವ್ಯಾಪಾರ ಪಾಲುದಾರಿಕೆ ಸೇರಿವೆ.ಇಂಡೋ-ಫ್ರಾನ್ಸ್ ಸೆಂಟರ್ ಫಾರ್ ಎಐ ಇನ್ ಹೆಲ್ತ್, ಇಂಡೋ-ಫ್ರಾನ್ಸ್ ಸೆಂಟರ್ ಫಾರ್ ಡಿಜಿಟಲ್ ಸೈನ್ಸ್ ಆಂಡ್ ಟೆಕ್ನಾಲಜಿ, ನ್ಯಾಷನಲ್ ಸೆಂಟರ್ ಆಫ್ ಅಲಯನ್ಸ್ ಫಾರ್ ಸ್ಕಿಲ್ಲಿಂಗ್ ಇನ್ ಏರೋನ್ಯಾಟಿಕ್ಸ್‌ಗಳಿಗೂ ಉಭಯ ನಾಯಕರು ಈ ಸಂದರ್ಭ ಚಾಲನೆ ನೀಡಿದರು. ಮ್ಯಾಕ್ರಾನ್ 3 ದಿನಗಳ ಭಾರತ ಭೇಟಿಗಾಗಿ ಮುಂಬೈಗೆ ಆಗಮಿಸಿದ್ದು, ಅಲ್ಲೇ ಉಭಯ ನಾಯಕರು ಮಾತುಕತೆ ನಡೆಸಿದರು. ಜಗತ್ತು ಪ್ರಕ್ಷುಬ್ಧತೆ, ಅನಿಶ್ಚಿತತೆ ಎದುರಿಸುತ್ತಿರುವ ಈ ಸನ್ನಿವೇಶದಲ್ಲಿ ಭಾರತ-ಫ್ರಾನ್ಸ್‌ಗಳ ಪಾಲುದಾರಿಕೆಯು ಜಾಗತಿಕ ಸ್ಥಿರತೆಗಾಗಿ ಇರುವ ಶಕ್ತಿಯಾಗಲಿದೆ. ➡ಪುಟ ೪



ಭಾರತ ಫ್ರಾನ್ಸ್‌ನ ಅತ್ಯಂತ ವಿಶ್ವಾಸಾರ್ಹ ಪಾಲುದಾರ

ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರಾನ್ ಮಾತನಾಡಿ, ಭಾರತವು ಫ್ರಾನ್ಸ್‌ನ ಅತ್ಯಂತ ವಿಶ್ವಾಸಾರ್ಹ ಪಾಲುದಾರರಲ್ಲೊಂದಾಗಿದೆ. ನಮ್ಮ ಈ ಬಾಂಧವ್ಯ ರಾಫೇಲ್ ಯುದ್ಧ ವಿಮಾನಗಳಿಂದ ಹಿಡಿದು ಸಬ್‌ಮೆರೀನ್‌ಗಳವರೆಗೆ ನಮ್ಮ ರಕ್ಷಣಾ ಸಹಕಾರವನ್ನು ವಿಸ್ತರಿಸಿಕೊಳ್ಳುತ್ತಿದ್ದೇವೆ ಎಂದರು. ➡ಪುಟ ೪

ಭಾರತ-ಯುರೋಪ್ ನಂಟಿಗೆ 2026 ಟರ್ನಿಂಗ್ ಪಾಯಿಂಟ್



ಭಾರತ-ಫ್ರಾನ್ಸ್ ಪಾಲುದಾರಿಕೆಗೆ ಮಿತಿಗಳಿಲ್ಲ. ಇದು ಆಳಸಮುದ್ರಗಳಿಂದ ಹಿಡಿದು ಅತ್ಯುನ್ನತ ಪರ್ವತೀಯ ವ್ಯವಸ್ಥೆಯವರೆಗೆ ತಲುಪಬಹುದಾಗಿದೆ ಎಂದು ಮೋದಿ ಮಾರ್ಮಿಕವಾಗಿ ಹೇಳಿದರು. ರಷ್ಯಾ-ಉಕ್ರೇನ್ ಸಂಘರ್ಷ ಮತ್ತು ಪಶ್ಚಿಮ ಏಷ್ಯಾ ಹಾಗೂ ಇಂಡೋ -ಪೆಸಿಫಿಕ್‌ನಲ್ಲಿನ ಸನ್ನಿವೇಶವನ್ನು ಪ್ರಸ್ತಾವಿಸಿ, ಪ್ರಜಾಸತ್ತಾತ್ಮಕ ಮೌಲ್ಯಗಳು ಮತ್ತು ಕಾನೂನಿನ ಆಡಳಿತ ಮತ್ತು ಬಹುಧ್ರುವೀಯ ಜಗತ್ತಿನ ವ್ಯವಸ್ಥೆಯಲ್ಲಿ ನಂಬಿಕೆ ಹೊಂದಿದ್ದೇವೆ. ಎಲ್ಲ ಕಡೆ ಶಾಂತಿ ಸ್ಥಾಪನೆಯೆಡೆಗೆ ನಮ್ಮ ಕಾಳಜಿ, ಸಹಕಾರ ಇರುತ್ತದೆ. ಹಾಗೆಯೇ ಭಯೋತ್ಪಾದನೆಯ ಪಿಡುಗನ್ನು ಅದರ ಎಲ್ಲ ರೂಪ ಮತ್ತು ಅಭಿವ್ಯಕ್ತಿಗಳಲ್ಲಿ ನಿರ್ಮೂಲನೆಗೊಳಿಸುವಲ್ಲೂ ನಮ್ಮೀ ಹಂಚಿಕೆಯ ಬದ್ಧತೆ ಆಗಿದೆ. ಭಾರತ-ಯುರೋಪ್ ಬಾಂಧವ್ಯಕ್ಕೆ 2026 ಟರ್ನಿಂಗ್ ಪಾಯಿಂಟ್ ಆಗಿದ್ದು, ಇದಕ್ಕೆ ಭಾರತ- ಯುರೋಪ್ ನಡುವಣ ಮುಕ್ತ ವ್ಯಾಪಾರ ಒಪ್ಪಂದ ಮತ್ತು ಇಂದಿನ ಒಪ್ಪಂದಗಳೇ ಸಾಕ್ಷಿ ಎಂದರು ಮೋದಿ. ಈ ಸಂದರ್ಭ 'ಭಾರತ-ಫ್ರಾನ್ಸ್ ಈಯರ್ ಆಫ್ ಇನ್ನೋವೇಶನ್'ಯೋಜನೆಗೂ ಚಾಲನೆ ನೀಡಲಾಯಿತು.

ಜಾಗತಿಕವಾಗಿ ಭಾರತ ಎಐ ಸೂಪರ್‌ಪವರ್ ಆಗಲಿ

◆ **ಹೊಸದಿಲ್ಲಿ:** 2047ರ ವೇಳೆಗೆ ಭಾರತವು ಜಾಗತಿಕವಾಗಿ ಟಾಪ್-3 ಕೃತಕ ಬುದ್ಧಿಮತ್ತೆ (ಎಐ) ಸೂಪರ್ ಪವರ್ ರಾಷ್ಟ್ರಗಳಲ್ಲಿ ಒಂದಾಗಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ದೃಢವಾದ ಆಶಯ ವ್ಯಕ್ತಪಡಿಸಿದರು.

ಪ್ರಧಾನಿ ನರೇಂದ್ರ ಮೋದಿ ಆಶಯ, ಮಾನವ ಕೇಂದ್ರಿತ ಎಐ ಅಭಿವೃದ್ಧಿಗೆ ಒತ್ತು



ರಾಷ್ಟ್ರ ರಾಜಧಾನಿಯಲ್ಲಿ ಆರಂಭವಾದ ಇಂಡಿಯಾ ಎಐ ಇಂಪ್ಯಾಕ್ಟ್ ಸಮ್ಮಿಟ್ 2026 ಸಂದರ್ಭ ಎಎನ್‌ಐಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಅವರು, ಸರ್ವಜನ ಹಿತಾಯ, ಸರ್ವಜನ ಸುಖಾಯ ಮಂತ್ರದಡಿ ಮಾನವ-ಕೇಂದ್ರಿತ ಎಐ ಅಭಿವೃದ್ಧಿಯ ಅಗತ್ಯವನ್ನು ಒತ್ತಿಹೇಳಿದರು. ಎಐನ ಲಾಭಗಳು ಕೆಲವರಿಗೆ ಮಾತ್ರ ಸೀಮಿತವಾಗದೇ, ಗ್ರಾಮ-ನಗರ, ಭಾಷಾ-ಸಾಮಾಜಿಕ ಎಲ್ಲ ವರ್ಗಗಳಿಗೂ ತಲುಪಬೇಕು ಎಂದರು. ◆ ವಿಶೇಷ ಪುಟ ೨

ಕೋಲಾರದಲ್ಲಿ ಹೆಲಿಕಾಪ್ಟರ್ ಜೋಡಣಾ ಘಟಕಕ್ಕೆ ಸಚಿವ ರಾಜನಾಥ್ ಸಿಂಗ್ ಚಾಲನೆ

ಶೀಘ್ರದಲ್ಲೇ ಭಾರತ ಅತಿದೊಡ್ಡ ರಫ್ತುದಾರ



◆ **ಕೋಲಾರ:** ವೇಮಗಲ್ ಕೈಗಾರಿಕಾ ಪ್ರದೇಶದಲ್ಲಿ ಮಂಗಳವಾರ ಸಂಜೆ ಟಾಟಾ ಅಡ್ವಾನ್ಸ್ಡ ಸಿಸ್ಟಮ್ಸ್ ಹಾಗೂ ಫ್ರಾನ್ಸ್‌ನ ಏರ್‌ಬಸ್ ಸಹಯೋಗದ ದೇಶದ ಮೊಟ್ಟ ಮೊದಲ ಹೆಲಿಕಾಪ್ಟರ್ ಜೋಡಣಾ ಘಟಕಕ್ಕೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಅವರ ಆತ್ಮ ನಿರ್ಭರ್ ಯೋಜನೆಗಳ ಮೂಲಕ ಮಧ್ಯಮ ಹಾಗೂ ಸ್ಟಾರ್ಟ್ ಅಪ್ ಕೈಗಾರಿಕಾ ಘಟಕಗಳು ಸಾವಿರಾರು ಸಂಖ್ಯೆಯಲ್ಲಿ ಆರಂಭವಾಗಿದ್ದು, ರಕ್ಷಣಾ ಕ್ಷೇತ್ರದಲ್ಲಿ ಭಾರತವು ಅತಿ ದೊಡ್ಡ ರಫ್ತುದಾರ ದೇಶವಾಗಿ ಹೊರಹೊಮ್ಮುತ್ತಿದೆ ಎಂದರು.

> ನಮ್ಮ ಹೆಲಿಕಾಪ್ಟರ್ ಜೋಡಣಾ ಘಟಕದ ಮೊಟ್ಟ ಮೊದಲ ಹೆಲಿಕಾಪ್ಟರ್ 2027ರಲ್ಲಿ ಹಾರಾಟ ನಡೆಸಲಿದೆ.
> ■ ಸುಕರನ್ ಸಿಂಗ್, ಟಾಟಾ ಆಡ್ವಾನ್ಸ್ಡ ಸಿಸ್ಟಮ್ಸ್ ವ್ಯವಸ್ಥಾಪಕ ನಿರ್ದೇಶಕ

ಏರೋಸ್ಪೇಸ್ ಕ್ಷೇತ್ರದಲ್ಲಿ ಸ್ವದೇಶಿ ಬೇಡಿಕೆಗಳನ್ನು ಈಡೇರಿಸುವುದರ ಜೊತೆಗೆ ಜಾಗತಿಕವಾಗಿ ಹಲವು ರಾಷ್ಟ್ರಗಳ ಬೇಡಿಕೆಗಳನ್ನು ಈಡೇರಿಸುವುದು ದೇಶದ ಗುರಿಯಾಗಿದೆ ಎಂದು ತಿಳಿಸಿದರು. ಸಾರ್ವಜನಿಕ ಉದ್ದಿಮೆಗಳ ಮೂಲಕವೇ ರಕ್ಷಣಾ ಕ್ಷೇತ್ರದ ಅಗತ್ಯ ಗಳನ್ನು ಪೂರೈಕೆ ಮಾಡಿಕೊಳ್ಳಲಾಗುತ್ತಿತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ ಖಾಸಗಿ ಸಂಸ್ಥೆಗಳು ರಕ್ಷಣಾ ಕ್ಷೇತ್ರಕ್ಕೆ ಅಪಾರವಾದ ಸೇವೆಯನ್ನು ಸಲ್ಲಿಸುತ್ತಿರುವುದು ಗಮನಾರ್ಹವಾಗಿದೆ ಎಂದು ಹೆಮ್ಮೆ ವ್ಯಕ್ತಪಡಿಸಿದರು. ➡ಪುಟ ೪

ಹಿಂದುಗಳ ಮನೆ ಮೇಲೆ ಕಲ್ಲು ತೂರಾಟ, ಪ್ರಕ್ಷುಬ್ಧ

◆ **ಚಿಕ್ಕಮಗಳೂರು:** ನಗರದ ವಿಜಯಪುರ ಬಡಾವಣೆಯ ತಿಲಕ್ ಪಾರ್ಕ್ ಬಳಿ ಹಿಂದುಗಳ ಮನೆ ಮೇಲೆ ಮುಸ್ಲಿಂ ಹುಡುಗರು ಕಲ್ಲು ತೂರಿದ ಘಟನೆಯಿಂದ ಸೋಮವಾರ ರಾತ್ರಿ ನಗರ ಪ್ರಕ್ಷುಬ್ಧಗೊಂಡಿತ್ತು. ಕಲ್ಲು ತೂರಿದ ಇಬ್ಬರನ್ನು ಸ್ಥಳೀಯರೇ ಹಿಡಿದು ಥಳಿಸಿ ಪೊಲೀಸರಿಗೊಪ್ಪಿಸಿದ್ದರು. ಘಟನೆ ಖಂಡಿಸಿ ಹಿಂದುಪರ ಮುಖಂಡರು ಸಮುದಾಯದ ನೂರಾರು ಜನರು ಬಸವನಹಳ್ಳಿ ಪೊಲೀಸ್ ಠಾಣೆ ಬಳಿ ಜಮಾಯಿಸಿ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಇದೇ ವೇಳೆ ಮತ್ತೊಂದು ಕೋಮಿನ ಜನರು ಠಾಣೆಗೆ ಧಾವಿಸಿ ಹಲ್ಲೆ ನಡೆಸಿದ ಹಿಂದು ಯುವಕರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ಎರಡೂ ಗುಂಪುಗಳನ್ನು ಚದುರಿಸುವಲ್ಲಿ ಹೆಚ್ಚುವರಿ ಪೊಲೀಸ್ ಮುಖ್ಯಾಧಿಕಾರಿ ಜಯ ಕುಮಾರ್ ಮತ್ತು ಸಿಬ್ಬಂದಿ ಹೈರಾಣಾದರು. ➡ಪುಟ ೪

> ಅಪ್ರಾಪ್ತ ಯುವಕರಿಂದ ಕೃತ್ಯ, ಇಬ್ಬರು ಪೊಲೀಸ್ ವಶಕ್ಕೆ

ಫೆ.28ರಿಂದ ದ್ವಿತೀಯ ಪಿಯು, ಮಾ.18ರಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ

ಪಿಯು, ಎಸ್ಸೆಸ್ಸೆಲ್ಸಿ ವೇಳಾಪಟ್ಟಿ ಪ್ರಕಟ

◆ **ಬೆಂಗಳೂರು:** ಪ್ರಸಕ್ತ ಶೈಕ್ಷಣಿಕ ಸಾಲಿನ ದ್ವಿತೀಯ ಪಿಯುಸಿ ಮತ್ತು ಎಸ್‌ಎಸ್‌ಎಲ್‌ಸಿ ಪರೀಕ್ಷೆ-1ರ ವೇಳಾಪಟ್ಟಿ ಪ್ರಕಟವಾಗಿದ್ದು, ಈ ವರ್ಷ ದ್ವಿತೀಯ ಪಿಯುಸಿ ಪರೀಕ್ಷೆಗೆ 7,10,363 ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ 9,02,889 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದಾರೆ.

ಮಂಗಳವಾರ ನೃಪತುಂಗ ರಸ್ತೆಯ ಸಮಗ್ರ ಶಿಕ್ಷಣ ಕರ್ನಾಟಕದ ರಾಜ್ಯ ಯೋಜನಾ ನಿರ್ದೇಶಕರ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ, ಫೆ.28ರಿಂದ ಮಾ.17ರವರೆಗೆ ದ್ವಿತೀಯ ಪಿಯುಸಿ ಪರೀಕ್ಷೆ-1 ಹಾಗೂ ಮಾ.18 ರಿಂದ ಏ.2 ರವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1 ಆರಂಭವಾಗಲಿದ್ದು, ಸುಗಮವಾಗಿ ಪರೀಕ್ಷೆ ನಡೆಯುವ ಉದ್ದೇಶದಿಂದ ಜಿಲ್ಲಾಧಿಕಾರಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ಪೊಲೀಸರೊಂದಿಗೆ ಸಭೆ ನಡೆಸಿ, ಅಂತಿಮ ತಯಾರಿ ಮಾಡಿಕೊಳ್ಳಲಾಗಿದೆ. ➡ಪುಟ ೪



ಉಚಿತ ಸಾರಿಗೆ ಸೌಲಭ್ಯ

ವಿದ್ಯಾರ್ಥಿಗಳು ಯಾವುದೇ ತೊಂದರೆಯಿಲ್ಲದೆ ಪರೀಕ್ಷಾ ಕೇಂದ್ರಗಳನ್ನು ತಲುಪುವ ಉದ್ದೇಶದಿಂದ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಅವಧಿಯಲ್ಲಿ ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಹಾಲ್ ಟಿಕೆಟ್ ತೋರಿಸಿ ಉಚಿತ ಪ್ರಯಾಣ ಸೌಲಭ್ಯ ಪಡೆಯಬಹುದಾಗಿದೆ. ➡ಪುಟ ೪

ಅಮಾನತು ಮಾಡುವಂತೆ ಚು. ಆಯುಕ್ತರಿಗೆ ಕೆಪಿಸಿಸಿ ಆಗ್ರಹ

ಬಿಎಲ್‌ಒಗಳಿಂದ ಮತಪಟ್ಟಿ ಅಕ್ರಮ

◆ **ಬೆಂಗಳೂರು:** ಮತಗಟ್ಟೆ ಅಧಿಕಾರಿಗಳು (ಬಿಎಲ್ ಒ-ಬ್ಲಾಕ್ ಲೆವಲ್ ಆಫಿಸರ್) ಮತಪಟ್ಟಿ ಪರಿಷ್ಕರಣೆಯಲ್ಲಿ ಅಕ್ರಮ ಎಸಗುತ್ತಿದ್ದಾರೆ. ನಕಲಿ ಮತಗಳನ್ನು ಸೇರಿಸಿರುವ ಬಿಎಲ್‌ಒಗಳನ್ನು ಅಮಾನತುಗೊಳಿಸುವಂತೆ ಕೆಪಿಸಿಸಿ ಅಧ್ಯಕ್ಷರೂ ಆದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ನಾಯಕರ ನಿಯೋಗ ಮಂಗಳವಾರ ರಾಜ್ಯ ಚುನಾವಣಾ ಆಯೋಗದ ಆಯುಕ್ತರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದೆ. ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಡಿ.ಕೆ.ಶಿವಕುಮಾರ್, ಬಿಎಲ್‌ಒಗಳು ಮತಪಟ್ಟಿಯಲ್ಲಿ ಅಕ್ರಮ ಎಸಗುತ್ತಿದ್ದಾರೆ. ➡ಪುಟ ೪

ಹಿಂದುಳಿದ ವರ್ಗಗಳ 5 ವರ್ಷ ಅವಧಿ ಅರ್ಜಿ

ನಾಲ್ಕು ಲಕ್ಷ ವಿದ್ಯಾರ್ಥಿ ವೇತನ ಅರ್ಜಿ ಅನರ್ಹ

▶ ನಂದಿನಿ ಎನ್.

ದಿಗಂತ ವಿಶೇಷ

◆ **ಬೆಂಗಳೂರು:** ಕಳೆದ ಐದು ವರ್ಷಗಳಲ್ಲಿ ಹಿಂದುಳಿದ ವರ್ಗಗಳ ಇಲಾಖೆ ವತಿಯಿಂದ ನೀಡುತ್ತಿರುವ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಿದವರ ಪೈಕಿ ಬರೋಬ್ಬರಿ ನಾಲ್ಕು ಲಕ್ಷಕ್ಕೂ ಹೆಚ್ಚಿನ ಅರ್ಜಿಗಳು ವಿವಿಧ ಕಾರಣಗಳಿಗಾಗಿ ಅನರ್ಹಗೊಳಿಸಲಾಗಿದೆ ಎಂದು ಇಲಾಖೆ ತಿಳಿಸಿದೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿವೇತನ ಕಾರ್ಯಕ್ರಮ ಗಳನ್ನು ಇ-ಆಡಳಿತ ಇಲಾಖೆಯು ಅಭಿವೃದ್ಧಿಪಡಿಸಿ ನಿರ್ವಹಣೆ ಮಾಡುತ್ತಿದೆ. ಇವುಗಳನ್ನು ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ಅನುಷ್ಠಾನ ಗೊಳಿಸಲಾಗುತ್ತಿದ್ದು, ಈ ಕಾರ್ಯಕ್ರಮಗಳ ಅಡಿಯಲ್ಲಿ ವಿದ್ಯಾರ್ಥಿಗಳ ಆಧಾರ್ ಸಂಖ್ಯೆಗೆ ಜೋಡಣೆಯಾಗಿರುವ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡಲಾಗುತ್ತಿದೆ.



ಶುಲ್ಕ ಮರುಪಾವತಿಗೆ ಕ್ರಮ: ಕಳೆದ 5 ವರ್ಷಗಳಲ್ಲಿ ಶುಲ್ಕ ಮರು ಪಾವತಿ ಕಾರ್ಯಕ್ರಮದಲ್ಲಿ ಬಾಕಿ ಇರುವ ವಿದ್ಯಾರ್ಥಿಗಳಿಗೆ ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆದು ಶುಲ್ಕ ಮರು ಪಾವತಿ ಮಾಡಲು ಇಲಾಖೆ ಕ್ರಮ ವಹಿಸಿದೆ. ಹೀಗಾಗಿ ಹಿಂದಿನ ವರ್ಷಗಳಲ್ಲಿ ಬಾಕಿ ಇದ್ದ 1,26,202 ಅರ್ಹ ವಿದ್ಯಾರ್ಥಿಗಳ ವಿದ್ಯಾರ್ಥಿವೇತನಕ್ಕೆ 133.44 ಕೋಟಿ ರೂ.ಗಳ ಶುಲ್ಕ ಮರು ಪಾವತಿ ಮಾಡಲು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕ್ರಮ ವಹಿಸಿದೆ. ➡ಪುಟ ೪

ಕಟ್ಟಾ ಕಾಂಗ್ರೆಸಿಗರು ನಿಯತ್ತಿರುವವರು

◆ **ಬೆಂಗಳೂರು:** ನಾಯಕತ್ವ ಬದಲಾವಣೆ ಕುರಿತು ಮಾರ್ಮಿಕವಾಗಿ ಮಾತನಾಡಿರುವ ಸಚಿವ ಎಚ್.ಸಿ. ಮಹದೇವಪ್ಪ ಹೇಳಿಕೆಗೆ ಡಿ.ಕೆ. ಸಹೋದರರು ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದಾರೆ. ಮಹದೇವಪ್ಪ ಅವರು ಯಾರನ್ನು ಉಲ್ಲೇಖಿಸಿ ಈ ರೀತಿ ಹೇಳಿದ್ದಾರೆ ಎಂಬ ಮಾಹಿತಿ ಇಲ್ಲ. ಕಟ್ಟಾ ಕಾಂಗ್ರೆಸಿಗರು ನಿಯತ್ತಿರುವವರು. ಕಟ್ಟಾ ಕಾಂಗ್ರೆಸಿಗರು ಋಣ ತೀರಿಸುವ ವ್ಯಕ್ತಿತ್ವ ಹೊಂದಿರುವವರು ಎಂದು ಪ್ರತಿಕ್ರಿಯಿಸಿದ್ದಾರೆ. ಬೇರೆಯವರು ನಮ್ಮ ಋಣ ತೀರಿಸುತ್ತಾರೋ ಇಲ್ಲವೋ ಗೊತ್ತಿಲ್ಲ. ಕಟ್ಟಾ ಕಾಂಗ್ರೆಸ್ಸಿಗರು ಋಣ ತೀರಿಸದೆ ಇರುವವರಲ್ಲ ಎಂದು ಡಿ.ಕೆ. ಸುರೇಶ್ ಹೇಳಿದ್ದಾರೆ. ➡ಪುಟ ೪





ಭಾರತದಲ್ಲಿ ಇದೇ ಮೊದಲ ಬಾರಿಗೆ ಕೃತಕ ಬುದ್ಧಿಮತ್ತೆ ಕುರಿತ ಜಾಗತಿಕ ಶೃಂಗಸಭೆ ನಡೆಯುತ್ತಿದ್ದು, ಇದರ ಬೆನ್ನಲ್ಲೇ ಪ್ರಧಾನಿ ನರೇಂದ್ರ ಮೋದಿ ಅವರು, ಎಎನ್‌ಐ ಸುದ್ದಿಸಂಸ್ಥೆ ಜತೆಗೆ ಮಾತನಾಡಿದ್ದಾರೆ. ಸರ್ವಜನ ಹಿತಾಯ, ಸರ್ವಜನ ಸುಖಾಯ ಧ್ಯೇಯ ವಾಕ್ಯದೊಂದಿಗೆ ಇದು ನಡೆಯುತ್ತಿದ್ದು, ಹೊಸ ಯುಗಕ್ಕಾಗಿ ಭಾರತದ ದೃಷ್ಟಿಕೋನವನ್ನು ಎಲ್ಲರ ಮುಂದೆ ಪ್ರಧಾನಿಗಳು ಎತ್ತಿ ತೋರಿಸಿದ್ದಾರೆ. ಕೃತಕ ಬುದ್ಧಿಮತ್ತೆಯು ಆಳವಾಗಿ ಮಾನವ ಕೇಂದ್ರಿತ ಜಾಗತಿಕ ಅಭಿವೃದ್ಧಿಯನ್ನು ವೇಗಗೊಳಿಸಬೇಕು ಎಂದು ಕರೆ ನೀಡಿದ್ದಾರೆ. ಸಂದರ್ಶನದ ಪೂರ್ಣ ಪಾಠ ಇಲ್ಲಿದೆ.

ಎಲ್ಲರಿಗಾಗಿ ಎಲ್ಲೆಡೆ ಎಐ

"ಪ್ರಧಾನಿ ನರೇಂದ್ರ ಮೋದಿ ಸಂದರ್ಶನ"

2047ರ ದೃಷ್ಟಿಕೋನದ ಬಗ್ಗೆ ಹಂಚಿಕೊಂಡ ಪ್ರಧಾನಿ

- 2047 ದೃಷ್ಟಿ: ಭಾರತವು ಜಾಗತಿಕವಾಗಿ ಟಾಪ್-3 ಎಐ ಸೂಪರ್‌ಪವರ್ ರಾಷ್ಟ್ರಗಳಲ್ಲಿ ಒಂದಾಗಬೇಕು.
- ಮಾನವ-ಕೇಂದ್ರಿತ ಎಐ: 'ಸರ್ವಜನ ಹಿತಾಯ, ಸರ್ವಜನ ಸುಖಾಯ' ಮಂತ್ರದಡಿ ಎಐ ಅಭಿವೃದ್ಧಿ ತಂತ್ರಜ್ಞಾನವು ಮಾನವಕುಲಕ್ಕೆ ಸೇವೆ ಸಲ್ಲಿಸಬೇಕು.
- ಎಲ್ಲರ ಒಳಗೊಂಡ ಬೆಳವಣಿಗೆ: ಎಐ ಲಾಭಗಳು ಕೆಲವರಿಗೆ ಮಾತ್ರವಲ್ಲ, ಗ್ರಾಮ-ನಗರ, ಭಾಷಾ-ಸಾಮಾಜಿಕ ಎಲ್ಲ ವರ್ಗಗಳಿಗೆ ತಲುಪಬೇಕು.
- ಪ್ರಮುಖ ಕ್ಷೇತ್ರಗಳಲ್ಲಿ ಎಐ ಬಳಕೆ: ಆರೋಗ್ಯ, ಶಿಕ್ಷಣ, ಕೃಷಿ, ಸಾರ್ವಜನಿಕ ವ್ಯವಸ್ಥೆಗಳು, ಪಾರಂಪರಿಕ ಸಂರಕ್ಷಣೆ ಕ್ಷೇತ್ರಗಳಲ್ಲಿ ಎಐ ಪರಿಣಾಮ.
- ಎಐ ಪೂರ್ವಾಗ್ರಹ ಸವಾಲು: ಭಾಷಾ-ಸಾಂಸ್ಕೃತಿಕ ವೈವಿಧ್ಯತೆಯನ್ನು ಪ್ರತಿಬಿಂಬಿಸುವ ದತ್ತಸಂಚಯಗಳ ಅಗತ್ಯದ ಬಗ್ಗೆ ಒತ್ತಿ ಹೇಳಿದ ಮೋದಿ.
- ಡಿಪಿಐ+ಎಐ ಮಾದರಿ: ಆಧಾರ್, ಯುಪಿಐ ಮುಂತಾದ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಎಐ ಜೊತೆ ಸೇರಿ ಆಡಳಿತವನ್ನು ಪರಿಣಾಮಕಾರಿ ಮಾಡಬಹುದು.
- ಯುವಜನರಿಗೆ ಸಂದೇಶ: ಎಐ ಉದ್ಯೋಗಗಳನ್ನು ಅಳಿಸುವುದಿಲ್ಲ; ಹೊಸ ಅವಕಾಶಗಳನ್ನು ಸೃಷ್ಟಿಸುತ್ತದೆ. ಸ್ಕಿಲ್ಲಿಂಗ್, ರಿ-ಸ್ಕಿಲ್ಲಿಂಗ್ ಮುಖ್ಯ.
- ಆತ್ಮನಿರ್ಭರ ಎಐ: ಭಾರತವು ಎಐ ಬಳಕೆದಾರ ಮಾತ್ರವಲ್ಲ, ಎಐ ಸೃಷ್ಟಿಕರ್ತ ರಾಷ್ಟ್ರವಾಗಬೇಕು.

ಎಐ ಅಪಾಯದ ಬಗ್ಗೆ ಜಾಗೃತಿ

ಕೃತಕ ಬುದ್ಧಿಮತ್ತೆಯ ಪಕ್ಷಪಾತ ಮತ್ತು ಮಿತಿಗಳ ಬಗ್ಗೆ ಕಳವಳಗಳು ಆಳವಾಗಿ ಪ್ರಸ್ತುತವಾಗಿವೆ. ಎಐ ಅಳವಡಿಕೆಯು ವೇಗಗೊಳ್ಳುತ್ತಿದ್ದಂತೆ ಅಪಾಯಗಳು ಸಹ ಎದುರಾಗುತ್ತವೆ. ಎಐ ವ್ಯವಸ್ಥೆಗಳು ಅಜಾಗರೂಕತೆಯಿಂದ ಲಿಂಗ, ಭಾಷೆ ಮತ್ತು ಸಾಮಾಜಿಕ-ಆರ್ಥಿಕ ಹಿನ್ನೆಲೆಗೆ ಸಂಬಂಧಿಸಿದ ಪಕ್ಷಪಾತಗಳನ್ನು ಶಾಶ್ವತಗೊಳಿಸಬಹುದು. ಎಐ ಇಂಪ್ಯಾಕ್ಟ್ ಶೃಂಗಸಭೆ 2026 ವಿವಿಧ ರೀತಿಯ ಕಂಪನಿಗಳನ್ನು ಒಟ್ಟುಗೂಡಿಸುತ್ತಿದೆ. ಪಕ್ಷಪಾತಗಳು ಮತ್ತು ಕೃತಕ ಬುದ್ಧಿಮತ್ತೆಯ ಮಿತಿಗಳಂತಹ ವಿಷಯಗಳ ಬಗ್ಗೆ ಜಾಗತಿಕ ಜಾಗೃತಿ ಮೂಡಿಸುತ್ತಿದೆ. ಇದು ಜಾಗತಿಕ ಸಹಕಾರದ ಅಗತ್ಯವಿರುವ ವಿಷಯವಾಗಿದೆ.
ನಿರ್ದಿಷ್ಟವಾಗಿ ಭಾರತಕ್ಕೆ ಸಂಬಂಧಿಸಿದಂತೆ, ನಾವು ವಿಶಿಷ್ಟ ಸವಾಲುಗಳು ಮತ್ತು ಅವಕಾಶಗಳನ್ನು ಎದುರಿಸುತ್ತಿದ್ದೇವೆ. ನಮ್ಮ ವೈವಿಧ್ಯತೆ – ಭಾಷಾ, ಸಾಂಸ್ಕೃತಿಕ, ಪ್ರಾದೇಶಿಕ – ಎಂದರೆ ಎಐ ಪಕ್ಷಪಾತವು ಪಾಶ್ಚಿಮಾತ್ಯ ಸಂದರ್ಭಗಳಲ್ಲಿ ಸ್ಪಷ್ಟವಾಗದ ರೀತಿಯಲ್ಲಿ ಪ್ರಕಟವಾಗಬಹುದು. ಪ್ರಾಥಮಿಕವಾಗಿ ಇಂಗ್ಲಿಷ್ ಡೇಟಾ ಅಥವಾ ನಗರ ಸಂದರ್ಭಗಳಲ್ಲಿ ತರಬೇತಿ ಪಡೆದ ಎಐ ವ್ಯವಸ್ಥೆಯು ಗ್ರಾಮೀಣ ಬಳಕೆದಾರರಿಗೆ ಅಥವಾ ಪ್ರಾದೇಶಿಕ ಭಾಷೆಗಳನ್ನು ಮಾತನಾಡುವವರಿಗೆ ಕಳಪೆ ಪ್ರದರ್ಶನ ನೀಡಬಹುದು. ಸಕಾರಾತ್ಮಕ ಬೆಳವಣಿಗೆಯೆಂದರೆ ಭಾರತವು ಇದನ್ನು ಹೆಚ್ಚು ವ್ಯವಸ್ಥಿತವಾಗಿ ಪರಿಹರಿಸಲು ಪ್ರಾರಂಭಿಸಿದೆ. ಭಾರತದ ಬಹುತ್ವವನ್ನು ಪ್ರತಿನಿಧಿಸುವ ವೈವಿಧ್ಯಮಯ ಡೇಟಾಸೆಟ್‌ಗಳನ್ನು ರಚಿಸುವತ್ತ ಹೆಚ್ಚಿನ ಗಮನವನ್ನು ನಾವು ನೋಡುತ್ತಿದ್ದೇವೆ. ಪ್ರಾದೇಶಿಕ ಭಾಷೆಗಳಲ್ಲಿ ಎಐ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುವುದು ಮತ್ತು ಭಾರತೀಯ ಶೈಕ್ಷಣಿಕ ಸಂಸ್ಥೆಗಳು ಮತ್ತು ಟೆಕ್ ಕಂಪನಿಗಳಲ್ಲಿ ನ್ಯಾಯಸಮ್ಮತ ಮತ್ತು ಪಕ್ಷಪಾತದ ಬಗ್ಗೆ ಹೆಚ್ಚುತ್ತಿರುವ ಸಂಶೋಧನೆಯನ್ನು ನಾವು ನೋಡುತ್ತಿದ್ದೇವೆ.

ಗ್ಲೋಬಲ್ ಸೌತ್‌ಗೆ ಭಾರತದ ಕಾಣಿಕೆ

ಭಾರತದ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಪ್ರಯಾಣವು ಗ್ಲೋಬಲ್ ಸೌತ್‌ಗೆ ನಿರ್ಣಾಯಕ ಮತ್ತು ಪ್ರಾಯೋಗಿಕ ಪಾಠಗಳನ್ನು ನೀಡುತ್ತದೆ. ಆಧಾರ್, ಯುಪಿಐ ಮತ್ತು ಇತರ ಡಿಜಿಟಲ್ ಸಾರ್ವಜನಿಕ ವೇದಿಕೆಗಳಲ್ಲಿನ ನಮ್ಮ ಯಶಸ್ಸು ಆಕಸ್ಮಿಕವಲ್ಲ. ಇದು ಕೆಲವು ಪುನರಾವರ್ತಿಸಬಹುದಾದ ತತ್ವಗಳಿಂದ ಹುಟ್ಟಿಕೊಂಡಿದೆ. ಮೊದಲನೆಯದಾಗಿ, ನಾವು ಡಿಜಿಟಲ್ ಮೂಲಸೌಕರ್ಯವನ್ನು ಸಾರ್ವಜನಿಕ ಒಳಿತಾಗಿ ನಿರ್ಮಿಸಿದ್ದೇವೆಯೇ ಹೊರತು ಸ್ವಾಮ್ಯದ ವೇದಿಕೆಯಾಗಿ ಅಲ್ಲ. ಎರಡನೆಯದಾಗಿ, ನಾವು ಮೊದಲ ದಿನದಿಂದಲೇ ಪ್ರಮಾಣ ಮತ್ತು ಸೇರ್ಪಡೆಗಾಗಿ ವಿನ್ಯಾಸಗೊಳಿಸಿದ್ದೇವೆ. ನಮ್ಮ ವ್ಯವಸ್ಥೆಗಳು 1.4 ಬಿಲಿಯನ್ ಜನರಿಗಾಗಿ ಕೆಲಸ ಮಾಡುತ್ತವೆ. ಕೃತಕ ಬುದ್ಧಿಮತ್ತೆಯು ಕಲ್ಯಾಣ ಗುರಿಯನ್ನು ಸುಧಾರಿಸಬಹುದು, ವಂಚನೆ ಪತ್ತೆಹಚ್ಚುವಿಕೆಯನ್ನು ಬಲಪಡಿಸಬಹುದು, ಮೂಲಸೌಕರ್ಯಗಳ ಮುನ್ಸೂಚಕ ನಿರ್ವಹಣೆಯನ್ನು ಸಕ್ರಿಯಗೊಳಿಸಬಹುದು, ನಗರ ಯೋಜನೆಯನ್ನು ಬೆಂಬಲಿಸಬಹುದು ಮತ್ತು ಸಾರ್ವಜನಿಕ ವ್ಯವಸ್ಥೆಗಳಲ್ಲಿ ಪಾರದರ್ಶಕತೆಯನ್ನು ಹೆಚ್ಚಿಸಬಹುದು.



ಎಐ ಸೃಷ್ಟಿಕರ್ತನಾಗಿ ಭಾರತ ಮುಂದೆ

ಭಾರತವು ಎಐ ಪವರ್ ಹೌಸ್ ಆಗಲು ಪ್ರತಿಭೆ ಮತ್ತು ಉದ್ಯಮಶೀಲತೆಯ ಶಕ್ತಿಯನ್ನು ಹೊಂದಿದೆ. ಇದು ಕೇವಲ ಗ್ರಾಹಕರಾಗಿ ಮಾತ್ರವಲ್ಲ, ಸೃಷ್ಟಿಕರ್ತನಾಗಿಯೂ ಮುಂದಿದೆ. ನಮ್ಮ ಸ್ಟಾರ್ಟ್‌ಅಪ್‌ಗಳು, ಸಂಶೋಧನಾ ಸಂಸ್ಥೆಗಳು ಮತ್ತು ಟೆಕ್ ಪರಿಸರ ವ್ಯವಸ್ಥೆಯು ಉತ್ಪಾದನೆಯನ್ನು ಹೆಚ್ಚಿಸುವ, ಆಡಳಿತವನ್ನು ಸುಧಾರಿಸುವ ಮತ್ತು ಹೊಸ ಉದ್ಯೋಗಗಳನ್ನು ಸೃಷ್ಟಿಸುವ ಎಐ ಪರಿಹಾರಗಳನ್ನು ನಿರ್ಮಿಸಬಹುದು. ನಮ್ಮ ಯುವಕರು ರೈತರು, ಎಂಎಸ್‌ಎಂಇಗಳು, ಮಹಿಳಾ ಉದ್ಯಮಿಗಳು ಮತ್ತು ತಳಮಟ್ಟದ ನವೋದ್ಯಮಿಗಳಿಗಾಗಿ ವಿನ್ಯಾಸಗೊಳಿಸಲಾದ ಭಾರತೀಯ ವಾಸ್ತವತೆಗಳಿಗೆ ಕೃತಕ ಬುದ್ಧಿಮತ್ತೆ ಪರಿಹಾರಗಳನ್ನು ನಿರ್ಮಿಸಬಹುದು ಎಂಬ ವಿಶ್ವಾಸ ನನಗಿದೆ. ಕೇಂದ್ರ ಬಜೆಟ್ 2026–27 ಈ ದೃಷ್ಟಿಕೋನವನ್ನು ಬಲಪಡಿಸುತ್ತದೆ. ಇದು ಡೇಟಾ ಕೇಂದ್ರಗಳು ಮತ್ತು ಕ್ಲೌಡ್ ಮೂಲಸೌಕರ್ಯಕ್ಕೆ ಬೆಂಬಲವನ್ನು ವಿಸ್ತರಿಸುತ್ತದೆ, ದೇಶೀಯ ಕಂಪ್ಯೂಟ್ ಸಾಮರ್ಥ್ಯವನ್ನು ಬಲಪಡಿಸುತ್ತದೆ. ಇಂಡಿಯಾಎಐ ಚೌಕಟ್ಟಿನ ಅಡಿಯಲ್ಲಿ, ನವೋದ್ಯಮಗಳು ಮತ್ತು ಸಂಶೋಧನಾ ಸಂಸ್ಥೆಗಳಿಗೆ ಹೆಚ್ಚಿನ ಕಾರ್ಯಕ್ಷಮತೆಯ ಕೃತಕ ಬುದ್ಧಿಮತ್ತೆ ಕಂಪ್ಯೂಟ್ ಸಂಪನ್ಮೂಲಗಳಿಗೆ ಪ್ರವೇಶದೊಂದಿಗೆ ಬೆಂಬಲ ನೀಡಲಾಗುತ್ತಿದೆ. ಸೆಮಿಕಂಡಕ್ಟರ್ ಉತ್ಪಾದನೆ, ಎಲೆಕ್ಟ್ರಾನಿಕ್ಸ್ ಪಿಎಲ್‌ಐ, ಎಐ ಸೆಂಟರ್ಸ್ ಆಫ್ ಎಕ್ಸಲೆನ್ಸ್ ಮತ್ತು ಡಿಜಿಟಲ್ ಕೌಶಲ್ಯಕ್ಕೆ ನಿರಂತರ ಉತ್ತೇಜನವು ಹಾರ್ಡ್‌ವೇರ್ ಮತ್ತು ಮಾನವ ಬಂಡವಾಳದ ಅಡಿಪಾಯವನ್ನು ಬಲಪಡಿಸುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ನಾವು ಕೇವಲ ಪ್ರತಿಭೆಗಳನ್ನು ಪೋಷಿಸುತ್ತಿಲ್ಲ, ಆದರೆ ಎಐ ಕ್ರಾಂತಿಯಲ್ಲಿ ಭಾಗವಹಿಸುವುದರಿಂದ ಅದನ್ನು ರೂಪಿಸಲು ಭಾರತವು ಸಾಗಲು ಅಗತ್ಯವಾದ ಮೂಲಸೌಕರ್ಯ, ನೀತಿ ಪರಿಸರ ವ್ಯವಸ್ಥೆ ಮತ್ತು ಕೌಶಲ್ಯಗಳ ನೆಲೆಯನ್ನು ನಾವು ನಿರ್ಮಿಸುತ್ತಿದ್ದೇವೆ.

ಎಲ್ಲರಿಗೂ ಕಲ್ಯಾಣ, ಎಲ್ಲರ ಸಂತೋಷ

ಇಂದು ಕೃತಕ ಬುದ್ಧಿಮತ್ತೆ ನಾಗರಿಕತೆಯ ತಿರುವಿನ ಹಂತದಲ್ಲಿದೆ. ಇದು ಅಭೂತಪೂರ್ವ ರೀತಿಯಲ್ಲಿ ಮಾನವ ಸಾಮರ್ಥ್ಯವನ್ನು ವಿಸ್ತರಿಸಬಹುದು. ಆದರೆ ಮಾರ್ಗದರ್ಶನ ನೀಡದಿದ್ದರೆ ಅದು ಅಸ್ತಿತ್ವದಲ್ಲಿರುವ ಸಾಮಾಜಿಕ ಅಡಿಪಾಯಗಳನ್ನು ಸಹ ಪರೀಕ್ಷಿಸಬಹುದು. ಮಾರ್ಗದರ್ಶಿ ಮನೋಭಾವ, ಸರ್ವಜನ ಹಿತಾಯ, ಸರ್ವಜನ ಸುಖಾಯ ಎಂಬ ಭಾರತದ ನಾಗರಿಕತೆಯ ತತ್ವಶಾಸ್ತ್ರವನ್ನು ಈ ಶೃಂಗಸಭೆ ಪ್ರತಿಬಿಂಬಿಸುತ್ತದೆ. ತಂತ್ರಜ್ಞಾನದ ಅಂತಿಮ ಗುರಿ 'ಎಲ್ಲರಿಗೂ ಕಲ್ಯಾಣ, ಎಲ್ಲರ ಸಂತೋಷ' ಆಗಿರಬೇಕು. ತಂತ್ರಜ್ಞಾನವು ಮಾನವೀಯತೆಗೆ ಸೇವೆ ಸಲ್ಲಿಸಲು ಅಸ್ತಿತ್ವದಲ್ಲಿದೆಯೇ ಹೊರತು ಅದನ್ನು ಬದಲಾಯಿಸಲು ಅಲ್ಲ. ಈ ಶೃಂಗಸಭೆಯನ್ನು ಜನತೆ, ಭೂಗ್ರಹ ಮತ್ತು ಪ್ರಗತಿಯ ಸುತ್ತ ರೂಪಿಸಲಾಗಿದೆ. ಎಐ ವ್ಯವಸ್ಥೆಗಳು ವಿಶ್ವಾದ್ಯಂತ ಸಮಾಜಗಳಲ್ಲಿ ಉತ್ಪತ್ತಿಯಾಗುವ ಜ್ಞಾನ ಮತ್ತು ಡೇಟಾವನ್ನು ಸೆಳೆಯುತ್ತವೆ. ಆದ್ದರಿಂದ, ಎಐನ ಪ್ರಯೋಜನಗಳನ್ನು ಎಲ್ಲರಿಗೂ ಹರಡಬೇಕೆಂದು ನಾವು ಬಯಸುತ್ತೇವೆ.

ಎಲ್ಲರಿಗೂ ಧ್ವನಿ

ಗ್ಲೋಬಲ್ ಸೌತ್ ಎಂದೇ ಗುರುತಿಸಲಾಗಿರುವ ಭಾರತದಲ್ಲಿ ಆಯೋಜಿಸಲಾದ ಮೊದಲ ಜಾಗತಿಕ ಕೃತಕ ಬುದ್ಧಿಮತ್ತೆ ಶೃಂಗಸಭೆಯಾಗಿ ಎಲ್ಲರ ಧ್ವನಿಗಳಿಗೆ ವೇದಿಕೆ ಕಲ್ಪಿಸುವ ಕೆಲಸ ಮಾಡುತ್ತಿದೆ. ಕೃತಕ ಬುದ್ಧಿಮತ್ತೆ ಆಡಳಿತ, ಅಂತರ್ಗತ ಡೇಟಾಸೆಟ್‌ಗಳು, ಹವಾಮಾನ ಮುನ್ಸೂಚನೆಗಳು, ಕೃಷಿ ಉತ್ಪಾದಕತೆ, ಸಾರ್ವಜನಿಕ ಆರೋಗ್ಯ ಮತ್ತು ಬಹುಭಾಷಾ ಪ್ರವೇಶವು ನಮಗೆ ಬಾಹ್ಯ ಸಮಸ್ಯೆಗಳಲ್ಲ, ಬದಲಾಗಿ ಅವು ಕೇಂದ್ರಬಿಂದುವಾಗಿವೆ. ನಮ್ಮ ದೃಷ್ಟಿ ಸ್ಪಷ್ಟವಾಗಿದ್ದು, ಕೃತಕ ಬುದ್ಧಿಮತ್ತೆಯು ಆಳವಾಗಿ ಮಾನವ ಕೇಂದ್ರಿತವಾಗಿ ಜಾಗತಿಕ ಅಭಿವೃದ್ಧಿಯನ್ನು ವೇಗಗೊಳಿಸಬೇಕು.

ವಿಕಸಿತ ಭಾರತ 2047

ವಿಕಸಿತ ಭಾರತ 2047ರ ಗುರಿ ಸಾಧನೆಗೆ ಎಐ ಪೂರಕವಾಗಿ ಕೆಲಸ ಮಾಡುತ್ತದೆ. ಈ ನಿಟ್ಟಿನಲ್ಲಿ ಒಂದು ಕಾರ್ಯತಂತ್ರ ಮತ್ತು ಎಚ್ಚರಿಕೆಯ ನಿಟ್ಟಿನಲ್ಲಿ ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಳ್ಳುವತ್ತ ಮುಂದಡಿ ಇಟ್ಟಿದ್ದೇವೆ. ಇದು ಸಂಪೂರ್ಣವಾಗಿ ಹೊಸ ಆರ್ಥಿಕ ಅವಕಾಶಗಳನ್ನು ಸೃಷ್ಟಿಸುವಾಗ ಎದುರಾಗುವ ಆಳವಾದ ಅಭಿವೃದ್ಧಿ ಸವಾಲುಗಳನ್ನು ಬಗೆಹರಿಸಲು ಸಹಾಯ ಮಾಡುತ್ತದೆ.
ಆರೋಗ್ಯ ರಕ್ಷಣೆಯಲ್ಲಿ ಕೃತಕ ಬುದ್ಧಿಮತ್ತೆ ಈಗಾಗಲೇ ಪರಿಣಾಮವನ್ನು ಬೀರುತ್ತಿದೆ. ಪ್ರಾಥಮಿಕ ಮತ್ತು ಜಿಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಕ್ಷಯ, ಮಧುಮೇಹ ರೆಟಿನೋಪತಿ, ಅಪಸ್ಮಾರ ಮತ್ತು ಇತರ ಅನೇಕ ಕಾಯಿಲೆಗಳನ್ನು ಮುಂಚಿತವಾಗಿ ಪತ್ತೆಹಚ್ಚುವ ಕೃತಕ ಬುದ್ಧಿಮತ್ತೆ ಆಧಾರಿತ ಪರಿಹಾರಗಳನ್ನು ನಾವು ನೋಡುತ್ತಿದ್ದೇವೆ.
ಶಿಕ್ಷಣದಲ್ಲಿ ಭಾರತೀಯ ಭಾಷೆಗಳಲ್ಲಿ ಎಐ ಚಾಲಿತ ವೈಯಕ್ತಿಕಗೊಳಿಸಿದ ಕಲಿಕೆಯ ವೇದಿಕೆಗಳು ಗ್ರಾಮೀಣ ಮತ್ತು ಸರ್ಕಾರಿ ಶಾಲೆಗಳಲ್ಲಿನ ವಿದ್ಯಾರ್ಥಿಗಳಿಗೆ ಕಸ್ಟಮೈಸ್ ಮಾಡಿದ ಶೈಕ್ಷಣಿಕ ಬೆಂಬಲವನ್ನು ಪಡೆಯಲು ಸಹಾಯ ಮಾಡುತ್ತಿವೆ.
ಸಾವಿರಾರು ಹಳ್ಳಿಗಳಲ್ಲಿ 36 ಲಕ್ಷ ಮಹಿಳಾ ಹೈನುಗಾರರನ್ನು ತಲುಪಲು ಅಮುಲ್ ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಳ್ಳುತ್ತಿದೆ. ಜಾನುವಾರುಗಳ ಆರೋಗ್ಯ ಮತ್ತು ಉತ್ಪಾದಕತೆಯ ಬಗ್ಗೆ ಗುಜರಾತಿ ಭಾಷೆಯಲ್ಲಿ ನೈಜ-ಸಮಯದ ಮಾರ್ಗದರ್ಶನವನ್ನು ಒದಗಿಸುತ್ತಿದೆ. ತಳಮಟ್ಟದ ಮಹಿಳಾ ಉತ್ಪಾದಕರನ್ನು ಸಬಲೀಕರಣಗೊಳಿಸುತ್ತಿದೆ. ಕೃಷಿಯಲ್ಲಿ ಭಾರತ್ ವಿಸ್ತಾರ್ ಕೃತಕ ಬುದ್ಧಿಮತ್ತೆಯನ್ನು ಬೆಳೆ ಸಲಹೆ, ಮಣ್ಣಿನ ವಿಶ್ಲೇಷಣೆ ಮತ್ತು ಹವಾಮಾನ ಮುನ್ಸೂಚನೆಯನ್ನು ಸಂಯೋಜಿಸುವ ಗುರಿಯನ್ನು ಹೊಂದಿದೆ. ಇದು ರೈತರಿಗೆ ಉತ್ತಮ, ಸ್ಥಳೀಯ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಾಯ ಮಾಡುತ್ತದೆ. ಪರಂಪರೆಯ ಸಂರಕ್ಷಣೆಯಲ್ಲಿಯೂ ಸಹ, ಕೃತಕ ಬುದ್ಧಿಮತ್ತೆಯು ಪ್ರಾಚೀನ ಹಸ್ತಪ್ರತಿಗಳ ಡಿಜಿಟಲೀಕರಣ ಮತ್ತು ವ್ಯಾಖ್ಯಾನವನ್ನು ಸಕ್ರಿಯಗೊಳಿಸುತ್ತಿದೆ, ಭಾರತದ ನಾಗರಿಕತೆಯ ಜ್ಞಾನ ವ್ಯವಸ್ಥೆಗಳನ್ನು ಅನ್ಲಾಕ್ ಮಾಡುತ್ತಿದೆ.
ಕೃತಕ ಬುದ್ಧಿಮತ್ತೆಯ ವಿಭಜನೆಗಳು ಗಾಢವಾಗುತ್ತಿರುವ ಬಗ್ಗೆ ಜಗತ್ತು ಚಿಂತಿಸುತ್ತಿರುವ ಸಮಯದಲ್ಲಿ, ಭಾರತವು ಅದನ್ನು ವಿಭಜನೆಗಳನ್ನು ಕರಗಿಸಲು ಬಳಸುತ್ತಿದೆ. ಪ್ರತಿ ಹಳ್ಳಿ, ಪ್ರತಿ ಜಿಲ್ಲೆ ಮತ್ತು ಪ್ರತಿಯೊಬ್ಬ ನಾಗರಿಕರಿಗೆ ಆರೋಗ್ಯ ರಕ್ಷಣೆ, ಶಿಕ್ಷಣ ಮತ್ತು ಆರ್ಥಿಕ ಅವಕಾಶವನ್ನು ತಲುಪಿಸಲು ನಾವು ಇದನ್ನು ಸಮರ್ಥ ಸಾಧನವನ್ನಾಗಿ ಮಾಡುತ್ತಿದ್ದೇವೆ.







ತಂತ್ರಜ್ಞಾನದ ರಚನೆ

ಆತ್ಮನಿರ್ಭರ ಭಾರತದತ್ತ ನಮ್ಮ ಪ್ರಯಾಣವು ಮೂಲಭೂತ ತತ್ವದ ಮೇಲೆ ನಿರ್ಮಿಸಲ್ಪಟ್ಟಿದೆ. ಭಾರತವು ತಂತ್ರಜ್ಞಾನವನ್ನು ಬಳಸುವುದು ಮಾತ್ರವಲ್ಲದೆ ಅದನ್ನು ರಚಿಸಬೇಕು. ಆತ್ಮನಿರ್ಭರ ಭಾರತದಲ್ಲಿ ಕೃತಕ ಬುದ್ಧಿಮತ್ತೆಗಾಗಿ ನನ್ನ ದೃಷ್ಟಿಕೋನವು ಸ್ವಾಯತ್ತತೆ, ಒಳಗೊಳ್ಳುವಿಕೆ ಮತ್ತು ನಾವೀನ್ಯತೆ ಎಂಬ ಮೂರು ಸ್ತಂಭಗಳ ಮೇಲೆ ನಿಂತಿದೆ. ಕೃತಕ ಬುದ್ಧಿಮತ್ತೆ ಬಳಕೆಯಲ್ಲಿ ಮಾತ್ರವಲ್ಲದೆ ಸೃಷ್ಟಿಯಲ್ಲೂ ಭಾರತವು ಜಾಗತಿಕವಾಗಿ ಅಗ್ರ ಮೂರು ಎಐ ಸೂಪರ್ ಪವರ್‌ಗಳಲ್ಲಿ ಒಂದಾಗಬೇಕು ಎಂಬುದು ನನ್ನ ದೃಷ್ಟಿಕೋನವಾಗಿದೆ. ನಮ್ಮ ಕೃತಕ ಬುದ್ಧಿಮತ್ತೆ ಮಾದರಿಗಳನ್ನು ವಿಶ್ವಾದ್ಯಂತ ನಿಯೋಜಿಸಲಾಗುವುದು, ಅವರ ಸ್ಥಳೀಯ ಭಾಷೆಗಳಲ್ಲಿ ಶತಕೋಟಿ ಜನರಿಗೆ ಸೇವೆ ಸಲ್ಲಿಸಲಾಗುವುದು. ನಮ್ಮ ಎಐ ಸ್ಟಾರ್ಟ್‌ಅಪ್‌ಗಳು ನೂರಾರು ಶತಕೋಟಿ ಮೌಲ್ಯವನ್ನು ಹೊಂದಿರುತ್ತವೆ. ಲಕ್ಷಾಂತರ ಉತ್ತಮ-ಗುಣಮಟ್ಟದ ಉದ್ಯೋಗಗಳನ್ನು ಸೃಷ್ಟಿಸುತ್ತವೆ. ನಮ್ಮ ಕೃತಕ ಬುದ್ಧಿಮತ್ತೆ ಚಾಲಿತ ಸಾರ್ವಜನಿಕ ಸೇವೆಗಳನ್ನು ಜಾಗತಿಕವಾಗಿ ದಕ್ಷ, ಸಮಾನ ಆಡಳಿತದ ಮಾನದಂಡಗಳಾಗಿ ಅಧ್ಯಯನ ಮಾಡಲಾಗುತ್ತದೆ.

ಎಐನಿಂದ ಐಟಿ ವಲಯಕ್ಕೆ ಶಕ್ತಿ

ಕೃತಕ ಬುದ್ಧಿಮತ್ತೆ ಮಾರುಕಟ್ಟೆಯಿಂದಾಗಿ ಭಾರತದ ಐಟಿ ವಲಯವು 2030ರ ವೇಳೆಗೆ 400 ಬಿಲಿಯನ್ ಡಾಲರ್‌ಗೆ ತಲುಪಬಹುದು ಎಂದು ತೋರಿಸುತ್ತದೆ. ಇದು ಕೃತಕ ಬುದ್ಧಿಮತ್ತೆ ಶಕ್ತಗೊಂಡ ಹೊರಗುತ್ತಿಗೆ ಮತ್ತು ಡೊಮೇನ್-ನಿರ್ದಿಷ್ಟ ಯಾಂತ್ರೀಕೃತಗೊಂಡ ಹೊಸ ಅಲೆಗಳಿಂದ ಪ್ರೇರಿತವಾಗಿದೆ. ಮೂಲಭೂತ ಬದಲಾವಣೆಯೆಂದರೆ ಎಐ ಐಟಿ ವಲಯವನ್ನು ಬದಲಾಯಿಸುತ್ತಿಲ್ಲ, ಅದು ಅದನ್ನು ಪರಿವರ್ತಿಸುತ್ತಿದೆ. ಸಾಮಾನ್ಯ-ಉದ್ದೇಶದ ಎಐ ಸಾಧನಗಳು ವ್ಯಾಪಕವಾಗಿದ್ದರೂ, ಎಂಟರ್‌ಪ್ರೈಸ್ ಗ್ರೇಡ್ ಎಐ ಅಳವಡಿಕೆಯು ಇನ್ನೂ ನಿರ್ದಿಷ್ಟ ಕ್ಷೇತ್ರಗಳಲ್ಲಿ ಕೇಂದ್ರೀಕೃತವಾಗಿದೆ. ಸಂಕೀರ್ಣ ವ್ಯವಹಾರ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಹಾಲಿ ಐಟಿ ಸಂಸ್ಥೆಗಳು ನಿರ್ಣಾಯಕ ಪಾತ್ರ ವಹಿಸುತ್ತಿವೆ. ಬಲವಾದ ಭಾರತೀಯ ಕೃತಕ ಬುದ್ಧಿಮತ್ತೆ ಪರಿಸರ ವ್ಯವಸ್ಥೆಯನ್ನು ಸಕ್ರಿಯಗೊಳಿಸಲು, ಸರ್ಕಾರವು ಇಂಡಿಯಾ ಎಐ ಮಿಷನ್ ಅನ್ನು ಕೇಂದ್ರೀಕರಿಸಿದ ಸಮಗ್ರ ಕಾರ್ಯತಂತ್ರದೊಂದಿಗೆ ಪ್ರತಿಕ್ರಿಯಿಸಿದೆ. ನಾವು ಈಗಾಗಲೇ ಜಿಪಿಯುಗಳ ನಮ್ಮ ಆರಂಭಿಕ ಗುರಿಯನ್ನು ಮೀರಿದ್ದೇವೆ ಮತ್ತು ಸ್ಟಾರ್ಟ್‌ಅಪ್‌ಗಳು ಹಾಗೂ ಉದ್ಯಮಗಳಿಗೆ ವಿಶ್ವದರ್ಜೆಯ ಎಐ ಮೂಲಸೌಕರ್ಯಕ್ಕೆ ಕೈಗೆಟುಕುವ ಪ್ರವೇಶವನ್ನು ಒದಗಿಸಲು ನಾವು ಬದ್ಧರಾಗಿದ್ದೇವೆ.
ನಮ್ಮ ಉದ್ಯೋಗಿಗಳನ್ನು ಉದ್ಯಮ-ಸಂಬಂಧಿತ ಕೃತಕ ಬುದ್ಧಿಮತ್ತೆ ಪರಿಣತಿಯೊಂದಿಗೆ ಸಜ್ಜುಗೊಳಿಸಲು ನಾವು ಆರೋಗ್ಯ ರಕ್ಷಣೆ, ಕೃಷಿ, ಶಿಕ್ಷಣ ಮತ್ತು ಸುಸ್ಥಿರ ನಗರಗಳಲ್ಲಿ ನಾಲ್ಕು ಉತ್ಕೃಷ್ಟತಾ ಕೇಂದ್ರಗಳನ್ನು ಸ್ಥಾಪಿಸಿದ್ದೇವೆ. ಕೌಶಲ್ಯಕ್ಕಾಗಿ ಐದು ರಾಷ್ಟ್ರೀಯ ಉತ್ಕೃಷ್ಟತಾ ಕೇಂದ್ರಗಳನ್ನು ಸ್ಥಾಪಿಸಿದ್ದೇವೆ. ನಮ್ಮ ಐಟಿ ವಲಯವು ಕೇವಲ ಸೇವಾ ವಿತರಣೆಯಲ್ಲಿ ಮಾತ್ರವಲ್ಲದೆ ಭಾರತ ಮತ್ತು ಜಗತ್ತಿಗೆ ಕೆಲಸ ಮಾಡುವ ಎಐ ಉತ್ಪನ್ನಗಳು, ವೇದಿಕೆಗಳು ಮತ್ತು ಪರಿಹಾರಗಳನ್ನು ನಿರ್ಮಿಸುವಲ್ಲಿ ಮುಂಚೂಣಿಯಲ್ಲಿರಬೇಕೆಂದು ನಾವು ಬಯಸುತ್ತೇವೆ.

ಎಐ ಬಳಕೆ ಜವಾಬ್ದಾರಿ

ತಂತ್ರಜ್ಞಾನವು ಒಂದು ಶಕ್ತಿಶಾಲಿ ಸಾಧನವಾಗಿದ್ದು, ಮಾನವ ಉದ್ದೇಶದ ಶಕ್ತಿಗೆ ಪೂರಕವಾಗಿದೆ. ಅದು ಒಳ್ಳೆಯದಕ್ಕಾಗಿ ಒಂದು ಶಕ್ತಿಯಾಗುವುದನ್ನು ಖಚಿತಪಡಿಸಿಕೊಳ್ಳುವುದು ನಮಗೆ ಬಿಟ್ಟದ್ದು. ಕೃತಕ ಬುದ್ಧಿಮತ್ತೆಯು ಮಾನವ ಸಾಮರ್ಥ್ಯಗಳನ್ನು ಹೆಚ್ಚಿಸಬಹುದಾದರೂ, ನಿರ್ಧಾರ ತೆಗೆದುಕೊಳ್ಳುವ ಅಂತಿಮ ಜವಾಬ್ದಾರಿ ಯಾವಾಗಲೂ ಮಾನವರ ಮೇಲಿರಬೇಕು. ಪ್ರಪಂಚದಾದ್ಯಂತ, ಎಐ ಅನ್ನು ಹೇಗೆ ಬಳಸಬೇಕು ಮತ್ತು ನಿಯಂತ್ರಿಸಬೇಕು ಎಂಬುದರ ಕುರಿತು ಸಮಾಜಗಳು ಚರ್ಚಿಸುತ್ತಿವೆ. ಬಲವಾದ ಸುರಕ್ಷತಾ ಕ್ರಮಗಳು ನಿರಂತರ ನಾವೀನ್ಯತೆಯೊಂದಿಗೆ ಸಹಬಾಳ್ವೆ ನಡೆಸಬಹುದು ಎಂದು ತೋರಿಸುವ ಮೂಲಕ ಭಾರತವು ಈ ಸಂವಾದವನ್ನು ರೂಪಿಸಲು ಸಹಾಯ ಮಾಡುತ್ತಿದೆ. ಇದಕ್ಕಾಗಿ, ಕೆಲವು ಮೂಲಭೂತ ತತ್ವಗಳ ಮೇಲೆ ನಿರ್ಮಿಸಲಾದ ಕೃತಕ ಬುದ್ಧಿಮತ್ತೆಯ ಜಾಗತಿಕ ಒಪ್ಪಂದದ ಅಗತ್ಯವಿದೆ. ಇವುಗಳಲ್ಲಿ ಪರಿಣಾಮಕಾರಿ ಮಾನವ ಮೇಲ್ವಿಚಾರಣೆ, ವಿನ್ಯಾಸದ ಸುರಕ್ಷತೆ, ಪಾರದರ್ಶಕತೆ ಮತ್ತು ಡೀಪ್ ಫೇಕ್ಸ್, ಅಪರಾಧ ಮತ್ತು ಭಯೋತ್ಪಾದಕ ಚಟುವಟಿಕೆಗಳಿಗೆ ಕೃತಕ ಬುದ್ಧಿಮತ್ತೆ ಬಳಕೆಯ ಮೇಲೆ ಕಟ್ಟುನಿಟ್ಟಾದ ನಿಷೇಧಗಳು ಸೇರಿರಬೇಕು.

ಭದ್ರತಾ ಕಾಳಜಿಗಳು

2025ರ ಜನವರಿಯಲ್ಲಿ ಇಂಡಿಯಾ ಎಐ ಸುರಕ್ಷತಾ ಸಂಸ್ಥೆಯನ್ನು ಪ್ರಾರಂಭಿಸುವುದರೊಂದಿಗೆ, ದೇಶವು ಎಐ ವ್ಯವಸ್ಥೆಗಳ ನೈತಿಕ, ಸುರಕ್ಷಿತ ಮತ್ತು ಜವಾಬ್ದಾರಿಯುತ ನಿಯೋಜನೆಯನ್ನು ಉತ್ತೇಜಿಸಲು ಮೀಸಲಾದ ಕಾರ್ಯವಿಧಾನವನ್ನು ರಚಿಸಿತು. ಕೃತಕ ಬುದ್ಧಿಮತ್ತೆ ಹೆಚ್ಚು ಮುಂದುವರಿದಂತೆ, ನಮ್ಮ ಜವಾಬ್ದಾರಿಯ ಪ್ರಜ್ಞೆ ಬಲಗೊಳ್ಳಬೇಕು. ಸ್ಥಳೀಯ ಅಪಾಯಗಳು ಮತ್ತು ಸಾಮಾಜಿಕ ವಾಸ್ತವಗಳ ಮೇಲೆ ಅದರ ಗಮನವು ಭಾರತದ ವಿಧಾನವನ್ನು ವಿಶಿಷ್ಟವಾಗಿಸುತ್ತದೆ. ರಾಷ್ಟ್ರೀಯ ಭದ್ರತಾ ಕಾಳಜಿಗಳು ಮತ್ತು ಮಹಿಳೆಯರನ್ನು ಗುರಿಯಾಗಿಸುವ ಡೀಪ್‌ಫೇಕ್‌ಗಳು, ಮಕ್ಕಳ ಸುರಕ್ಷತಾ ಅಪಾಯಗಳು ಮತ್ತು ವೃದ್ಧರ ಮೇಲೆ ಪರಿಣಾಮ ಬೀರುವ ಬೆದರಿಕೆಗಳು ಸೇರಿದಂತೆ ದುರ್ಬಲ ಗುಂಪುಗಳಿಗೆ ಹಾನಿಯನ್ನು ಪರಿಗಣಿಸುತ್ತದೆ. ಡೀಪ್‌ಫೇಕ್ ವಿಡಿಯೊಗಳ ಉಲ್ಬಣದಿಂದಾಗಿ ಈ ಸುರಕ್ಷತಾ ಕ್ರಮಗಳ ತುರ್ತುಸ್ಥಿತಿ ಎಲ್ಲರಿಗೂ ಸ್ಪಷ್ಟವಾಗುತ್ತಿದೆ. ಇದಕ್ಕೆ ಪ್ರತಿಕ್ರಿಯೆಯಾಗಿ, ಕೃತಕ ಬುದ್ಧಿಮತ್ತೆಯಿಂದ ಉತ್ಪತ್ತಿಯಾಗುವ ವಿಷಯವನ್ನು ವಾಟರ್ ಮಾರ್ಕ್ ಮಾಡುವ ಮತ್ತು ಹಾನಿಕಾರಕ ಸಂಶ್ಲೇಷಿತ ಮಾಧ್ಯಮವನ್ನು ತೆಗೆದುಹಾಕುವ ನಿಯಮಗಳನ್ನು ಭಾರತ ಪ್ರಕಟಿಸಿತು. ವಿಷಯ ಸುರಕ್ಷತೆಗಳ ಜೊತೆಗೆ, ಡಿಜಿಟಲ್ ವೈಯಕ್ತಿಕ ಡೇಟಾ ಸಂರಕ್ಷಣಾ ಕಾಯ್ದೆಯು ಡಿಜಿಟಲ್ ಪರಿಸರ ವ್ಯವಸ್ಥೆಯಲ್ಲಿ ಡೇಟಾ ರಕ್ಷಣೆ ಮತ್ತು ಬಳಕೆದಾರರ ಹಕ್ಕುಗಳನ್ನು ಬಲಪಡಿಸುತ್ತದೆ. ಭಾರತದ ಬದ್ಧತೆ ಜಾಗತಿಕವಾಗಿ ವಿಸ್ತರಿಸಿದೆ. ಗಡಿಯುದ್ದಕ್ಕೂ ಸುರಕ್ಷತೆ ಮತ್ತು ಉತ್ತರದಾಯಿತ್ವವನ್ನು ಖಚಿತಪಡಿಸಿಕೊಳ್ಳಲು ವಾಯುಯಾನ ಮತ್ತು ಹಡಗುಗಳಲ್ಲಿ ಜಾಗತಿಕ ಮಾನದಂಡಗಳಿರುವಂತೆಯೇ, ಜಗತ್ತು ಕೃತಕ ಬುದ್ಧಿಮತ್ತೆಯ ಸಾಮಾನ್ಯ ತತ್ವಗಳು ಮತ್ತು ಮಾನದಂಡಗಳತ್ತ ಕೆಲಸ ಮಾಡಬೇಕು.

ಯುವಕರ ಕಳವಳ

ಉದ್ಯೋಗ ಮಾರುಕಟ್ಟೆಯಲ್ಲಿ ಕೃತಕ ಬುದ್ಧಿಮತ್ತೆ ಆಧಾರಿತ ಅಡೆತಡೆಗಳ ಬಗ್ಗೆ ನಮ್ಮ ಯುವಕರ ಕಳವಳವನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಅದಕ್ಕಾಗಿಯೇ ನಾವು ಕೃತಕ ಬುದ್ಧಿಮತ್ತೆ ಚಾಲಿತ ಭವಿಷ್ಯಕ್ಕಾಗಿ ನಮ್ಮ ಜನರಿಗೆ ಕೌಶಲ್ಯ ಮತ್ತು ಮರು-ಕೌಶಲ್ಯಕ್ಕಾಗಿ ಹೂಡಿಕೆ ಮಾಡುತ್ತಿದ್ದೇವೆ. ಸರ್ಕಾರವು ವಿಶ್ವದ ಅತ್ಯಂತ ಮಹತ್ವಾಕಾಂಕ್ಷೆಯ ಕೌಶಲ್ಯ ಯೋಜನೆಗಳಲ್ಲಿ ಒಂದನ್ನು ಪ್ರಾರಂಭಿಸಿದೆ. ನಾವು ಇದನ್ನು ಭವಿಷ್ಯದ ಸಮಸ್ಯೆಯಾಗಿ ಸಮೀಪಿಸುತ್ತಿಲ್ಲ. ಆದರೆ ನಾವು ಅದನ್ನು ಪ್ರಸ್ತುತ ಅನಿವಾರ್ಯವೆಂದು ಪರಿಗಣಿಸುತ್ತಿದ್ದೇವೆ. ನಾನು ಕೃತಕ ಬುದ್ಧಿಮತ್ತೆಯನ್ನು ಒಂದು ಶಕ್ತಿ ವೃದ್ಧಿಯಾಗಿ ನೋಡುತ್ತೇನೆ. ಇದು ವೈದ್ಯರು, ಶಿಕ್ಷಕರು ಮತ್ತು ವಕೀಲರು ದೊಡ್ಡ ಗುಂಪಿನ ಜನರನ್ನು ತಲುಪಲು ಸಹಾಯ ಮಾಡುತ್ತದೆ. ತಂತ್ರಜ್ಞಾನದಿಂದಾಗಿ ಕೆಲಸ ಕಣ್ಮರೆಯಾಗುವುದಿಲ್ಲ ಎಂದು ಇತಿಹಾಸವು ತೋರಿಸಿದೆ. ಅದರ ಸ್ವರೂಪವು ಬದಲಾಗುತ್ತದೆ ಮತ್ತು ಹೊಸ ರೀತಿಯ ಉದ್ಯೋಗಗಳು ಸೃಷ್ಟಿಯಾಗುತ್ತವೆ. ಕೆಲವು ಉದ್ಯೋಗಗಳನ್ನು ಮರು ವ್ಯಾಖ್ಯಾನಿಸಬಹುದಾದರೂ, ಡಿಜಿಟಲ್ ರೂಪಾಂತರವು ಭಾರತದ ಆರ್ಥಿಕತೆಗೆ ಹೊಸ ಟೆಕ್ ಉದ್ಯೋಗಗಳನ್ನು ಸೇರಿಸುತ್ತದೆ. ಶತಮಾನಗಳಿಂದ, ನಾವೀನ್ಯತೆ ಮತ್ತು ತಾಂತ್ರಿಕ ಕ್ರಾಂತಿಗಳು ಉದ್ಯೋಗಗಳನ್ನು ತೆಗೆದುಹಾಕುತ್ತವೆ ಎಂಬ ಭಯವಿತ್ತು. ಆದರೂ ನಾವೀನ್ಯತೆ ಸಂಭವಿಸಿದಾಗಲೆಲ್ಲಾ ಹೊಸ ಅವಕಾಶಗಳು ಹೊರಹೊಮ್ಮುತ್ತವೆ ಎಂದು ಇತಿಹಾಸವು ನಮಗೆ ಕಲಿಸುತ್ತದೆ. ಎಐ ಯುಗದಲ್ಲೂ ಇದು ನಿಜವಾಗಿರುತ್ತದೆ. ಈ ಬದಲಾವಣೆಗೆ ಹೊಂದಿಕೊಳ್ಳಲು ಭಾರತ ಈಗಾಗಲೇ ಸಜ್ಜಾಗಿದೆ.

ಕಿರುಸುದ್ದಿ

ದ.ಕ.-ಉಡುಪಿ ಜಿಲ್ಲಾ ಮಟ್ಟದ ಪವರ್‌ಲಿಫ್ಟಿಂಗ್ ಸ್ಪರ್ಧಾಕೂಟ


• **ಕುಂದಾಪುರ:** ಕೂಳೂರು ಸ್ಪೋರ್ಟ್ಸ್ ಪ್ರಮೋಟರ್ಸ್ ಅವರ ಸಂಯೋಜನೆಯಲ್ಲಿ, ಕರ್ನಾಟಕ ಪವರ್ ಲಿಫ್ಟಿಂಗ್ ಸಂಸ್ಥೆ ಹಾಗೂ ದಕ್ಷಿಣ ಕನ್ನಡ ಪವರ್ ಲಿಫ್ಟಿಂಗ್ ಸಂಸ್ಥೆ ಅವರ ಸಹಭಾಗಿತ್ವದಲ್ಲಿ ಕರ್ನಾಟಕ ರಾಜ್ಯ ಮಾಸ್ಟರ್ಸ್ ಮತ್ತು ದಕ್ಷಿಣ ಕನ್ನಡ-ಉಡುಪಿ ಜಿಲ್ಲಾ ಮಟ್ಟದ ಪವರ್‌ಲಿಫ್ಟಿಂಗ್ ಸ್ಪರ್ಧಾಕೂಟ - 2026 ರ 66 ಕೆಜಿ ಎಂ-2 ವಿಭಾಗದಲ್ಲಿ ಕುಂದಾಪುರ ನ್ಯೂ ಹರ್ಕ್ಯುಲೆಸ್ ಜಿಮ್ ಸಂಸ್ಥೆಯ ಅಂತರಾಷ್ಟ್ರೀಯ ಪವರ್ ಲಿಫ್ಟರ್ ಡಾ.ಸತೀಶ ಖಾರ್ವಿ ಕುಂದಾಪುರ ಅವರು ಕ್ಲಾಸಿಕ್ ಮತ್ತು ಇಕ್ವಿಕ್‌ಪಡ್ ಎರಡು ವಿಭಾಗಗಳಲ್ಲಿ ಸ್ಪರ್ಧಿಸಿ ಎರಡು ಚಿನ್ನದ ಪದಕಗಳು ಮತ್ತು 'ಕರ್ನಾಟಕದ ಬಲಿಷ್ಠ ಪುರುಷ-2026' ಪ್ರಶಸ್ತಿ ಪಡೆದುಕೊಂಡಿದ್ದಾರೆ.



ಕುಂದಾಪುರ ನ್ಯೂ ಹರ್ಕ್ಯುಲೆಸ್ ಜಿಮ್ ಸಂಸ್ಥೆಯ ಸದಸ್ಯ ಕಾರ್ತಿಕ್ ಪೂಜಾರಿ ಅವರು 93 ಕೆಜಿ ವಿಭಾಗದಲ್ಲಿ ಚಿನ್ನದ ಪದಕ ಮತ್ತು ದಕ್ಷಿಣ ಕನ್ನಡ-ಉಡುಪಿ ಜಿಲ್ಲಾ ಮಟ್ಟದ ಬಲಿಷ್ಠ ಪುರುಷ -2026 ಪ್ರಶಸ್ತಿ ಪಡೆದುಕೊಂಡಿದ್ದಾರೆ.

ಕ್ಲಾಸಿಕ್ ಪವರ್ ಲಿಫ್ಟಿಂಗ್: ಸುಧೀರ್ ಕಾಮತ್‌ಗೆ ಚಿನ್ನದ ಪದಕ

• **ಮಂಗಳೂರು:** ಕೂಳೂರಿನಲ್ಲಿ ಜರುಗಿದ ರಾಜ್ಯಮಟ್ಟದ ಕ್ಲಾಸಿಕ್ ಪವರ್ ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ 74 ಕೆ.ಜಿ. ಮಾಸ್ಟರ್ಸ್ ವಿಭಾಗದಲ್ಲಿ ಸುಧೀರ್ ಕಾಮತ್ ಪಲಿಮಾರ್ ಅವರು ಚಿನ್ನದ ಪದಕ ಗಳಿಸಿದ್ದಾರೆ. ಇವರು ಬಾಲಾಂಜನೇಯ ಜಿಮ್ನೇಶಿಯಂನ ಸದಸ್ಯ ಹಾಗೂ ವಿಠಲ್ ಬಂಗೇರ ಅವರ ಶಿಷ್ಯ. ಇವರು ಪ್ರಸ್ತುತ ಕರ್ಣಾಟಕ ಬ್ಯಾಂಕ್‌ನ ವಿದೇಶಿ ವಿನಿಮಯ ಕಚೇರಿಯಲ್ಲಿ ವ್ಯವಸ್ಥಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.



ಸೌಂದರ್ಯ ಸ್ಪರ್ಧೆ: ಮುಲ್ಕಿಯ ಶಿಖಾ ಸುಶೀಲ್‌ಗೆ ಕಿರೀಟ

• **ಮುಲ್ಕಿ:** ಮಂಗಳೂರಿನಲ್ಲಿ ನಡೆದ ಪ್ರತಿಷ್ಠಿತ ಹಿಸ್ಸಾ ಮಿಸ್ ದಾಯಿಜಿ ವರ್ಲ್ಡ್ -2026 ಸ್ಪರ್ಧೆಯಲ್ಲಿ ಮುಲ್ಕಿಯ ಶಿಖಾ ಸುಶೀಲ್ ಪ್ರಥಮ ಸ್ಥಾನ ಪಡೆದು ಕಿರೀಟವನ್ನು ಮುಡಿಗೇರಿಸಿಕೊಂಡಿದ್ದಾರೆ. ಮಂಗಳೂರಿನ ಮಿಲಾಗ್ರಿಸ್ ಸಭಾಭವನದಲ್ಲಿ ನಡೆದ ಅಂತಿಮ ಸುತ್ತಿನ ಸ್ಪರ್ಧೆಯಲ್ಲಿ ಶಿಖಾ ಸುಶೀಲ್‌ರನ್ನು ವಿಜೇತರೆಂದು ಘೋಷಿಸಲಾಯಿತು. ಸೆರೆನಾ ಎವಿನ್ ಪ್ರಥಮ ರನ್ನರ್‌ಅಪ್ ಪ್ರಶಸ್ತಿ ಪಡೆದುಕೊಂಡರೆ ಫೇ ಮಾರ್ಟಿಸ್ ದ್ವಿತೀಯ ರನ್ನರ್‌ಅಪ್ ಪ್ರಶಸ್ತಿಗೆ ಭಾಜನಾರದರು. ದೇಶ ವಿದೇಶಗಳಿಂದ ಸಾವಿರಕ್ಕಿಂತಲೂ ಹೆಚ್ಚಿನ ಸ್ಪರ್ಧಿಗಳು ಭಾಗವಹಿಸಿದ್ದ ಈ ಸೌಂದರ್ಯ ಸ್ಪರ್ಧೆಯಲ್ಲಿ ದ್ವಿತೀಯ ಹಂತಕ್ಕೆ ಇಪ್ಪತ್ತೈದು ಸ್ಪರ್ಧಿಗಳು ಆಯ್ಕೆಯಾಗಿದ್ದರು. ಅಂತಿಮ ಸುತ್ತಿನ ಸ್ಪರ್ಧೆಯಲ್ಲಿ ಆತ್ಮಸ್ಥೈರ್ಯ,ಸ್ವ ಪರಿಚಯಿಸುವಿಕೆ, ರೇಂಪ್ ವಾಕ್, ಪ್ರಶ್ನೋತ್ತರ ಹಾಗೂ ಎಕ್ಸ್ ಫಾಕ್ಟರ್‌ವಿಭಾಗಳಲ್ಲಿ ಮಿಂಚಿದ ಶಿಖಾ ಸುಶೀಲ್, ಹಿಸ್ಸಾ ಮಿಸ್ ದಾಯಿವಲ್ಡ್ ಕಿರೀಟಕ್ಕೆ ಭಾಜನರಾದರು. ಹಿಸ್ಸಾ ಇಂಟರ್ ನ್ಯಾಶನಲ್ ನಿರ್ದೇಶಕ ರೊನಾಲ್ಡ್ ಪಿಂಟೊ, ಪತ್ನಿ ದೊರೊತಿ ಪಿಂಟೊ, ವಿಜೇತರನ್ನು ಕಿರೀಟದ ಜೊತೆಗೆ ತಲಾ ಮೂರು, ಎರಡು ಹಾಗೂ ಒಂದು ಲಕ್ಷ ರೂ. ನಗದು ಬಹುಮಾನ ನೀಡಿ ಗೌರವಿಸಿದರು. ಈಕೆ ಮುಲ್ಕಿಯ ಸುಶೀಲ್ ಬಂಗೇರ ಮತ್ತು ಶೀತಲ್ ಬಂಗೇರರ ಪುತ್ರಿ. 2023ರಲ್ಲಿ ಮಿಸ್ ಟೀನ್ ಮಂಗಳೂರು, ಮಿಸ್ ಕರ್ನಾಟಕ ಸ್ಟೈಲ್ ಐಕಾನ್-2023 ಹಾಗೂ ಮಿಸ್ ಮೊಗವೀರ ಇಂಟರ್ ನ್ಯಾಷನಲ್-2024 ಪ್ರಶಸ್ತಿಯನ್ನು ಪಡೆದುಕೊಂಡಿದ್ದು. ಲಯನ್ಸ್ ಲಿಯೋ ಕ್ಲಬ್‌ನ ಮಲ್ಟಿಪಲ್ ಡಿಸ್ಟ್ರಿಕ್ಟ್‌ನ ಸಕ್ರಿಯ ಸದಸ್ಯೆ.



ಕಾರ್ಕಳದ ಭಕ್ತಿ ವೆಂಕಟೇಶ್ ಹೆಗ್ಡೆಗೆ ಶಾರ್ಜಾ ಅವಾರ್ಡ್ ಫಾರ್ ಎಜುಕೇಶನಲ್ ಎಕ್ಸಲೆನ್ಸ್ ಪ್ರಶಸ್ತಿ

• **ಕಾರ್ಕಳ:** ಶಾರ್ಜಾದಲ್ಲಿ ವಾಸಿಸುತ್ತಿರುವ ವೆಂಕಟೇಶ್ ಹೆಗ್ಡೆ ಬೋಳ ಮತ್ತು ಅಶ್ವಿನಿ ಭಟ್ ದಂಪತಿಯ ಪುತ್ರಿ, ಭಕ್ತಿ ವೆಂಕಟೇಶ್ ಹೆಗ್ಡೆ ಅವರಿಗೆ ಶಾರ್ಜಾ ಅವಾರ್ಡ್ ಫಾರ್ ಎಜುಕೇಶನಲ್ ಎಕ್ಸಲೆನ್ಸ್ ಗೌರವ ಪ್ರಶಸ್ತಿ ಲಭಿಸಿದೆ. ಫೆ. 14 ರಂದು ಯುನೈಟೆಡ್ ಅರಬ್ ಎಮಿರೇಟ್ಸ್‌ನ ಶಾರ್ಜಾ ಆಡಳಿತಗಾರರಾದ ಡಾ . ಶೇಖ್ ಸುಲ್ತಾನ್ ಬಿನ್ ಮುಹಮ್ಮದ್ ಅಲ್ ಖಾಸಿಮಿ ಅವರಿಂದ ಈ ವಿಶಿಷ್ಟ ಮನ್ನಣೆಯನ್ನು ಭಕ್ತಿ ಅವರು ಸ್ವೀಕರಿಸಿದರು. ಭಕ್ತಿ ಅವರು ಪ್ರಸ್ತುತ ಶಾರ್ಜಾದ ದೆಹಲಿ ಪ್ರೈವೇಟ್ ಸ್ಕೂಲ್‌ನಲ್ಲಿ 9 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.





ಕಾಸರಗೋಡು ಜಿಲ್ಲೆಯ ಎಡನೀರು ಶ್ರೀ ವಿಷ್ಣುಮಂಗಲ ದೇವಸ್ಥಾನದ ವಾರ್ಷಿಕ ಮಹೋತ್ಸವ ಅಂಗವಾಗಿ ತೆಪ್ಪೋತ್ಸವ ಕಾರ್ಯಕ್ರಮವು ಸಂಭ್ರಮ ಸಡಗರದಿಂದ ನಡೆಯಿತು. ಸಾವಿರಾರು ಭಕ್ತರು ವೀಕ್ಷಿಸಿ ಧನ್ಯತೆಯನ್ನು ಹೊಂದಿದರು.

ದಕ್ಷಿಣ ಕನ್ನಡ ಜಿಲ್ಲಾ 28ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಸರ್ವಾಧ್ಯಕ್ಷರಾಗಿ ಚಿದಂಬರ ಬೈಕಂಪಾಡಿ ಆಯ್ಕೆ

• **ಮಂಗಳೂರು:** ಬಿಸಿರೋಡ್ ಸ್ಪರ್ಶ ಕಲಾಮಂದಿರದಲ್ಲಿ ಮಾರ್ಚ್ 27ಮತ್ತು 28 ರಂದು ನಡೆಯುವ 28 ನೆಯ ದ. ಕ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಹಿರಿಯ ಸಾಹಿತಿ , ಪತ್ರಕರ್ತ ಚಿದಂಬರ ಬೈಕಂಪಾಡಿ ಆಯ್ಕೆಯಾಗಿದ್ದಾರೆ. ಜಿಲ್ಲಾ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ದ. ಕ ಜಿಲ್ಲಾ ಕ.ಸಾ.ಪ ಅಧ್ಯಕ್ಷ ಡಾ. ಎಂಪಿ ಶ್ರೀನಾಥ ತಿಳಿಸಿದ್ದಾರೆ.



ಪತ್ರಕರ್ತ, ಲೇಖಕರಾದ ಚಿದಂಬರ ಬೈಕಂಪಾಡಿಯವರು ಮುಂಗಾರು, ಕನ್ನಡಪ್ರಭ ಪತ್ರಿಕೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಸುದೀರ್ಘ ಅವಧಿ ಸೇವೆ ಸಲ್ಲಿಸಿದ್ದಾರೆ. ಕನ್ನಡದ ಮಹತ್ವದ ಕವಿಯಾಗಿ ಗುರುತಿಸಿಕೊಂಡಿರುವ ಇವರು ಮಂಗಳೂರು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ, ಕರ್ನಾಟಕ ತುಳುಸಾಹಿತ್ಯ ಅಕಾಡೆಮಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. 'ಇದು ಮುಂಗಾರು' ಕೃತಿ ಪತ್ರಿಕೋದ್ಯಮದ ಬಗ್ಗೆಗಿನ ಕೃತಿ. ಹಿರಿಯ ಪತ್ರಕರ್ತರಾದ ವಡ್ಡರ್ಸೆಯವರ ಒಡನಾಡಿಯಾಗಿ ಹತ್ತು ವರ್ಷ ಕಾಲ ಮುಂಗಾರು ಪತ್ರಿಕೆಯಲ್ಲಿ ಸೇವೆ ಸಲ್ಲಿಸಿ ಅವರ ಆಶಯಗಳಿಗೆ ಜೀವ ತುಂಬಿದ್ದರು.

ಮುಂಗಾರು ಎನ್ನುವ ಪತ್ರಿಕೋದ್ಯಮದ ಕುರಿತ ಪುಸ್ತಕ, ಪ.ಗೋ ಪ್ರಪಂಚ - ಪತ್ರಿಕೋದ್ಯಮ ಕುರಿತ ಪುಸ್ತಕ, ರಾಜಕೀಯ ಒಳಸುಳಿಗಳು ಲೇಖನಗಳು ಸೇರಿದಂತೆ ಸಾಹಿತ್ಯ ಕ್ಷೇತ್ರದಲ್ಲೂ ಹಲವು ಕೃತಿ ಹೊರತಂದಿದ್ದಾರೆ.

ದ.ಕ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಯಿಂದ ಪುರಸ್ಕಾರಗೊಂಡ ಬೈಕಂಪಾಡಿಯವರು ಕರ್ನಾಟಕ ಪತ್ರಕರ್ತರ ಸಂಘದ ಅತ್ಯುತ್ತಮ ತನಿಖಾ ಪತ್ರಕರ್ತ ಗೌರವ ಪ್ರಶಸ್ತಿಗೆ ಪಾತ್ರರಾಗಿದ್ದರು. ಅಖಿಲ ಭಾರತ ಆಕಾಶವಾಣಿ ವಾರ್ಷಿಕ ಪ್ರಶಸ್ತಿ ಬೈಕಂಪಾಡಿಯವರ 'ಬೆಂಗರೆ' ಬಾನುಲಿ ಸಾಕ್ಷರೂಪಕಕ್ಕೆ ಒಲಿದು ಬಂದಿದೆ. ಬನ್ನಂಜೆ ರಾಮಾಚಾರ್ಯ ಪತ್ರಿಕೋದ್ಯಮ ಪ್ರಶಸ್ತಿ ಪತ್ರಿಕೋದ್ಯಮ ಕ್ಷೇತ್ರದ ಇನ್ ಲ್ಯಾಂಡ್ ಅವಾರ್ಡ್, ಕರ್ನಾಟಕ ಮಾಧ್ಯಮ ಅಕಾಡೆಮಿ ಅವಾರ್ಡ್, ಡಾ. ಕೋಟ ಶಿವರಾಮ ಕಾರಂತ ಪ್ರಶಸ್ತಿ ಮುಂತಾದ ಗೌರವಕ್ಕೆ ಪಾತ್ರರಾದ ಬೈಕಂಪಾಡಿಯವರು 2025ನೇ ಸಾಲಿನ ಪತಿಷ್ಠಿತ ವಡ್ಡರ್ಸೆ ರಘುರಾಮ ಶೆಟ್ಟಿ ಪತ್ರಿಕೋದ್ಯಮ ಪ್ರಶಸ್ತಿಯನ್ನು ಪಡೆದಿದ್ದಾರೆ.

ಎಸ್‌ಸಿಡಿಸಿಸಿ ಬ್ಯಾಂಕ್ ಯುಪಿಐ, ಐಎಂಪಿಎಸ್‌ಗೆ ಚಾಲನೆ | ಡಾ.ಎಂ.ಎನ್. ರಾಜೇಂದ್ರಕುಮಾರ್ ಕರೆ

ಸೊಸೈಟಿಗಳಲ್ಲಿಯೂ ಡಿಜಿಟಲ್ ಕ್ರಾಂತಿ

• **ಮಂಗಳೂರು:** ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಗ್ರಾಹಕರ ಅನುಕೂಲಕ್ಕಾಗಿ ಯುಪಿಐ ಮತ್ತು ಐಎಂಪಿಎಸ್ ಸೌಲಭ್ಯ ಆರಂಭಿಸಿದ್ದು, ಎಲ್ಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲೂ ಈ ಸೌಲಭ್ಯ ಅಳವಡಿಸಿಕೊಳ್ಳಬೇಕು ಎಂದು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ. ಮಂಗಳೂರು ಅಧ್ಯಕ್ಷ ಡಾ. ಎಂ.ಎನ್. ರಾಜೇಂದ್ರಕುಮಾರ್ ಹೇಳಿದರು.

ನಗರದ ಎಸ್‌ಸಿಡಿಸಿಸಿ ಬ್ಯಾಂಕ್ ಸಭಾಂಗಣದಲ್ಲಿ ಮಂಗಳವಾರ ಡಿಜಿಟಲ್ ಬ್ಯಾಂಕಿಂಗ್ ಸೇವೆಗಳಾದ ಯುಪಿಐ ಮತ್ತು ಐಎಂಪಿಎಸ್ ಸೌಲಭ್ಯಗಳಿಗೆ ಅಧಿಕೃತ ಚಾಲನೆ ನೀಡಿ, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಬ್ಯಾಂಕಿಂಗ್ ಸೇವೆಯಲ್ಲಿ ದೇಶಕ್ಕೆ ಮಾದರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಎಸ್‌ಸಿಡಿಸಿಸಿ ಬ್ಯಾಂಕ್ ಅತ್ಯಾಧುನಿಕ ತಂತ್ರಜ್ಞಾನದ ಬ್ಯಾಂಕಿಂಗ್ ಸೇವೆಗಳನ್ನು ಗ್ರಾಹಕರಿಗೆ ನೀಡುತ್ತಿದ್ದು, ಇದೀಗ ಗ್ರಾಹಕರಿಗೆ ಡಿಜಿಟಲ್ ಬ್ಯಾಂಕಿಂಗ್ -ಯುಪಿಐ ಮತ್ತು ಐಎಂಪಿಎಸ್ ಸೌಲಭ್ಯ ಆರಂಭಿಸಿದೆ. ಈ ಸೇವೆಯ ಮೂಲಕ ಎಸ್‌ಸಿಡಿಸಿಸಿ ಬ್ಯಾಂಕಿನ ಮೊಬೈಲ್‌ಅಪ್ಲಿಕೇಶನ್ ಬಳಸಿ ಗ್ರಾಹಕರು ಕ್ಷಣಾರ್ಧದಲ್ಲಿ ಹಣ ವರ್ಗಾವಣೆ ಮಾಡುವ ಸೌಲಭ್ಯವನ್ನು ಪಡೆಯಬಹುದು. ಈ ವ್ಯವಸ್ಥೆಯನ್ನು ಎಲ್ಲ ಸೊಸೈಟಿಗಳು ಅಳವಡಿಸಲು ಅಗತ್ಯ ತರಬೇತಿ ನೀಡಲಾಗುವುದು ಎಂದರು.

ಯುಪಿಐ ಸೇವೆಯ ಮೂಲಕ ನಮ್ಮ ಗ್ರಾಹಕರು ಸುಲಭವಾಗಿ ಹಾಗೂ ಸುರಕ್ಷಿತವಾಗಿ ಹಣ ವರ್ಗಾವಣೆ ಮಾಡಬಹುದು. ಗ್ರಾಹಕರು ಗೂಗಲ್ ಪೇ, ಫೋನ್ ಪೇ, ಭೀಮ್, ವಾಟ್ಸ್ ಆಪ್ ಪೇ, ಪೇಟಿಎಂ, ಫ್ರೀಚಾರ್ಜ್, ಸೂಪರ್‌ಮನಿ ಮುಂತಾದ ಅಪ್ಲಿಕೇಶನ್‌ಗಳ ಮೂಲಕ ಸುಲಭವಾಗಿ ವ್ಯವಹಾರಗಳನ್ನು ನಡೆಸಬಹುದು ಎಂದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಹಕಾರಿ ಸಂಘಗಳು ಅತ್ಯಾಧುನಿಕವಾಗಿ ಬೆಳೆದು ನಿಂತಿವೆ. ಹೊಸ ಕಟ್ಟಡವಿದೆ. ಕೆಲವೆಡೆ ಹವಾನಿಯಂತ್ರಿತ ವ್ಯವಸ್ಥೆ ಒಳಗೊಂಡಿದೆ. ಎಲ್ಲ ಸಹಕಾರಿ ಸಂಘಗಳು ಲಾಭದಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಸಾಧನೆ ನಮ್ಮ ಜಿಲ್ಲೆಯಲ್ಲಿ ಮಾತ್ರ ಆಗುತ್ತಿದೆ. ಪ್ರಾಥಮಿಕ ಕೃಷಿ ಸಹಕಾರ ಸಂಘಗಳು ಆಧುನಿಕ ತಂತ್ರಜ್ಞಾನವನ್ನೂ ಅಳವಡಿಸಿಕೊಳ್ಳಬೇಕಿದೆ ಎಂದು ಹೇಳಿದರು.



> **ನಮ್ಮ ಬ್ಯಾಂಕ್ ಸದಾ ಗ್ರಾಹಕರಿಗೆ ಅತ್ಯುತ್ತಮ ಹಾಗೂ ಆಧುನಿಕ ಸೇವೆಗಳನ್ನು ಒದಗಿಸಲು ಬದ್ಧವಾಗಿದೆ. ಯುಪಿಐ ಸೇವೆಯಿಂದ ನಮ್ಮ ಗ್ರಾಹಕರಿಗೆ ಮತಷ್ಟು ಸುಲಭ ಮತ್ತು ವೇಗವಾದ ಬ್ಯಾಂಕಿಂಗ್ ಅನುಭವ ಸಿಗಲಿದೆ**
> ■ ಡಾ.ಎಂ.ಎನ್. ರಾಜೇಂದ್ರಕುಮಾರ್

ನೂತನ ವ್ಯವಸ್ಥೆ ಬಗ್ಗೆ ಮಾಹಿತಿ ನೀಡಿದ ನಂದಕುಮಾರ್, ಐಎಂಪಿಎಸ್ ಸೌಲಭ್ಯ ಮೂಲಕ ಎಸ್‌ಸಿಡಿಸಿಸಿ ಬ್ಯಾಂಕ್ ಗ್ರಾಹಕರು ಇನ್ನುಮುಂದೆ ತಕ್ಷಣ ಹಣ ಪಾವತಿ, ವರ್ಗಾವಣೆ ಮಾಡಬಹುದು. ಎಸ್‌ಸಿಡಿಸಿಸಿ ಬ್ಯಾಂಕ್ ಆ್ಯಪ್ ಮೂಲಕ ಈ ತಂತ್ರಜ್ಞಾನವನ್ನು ಬಳಸಿಕೊಳ್ಳಬಹುದು. ಹೊಸ ತಂತ್ರಜ್ಞಾನ, ವ್ಯವಸ್ಥೆಗಳನ್ನು ಎಸ್‌ಸಿಡಿಸಿಸಿ ಬ್ಯಾಂಕ್ ದೇಶದಲ್ಲೇ ಮೊದಲಿಗೆ ಅಳವಡಿಕೆ ಮಾಡಿಕೊಳ್ಳುತ್ತಿದ್ದು, ದೇಶಕ್ಕೆ ಮಾದರಿಯಾಗಿದೆ ಎಂದರು.

ಯುಪಿಐ ಮತ್ತು ಐಎಂಪಿಎಸ್ ವ್ಯವಸ್ಥೆಯ ಪೋಸ್ಟರ್, ಕ್ಯೂಆರ್‌ಕೋಡ್‌ನ್ನು ಡಾ. ಎಂ.ಎನ್. ರಾಜೇಂದ್ರಕುಮಾರ್ ಅನಾವರಣ ಮಾಡಿದರು. ನೂತನ ಸೌಲಭ್ಯಕ್ಕೆ ಸಹಕಾರ ನೀಡಿದವರನ್ನು ಗೌರವಿಸಲಾಯಿತು.

ಬ್ಯಾಂಕ್ ಉಪಾಧ್ಯಕ್ಷ ವಿನಯ್ ಕುಮಾರ್ ಸೂರಿಂಜೆ, ನಿರ್ದೇಶಕರುಗಳಾದ ಭಾಸ್ಕರ್ ಎಸ್. ಕೋಟ್ಯಾನ್ , ಎಂ.ವಾದಿರಾಜ ಶೆಟ್ಟಿ, ಸದಾಶಿವ ಉಳ್ಳಾಲ್, ಮಹೇಶ್ ಹೆಗ್ಡೆ ಎಂ., ಅಶೋಕ್ ಕುಮಾರ್ ಶೆಟ್ಟಿ, ರಾಜೇಶ್ ರಾವ್, ಎಸ್.ಎನ್. ಮನ್ಮಥ , ಕುಶಾಲಪ್ಪ ಗೌಡ, ಸಹಕಾರ ಸಂಘಗಳ ಉಪ ನಿಬಂಧಕ ರಮೇಶ್ ಎಚ್.ಎನ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗೋಪಾಲಕೃಷ್ಣ ಭಟ್ ಉಪಸ್ಥಿತರಿದ್ದರು. ಶಶಿಕುಮಾರ್ ರೈ ಬಾಲ್ಯೊಟ್ಟು ಸ್ವಾಗತಿಸಿ, ವಂದಿಸಿದರು. ರಾಜೀವ್ ಕಕ್ಯಪದವು ಕಾರ್ಯಕ್ರಮ ನಿರೂಪಿಸಿದರು.

ಫೆಬ್ರವರಿ 24ರಂದು ಡಾ.ರಾಜೇಂದ್ರಕುಮಾರ್ ಹುಟ್ಟುಹಬ್ಬ ಕಾರ್ಯಕ್ರಮ

ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ. ಮಂಗಳೂರು ಅಧ್ಯಕ್ಷ ಡಾ. ಎಂ.ಎನ್. ರಾಜೇಂದ್ರಕುಮಾರ್ ಅವರ 77ನೇ ಹುಟ್ಟುಹಬ್ಬ ಕಾರ್ಯಕ್ರಮವನ್ನು ಫೆ.24ರಂದು ನಗರದ ಎಸ್‌ಸಿಡಿಸಿಸಿ ಬ್ಯಾಂಕ್ ಸಭಾಂಗಣದಲ್ಲಿ ನಡೆಸಲಾಗುವುದು ಎಂದು ಎಸ್‌ಸಿಡಿಸಿಸಿ ಬ್ಯಾಂಕ್ ನಿರ್ದೇಶಕ ಶಶಿಕುಮಾರ್ ರೈ ಬಾಲ್ಯೊಟ್ಟು ತಿಳಿಸಿದರು. ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ ಅವರು ಡಾ.ಎಂಎನ್‌ಆರ್ ಅವರನ್ನು ಅಭಿನಂದಿಸಲಿದ್ದಾರೆ. ಸ್ಪೀಕರ್ ಯು.ಟಿ. ಖಾದರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶಾಸಕ ವೇದವ್ಯಾಸ ಕಾಮತ್ ಅಧ್ಯಕ್ಷತೆ ವಹಿಸುವರು ಎಂದರು.

ಶಿವಪಾಡಿ ಶ್ರೀ ಉಮಾಮಹೇಶ್ವರ ದೇವಸ್ಥಾನದ ಮಹಾಶಿವರಾತ್ರಿ ಮಹೋತ್ಸವ

ಶಿವ ಸಹಸ್ರಕಂಠ ಗಾಯನ ಕಾರ್ಯಕ್ರಮ

• **ಉಡುಪಿ:** ಶಿವಪಾಡಿ ಶ್ರೀ ಉಮಾಮಹೇಶ್ವರ ದೇವಸ್ಥಾನದ ಮಹಾಶಿವರಾತ್ರಿ ಮಹೋತ್ಸವ ಪ್ರಯುಕ್ತ ಶ್ರೀ ಉಮಾ ಮಹೇಶ್ವರ ದೇವಸ್ಥಾನ ಅಭಿವೃದ್ಧಿ ಟ್ರಸ್ಟ್, ಶಿವಪಾಡಿ ವೈಭವ ಆಚರಣ ಸಮಿತಿ ಆಶ್ರಯದಲ್ಲಿ ಶಿವ ಸಹಸ್ರಕಂಠ ಗಾಯನ ಕಾರ್ಯಕ್ರಮ ರತ್ನ-ಸಂಜೀವ ಕಲಾಮಂಡಲ ಸಂಯೋಜನೆಯಲ್ಲಿ ನಡೆಯಿತು.

ವಿದೂಷಿ ಉಷಾ ಹೆಬ್ಬಾರ್ ಇದರ ನೇತೃತ್ವ ವಹಿಸಿದ್ದರು. ಗೋಲ್ಡನ್ ಬುಕ್ ಆಫ್ ರೆಕಾರ್ಡ್ ವಿನ್ನರ್ ಯಶವಂತ ಎಂ.ಜಿ. ಉದ್ಘಾಟಿಸಿ, ಸಾವಿರ ಕಂಠಗಳಿಂದ ಒಂದೇ ನಾದವಾಗಿ ಹೊರಹೊಮ್ಮುವ ಶಿವ ನಾಮವು ಮನಸ್ಸುಗಳನ್ನು ಶುದ್ಧಗೊಳಿಸಿ, ಸಮಾಜದಲ್ಲಿ ಸೌಹಾರ್ದವನ್ನು ಬೆಳೆಸುವ ಮಹತ್ವದ ಶಕ್ತಿ ಹೊಂದಿದೆ.

ಶಿವ ಸಹಸ್ರಕಂಠ ಗಾಯನ ಭಕ್ತಿ, ಏಕತೆ ಮತ್ತುಆಧ್ಯಾತ್ಮಿಕ ಜಾಗೃತಿಯ ಮಹೋತ್ಸವವಾಗಿದೆ ಎಂದರು. ಗೋನಂದಿ ಸೇವಾ ಬಳಗ ರಾಜ್ಯ ಸಂಚಾಲಕಿ ರಮಿತಾ ಸೂರ್ಯವಂಶಿ, ಅಶ್ವಿನಿ ಮಹೇಶ್ ಠಾಕೂರ್, ಶ್ರೀ ಉಮಾ ಮಹೇಶ್ವರ ದೇವಸ್ಥಾನ ಅಭಿವೃದ್ಧಿ ಟ್ರಸ್ಟ್ ಮತ್ತು ಶಿವಪಾಡಿ ವೈಭವ ಆಚರಣ ಸಮಿತಿ ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು. ಮಹೇಶ್ ನಾಯ್ಕ ಸ್ವಾಗತಿಸಿ, ನಿರೂಪಿಸಿದರು.



ಶಿವಪಾಡಿ ವೈಭವ ಆಚರಣೆಯಲ್ಲಿ ನೃತ್ಯ ವೈಭವವು ಅದ್ದೂರಿಯಾಗಿ ನಡೆಯಿತು. ನೃತ್ಯ ನಿರ್ದೇಶಕಿ ವಿದೂಷಿ ಮಿಥಿಲಾ ಭಂಡಾರಿ ಉದ್ಘಾಟಿಸಿದರು.

ಬಳಿಕ ಮಾತನಾಡಿ, ಸಾಂಸ್ಕೃತಿಕ ಕಾರ್ಯಕ್ರಮಗಳು ಯುವಜನತೆಗೆ ಸ್ಫೂರ್ತಿ ನೀಡುವುದರೊಂದಿಗೆ ನಮ್ಮ ಪರಂಪರೆಯ ಮೇಲಿನ ಹೆಮ್ಮೆಯನ್ನೂ ಬೆಳೆಸಲಿದೆ.

ನೃತ್ಯ ವೈಭವ ಕಾರ್ಯಕ್ರಮ ನಮ್ಮ - ಸಂಸ್ಕೃತಿ, ಪರಂಪರೆ ಮತ್ತು ಭಾವಭಕ್ತಿಯ ಸೊಬಗನ್ನು ಪರಿಚಯಿಸುವ ಪವಿತ್ರ ವೇದಿಕೆಯಾಗಿದೆ ಎಂದರು.

ಸರಳೇಬೆಟ್ಟು ಸ್ನೇಹ ಸಂಗಮ ಅಧ್ಯಕ್ಷ ಗುರುರಾಜ ಭಂಡ ಭಂಡಾರಿ ಅಧ್ಯಕ್ಷತೆ ವಹಿಸಿದ್ದರು. ಸರಳೇಬೆಟ್ಟು ಕೃಷ್ಣಪ್ಪ ಸಾಮಂತ ಸಪ್ರಾ.ಶಾಲಾ ಮುಖ್ಯಶಿಕ್ಷಕಿ ಗ್ರೇಸಿ ರೆಬೆಲ್ಲೊ ಹಳೆವಿದ್ಯಾರ್ಥಿ ಸಂಘದ ಅಧ್ಯಕ್ಷ ಚಂದ್ರಶೇಖರ ನಾಯ್ಕ, ಶ್ರೀ ಉಮಾಮಹೇಶ್ವರ ದೇವಸ್ಥಾನ ಅಭಿವೃದ್ಧಿ ಟ್ರಸ್ಟ್ ಮತ್ತು ಶಿವಪಾಡಿ ವೈಭವ ಆಚರಣ ಸಮಿತಿ ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು. ಸುಮಾ ಕಿರಣ್ ಸ್ವಾಗತಿಸಿ, ನಿರೂಪಿಸಿದರು. ಕಾರ್ಯದರ್ಶಿ ಗೋಪಾಲಕೃಷ್ಣ ಪ್ರಭು ವಂದಿಸಿದರು.

ಬೈಕ್-ಗೂಡ್ಸ್ ವಾಹನ ಡಿಕ್ಕಿ: ಸವಾರ ಸಾವು; ಪತ್ನಿಗೆ ಕಾಲು ಮುರಿತ

• **ಕುಶಾಲನಗರ:** ಕೂಡುಮಂಗಳೂರು ಗ್ರಾಮದ ದೊಡ್ಡಮ್ಮ ತಾಯಿ ದೇವಾಲಯ ಮುಂಭಾಗ ಬೈಕ್‌ಗೆ ಗೂಡ್ಸ್ ವಾಹನ ಡಿಕ್ಕಿಯಾಗಿ ಸವಾರ ಮೃತಪಟ್ಟ ಘಟನೆ ನಡೆದಿದೆ. ಹೆಬ್ಬಾಲೆ ಗ್ರಾ.ಪಂ. ವ್ಯಾಪ್ತಿಯ ಮರೂರು ಗ್ರಾಮದ ನಟೇಶ್ (31) ಮೃತ ದುರ್ದೈವಿ. ಬೈಕ್ ಹಿಂಬದಿಯಿದ್ದ ನಟೇಶ್ ಪತ್ನಿ ದಿವ್ಯಾ (30) ಅವರ ಎಡಗಾಲು ಮುರಿದಿದೆ. ಬೈಕ್ ತಿರುಗಿಸುತ್ತಿದ್ದ ಸಂದರ್ಭ ಹಿಂಬದಿಯಿಂದ ಬಂದ ಗೂಡ್ಸ್ ವಾಹನ ಡಿಕ್ಕಿಯಾಗಿದೆ. ಕೂಡಲೇ ಗಾಯಾಳುಗಳನ್ನು ಕುಶಾಲನಗರ ಖಾಸಗಿ ಆಸ್ಪತ್ರೆಗೆ ರವಾನಿಸಿದ್ದು, ತಲೆಗೆ ಗಂಭೀರ ಗಾಯಗೊಂಡಿದ್ದ ನಟೇಶ್ ರಕ್ತಸ್ರಾವದಿಂದ ಮೃತಪಟ್ಟಿದ್ದಾರೆ.

ಮಹಾರಾಷ್ಟ್ರ ಮೀನುಗಾರಿಕಾ ಸಚಿವ ನಿತೇಶ್ ರಾಣೆ ಭೇಟಿಯಾದ ಯಶ್ ಪಾಲ್ ಸುವರ್ಣ

ಕರಾವಳಿ ಮೀನುಗಾರರ ಸಮಸ್ಯೆಗೆ ಸ್ಪಂದಿಸಲು ಮನವಿ

• **ಉಡುಪಿ:** ಕರ್ನಾಟಕ ಕರಾವಳಿ ಜಿಲ್ಲೆಯ ಮೀನುಗಾರರು ಅಂತಾರಾಜ್ಯ ಮೀನುಗಾರಿಕೆ ನಡೆಸುವ ಸಂದರ್ಭದಲ್ಲಿ ಎದುರಿಸುವ ಸಮಸ್ಯೆಗಳ ಬಗ್ಗೆ ಮಹಾರಾಷ್ಟ್ರ ಸರಕಾರದ ಮೀನುಗಾರಿಕೆ ಮತ್ತು ಬಂದರು ಸಚಿವರಾದ ಶ್ರೀ ನಿತೇಶ್ ರಾಣೆಯವರನ್ನು ಅವರ ಕಚೇರಿಯಲ್ಲಿ ಶಾಸಕ ಯಶ್ ಪಾಲ್ ಸುವರ್ಣ ಭೇಟಿಯಾಗಿ ಮಾತುಕತೆ ನಡೆಸಿದರು.

ಕರ್ನಾಟಕ ಕರಾವಳಿಯ ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಯ ಮೀನುಗಾರರು ಅಂತಾರಾಜ್ಯ ಭಾಗದಲ್ಲಿ ಆಳ ಸಮುದ್ರ ಮೀನುಗಾರಿಕೆ ನಡೆಸುವ ಸಂದರ್ಭದಲ್ಲಿ ಸಮನ್ವಯತೆ ಹಾಗೂ ಮಾಹಿತಿ ಕೊರತೆಯಿಂದ ನಿಗದಿತ ವ್ಯಾಪ್ತಿಯನ್ನು ಮೀರಿದಾಗ ಮಹಾರಾಷ್ಟ್ರ ಮೀನುಗಾರಿಕಾ ಇಲಾಖೆ ಕೇಸುಗಳನ್ನು ದಾಖಲಿಸಿ, ಅಪಾರ ಪ್ರಮಾಣದ ದಂಡ ಹಾಕುವ ಪ್ರಕರಣಗಳು ನಡೆಯುತ್ತಿದ್ದು ಇದರಿಂದ ಕರಾವಳಿ ಕರ್ನಾಟಕದ ಮೀನುಗಾರರು ತೀವ್ರ ಸಮಸ್ಯೆ ಎದುರಿಸುವ ಬಗ್ಗೆ ಸಚಿವರಿಗೆ ಮಾಹಿತಿ ನೀಡಿ ಇಂತಹ ಪ್ರಕರಣಗಳನ್ನು ಕೈಬಿಟ್ಟು ಮೀನುಗಾರರಿಗೆ ಸಹಾಯ ಮಾಡುವಂತೆ ಸಚಿವರಿಗೆ ಮನವಿ ಮಾಡಿದರು.



ದೇಶದ ಪಶ್ಚಿಮ ಹಾಗೂ ಪೂರ್ವ ಕರಾವಳಿಯ ರಾಜ್ಯಗಳಲ್ಲಿ ಮೀನುಗಾರಿಕಾ ಚಟುವಟಿಕೆಗಳಲ್ಲಿ ಸಮನ್ವಯ ಸಾಧಿಸಲು ರಾಷ್ಟ್ರೀಯ ಮೀನುಗಾರಿಕಾ ನೀತಿ ಜಾರಿಗೆ ತರಲು ಸಹಕಾರ ನೀಡುವ ಜೊತೆಗೆ ಎಲ್ಲಾ ರಾಜ್ಯಗಳ ಮೀನುಗಾರಿಕಾ ಸಚಿವರು ಹಾಗೂ ಮೀನುಗಾರ ಮುಖಂಡರನ್ನೊಳಗೊಂಡ ಸಮನ್ವಯ ಸಮಿತಿ ರಚನೆ ಮಾಡುವ ನಿಟ್ಟಿನಲ್ಲಿ ಕೈಜೋಡಿಸುವಂತೆ ಮನವಿ ಮಾಡಿ ಈಗಾಗಲೇ ಗೋವಾ ಸರ್ಕಾರದ ಮೀನುಗಾರಿಕಾ ಸಚಿವರೊಂದಿಗೆ ಚರ್ಚೆ ನಡೆಸಿರುವುದಾಗಿ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಮುಂಬೈ ಮಹಾನಗರ ಪಾಲಿಕೆ ಮಾಜಿ ಕಾರ್ಪೊರೇಟರ್ ಅರವಿಂದ ಶೆಟ್ಟಿ, ಉದ್ಯಮಿಗಳಾದ ರಾಜೇಶ್ ಕುಂದರ್, ಕಿಶನ್ ಶೆಟ್ಟಿ, ಅಮಿತ್ ಪೂಜಾರಿ ಮೊದಲಾದವರು ಉಪಸ್ಥಿತರಿದ್ದರು.

ಸಮಸ್ಯೆಗಳ ಪರಿಹಾರಕ್ಕೆ ತಕ್ಷಣ ಕ್ರಮ, ಭರವಸೆ

ಏಷ್ಯಾದಲ್ಲೇ ಅತೀ ದೊಡ್ಡ ಮೀನುಗಾರಿಕಾ ಬಂದರು ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ಮಲ್ಪೆ ಮೀನುಗಾರಿಕಾ ಬಂದರಿನಲ್ಲಿ ಸಾವಿರಾರು ಬೋಟ್‌ಗಳು ದೇಶದಲ್ಲಿಯೇ ಅತ್ಯಂತ ವೈಜ್ಞಾನಿಕವಾಗಿ ಆಧುನಿಕ ತಂತ್ರಜ್ಞಾನದ ಮೂಲಕ ಮೀನುಗಾರಿಕೆ ನಡೆಸುತ್ತಿದೆ ಎಂದು ಮಲ್ಪೆಗೆ ಭೇಟಿ ನೀಡುವಂತೆ ಸಚಿವರನ್ನು ಆಹ್ವಾನಿಸಿದರು. ಸ್ಪಂದಿಸಿದ ಸಚಿವರು ಮೀನುಗಾರಿಕೆ ಸಮಸ್ಯೆಗಳ ಪರಿಹಾರಕ್ಕೆ ತಕ್ಷಣ ಕ್ರಮ ವಹಿಸುವ ಭರವಸೆ ನೀಡಿ, ರಾಷ್ಟ್ರೀಯ ಮೀನುಗಾರಿಕಾ ನೀತಿಯ ಬಗ್ಗೆ ಸಹಮತ ಸೂಚಿಸಿದರು.

ರಾಹುಲ್ ವಿರುದ್ಧದ ಪ್ರಕರಣ ರದ್ದು

ಬೆಂಗಳೂರು: ಕರ್ನಾಟಕ ವಿಧಾನಸಭೆ ಚುನಾವಣೆಗೂ ಮುನ್ನ ಅಂದಿನ ಬಿಜೆಪಿ ಸರ್ಕಾರದ ವಿರುದ್ಧ ಸರಣಿ ಆರೋಪಗಳನ್ನು ಮಾಡಿ ಕಾಂಗ್ರೆಸ್ ಜಾಹೀರಾತು ನೀಡಿದ್ದನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡ ಆರೋಪದ ಕುರಿತು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿರುದ್ಧ ಬಿಜೆಪಿ ದಾಖಲಿಸಿದ್ದ ಮಾನಹಾನಿ ಪ್ರಕರಣವನ್ನು ಹೈಕೋರ್ಟ್ ಮಂಗಳವಾರ ರದ್ದುಪಡಿಸಿದೆ.

ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಸಂಜ್ಞೆ (ಕಾಗ್ನಿಜೆನ್ಸ್) ಪರಿಗಣಿಸಿ ರುವ ಆದೇಶ ರದ್ದತಿ ಕೋರಿ ರಾಹುಲ್ ಗಾಂಧಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾ.ಎಸ್.ಸುನೀಲ್ ದತ್‌ಯಾದವ್ ಅವರ ಏಕಸದಸ್ಯ ಪೀಠ ಪುರಸ್ಕರಿಸಿದೆ. ವಿಚಾರಣಾಧೀನ ನ್ಯಾಯಾಲಯದಲ್ಲಿನ ಪ್ರಕ್ರಿಯೆ ಮುಂದುವರಿಕೆಯು ಕಾನೂನು ಪ್ರಕ್ರಿಯೆಯ ದುರ್ಬಳಕೆಯಾಗ ಲಿದೆ. ಹೀಗಾಗಿ, 4ನೇ ಆರೋಪಿ ರಾಹುಲ್ ಗಾಂಧಿ ವಿರುದ್ಧದ ಪ್ರಕ್ರಿಯೆ ಬದಿಗೆ ಸರಿಸಲಾಗಿದೆ ಎಂದು ನ್ಯಾಯಾಲಯ ಆದೇಶಿಸಿತು. ರಾಹುಲ್ ಗಾಂಧಿ ಪ್ರತಿನಿಧಿಸಿದ್ದ ಅಡ್ವೋಕೆಟ್ ಜನರಲ್ ಶಶಿಕಿರಣ್‌ಶೆಟ್ಟಿ ಅವರು ರಾಹುಲ್ ರಿಟ್ವೀಟ್ ಮಾಡಿರುವುದಕ್ಕೆ ಯಾವುದೇ ದಾಖಲೆಯನ್ನು ಬಿಜೆಪಿ ಸಲ್ಲಿಸಿಲ್ಲ. ಅದನ್ನು ಎಷ್ಟು ಜನ ನೋಡಿದ್ದಾರೆ ಮತ್ತು ಅದರಿಂದ ಮಾನಹಾನಿಯಾಗಿದೆಯೇ ಎಂಬುದಕ್ಕೆ ಯಾವುದೇ ಮಾಹಿತಿ ಇಲ್ಲ.

ತಾರಾ ಪ್ರಚಾರಕರ ಪಟ್ಟಿಯಲ್ಲಿ 40 ಮಂದಿ ಇದ್ದರು ಎಂದು ಹೇಳುವ ಬಿಜೆಪಿಯು ಅವರನ್ನೆಲ್ಲಾ ದಾವೆಯಲ್ಲಿ ಪ್ರತಿವಾದಿಗಳನ್ನಾಗಿ ಏಕೆ ಮಾಡಿಲ್ಲ? ರಾಹುಲ್ ಉಪಾಧ್ಯಕ್ಷರಾಗಿದ್ದಾರೆ ಎಂಬದರ ಮೇಲೆ ಇಡೀ ದೂರು ನಿಂತಿದೆ. ಆದರೆ, ಆ ಸಂದರ್ಭದಲ್ಲಿ ರಾಹುಲ್ ಉಪಾಧ್ಯಕ್ಷರಾಗಿರಲೇ ಇಲ್ಲ. ರೀಟ್ವೀಟ್ ಮಾಡುವುದು ಮಾನಹಾನಿಯಾಗು ತ್ತದೆಯೇ ಎಂಬ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇದೆ. ಹಾಲಿ ಪ್ರಕರಣದಲ್ಲಿ ರಾಹುಲ್ ಅವರು ರೀಟ್ವೀಟ್ ಮಾಡಿಲ್ಲ ಎಂದಿದ್ದರು.

ಜಾಹೀರಾತಿನಲ್ಲಿ ಬಿಜೆಪಿಯ ಹೆಸರನ್ನೇ ಉಲ್ಲೇಖಿಸಿಲ್ಲ. ಸರ್ಕಾರವನ್ನು ಅದರಲ್ಲಿ ಉಲ್ಲೇಖಿಸಲಾಗಿದೆ. ಮುಖ್ಯಮಂತ್ರಿ, ಮಂತ್ರಿ ಆಗಿ ಹೋಗುತ್ತಾರೆ. ಆದರೆ, ಸರ್ಕಾರ ಯಾವಾಗಲೂ ಇರುತ್ತದೆ. ಸರ್ಕಾರವನ್ನು ವಿರೋಧಿಸಿದ ಮಾತ್ರಕ್ಕೆ ರಾಜಕೀಯ ಪಕ್ಷವೊಂದು ದಾವೆ ಹೂಡಲಾಗದು. ಹೀಗಾದಲ್ಲಿ ಸರ್ಕಾರದ ವಿರುದ್ಧ ಟೀಕೆ ಮಾಡುವುದು ಅಪರಾಧವಾಗಲಿದೆ ಎಂದಿದ್ದರು.



ಭಾರತದಲ್ಲಿನ ಅಮೆರಿಕನ್ ರಾಯಭಾರಿ ಸರ್ಜಿಯೊ ಗೋರ್ ಮಂಗಳವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಧಿಕೃತ ನಿವಾಸ ಕಾವೇರಿಯಲ್ಲಿ ಸೌಹಾರ್ದ ಭೇಟಿಯಾಗಿ ಹೂಗುಚ್ಛ ನೀಡಿದರು.

ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆ ಶರಣ್ಯ, ಅಜ್ಜಾವರ ಪ್ರಥಮ

ಬೆಂಗಳೂರು: ಸಮರ್ಥ ಭಾರತ ಮತ್ತು ದಿ ಮಿಥಿಕ್ ಸೊಸೈಟಿ ಸಹಯೋಗದೊಂದಿಗೆ 12ನೇ ವರ್ಷದ ಬಿ ಗುಡ್, ಡು ಗುಡ್ ಅಭಿಯಾನದ ನಿಮಿತ್ತ, ನವಭಾರತದ ಕುರಿತು ಸ್ವಾಮಿ ವಿವೇಕಾನಂದರ ಚಿಂತನೆಗಳು ವಿಷಯದ ಕುರಿತು ಕಾಲೇಜು ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿದ್ದ ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆ –2026ರಲ್ಲಿ ಸುಳ್ಯದ ಶರಣ್ಯ. ಎಸ್. ಅಜ್ಜಾವರ ಪ್ರಥಮ ಸ್ಥಾನ ಪಡೆದಿದ್ದಾಳೆ.

ನವಭಾರತದ ಕುರಿತು ಸ್ವಾಮಿ ವಿವೇಕಾನಂದರ ಚಿಂತನೆಗಳು ವಿಷಯದ ಕುರಿತು ಕಾಲೇಜು ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿದ್ದ ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆ –2026ರಲ್ಲಿ ಸುಳ್ಯದ ಶರಣ್ಯ. ಎಸ್.ಅಜ್ಜಾವರ ಪ್ರಥಮ ಸ್ಥಾನ ಪಡೆದಿದ್ದು, ಬೆಂಗಳೂರಿನ ಭೂಮಿಕಾ. ಎಚ್.ಕೆ ದ್ವಿತೀಯ ಸ್ಥಾನ ಹಾಗೂ ದಾವಣಗೆರೆಯ ಅನುಷಾ ಜಿ.ಪಿ ತೃತೀಯ ಸ್ಥಾನ ಪಡೆದಿದ್ದಾಳೆ.

20 ಸಮಾಧಾನಕರ ಬಹುಮಾನಗಳು: ತುಮಕೂರಿನ ಅಶೋಕ ಎಲ್. ಚಿಕ್ಕನಾಯಕನ ಹಳ್ಳಿ, ಯಾದಗಿರಿಯ ಸಂಜಯ್, ಬೆಳಗಾವಿಯ ಕಾವೇರಿ ಎಂ. ಹೆಗಡೆ, ಬೆಂಗಳೂರಿನ ನಿಸರ್ಗ ಎಚ್.ಜಿ, ಹಾಸನದ ನಿಸರ್ಗ, ಮೈಸೂರಿನ ಜೇನಿಕಾ ಪೂವಣ್ಣ ಜೆ, ಉಡುಪಿಯ ಅರುಣ, ಬೆಂಗಳೂರಿನ ಪ್ರಿಯಾ ಎಸ್., ಬೆಂಗಳೂರಿನ ಯಶಸ್ವಿನಿ ಕೆ.ಟಿ, ಮೈಸೂರಿನ ಮಹಾಲಕ್ಷ್ಮಿ ಎಂ, ಕಲಘಟಗಿಯ ಶೋಭಾ ಶಂಕರ ಗೌಡ ಪಾಟೀಲ್, ಉತ್ತರ ಕನ್ನಡದಡ ಸಂಜನಾ ನಾಯ್, ಮಂಗಳೂರಿನ ನಾಗಿಣಿ ಎಸ್.ಪಡೀಲ್, ವಿಜಯಪುರದ ಪೂಜಾ ಮಹಾದೇವ ಸಾರವಾಡ ಇಂಡಿ, ದಾವಣಗೆರೆಯ ರೇಣುಕಾ ಎನ್, ಉತ್ತರ ಕನ್ನಡದ ವಿನುತಾ ಪ್ರಕಾಶ್ ನಾಯಕ, ಬೆಂಗಳೂರಿನ ರೂಪಶ್ರೀ ಡಿ, ಕಲಬುರಗಿಯ ವಿಜಯಲಕ್ಷ್ಮಿ ಎನ್, ದಾವಣಗೆರೆಯ ಪ್ರತೀಕ್ಷಾ ಪಾಟೀಲ್ ಪಿ.ಎ.ಚನ್ನಗಿರಿ ಹಾಗೂ ಕಪ್ಪಳದ ಅಪರ್ಣ ಸಂಕ್ಲಾಪುರ್ ಸೇರಿದಂತೆ ಒಟ್ಟು 20 ಜನರಿಗೆ ಸಮಾಧಾನಕರ ಬಹುಮಾನ ನೀಡಲಾಗಿದೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಭಾರತದ ಪ್ರಧಾನಿ ನರೇಂದ್ರ ಮೋದಿ ಅದ್ಭುತ ವ್ಯಕ್ತಿ, ನನ್ನ ಆತ್ಮೀಯ ಸ್ನೇಹಿತ.ಅವರ ಬಗ್ಗೆ ನನಗೆ ತುಂಬ ಗೌರವವಿದೆ – ಟ್ರಂಪ್
– ಅದು ಅರ್ಧ ಸತ್ಯ, ಭಯವೂ ಇದೆ ಎಂಬುದು ಉಳಿದ ಅರ್ಧ ಸತ್ಯ!

ದಿನ ಭವಿಷ್ಯ

ಮೇಷ ಅನ್ಯರ ಮೆಚ್ಚಿಸಲು ಹೋಗದಿರಿ. ನಿಮ್ಮ ಕಾರ್ಯ ನಿಷ್ಠೆಯಿಂದ ಮಾಡಿ. ಹಣದ ವಿಚಾರ ತಲೆಬೇನೆ ತಂದೀತು. ಖರ್ಚು ಕಡಿಮೆ ಮಾಡಿ.

ವೃಷಭ ಕೆಲಸದಲ್ಲಿ ಅಧಿಕ ಒತ್ತಡ. ತಾಳ್ಮೆಯ ವರ್ತನೆ ಅಗತ್ಯ. ಇತರರ ಪ್ರಲೋಭನೆಗೆ ಒಳಗಾಗಿ ಅಡ್ಡದಾರಿ ಹಿಡಿಯದಿರಿ. ಆರೋಗ್ಯ ಸಮಸ್ಯೆ.

ಮಿಥುನ ಕಾರ್ಯದಲ್ಲಿ ಪ್ರಗತಿ ಸಾಧಿಸಿದರೂ ನಿಮಗೆ ಮಾತ್ರ ತೃಪ್ತಿಯಿಲ್ಲ. ನಿಮ್ಮ ಮನಸ್ಸು ಬೇರೇನನ್ನೋ ಬಯಸುತ್ತದೆ. ಆರ್ಥಿಕ ಪ್ರಗತಿ ತೃಪ್ತಿದಾಯಕ.

ಕಟಕ ಒತ್ತಡ ನಿವಾರಣೆ. ಮನಸ್ಸಿಗೆ ನಿರಾಳತೆ. ಕೆಲವು ಬೆಳವಣಿಗೆ ಅದಕ್ಕೆ ಕಾರಣ. ಆಪ್ತರ ಜತೆ ಮಾತುಕತೆ ನೆಮ್ಮದಿ ತರಲಿದೆ. ಆರ್ಥಿಕ ಪ್ರಗತಿ ಉತ್ತಮ.

ಸಿಂಹ ಕೆಲ ವಿಷಯಗಳಲ್ಲಿ ನಿಮ್ಮ ನಿಲುವು ಬದಲಿಸುವ ಸನ್ನಿವೇಶ ಉಂಟಾದೀತು. ದುಡುಕಿನ ನಿರ್ಧಾರ ತಾಳದಿರಿ. ಎಲ್ಲರ ಜತೆ ಸೌಹಾರ್ದತೆ ಬೆಳೆಸಿ.

ಕನ್ಯಾ ನಿಮ್ಮ ಪಾಲಿಗೆ ವಿಶೇಷ ದಿನ.ಬಯಸಿದ ಬೆಳವಣಿಗೆ ಸಂಭವ. ಸಮಸ್ಯೆಯೊಂದು ನಿವಾರಣೆ, ಕೆಲಸ ಸುಲಲಿತ. ಧನಪ್ರಾಪ್ತಿ.

ತುಲಾ ಆರ್ಥಿಕ ಪ್ರಗತಿ ಉತ್ತಮ. ಆಪ್ತರ ಜತೆ ಭಿನ್ನಾಭಿಪ್ರಾಯ ಉಂಟಾದೀತು. ಸ್ನೇಹಿತ ನಿಮ್ಮ ವಿರೋಧಿಯಾಗಿ ಬದಲಾಗಬಹುದು.

ವೃಶ್ಚಿಕ ವಿವೇಕದಿಂದ ಕಾರ್ಯ ಎಸಗಿ. ಇಲ್ಲವಾದರೆ ಕೆಟ್ಟ ಫಲಿತಾಂಶ ಸಂಭವ. ಅನಿರೀಕ್ಷಿತ ಧನಲಾಭ. ಆಪ್ತ ಬಂಧು ಭೇಟಿ.

ಧನು ನಿಮ್ಮ ನಿರ್ಧಾರ ಬೇರೆಯವರ ಮೇಲೆ ಹೇರಬೇಡಿ. ಅದು ವಿರಸಕ್ಕೆ ಹೇತುವಾದೀತು. ಕೌಟುಂಬಿಕ ಶಾಂತಿಗೆ ಭಂಗ. ಆರ್ಥಿಕ ಕೊರತೆ.

ಮಕರ ಕೆಲಸದಲ್ಲಿ ತಪ್ಪು ಘಟಿಸದಂತೆ ಎಚ್ಚರ ವಹಿಸಿ. ಕೆಲವರು ಅದನ್ನೆ ಹಿಗ್ಗಿಸಬಹುದು. ಮಾನಕ್ಕೆ ಕುಂದು ತರುವ ಬೆಳವಣಿಗೆ ಸಂಭವಿಸಬಹುದು.

ಕುಂಭ ಹೊಸ ಪಾಠ ಕಲಿಯುವಂತಹ ಪ್ರಸಂಗ ಉಂಟಾದೀತು. ದೊಡ್ಡ ಬಿಕ್ಕಟ್ಟು ಎದುರಾದರೂ ಬಳಿಕ ಪರಿಹಾರ ಕಂಡು ನೆಮ್ಮದಿ ಉಂಟಾಗಲಿದೆ.

ಮೀನ ಮನಸ್ಸಿಗೆ ನಿರಾಳತೆ ತರುವಂತಹ ಬೆಳವಣಿಗೆ. ಕಾರ್ಯ ಸಾಫಲ್ಯ, ವಿರಸ ಮುಕ್ತಿ. ಅನಿರೀಕ್ಷಿತ ಖರ್ಚು ನಿಯಂತ್ರಣ. ಆತ್ಮೀಯ ಬಂಧು ಭೇಟಿ.

ರಾಹುಕಾಲ: 12.00–1.30
ಗುಳಿಕಕಾಲ: 10.30–12.00

ಅದೃಷ್ಟ ಸಂಖ್ಯೆ : 8,3,9,2

ಹಿಂದುಗಳ ಮನೆ ಮೇಲೆ ಕಲ್ಲು ತೂರಾಟ, ಪ್ರಕ್ಷುಬ್ಧ

ಪುಟ ೧➡ ನಂತರ ಕಲ್ಲು ತೂರಿದ ಅಪ್ರಾಪ್ತ ಹುಡುಗರಿಬ್ಬರನ್ನೂ ಮಲ್ಲೇಗೌಡ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಯಿತು. ಕಳೆದ ಒಂದು ವಾರದಿಂದ ಕಿಡಿಗೇಡಿಗಳ ಗುಂಪು ಮನೆಗಳ ಮೇಲೆ ಕಲ್ಲು ಎಸೆಯುವುದು ಮತ್ತು ಕಳೆದ ಮೂರು ದಿನಗಳಿಂದ ಹೆಣ್ಣು ಮಕ್ಕಳನ್ನು ಚುಡಾಯಿಸುವಂತಹ ಕೃತ್ಯಗಳಲ್ಲಿ ತೊಡಗಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

ದೂರು–ಪ್ರತಿ ದೂರು ದಾಖಲು: ಘಟನೆ ಸಂಬಂಧ ಮಂಗಳವಾರ ಮನೆ ಮಾಲೀಕರಾದ ಸುಧಾ ಅವರು ನೀಡಿದ ದೂರನ್ನಾಧರಿಸಿ ಇಬ್ಬರು ಅಪ್ರಾಪ್ತ ಮುಸ್ಲಿಂ ಹುಡುಗರ ವಿರುದ್ಧ ದೂರು ದಾಖಲಿಸಿದ್ದಾರೆ. ಹುಡುಗರು ನೀಡಿದ ದೂರನ್ನಾಧರಿಸಿ ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಸಂತೋಷ್ ಕೋಟ್ಯಾನ್ ಹಾಗೂ ಬಜರಂಗದಳ ಮುಖಂಡ ಶ್ಯಾಂ ವಿ. ಗೌಡ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಸದ್ಯ ಹಲ್ಲೆಗೊಳಗಾದ ಹುಡುಗರಿಗೆ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, ನಗರದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮುಂದುವರಿದಿದೆ.

> ಬಿಜೆಪಿ ಮುಖಂಡ ಸಂತೋಷ್ ಕೋಟ್ಯಾನ್ ಮತ್ತು ಬಜರಂಗದಳದ ಶಾಮ್ ಅವರ ಮೇಲೆ ಪೊಲೀಸರು ಸುಖಾಸುಮ್ಮನೆ ಪ್ರಕರಣ ದಾಖಲಿಸಿದ್ದಾರೆ. ರಕ್ಷಣೆಗೆ ಬಂದವರ ಮೇಲೆ ಕೇಸ್ ಹಾಕಿ ಟಾರ್ಗೆಟ್ ಮಾಡಲಾಗುತ್ತಿದೆ. ಬಂಧಿತ ಯುವಕರೇ ಕಲ್ಲು ಹೊಡೆದಿದ್ದನ್ನು ಕಣ್ಣಾರೆ ಕಂಡಿದ್ದೇನೆ. ಅವರು ತಪ್ಪಿಸಿಕೊಳ್ಳಲು ಯತ್ನಿಸಿದಾಗ ನಾನೇ ಹಿಡಿದುಕೊಂಡಿದ್ದೇನೆ.
> ■ **ಇಕ್ಬಾಲ್,** ಸ್ಥಳೀಯ ನಿವಾಸಿ

ಭಾರತದಲ್ಲಿ ಹಸಿರು ಹೈಡ್ರೋಜನ್ ಬೆಲೆ ಐತಿಹಾಸಿಕ ಕನಿಷ್ಠ ಮಟ್ಟಕ್ಕೆ
₹279 ಪ್ರತಿ ಕೆಜಿ ದರದಲ್ಲಿ ಲಭ್ಯ

ಹೊಸದಿಲ್ಲಿ: ದೇಶದಲ್ಲಿ ಹಸಿರು ಹೈಡ್ರೋಜನ್ ಬೆಲೆ ಐತಿಹಾಸಿಕ ಮಟ್ಟಕ್ಕೆ ಇಳಿಕೆ ಕಂಡಿದೆ. ರೂ.279ರ ದರದೊಂದಿಗೆ ಭಾರತ ಹಸಿರು ಹೈಡ್ರೋಜನ್ ಕ್ಷೇತ್ರದಲ್ಲಿ ಹೊಸ ಜಾಗತಿಕ ಮಾನದಂಡ ಸ್ಥಾಪಿಸಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಘೋಷಿಸಿದರು.

ಮುಂಬೈಯಲ್ಲಿ ಮಂಗಳವಾರ ಆಯೋಜಿಸಿದ್ದ 'ಹವಾಮಾನ ಸಪ್ತಾಹ 2026 ಉದ್ದೇಶಿಸಿ ಮಾತನಾಡಿ, ರಾಷ್ಟ್ರೀಯ ಹಸಿರು ಹೈಡ್ರೋಜನ್ ಮಿಷನ್ ಅಡಿಯಲ್ಲಿ ಹಸಿರು ಹೈಡ್ರೋಜನ್ ಬೆಲೆ ಪ್ರತಿ ಕೆಜಿಗೆ ರೂ.279 ಕನಿಷ್ಠ ಮಟ್ಟಕ್ಕೆ ಇಳಿದಿದೆ ಎಂದರು. ಸೂರ್ಯ ಘರ್ ಯೋಜನೆಯಡಿ ಭಾರತ ಪ್ರಸ್ತುತ 30 ಲಕ್ಷ ಮನೆಗಳಿಗೆ ಸೌರ ವಿದ್ಯುತ್ ಕಲ್ಪಿಸುವ ಮತ್ತೊಂದು ಮೈಲುಗಲ್ಲು ಸ್ಥಾಪಿಸಿದೆ. ಮನೆಗಳಿಗೆ ಸೌರ ಮೇಲ್ಛಾವಣಿ ಮೂಲಕ ಉಚಿತ ವಿದ್ಯುತ್ ಕಲ್ಪಿಸಿದೆ ಎಂದರು.

ಜಾಗತಿಕ ಹವಾಮಾನ ಸುಸ್ಥಿರತೆಯಲ್ಲಿ ಭಾರತ ಪ್ರಬಲ ಇಂಜಿನ್ ಆಗಿ ಕಾರ್ಯ ಸಾಧಿಸುತ್ತಿದ್ದು, ಪಿಎಂ ಸೂರ್ಯಘರ್ ಮತ್ತು 'ಪಿಎಂ ಕುಸುಮ್' ನಮ್ಮ ಸೌರ ಶಕ್ತಿಯ ಡಬಲ್ ಇಂಜಿನ್ ಆಗಿವೆ ಎಂದು ಪ್ರತಿಪಾದಿಸಿದರು. ಪಿಎಂ ಕುಸುಮ್ ಮತ್ತು ಪಿಎಂ ಸೂರ್ಯ ಘರ್ ಅಳವಡಿಕೆ ಮೂಲಕ, ರೈತರು ಮತ್ತು ಸಾಮಾನ್ಯ ಕುಟುಂಬಗಳು ಸಹ ದೇಶದ ಶುದ್ಧ ಇಂಧನ ಪರಿವರ್ತನೆ ಪ್ರಯಾಣದಲ್ಲಿ ಸಕ್ರಿಯರಾಗುತ್ತಿದ್ದಾರೆಂದು ಜೋಶಿ ಹೆಮ್ಮೆ ವ್ಯಕ್ತಪಡಿಸಿದರು.

ಹವಾಮಾನ ಕುರಿತ ಮೊದಲ ಸಮಾವೇಶ: ಭಾರತ ಇಂದು ಹವಾಮಾನ ಕುರಿತಾದ ಜಾಗತಿಕ ಸಪ್ತಾಹ, ಸಮಾವೇಶ ಆಯೋಜಿಸುವ ಮಟ್ಟಕ್ಕೆ ಬೆಳೆದಿದೆ. ಮುಂಬೈಯಲ್ಲಿ ಆಯೋಜಿಸಿರುವ ಇದು ಮೊದಲ ಜಾಗತಿಕ ದಕ್ಷಿಣ ಸಮಾವೇಶವಾಗಿದೆ. ಇದಕ್ಕಾಗಿ ಮಹಾರಾಷ್ಟ್ರ ತಂಡವನ್ನು ಅಭಿನಂದಿಸುತ್ತೇನೆ ಎಂದರು. ಕರ್ನಾಟಕ ಮತ್ತು ಮಹಾರಾಷ್ಟ್ರ ವಿಶೇಷವಾಗಿ ಆರ್ಥಿಕತೆಯ ಚಾಲಕವಾಗಿವೆ. ಆರ್ಥಿಕತೆ ಮತ್ತು ಬೆಳವಣಿಗೆಗೆ ಸಂಬಂಧಿಸಿದಂತೆ ಮಹಾರಾಷ್ಟ್ರ ತೆಗೆದುಕೊಳ್ಳುವ ಯಾವುದೇ ನಿರ್ಧಾರವನ್ನು ದೇಶವೇ ಅನುಸರಿಸುತ್ತದೆ. ಮುಂಬೈ ನಮ್ಮ ಆರ್ಥಿಕ ಚಟುವಟಿಕೆಯ ಪ್ರಮುಖ ಕೇಂದ್ರವಾಗಿದೆ ಎಂದರು.

ದೊಡ್ಡ ದೇಶವಾಗಿದ್ದರೂ ಭಾರತ ಈ ಹಿಂದೆ ಹವಾಮಾನ ಸಪ್ತಾಹ, ಹವಾಮಾನ ಸಮಾವೇಶ ಅಥವಾ ಸುಸ್ಥಿರ ಸಮಾವೇಶದಂತಹ ಕಾರ್ಯಕ್ರಮ ಆಯೋಜಿಸಿರಲಿಲ್ಲ. ಆದರೀಗ ಪ್ರಧಾನಿ ಮೋದಿ ಯವರ ಮಾರ್ಗದರ್ಶನದಲ್ಲಿ ಹವಾಮಾನ ಸುಸ್ಥಿರತೆಯಲ್ಲಿ ದೇಶದಲ್ಲೀಗ ಮಹತ್ತರ ಬದಲಾವಣೆ ಆಗುತ್ತಿದೆ ಎಂದು ಪ್ರತಿಪಾದಿಸಿದರು. ಪ್ರಧಾನಿ ಮೋದಿ ಅವರ ದೂರದೃಷ್ಟಿ, ನಾಯಕತ್ವದಲ್ಲಿ ಭಾರತ ಜಾಗತಿಕ ಹವಾಮಾನ ಸುಸ್ಥಿರತೆಯಲ್ಲಿ ನಿರ್ಣಾಯಕ ಹೆಜ್ಜೆಯಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದರು. ಈ ಹವಾಮಾನ ಸುಸ್ಥಿರತೆ ಸಮಾವೇಶದಲ್ಲಿ ಮಹಾರಾಷ್ಟ್ರ ಸಿಎಂ ದೇವೇಂದ್ರ ಫಡ್ನವೀಸ್ ಮತ್ತು ಸಚಿವರು ಉಪಸ್ಥಿತರಿದ್ದರು.



> ಮಹಾರಾಷ್ಟ್ರದಲ್ಲಿ ಸೌರಶಕ್ತಿ ಒಂದು ಜನಾಂದೋಲನ ರೀತಿ ರೂಪಾಂತರಗೊಳ್ಳುತ್ತಿದೆ. ಪರಿಣಾಮ ಫಲಿತಾಂಶಗಳು ಗಮನಾರ್ಹವಾಗಿವೆ. ಮಹಾರಾಷ್ಟ್ರ ಇಂದು ಕೈಗಾರಿಕಾ ಮತ್ತು ಗೃಹಬಳಕೆ ವಿದ್ಯುತ್ ದರ ಅತ್ಯಂತ ಕಡಿಮೆ ಇರುವ ಭಾರತದ ಮೊದಲ ರಾಜ್ಯವಾಗಿ ನಿಂತಿದೆ. ಇದು ಭಾರತದ ಶುದ್ಧ ಇಂಧನ ಕ್ರಾಂತಿಗೆ ಸಾಕ್ಷಿಯಾಗಿದೆ.
> ■ **ಪ್ರಹ್ಲಾದ ಜೋಶಿ,** ಕೇಂದ್ರ ಸಚಿವ

4 ಲಕ್ಷ ವಿದ್ಯಾರ್ಥಿವೇತನ ಅರ್ಜಿ ಅನರ್ಹ

ಪುಟ ೧➡ **ವಿದ್ಯಾರ್ಥಿವೇತನಕ್ಕೆ ವಿವಿಧ ಯೋಜನೆ:** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗಾಗಿ ವಿವಿಧ ಯೋಜನೆಯಲ್ಲಿ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. ಇದರಲ್ಲಿ ಕೇಂದ್ರ ಪುರಸ್ಕೃತ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ, ಅಲೆಮಾರಿ/ಅರೆ ಅಲೆಮಾರಿ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ, ಶುಲ್ಕ ಮರುಪಾವತಿ ಹಾಗೂ ವಿದ್ಯಾಸಿರಿ ಯೋಜನೆ. ಇದರಲ್ಲಿ 2025–26ನೇ ಸಾಲಿನಲ್ಲಿ ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಗೆ ಯಾವುದೇ ವಿದ್ಯಾರ್ಥಿ ವೇತನ ನೀಡಿಲ್ಲ. ಇದನ್ನು ಹೊರತುಪಡಿಸಿ ಉಳಿದ ಮೂರು ಯೋಜನೆಗಳಿಗೆ 379.03 ಕೋಟಿ ರೂ. ನೀಡಲಾಗಿದೆ.

ವಿದ್ಯಾರ್ಥಿವೇತನ ವಿಳಂಬಕ್ಕೆ ಕಾರಣ

ಇಲಾಖೆಯಿಂದ ನೀಡುವ ವಿದ್ಯಾರ್ಥಿವೇತನ ವಿಳಂಬಕ್ಕೆ ಹಲವು ಕಾರಣಗಳಿವೆ.

1. ವಿದ್ಯಾರ್ಥಿಗಳ ಶೈಕ್ಷಣಿಕ ದತ್ತಾಂಶದಲ್ಲಿರುವ ಹೆಸರಿಗೂ ಹಾಗೂ ಆಧಾರ್‌ನಲ್ಲಿರುವ ಹೆಸರಿಗೂ ವ್ಯತ್ಯಾಸವಿರುತ್ತದೆ.
2. ವಿದ್ಯಾರ್ಥಿಗಳು ತಮ್ಮ ಬ್ಯಾಂಕ್ ಖಾತೆಗೆ ಆಧಾರ್ ಸಂಖ್ಯೆಯನ್ನು ಲಿಂಕ್ ಮಾಡಿರುವುದಿಲ್ಲ.
3. ವಿಶ್ವವಿದ್ಯಾಲಯಗಳಿಂದ ಶೈಕ್ಷಣಿಕ ದತ್ತಾಂಶ ಹಂಚಿಕೊಂಡಿರುವುದಿಲ್ಲ.
4. ಹೈಕೋರ್ಟ್ ಆದೇಶದಂತೆ 2023–24 ಮತ್ತು 2024–25ನೇ ಸಾಲುಗಳಿಗೆ ಆರ್ಥಿಕ ವರ್ಷ ಮುಕ್ತಾಯವಾದ ನಂತರವೂ ಅರ್ಜಿ ಸ್ವೀಕರಿಸಿರುವುದು.

5 ವರ್ಷಗಳಲ್ಲಿ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಿದವರು

ಕಳೆದ ಐದು ವರ್ಷಗಳಲ್ಲಿ ವಿದ್ಯಾರ್ಥಿವೇತನಕ್ಕಾಗಿ ಒಟ್ಟು 41,42,798 ಅರ್ಜಿ ಸಲ್ಲಿಕೆಯಾಗಿವೆ

ಆರ್ಥಿಕ ವರ್ಷ	ಸ್ವೀಕೃತ ಅರ್ಜಿಗಳು	ಅರ್ಹ ಅರ್ಜಿಗಳು	ಅನರ್ಹ ಅರ್ಜಿಗಳು
2021-22	9,96,557	9,87,273	9,284
2022-23	9,36,807	8,75,175	61,632
2023-24	8,04,148	7,40,010	64,138
2024-25	8,13,286	6,51,767	1,61,519
2025-26	5,92,000	4,83,591	1,08,049
ಒಟ್ಟು	41,42,798	37,37,816	4,04,622

ಪಿಯು, ಎಸ್ಸೆಸ್ಸೆಲ್ಸಿ ವೇಳಾಪಟ್ಟಿ ಪ್ರಕಟ

ಪುಟ ೧➡ ಎಲ್ಲ ಕೇಂದ್ರಗಳಲ್ಲಿ ವೆಬ್‌ಕಾಸ್ಟಿಂಗ್ ಇರಲಿದೆ ಎಂದರು. ದ್ವಿತೀಯ ಪಿಯುಸಿ ಪರೀಕ್ಷೆಗೆ 6,46,801 ಹೊಸಬರು, 50,540 ಪುನರಾವರ್ತಿತ ಮತ್ತು 13,022 ಖಾಸಗಿ ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದಾರೆ. ಪರೀಕ್ಷೆಗೆ ಒಟ್ಟು 5,174 ಶಾಲೆ, ಕಾಲೇಜುಗಳು ನೋಂದಾಯಿಸಿದ್ದು, 1,217 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಸಲಾಗುತ್ತದೆ. ಫಲಿತಾಂಶವನ್ನು ಏ.7ರಂದು ಪ್ರಕಟಿಸಲಾಗುವುದು ಎಂದು ತಿಳಿಸಿದರು. ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ 8,12,855 ಹೊಸಬರು, 62,845 ಪುನರಾವರ್ತಿತ ಮತ್ತು 27,189 ಖಾಸಗಿ ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದಾರೆ. ಪರೀಕ್ಷೆಗೆ ಒಟ್ಟು 15,941 ಶಾಲೆಗಳು ನೋಂದಾಯಿಸಿಕೊಂಡಿದ್ದು, 2,871 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಏ.24ರಂದು ಫಲಿತಾಂಶ ಪ್ರಕಟಿಸಲಾಗುವುದು ಎಂದು ಮಾಹಿತಿ ನೀಡಿದರು. ವಿದ್ಯಾರ್ಥಿಗಳು ಪರೀಕ್ಷೆಯ ಬಗ್ಗೆ ಭಯಪಡುವ ಅಗತ್ಯವಿಲ್ಲ. ಈ ಹೊಸ ವ್ಯವಸ್ಥೆಯ ಅಡಿಯಲ್ಲಿ (ಮೂರು ಪರೀಕ್ಷೆಗಳು) ಒಂದು ಪರೀಕ್ಷೆಯಲ್ಲಿ ಕಡಿಮೆ ಅಂಕ ಬಂದರೂ, ಮುಂದಿನ ಪರೀಕ್ಷೆಯಲ್ಲಿ ಅಂಕ ಸುಧಾರಿಸಿಕೊಳ್ಳಲು ಮುಕ್ತ ಅವಕಾಶವಿದೆ. ಪರೀಕ್ಷೆ ನಡೆಯುವ ಎಲ್ಲ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಕುಡಿಯುವ ನೀರು ಮತ್ತು ಸುಗಮ ಸಾರಿಗೆ ವ್ಯವಸ್ಥೆ ಕಲ್ಪಿಸಲು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದರು.

ಉಚಿತ ಸಾರಿಗೆ ಸೌಲಭ್ಯ

ಪುಟ ೧➡ ಖಾಸಗಿ ಬಸ್‌ಗಳಲ್ಲೂ ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳಿಗೆ ಉಚಿತ ಸೇವೆ ನೀಡುವಂತೆ ಕೋರಲಾಗುವುದು ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಶಾಲಾ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್, ಆಯುಕ್ತ ವಿಕಾಸ್ ಕಿಶೋರ್ ಸುರಳ್ಕರ್, ಸಮಗ್ರ ಶಿಕ್ಷಣ ಕರ್ನಾಟಕದ ರಾಜ್ಯ ಯೋಜನಾ ನಿರ್ದೇಶಕಿ ವಿದ್ಯಾಕುಮಾರಿ, ಪರೀಕ್ಷಾ ಮಂಡಳಿ ಅಧ್ಯಕ್ಷ ಪ್ರಕಾಶ್ ನಿಟ್ಟಳ್ಳಿ ಮೊದಲಾದವರಿದ್ದರು.

ದ್ವಿತೀಯ ಪಿಯು ವೇಳಾಪಟ್ಟಿ	
ಫೆ.28	ಕನ್ನಡ, ಅರೇಬಿಕ್
ಮಾ.2	ಭೂಗೋಳಶಾಸ್ತ್ರ, ಸಂಖ್ಯಾಶಾಸ್ತ್ರ, ಮನಃಶಾಸ್ತ್ರ
ಮಾ.3	ಇಂಗ್ಲಿಷ್
ಮಾ.4	ಸಂಸ್ಕೃತ
ಮಾ.5	ಇತಿಹಾಸ
ಮಾ.6	ಭೌತಶಾಸ್ತ್ರ
ಮಾ.7	ಐಚ್ಛಿಕ ಕನ್ನಡ, ಭೂಗರ್ಭಸಾಸ್ತ್ರ
ಮಾ.9	ರಸಾಯನಶಾಸ್ತ್ರ
ಮಾ.10	ಅರ್ಥಶಾಸ್ತ್ರ
ಮಾ.12	ಹಿಂದಿ
ಮಾ. 13	ರಾಜ್ಯಶಾಸ್ತ್ರ
ಮಾ.14	ಲೆಕ್ಕಶಾಸ್ತ್ರ, ಗಣಿತ
ಮಾ.16	ಸಮಾಜಶಾಸ್ತ್ರ, ಜೀವಶಾಸ್ತ್ರ
ಮಾ.17	ಹಿಂದೂಸ್ತಾನಿ ಸಂಗೀತ

ಎಸ್ಸೆಸ್ಸೆಲ್ಸಿ ವೇಳಾಪಟ್ಟಿ	
ಮಾ.18	ಪ್ರಥಮ ಭಾಷೆ
ಮಾ.23	ವಿಜ್ಞಾನ, ರಾಜ್ಯಶಾಸ್ತ್ರ, ಸಂಗೀತ
ಮಾ.25	ದ್ವಿತೀಯ ಭಾಷೆ
ಮಾ.28	ಗಣಿತ, ಸಮಾಜಶಾಸ್ತ್ರ
ಮಾ.30	ತೃತೀಯ ಭಾಷೆ, ಎನ್‌ಎಸ್‌ಕ್ಯುಎಫ್
ಏ.1	ಅರ್ಥಶಾಸ್ತ್ರ
ಏ.2	ಸಮಾಜ ವಿಜ್ಞಾನ

ಬಿಎಲ್‌ಒಗಳಿಂದ ಮತಪಟ್ಟಿ ಅಕ್ರಮ

ಪುಟ ೧➡ ಕಳೆದ ಬಾರಿ ಒಂದು ಕುಟುಂಬದ ಮತಗಳನ್ನು ಬೇರೆ ಬೇರೆ ಬೂತ್‌ಗಳಿಗೆ ಸೇರಿಸಲಾಗಿತ್ತು. ಮ್ಯಾಪಿಂಗ್ ಸರಿಯಾದ ರೀತಿಯಲ್ಲಿ ಆಗುತ್ತಿಲ್ಲ. ಹೀಗಾಗಿ ಬಿಎಲ್‌ಒಗಳ ಜತೆಗೆ ರಾಜಕೀಯ ಪಕ್ಷಗಳ ಬಿಎಲ್‌ಎ(ಬ್ಲಾಕ್ ಲೆವಲ್ ಅಸಿಸ್ಟಂಟ್)ಗಳನ್ನು ಕರೆದುಕೊಂಡು ಹೋಗಿ ಪರಿಷ್ಕರಣೆ ಮಾಡಬೇಕು ಎಂದು ಒತ್ತಾಯಿಸಿದರು.

ಮತದಾರರ ಪಟ್ಟಿ ಜತೆಗೆ, ಮನೆಗಳು ಹಾಗೂ ಮತಗಳ ಮ್ಯಾಪಿಂಗ್ ಆಗಬೇಕು. ಈ ಹಿನ್ನೆಲೆಯಲ್ಲಿ ಕಳೆದ ಚುನಾವಣೆಯಲ್ಲಿ ಕೆಲವು ಕ್ಷೇತ್ರಗಳು ಹಾಗೂ ಬೂತ್‌ಗಳಲ್ಲಿ ಆಗಿದ್ದ ಲೋಪಗಳನ್ನು ಸರಿಪಡಿಸಬೇಕು. ಈವರೆಗೂ ಮತದಾರರ ಪಟ್ಟಿಯಲ್ಲಿ ನಾವು ಕಂಡಿರುವ ಲೋಪದೋಷಗಳ ಮಾಹಿತಿ ನೀಡಿದ್ದೇವೆ. ಮತಗಳನ್ನು ಬೇರೆ ಬೂತ್‌ಗಳಿಗೆ ವಿಂಗಡಿಸುವುದು, ಅಲ್ಪಸಂಖ್ಯಾತರು, ಪರಿಶಿಷ್ಟರ ಮತಗಳನ್ನು ಅಕ್ರಮವಾಗಿ ತೆಗೆದಿರುವುದು, ನಕಲಿ ಮತಗಳನ್ನು ಸೇರಿಸಿರುವ ಬಿಎಲ್‌ಒಗಳನ್ನು ಅಮಾನತುಗೊಳಿಸುವುದು ಸೇರಿದಂತೆ ಕಾನೂನು ಚೌಕಟ್ಟಿನಲ್ಲಿ ಮತದಾರರಿಗೆ ನ್ಯಾಯ ಒದಗಿಸಿಕೊಡಬೇಕೆಂದು ಮನವಿ ಸಲ್ಲಿಸಿದ್ದೇವೆ ಎಂದರು. ರಾಜ್ಯ ಚುನಾವಣಾ ಆಯೋಗವು ಮುಂಬರುವ ಜಿಬಿಎಯ ಪಾಲಿಕೆಗಳ ಚುನಾವಣೆ ಸೇರಿದಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲಿದೆ. ಆಯೋಗವು ರಾಜ್ಯದಲ್ಲಿ ಈ ಹಿಂದೆ ನೀಡಲಾಗಿದ್ದ ಮತದಾರರ ಪಟ್ಟಿ ಆಧಾರವಾಗಿಟ್ಟುಕೊಂಡು ಪರಿಷ್ಕರಣೆ ಮಾಡುತ್ತಿದೆ. ಜಿಬಿಎ ವ್ಯಾಪ್ತಿಯಲ್ಲಿ ಬಿಡುಗಡೆಯಾಗಿರುವ ಮತದಾರರ ಕರಡು ಪಟ್ಟಿಯಲ್ಲಿ ಕೆಲವು ಲೋಪಗಳಿದ್ದು, ಸರಿಪಡಿಸುವಂತೆ ಮನವಿ ಮಾಡಲಾಗಿದೆ ಎಂದು ತಿಳಿಸಿದರು. ರಾಜ್ಯ ಚುನಾವಣಾ ಆಯೋಗದ ಕಚೇರಿಯಲ್ಲಿ ಆಯುಕ್ತ ಜಿ.ಎಸ್. ಸಂಗ್ರೇಶಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದು, ನಿಯೋಗದಲ್ಲಿ ಸಚಿವರಾದ ರಾಮಲಿಂಗಾರೆಡ್ಡಿ, ದಿನೇಶ್ ಗುಂಡೂರಾವ್, ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್, ಶಾಸಕರಾದ ರಿಜ್ವಾನ್ ಅರ್ಷದ್ ಮತ್ತಿತರರು ಇದ್ದರು.

ಹೊಸದಾಗಿ ಮ್ಯಾಪಿಂಗ್ ಮಾಡಿ ಮತದಾರರ ಪಟ್ಟಿ ಸಿದ್ಧಪಡಿಸಿ

ನಾವು ಸ್ಥಳೀಯ ಸಂಸ್ಥೆ ಚುನಾವಣೆ ನಡೆಸುವ ಜವಾಬ್ದಾರಿ ಯನ್ನು ರಾಜ್ಯ ಚುನಾವಣಾ ಆಯೋಗಕ್ಕೆ ನೀಡಿದ್ದು, ಅವರು ತಮ್ಮ ಕೆಲಸ ಮಾಡುತ್ತಿದ್ದಾರೆ. ಹಿಂದೆ ಇದ್ದ ಮತದಾರರ ಪಟ್ಟಿ ಸರಿಯಿಲ್ಲ. ಮತ್ತೊಮ್ಮೆ ಮ್ಯಾಪಿಂಗ್ ಮಾಡಿ ಮತದಾರರ ಪಟ್ಟಿ ಸಿದ್ಧಪಡಿಸಲಿ. ಯಾರಿಗೆ ಮತದಾನ ಮಾಡುವ ಅರ್ಹತೆ ಇದೆಯೋ ಅವರಿಗೆ ಮತದಾನದ ಹಕ್ಕು ನೀಡಲಿ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

> ಮುಂದಿನ ದಿನಗಳಲ್ಲಿ ಜಿಬಿಎ ಸೇರಿದಂತೆ ಸ್ಥಳೀಯ ಸಂಸ್ಥೆ ಚುನಾವಣೆ ನಡೆಯಲಿದೆ. ಹೆಚ್ಚು ಕಮ್ಮಿಯಾದರೆ ರಾಜ್ಯ ಚುನಾವಣಾ ಆಯೋಗ ಮತ್ತು ಸರ್ಕಾರಕ್ಕೆ ಕೆಟ್ಟ ಹೆಸರು ಬರಲಿದೆ.
> ■ **ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

ಕಟ್ಟಾ ಕಾಂಗ್ರೆಸಿಗರು ನಿಯತ್ತಿರುವವರು

ಪುಟ ೧➡ **ಸಮಯ ಬಂದಾಗ ತಿಳಿಯುತ್ತದೆ –ಡಿಸಿಎಂ:** ನಾಯಕತ್ವ ವಿಚಾರವಾಗಿ ಈ ಹಿಂದೆ ಹೇಳಿರುವಂತೆ ನಾನು, ಸಿಎಂ, ಹೈಕಮಾಂಡ್ ಎಲ್ಲರೂ ಸೇರಿ ತೆಗೆದುಕೊಂಡಿರುವ ತೀರ್ಮಾನ. ಈ ತೀರ್ಮಾನ ಏನು ಎಂಬುದು ಸಮಯ ಬಂದಾಗ ತಿಳಿಯುತ್ತದೆ. ಇದು ಕದ್ದುಮುಚ್ಚಿ ಮಾಡಿಕೊಂಡಿರುವ ಗುಟ್ಟು ವ್ಯವಹಾರವಲ್ಲ. ಸಿದ್ದರಾಮಯ್ಯ ಅವರೇ ಸಮಯ ಬಂದಾಗ ರಾಜ್ಯದ ಜನಕ್ಕೆ ಸಂದೇಶ ನೀಡುತ್ತಾರೆ ಎಂದು ಡಿಸಿಎಂ ತಿಳಿಸಿದ್ದಾರೆ. ನಾಯಕರ ಹೇಳಿಕೆ ಬಗ್ಗೆ ಸಿಎಂ ಹಾಗೂ ಹೈಕಮಾಂಡ್ ನಾಯಕರು ಕ್ರಮ ಕೈಗೊಳ್ಳುತ್ತಾರೆ. ನಾನು ಮಹದೇವಪ್ಪ ಹಾಗೂ ಬೇರೆಯವರಿಗೆ ಉತ್ತರ ನೀಡಲು ತಯಾರಿಲ್ಲ. ಅವರು ಬಹಳ ದೊಡ್ಡವರು. ಈಗ ಅವರೂ ನಮ್ಮ ಹೈಕಮಾಂಡ್ ಭಾಗವಾಗಿದ್ದಾರೆ. ಅವರ ಬಗ್ಗೆ ನಾನು ಏನನ್ನೂ ಮಾತನಾಡುವುದಿಲ್ಲ ಎಂದರು.

ನೌಕಾಪಡೆಯ ರಹಸ್ಯ ಮಾಹಿತಿ ರವಾನೆ ಪ್ರಕರಣ: 5ನೇ ಆರೋಪಿ ಬಂಧನ

ಉಡುಪಿ: ನೌಕಾಪಡೆಯ ಹಡಗುಗಳಿಗೆ ಸಂಬಂಧಿಸಿದ ರಹಸ್ಯ ಮಾಹಿತಿಯನ್ನು ರವಾನೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಐದನೇ ಆರೋಪಿಯನ್ನು ಮಲ್ಪೆ ಪೊಲೀಸರು ಬಂಧಿಸಿದ್ದಾರೆ. ಮಲ್ಪೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪಶ್ಚಿಮ ಬಂಗಾಳ ಮೂಲದ ಆಲಿಫ್ ಇಸ್ಲಾಮ್ (21) ಬಂಧಿತ ಆರೋಪಿ. ಈತ ಪ್ರಸ್ತುತ ಕೇರಳ ರಾಜ್ಯದ ಇಡುಕಿ ಜಿಲ್ಲೆಯ ಮುನಾರ್ ಪ್ರದೇಶದಲ್ಲಿ ವಾಸವಿದ್ದ. ಈತನ ಮೂಲ ಬಾಂಗ್ಲಾದೇಶವೆಂಬ ಅನುಮಾನ ವ್ಯಕ್ತವಾಗಿದ್ದು ತನಿಖೆ ಮುಂದುವರೆದಿದೆ ಎಂದು ಎಸ್ ಪಿ ಹರಿರಾಮ್ ಶಂಕರ್ ತಿಳಿಸಿದ್ದಾರೆ.

ಭಾರತ–ಫ್ರಾನ್ಸ್ ಹೂಡಿಕೆ ಬಂಧ

ಪುಟ ೧➡ ನಾವು ಫ್ರಾನ್ಸ್‌ನ ತಜ್ಞತೆ ಮತ್ತು ಭಾರತದ ಪ್ರಮಾಣವನ್ನು ಸಂಯೋಜನೆಗೊಳಿಸುತ್ತಿದ್ದೇವೆ. ಉಭಯ ದೇಶಗಳು ಅತ್ಯಂತ ವಿಶಿಷ್ಟ ಬಾಂಧವ್ಯ ಹಂಚಿಕೊಂಡಿದ್ದು, ಫ್ರಾನ್ಸ್ ಭಾರತದ ಅತ್ಯಂತ ಹಳೆಯ ವ್ಯೂಹಾತ್ಮಕ ಪಾಲುದಾರರಲ್ಲೊಂದಾಗಿದೆ ಎಂದು ಪ್ರಧಾನಿ ಮೋದಿಯವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅತ್ಯುನ್ನತ ಮಟ್ಟದಲ್ಲಿ ಹಾರಬಲ್ಲ ವಿಶ್ವದ ಏಕೈಕ ಹೆಲಿಕಾಪ್ಟರ್ ಎಚ್–125!: ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರಾನ್ ಅವರ ಜತೆಗೂಡಿ, ನಾವು ಈ ವ್ಯೂಹಾತ್ಮಕ ಪಾಲುದಾರಿಕೆಗೆ ಅಭೂತಪೂರ್ವ ಆಳ ಮತ್ತು ಶಕ್ತಿ ತುಂಬಿದ್ದೇವೆ. ಈ ನಂಬಿಕೆ ಮತ್ತು ಹಂಚಿಕೆಯ ದೃಷ್ಟಿಕೋನದಲ್ಲಿ ಇಂದು ನಾವು ನಮ್ಮ ಬಾಂಧವ್ಯವನ್ನು 'ವಿಶೇಷ ಜಾಗತಿಕ ವ್ಯೂಹಾತ್ಮಕ ಪಾಲುದಾರಿಕೆ'ಯಾಗಿ ಎತ್ತರಿಸಿದ್ದೇವೆ. ಈ ಪಾಲುದಾರಿಕೆ ಕೇವಲ ವ್ಯೂಹಾತ್ಮಕವಷ್ಟೇ ಆಗಿರದೆ, ಇಂದಿನ ಪ್ರಕ್ಷುಬ್ಧತೆಯ ಸನ್ನಿವೇಶದಲ್ಲಿ ಇದು ಜಾಗತಿಕ ಸ್ಥಿರತೆಯ ಪಾಲುದಾರಿಕೆಯಾಗಿ ಮತ್ತು ಜಾಗತಿಕ ಪ್ರಗತಿಯ ಶಕ್ತಿಯಾಗಿ ಮೂಡಿಬಂದಿದೆ ಎಂದು ವಿಶ್ಲೇಷಿಸಿದ ಮೋದಿಯವರು, ಎಚ್–125ಹೆಲಿಕಾಪ್ಟರ್‌ಗಳ ಜೋಡಣಾ ವ್ಯವಸ್ಥೆ ಭಾರತದಲ್ಲಿ ಸ್ಥಾಪನೆಗೊಳ್ಳುತ್ತಿರುವುದನ್ನು ಈ ವಿಶ್ವಾಸದ ದ್ಯೋತಕ ಎಂದರು. ಈ ಎಚ್–125ಹೆಲಿಕಾಪ್ಟರ್ ಮೌಂಟ್ ಎವರೆಸ್ಟ್ (ಗೌರಿಶಂಕರ)ನಂತಹ ಅತ್ಯುನ್ನತ ಪರ್ವತೀಯ ಪ್ರದೇಶಗಳಲ್ಲೂ ಹಾರಾಟ ನಡೆಸಬಲ್ಲ ವಿಶ್ವದ ಏಕೈಕ ಹೆಲಿಕಾಪ್ಟರ್ ಆಗಿದ್ದು, ಇದನ್ನು ಈಗ ವಿಶ್ವದೆಲ್ಲೆಡೆಗೆ ರಫ್ತು ಮಾಡಲೂ ಅವಕಾಶವಿದೆ ಎಂದು ಪ್ರಧಾನಿ ಹೇಳಿದರು.

ಭಾರತ ಫ್ರಾನ್ಸ್‌ನ ಅತ್ಯಂತ ವಿಶ್ವಾಸಾರ್ಹ ಪಾಲುದಾರ

ಪುಟ ೧➡ ಭಾರತ ಮತ್ತು ಫ್ರಾನ್ಸ್‌ಗಳು ಕಾನೂನು ಆಡಳಿತದಲ್ಲಿ ದೃಢವಾದ ನಂಬಿಕೆ ಹೊಂದಿರುವ ದೇಶಗಳಾಗಿದ್ದು, ಕಳೆದ ಕೆಲವು ವರ್ಷಗಳಲ್ಲಿ ಇದನ್ನು ನಾವು ಸಾಬೀತುಪಡಿಸಿದ್ದೇವೆ . ಭಯೋತ್ಪಾದನೆಯ ಪಿಡುಗನ್ನು ಹತ್ತಿಕ್ಕಲು ನಾವು ಒಂದಾಗಿ ಕೆಲಸ ಮಾಡಲಿದ್ದೇವೆ ಎಂದರು.

ಶೀಘ್ರದಲ್ಲೇ ಭಾರತ ಅತಿದೊಡ್ಡ ರಫ್ತುದಾರ

ಪುಟ ೧➡ ದೇಶದ ಮೊಟ್ಟ ಮೊದಲ ಎಚ್125 ಹೆಲಿಕಾಪ್ಟರ್ ಘಟಕವನ್ನು 1000 ಕೋಟಿ ಬಂಡವಾಳದೊಂದಿಗೆ ಆರಂಭಿಸಲಾಗುತ್ತಿದೆ. ಇದರಿಂದ ಮೂಲ ಸೌಕರ್ಯಗಳ ಜೊತೆಗೆ ಪ್ರತ್ಯಕ್ಷ ಹಾಗೂ ಪರೋಕ್ಷ ಉದ್ಯೋಗವಕಾಶಗಳು ಯುವ ಸಮುದಾಯಕ್ಕೆ ವಿಫುಲವಾಗಿ ಸಿಗಲಿದೆ. ಮುಂಬರುವ ದಿನಗಳಲ್ಲಿ ರಕ್ಷಣಾ ಕ್ಷೇತ್ರಕ್ಕೆ ಅಗತ್ಯವಿರುವ ಸಿ295 ಮಾದರಿಯ ಹೆಲಿಕಾಪ್ಟರ್‌ಗಳನ್ನು ಹಾಗೂ ಏಕ ಇಂಜಿನ್ ಹೆಲಿಕಾಪ್ಟರ್‌ಗಳ ಉತ್ಪಾದನೆಯಲ್ಲಿ ಟಾಟಾ ಸಂಸ್ಥೆಯ ಸಹಭಾಗಿತ್ವ ಮೆಚ್ಚುಗೆಗೆ ಪಾತ್ರವಾಗಲಿದೆ ಎಂದು ಹೇಳಿದರು. ಫ್ರಾನ್ಸ್ ದೇಶದೊಂದಿಗೆ ಭಾರತವು ಸಾಕಷ್ಟು ಒಪ್ಪಂದಗಳನ್ನು ಮಾಡಿಕೊಳ್ಳುವ ಮೂಲಕ ವಿವಿಧ ಕ್ಷೇತ್ರಗಳಲ್ಲಿ ಮೂಲ ಸೌಕರ್ಯಗಳ ಅಗತ್ಯಗಳನ್ನು ಪೂರೈಕೆ ಮಾಡಲು ಸಿದ್ಧವಾಗಿದೆಯೆಂದು ತಿಳಿಸಿದರು. ಫ್ರಾನ್ಸ್ ರಕ್ಷಣಾ ಸಚಿವೆ ಕ್ಯಾಥರೀನ್ ವೌಟ್ರಿನ್ ಮಾತನಾಡಿ, ಕೇವಲ ಎರಡು ವರ್ಷಗಳ ಪ್ರಯತ್ನದ ಫಲವಾಗಿ ಈ ಹೆಲಿಕಾಪ್ಟರ್ ಜೋಡಣಾ ಘಟಕವನ್ನು ಆರಂಭಿಸಲಾಗುತ್ತಿದೆ. ಈ ರೀತಿಯ ಅನೇಕ ಘಟಕಗಳನ್ನು ಭಾರತ ದೇಶದ ಸಹಭಾಗಿತ್ವದಲ್ಲಿ ಆರಂಭಿಸಲಾಗುವುದು. ಈಗಾಗಲೇ ಭಾರತದಲ್ಲಿ 295 ಕ್ಕೂ ಹೆಚ್ಚು ಯೋಜನೆಗಳು ಸಾಕಾರಗೊಳ್ಳುತ್ತಿವೆ. ಇದು ಆರ್ಥಿಕವಾಗಿ ಮಾತ್ರವಲ್ಲದೆ ಕೈಗಾರಿಕೆಗಳ ಉನ್ನತೀಕರಣಕ್ಕೂ ಸಹಕಾರಿಯಾಗಿದೆ ಎಂದು ಶ್ಲಾಘಿಸಿದರು. ರಾಜ್ಯ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಭಾರತ ಹಾಗೂ ಫ್ರಾನ್ಸ್ ದೇಶಗಳ ರಕ್ಷಣಾ ಅಧಿಕಾರಿಗಳು, ಸಂಸದ ಎಂ.ಮಲ್ಲೇಶ್ ಬಾಬು, ಬಿಜೆಪಿ ಜಿಲ್ಲಾಧ್ಯಕ್ಷ ಓಂಶಕ್ತಿ ಚಲಪತಿ ಮೊದಲಾದವರು ಕಾರ್ಯಕ್ರಮದಲ್ಲಿದ್ದರು.

ನಾಗರಿಕ ವಿಮಾನ ಯಾನ: ಭಾರತಕ್ಕೆ 3ನೇ ಸ್ಥಾನ

ದೇಶದಲ್ಲಿ ರಕ್ಷಣೆ ಹಾಗೂ ನಾಗರೀಕ ವಿಮಾನ ಯಾನ ಕ್ಷೇತ್ರಗಳು ಒಂದೇ ಸೈಕಲ್‌ನ ಎರಡು ಗಾಲಿಗಳಂತೆ ಅಭಿವೃದ್ಧಿ ಪಡಿಸಲಾಗುತ್ತಿದೆ.ಎರಡು ಕ್ಷೇತ್ರಗಳನ್ನು ಸಮಾನ ಗಾತ್ರದಲ್ಲಿ ಅಭಿವೃದ್ಧಿಪಡಿಸಲು ಇತ್ತೀಚಿಗೆ ನರೇಂದ್ರ ಮೋದಿ ನೇತೃತ್ವದ ಸರಕಾರವು ಮಂಡಿಸಿರುವ ಬಜೆಟ್ ಪೂರಕ ಹಾಗೂ ಪ್ರೋತ್ಸಾಹದಾಯಕವಾಗಿದೆ ಎಂದು ನಾಗರೀಕ ವಿಮಾನಯಾನ ಸಚಿವ ಕೆ.ಆರ್. ನಾಯ್ಡು ತಿಳಿಸಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೇಕ್ ಇನ್ ಇಂಡಿಯಾ ಮೂಲಕ ವಿಶ್ವವನ್ನು ರೂಪಿಸುವಲ್ಲಿ ದೇಶವು ಅಪಾರವಾದ ಕೊಡುಗೆಗಳನ್ನು ನೀಡಲಾರಂಭಿಸಿದೆ. ಫ್ರಾನ್ಸ್‌ನೊಂದಿಗೆ 100 ಮಿಲಿಯನ್ ಯೂರೋ ಬಂಡವಾಳದೊಂದಿಗೆ ಆರಂಭಿಸಲಾಗುತ್ತಿರುವ ವೇಮಗಲ್ ಹೆಲಿಕಾಪ್ಟರ್ ಘಟಕವು 2047 ರವರೆಗಿನ ಜಾಗತಿಕ ಪೂರೈಕೆಗಳಿಗೆ ತಕ್ಕನಾಗಿದೆ. ಕಳೆದ 11 ವರ್ಷಗಳಲ್ಲಿ ದೇಶವು ನಾಗರೀಕ ವಿಮಾನ ಯಾನ ಕ್ಷೇತ್ರದಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ 10 ಸ್ಥಾನದಿಂದ 3 ಸ್ಥಾನಕ್ಕೆ ಜಿಗಿದಿದೆ. ಮುಂದಿನ 20 ವರ್ಷಗಳಲ್ಲಿ ದಕ್ಷಿಣ ಏಷ್ಯಾದಲ್ಲಿ 500 ಏಕ ಇಂಜಿನ್ ಹೆಲಿಕಾಪ್ಟರ್‌ಗಳಿಗೆ ಬೇಡಿಕೆ ಬರಲಿದ್ದು, ಇದರಿಂದ ಇತರೇ ದೇಶಗಳ ವೈಮಾನಿಕ ಅಗತ್ಯ ಪೂರೈಸಲು ರಫ್ತು ಬೇಡಿಕೆಯನ್ನು ದೇಶವು ಈಡೇರಿಸಲಿದೆ ಎಂದು ಸಚಿವ ನಾಯ್ಡು ತಿಳಿಸಿದರು.

ಬಾಂಗ್ಲಾ ಪ್ರಧಾನಿ ಆಗಿ ರೆಹಮಾನ್ ಪ್ರಮಾಣ

ಪುಟ ೧➡ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಜತೆಗಿದ್ದರು. ಅಧ್ಯಕ್ಷ ಮೊಹಮದ್ ಶಹಾಬುದ್ದೀನ್, ದೀರ್ಘಕಾಲೀನ ಸಂಪ್ರದಾಯಗಳಿಗೆ ತಿಲಾಂಜಲಿ ರೂಪದಲ್ಲಿ, ಬಂಗಾಭವನ್‌ಗೆ ಬದಲು ಸೌತ್ ಪ್ಲಾಝಾದಲ್ಲಿ 60 ವರ್ಷ ವಯಸ್ಸಿನ ತಾರೀಖ್ ರೆಹಮಾನ್‌ಗೆ ಪ್ರತಿಜ್ಞಾವಿಧಿ ಬೋಧಿಸಿದರು. ಕಾನೂನು ಪ್ರಕಾರವಾಗಿ ಶ್ರದ್ಧೆಯಿಂದ ಪ್ರಧಾನಿ ಹುದ್ದೆಯ ಕರ್ತವ್ಯ ನಿಭಾಯಿಸುವುದಾಗಿ ಹೊಸ ಪ್ರಧಾನಿ ರೆಹಮಾನ್ ಪ್ರಮಾಣ ಮಾಡಿದರು.

ಶಾಸಕರ ಸ್ವಂತ ಖರ್ಚಿನಲ್ಲಿ ವಿದೇಶ ಪ್ರವಾಸಕ್ಕೆ ಅನುಮತಿ ಅನಗತ್ಯ

ಹಾವೇರಿ: ಸರ್ಕಾರದಿಂದ ಶಾಸಕರು ವಿದೇಶ ಪ್ರವಾಸಕ್ಕೆ ಹೊರಟರೆ ನಮ್ಮ ಅನುಮತಿ ಪಡೆದುಕೊಂಡು ಹೋಗಬೇಕಾಗುತ್ತದೆ. ಆದರೆ, ಕೆಲ ಶಾಸಕರು ತಮ್ಮ ವೈಯಕ್ತಿಕ ಹಣ ಖರ್ಚು ಮಾಡಿಕೊಂಡು ಹೋದರೆ ಅದಕ್ಕೆ ನಮ್ಮ ಅಭ್ಯಂತರವಿಲ್ಲ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, 5 ಜನ ಎಂಎಲ್‌ಸಿ ಸೇರಿದಂತೆ ಒಟ್ಟಾರೆ 22 ಜನ ಅಸೆಂಬ್ಲಿ ಸದಸ್ಯರು ವಿದೇಶ ಪ್ರವಾಸಕ್ಕೆ ಹೋಗುತ್ತಿದ್ದಾರೆಂದು



ಮಾಧ್ಯಮಗಳಲ್ಲಿ ನೋಡಿದ್ದೇನೆ. ಶಾಸಕರು ತಮ್ಮ ವೈಯಕ್ತಿಕ ದುಡ್ಡು ಖರ್ಚು ಮಾಡುಕೊಂಡು ಹೋಗುತ್ತಿದ್ದಲ್ಲಿ ಅದಕ್ಕೆ ಯಾವುದೇ ತಕರಾರು ಇಲ್ಲ. ಅವರು ಒಂದು ವೇಳೆ ಸರ್ಕಾರದಿಂದ ಹೋಗಬೇಕಾಗಿದ್ದರೆ ನಮ್ಮನ್ನು ಅನುಮತಿ ಕೇಳಬೇಕಾಗುತ್ತದೆ ಎಂದು ತಿಳಿಸಿದರು.

ಸದ್ಯ ಭೋಜೇಗೌಡ ಎಂಬುವವರು ದಕ್ಷಿಣ ಆಫ್ರಿಕಾಗೆ ಹೊರಟಿರುವ ಬಗ್ಗೆ ನಮ್ಮನ್ನ ಅನುಮತಿ ಕೇಳಿದ್ದಾರೆ. ಹೀಗಾಗಿ ನಾವೂ ಕಾರ್ಯದರ್ಶಿಗೆ ಕಡತ ಮಂಡಿಸಿ ನೋಡಿಕೊಳ್ಳಲು ಸೂಚನೆ ನೀಡಿದ್ದೇನೆ. ಈ ಬಗ್ಗೆ ಫೈಲ್ ಬಂದ ಮೇಲೆ ತೀರ್ಮಾನ ಮಾಡುತ್ತೇನೆ ಎಂದರು. ಜನಗಣಮನ ಮೊದಲು ವಂದೇ ಮಾತರಂ ಹೇಳಬೇಕು ಎಂಬ ಆದೇಶದ ಬಗ್ಗೆ ಪ್ರತಿಕ್ರಿಯಿಸಿದ ಅವರು, ಅದು ಕೇಂದ್ರದ ನಿರ್ಧಾರ ಆಗಿದೆ. ಅದರ ಬಗ್ಗೆ ನಾವೇನು ಹೇಳೊಕೆ ಹೋಗುವುದಿಲ್ಲ ಎಂದರು.

ನನೆಗುದಿಗೆ ಬಿದ್ದಿರುವ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಕುರಿತು ಪ್ರತಿಕ್ರಿಯಿಸಿದ ಅವರು, ರಾಜ್ಯದಲ್ಲಿ ಸುಮಾರು 29 ಸಾವಿರ ಹುದ್ದೆಗಳು ಶಿಕ್ಷಣ ಇಲಾಖೆಯಲ್ಲಿ ಖಾಲಿ ಇವೆ. ಶಿಕ್ಷಕರಿಲ್ಲದೇ ಪಾಠ ಪ್ರವಚನ ಹೇಗೆ ನಡೆಯಬೇಕು. ಸಂಬಂಧಿಸಿದ ಸಚಿವರ ಜತೆಗೂ ಮಾತನಾಡುತ್ತೇನೆ. ಬರುವ ಅಧಿವೇಶನದಲ್ಲಿ ವಿಶೇಷ ಸಭೆ ಕರೆದು ಚರ್ಚಿಸಿ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ ಎಂದು ಹೇಳಿದರು.



ಬೆಳಗಾವಿಯಲ್ಲಿ ಅಕ್ಕ ಪಡೆ ವಾಹನಕ್ಕೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮಂಗಳವಾರ ಚಾಲನೆ ನೀಡಿದರು.

ನಾಯಕತ್ವ ಬದಲಾವಣೆ ನಿರ್ಧಾರ ಹೈಕಮಾಂಡ್ ಪ್ರಕಟಿಸಲಿ: ಶಾಸಕ

ದಾವಣಗೆರೆ: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇವತ್ತೇ ಮುಖ್ಯಮಂತ್ರಿ ಆಗಲಿ ಎನ್ನುವವರಲ್ಲಿ ನಾನೇ ಮೊದಲಿಗ. ಆದರೆ, ಅದೆಲ್ಲವನ್ನೂ ತೀರ್ಮಾನ ಮಾಡುವುದು ನಮ್ಮ



ಪಕ್ಷದ ಹೈಕಮಾಂಡ್. ಹಾಗಾಗಿ ಈ ವಿಚಾರದ ಬಗ್ಗೆ ಹೈಕಮಾಂಡ್ ಶೀಘ್ರವೇ ಸೂಕ್ತ ತೀರ್ಮಾನ ಕೈಗೊಳ್ಳಬೇಕು ಎಂದು ಚನ್ನಗಿರಿ ಶಾಸಕ ಬಸವರಾಜ ವಿ.ಶಿವಗಂಗಾ ಒತ್ತಾಯಿಸಿದ್ದಾರೆ.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಧಿಕಾರ ಹಂಚಿಕೆ ಬಗ್ಗೆ ಈಗಾಗಲೇ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆಂದು ಡಿಸೆಂಬರ್‌ನಲ್ಲೇ ನಾನು ರಕ್ತದಲ್ಲಿ ಬರೆದು ಕೊಡುವುದಾಗಿ ಹೇಳಿದ್ದೆ. ಈಗಲೂ ಅದನ್ನೇ ಹೇಳುತ್ತೇನೆ. ನನ್ನ ಮಾತಿಗೆ ಬದ್ಧನಿದ್ದೇನೆ. ಅಧಿಕಾರ ಹಂಚಿಕೆ ಬಗ್ಗೆ ಹೈಕಮಾಂಡ್, ಸಿಎಂ ಸಿದ್ದರಾಮಯ್ಯನವರು ಸ್ಪಷ್ಟಪಡಿಸಬೇಕು. ಆಗ ನಾವು ಮಾಧ್ಯಮ ಗಳಿಗೆ ಪ್ರತಿಕ್ರಿಯೆ ನೀಡುವುದೂ ತಪ್ಪುತ್ತದೆ. ಆಗ ಯಾವುದೇ ಗೊಂದಲ ಸಹ ಇರುವುದಿಲ್ಲ ಎಂದರು. ಡಿಕೆಶಿ ಆಪ್ತ ಶಾಸಕರನ್ನು ಬೀದಿ ನಾಯಿಗೆ ಹೋಲಿಸಿರುವ ಡಾ.ಎಚ್.ಸಿ.ಮಹ ದೇವಪ್ಪ ಅಂತಹ ಪದ ಬಳಸಬಾರದು. ಅವರೂ ಶಾಸಕರೇ ತಾನೇ? ಶಾಸಕರನ್ನು ನಾಯಿಗೆ ಹೋಲಿಕೆ ಮಾಡಿದರೆ, ಹೀಗೆ ಹೋಲಿಕೆ ಮಾಡಿದವರೂ ಅದೇ ತಾನೇ? ಅದು ಡಿ.ಕೆ.ಶಿವಕುಮಾರ ಬಣ ಇರಬಹುದು, ಸಿದ್ದರಾಮಯ್ಯನವರ ಬಣ ಇರಬಹುದು. ಹಿರಿಯ ನಾಯಕರಾಗಿ ಹೀಗೆಲ್ಲಾ ಶಾಸಕರನ್ನು ನಾಯಿಗೆ ಹೋಲಿಕೆ ಮಾಡುವುದು ಸರಿಯಲ್ಲ ಎಂದರು.

> **ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಚುನಾವಣೆ ವೇಳೆ ಶಾಮನೂರು ಶಿವಶಂಕರಪ್ಪನವರು ಇದೇ ತಮ್ಮ ಕೊನೆ ಚುನಾವಣೆ, ಮುಂದೆ ಮುಸ್ಲಿಮರಿಗೆ ಟಿಕೆಟ್ ನೀಡುವುದಾಗಿ ಹೇಳಿದ್ದನ್ನು ಕೇಳಿದ್ದೇನೆ.**
> ■ **ಬಸವರಾಜ ವಿ.ಶಿವಗಂಗಾ,** ಚನ್ನಗಿರಿ ಶಾಸಕ

ಕಿರುಸುದ್ದಿ

ಹೈಕಮಾಂಡ್ ನಿರ್ಧಾರಕ್ಕೆ ಬದ್ಧ: ಲಕ್ಷ್ಮೀ ಹೆಬ್ಬಾಳ್ಕರ್

ಬೆಳಗಾವಿ: ಮುಖ್ಯಮಂತ್ರಿ ಬದಲಾವಣೆ ಕುರಿತಂತೆ ಹೈಕಮಾಂಡ್ ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧ. ರಾಜ್ಯದಲ್ಲಿ ಈ ವಿಚಾರ ಬಗ್ಗೆ ಚರ್ಚಿಸಿದರೆ ಅಕ್ಷಮ್ಯ ಅಪರಾಧ ಆಗುತ್ತದೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು. ಮಂಗಳವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಜಿಲ್ಲೆಯಲ್ಲಿ ಕುಡಿಯುವ ನೀರಿನ ಹಾಹಾಕಾರ ಪ್ರಾರಂಭವಾಗಿರುವ ವಿಚಾರದ



ಬಗ್ಗೆ ಪ್ರತಿಕ್ರಿಯಿಸಿ, ಬೆಳಗಾವಿ ಜಿಲ್ಲೆಯಲ್ಲಿ ವರ್ಷದ 9 ತಿಂಗಳು ಮಳೆಯಾದರೂ ಬೇಸಿಗೆ ವೇಳೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದೇ ಇರುತ್ತದೆ. ಈ ಬಾರಿ ಅಂತಹ ಸಮಸ್ಯೆಯಾಗದಂತೆ ನೋಡಿಕೊಳ್ಳಲಾಗುವುದು ಎಂದರು. ಹಿರೇಬಾಗೇವಾಡಿ ಗ್ರಾಮದಲ್ಲಿ ಬಸ್ ನಿಲ್ದಾಣದ ಆವಶ್ಯಕತೆ ಇದೆ. ಈಗಾಗಲೇ ಪ್ರಸ್ತಾವನೆಯೂ ಸಿದ್ಧಗೊಂಡಿದೆ. ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿದ್ದು, ಬಸ್ ನಿಲ್ದಾಣಕ್ಕೆ ಸೂಕ್ತ ಜಾಗದ ಕೊರತೆ ಕಾಡುತ್ತಿದೆ. ಶೀಘ್ರವೇ ಇದಕ್ಕೆ ಪರಿಹಾರ ಸಿಗಲಿದೆ. ಅಲ್ಲದೆ, ಬೆಳಗಾವಿ ಗ್ರಾಮೀಣ ತಾಲೂಕು ರಚನೆ ಬಗ್ಗೆಯೂ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಫೆ.21ರಂದು ಪುತ್ತಿಗೆ ಶ್ರೀಗಳಿಗೆ ಅಭಿನಂದನಾ ಕಾರ್ಯಕ್ರಮ

ಉಡುಪಿ: ಪುತ್ತಿಗೆ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು ಫೆ.21ರಂದು ಬೆಂಗಳೂರು ನಗರಕ್ಕೆ ಪುರಪ್ರವೇಶ ಮಾಡುವ ಹಿನ್ನಲೆಯಲ್ಲಿ ಶ್ರೀಗಳ ಅಭಿನಂದನಾ ಸಮಾರಂಭವನ್ನು ಸ್ವಾಗತ ಸಮಿತಿಯವರು ಬಸವನ ಗುಡಿಯ ಗೋವರ್ಧನ ಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದಾರೆ. ಈ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಸಂಸದ ಪಿ.ಸಿ.ಮೋಹನ್, ಡಾ. ಮಂಜುನಾಥ್, ವಿದ್ವಾಂಸ ಡಾ. ಶ್ರೀ ವ್ಯಾಸನಕೆರೆ ಪ್ರಭಂಜನಾಚಾರ್ಯ, ಬಸವನಗುಡಿಯ



ಶಾಸಕ ಎಸ್. ರವಿ ಸುಬ್ರಹ್ಮಣ್ಯಂ ಸೇರಿ ಹಲವರಿರುತ್ತಾರೆ. ಸಂಜೆ 5 ಗಂಟೆಗೆ ಶ್ರೀಗಳನ್ನು ಗುರು ನರಸಿಂಹ ಸಭಾ ಭವನದಿಂದ ಭವ್ಯ ಮೆರವಣಿಗೆಯ ಮೂಲಕ ಬಸವನ ಗುಡಿಯ ಶ್ರೀ ಪುತ್ತಿಗೆ ಮಠದ ಗೋವರ್ಧನ ಕ್ಷೇತ್ರಕ್ಕೆ ಬರಮಾಡಿಕೊಳ್ಳಲಾಗುವುದು. ರಾತ್ರಿ 7ಗಂಟೆಗೆ ಅಭಿನಂದನಾ ಕಾರ್ಯಕ್ರಮ ನಡೆಯಲಿದೆ. ಈ ಸಂದರ್ಭದಲ್ಲಿ ವಿವಿಧ ಭಜನಾಮಂಡಳಿಗಳ ಮಾತೆಯರಿಂದ ಭಗವದ್ಗೀತಾ ಪಾರಾಯಣ ನಡೆಯಲಿದೆ ಹಾಗೂ ಶ್ರೀಗಳಿಂದ ಭಕ್ತರಿಗೆ ಕೋಟಿ ಗೀತಾ ಲೇಖನ ಯಜ್ಞದ ದೀಕ್ಷಾ ಸಮಾರಂಭ ನಡೆಯಲಿದೆ ಎಂದು ರಾಮಚಂದ್ರ ಉಪಾಧ್ಯಾಯ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೀಟು ಹಂಚಿಕೆ ಅವದಿ ವಿಸ್ತರಣೆ

ಬೆಂಗಳೂರು: ಸ್ನಾತಕೋತ್ತರ ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ಮೂರನೇ ಸುತ್ತಿನ ಸೀಟು ಹಂಚಿಕೆಗೆ ಬೆಂಗಳೂರಿನ ಪಾಲಿಕೆಗಳು ಸೇರಿದಂತೆ ಸರ್ಕಾರದ ಇತರೆ ಆಸ್ಪತ್ರೆಗಳಲ್ಲಿ ಸೇವಾ ನಿರತ ಅಭ್ಯರ್ಥಿಗಳಿಗೆ ಡಿಎನ್‌ಬಿ ಸೀಟುಗಳು ಲಭ್ಯವಿದ್ದು, ಹಂಚಿಕೆಗೆ ಪರಿಗಣಿಸುವಂತೆ ಸರ್ಕಾರ ಸೂಚಿಸಿರುವ ಹಿನ್ನೆಲೆಯಲ್ಲಿ ಇಚ್ಛೆ/ಆಯ್ಕೆ ದಾಖಲಿಸಲು ಫೆ.18 ರಂದು ಮಧ್ಯಾಹ್ನ 12 ಗಂಟೆವರೆಗೆ ದಿನಾಂಕ ವಿಸ್ತರಿಸಲಾಗಿದೆ. ಲಭ್ಯ ತಜ್ಞತೆಯ ಕೋರ್ಸ್‌ಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದು, ಅವುಗಳಿಗೆ ಮಾತ್ರ ಸೇವಾ ನಿರತರು ಇಚ್ಛೆ/ಆಯ್ಕೆಗಳನ್ನು ದಾಖಲಿಸಬಹುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ ತಿಳಿಸಿದ್ದಾರೆ. ಇಎಸ್‌ಐಸಿ, ಬೆಂಗಳೂರಿನ ಮಹಾನಗರ ಪಾಲಿಕೆಗಳು, ರಾಜ್ಯದ ಇತರೆ ಪಾಲಿಕೆಗಳ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ವೈದ್ಯರು ಸರ್ಕಾರಿ ಆಸ್ಪತ್ರೆಗಳಲ್ಲಿ ಡಿಎನ್‌ಬಿ ಸೀಟುಗಳ ಪ್ರವೇಶಕ್ಕೆ ಆಪ್ಷನ್ಸ್ ದಾಖಲಿಸಬಹುದು ಎಂದು ವಿವರಿಸಿದ್ದಾರೆ.

ಇಕೋ ಸಿಸ್ಟಂನಲ್ಲಿ ಮೂರನೇ ಸ್ಥಾನ: ಸಚಿವ ಎಂ.ಬಿ. ಪಾಟೀಲ್

ಡಿಫೆನ್ಸ್ ಕಾರಿಡಾರ್‌ಗೆ ಚಿಂತನೆ

ಕೋಲಾರ: ಕೋಲಾರ, ಬೆಂಗಳೂರು ಗ್ರಾಮಾಂತರ ಭಾಗದಲ್ಲಿ ಡಿಫೆನ್ಸ್ ಕಾರಿಡಾರ್ ಮಾಡಲು ಚಿಂತನೆ ನಡೆಸಲಾಗಿದೆ ಎಂದು ರಾಜ್ಯ ಬೃಹತ್ ಕೈಗಾರಿಕಾ ಸಚಿವ ಎಂಬಿ.ಪಾಟೀಲ್ ತಿಳಿಸಿದರು.

ತಾಲೂಕಿನ ವೇಮಗಲ್ ಕೈಗಾರಿಕಾ ಪ್ರದೇಶದಲ್ಲಿ ಟಾಟಾ ಏರ್‌ಬಸ್ ಹೆಲಿಕ್ಯಾಪ್ಟರ್ ಎಚ್‌125 ಜೋಡಣಾ ಘಟಕದ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅವರು, ರಕ್ಷಣಾ ಸಚಿವರಿಗೂ ಇದನ್ನು ನೆನಪಿಸಲಾಗುವುದು ಎಂದರು. ಟಾಟಾ ಏರ್‌ಬಸ್ ಹೆಲಿಕ್ಯಾಪ್ಟರ್ ಎಚ್‌125 ಜೋಡಣಾ ಘಟಕದ ಉದ್ಘಾಟನೆಯಾಗುತ್ತಿದೆ. ಭಾರತ, ಫ್ರಾನ್ಸ್‌ನ ಪ್ರಧಾನಿಗಳು, ರಾಜ್ಯವು ಜಾಗತಿಕ ಮಟ್ಟದಲ್ಲಿ ರಾಜ್ಯವು ಇಕೋ ಸಿಸ್ಟಂನಲ್ಲಿ ಮೂರನೇ ಸ್ಥಾನದಲ್ಲಿದೆ ಎಂದು ತಿಳಿಸಿದರು.

ಭಾರತದಲ್ಲಿ ಏರೋಸ್ಪೇಸ್ ಮತ್ತು ಡಿಫೆನ್ಸ್ ನಲ್ಲಿ ಶೇ.65 ರಷ್ಟು ಪಾತ್ರ ನಮ್ಮ ರಾಜ್ಯದ್ದು ಇದೆ. ಎಲ್ಲಾ ಏರೋಸ್ಪೇಸ್ ಮತ್ತು ಡಿಫೆನ್ಸ್ ನಮ್ಮಲ್ಲಿ ಸ್ಥಾಪನೆಯಾಗುತ್ತಿರುವುದು ಶ್ಲಾಘನೀಯ. ಬಹುತೇಕ ಕಂಪನಿಗಳು ಬಂದಿರುವುದರಿಂದ ನಾವು ಬೆಳೆಯುತ್ತಿದ್ದೇವೆ ಎಂಬುದಕ್ಕೆ ಸಾಕ್ಷಿಯಾಗಿದೆ ಎಂದರು.

ಕೋಲಾರ, ಬೆಂಗಳೂರು ಗ್ರಾಮಾಂತರ ಭಾಗದಲ್ಲಿ ಡಿಫೆನ್ಸ್ ಕಾರಿಡಾರ್ ಮಾಡಲು ಚಿಂತನೆ ನಡೆಸಲಾಗಿದೆ. ರಕ್ಷಣಾ ಸಚಿವರಿಗೂ ನೆನಪಿಸಲಾಗುವುದು. ಈಗ ಉದ್ಘಾಟನೆಗೊಂಡಿರುವ ಟಾಟಾ ಹೆಲಿಕ್ಯಾಪ್ಟರ್ ಘಟಕದಲ್ಲಿ ಉದ್ಯೋಗ ಅವಕಾಶದ ಬಗ್ಗೆಯೂ ಚರ್ಚಿಸಲಾಗಿದ್ದು, ಸ್ಥಳೀಯರಿಗೆ ಅವಕಾಶ ಸಿಗಲಿದೆ. ಪ್ರಥಮ ಬಾರಿಗೆ ಹೆಲಿಕ್ಯಾಪ್ಟರ್ ಜೋಡಣೆ ಘಟಕ ಉದ್ಘಾಟನೆಯಾಗುತ್ತಿದೆ. ಟಾಟಾ ಅಡ್ವಾನ್ಸ್ ಮತ್ತು ಏರ್‌ಬಸ್ ಸಹಭಾಗಿತ್ವದಲ್ಲಿ ಕಂಪನಿ ಆರಂಭವಾಗಿದೆ. 15 ದಿನಕ್ಕೆ ಒಂದು ಹೆಲಿಕ್ಯಾಪ್ಟರ್ ತಯಾರು ಆಗಲಿದೆ.

ಮುಂದಿನ ದಿನಗಳಲ್ಲಿ ಹೆಚ್ಚಿಸಲಾಗುವುದು. ಕಳೆದ ಒಂದೂವರೆ ವರ್ಷಗಳಿಂದ ಇದನ್ನು ಫಾಲೋಅಪ್ ಮಾಡುತ್ತಿದ್ದೇವೆ. ರಾಜ್ಯಕ್ಕೆ ಪರಿಸರಕ್ಕೆ ಹೊಂದಿಕೊಂಡು ಈ ಕಂಪನಿ ಬಂದಿದ್ದು, ಇನ್ನಷ್ಟು ಕಂಪನಿಗಳು ಬರಲಿವೆ ಎಂದು ತಿಳಿಸಿದರು.



500 ಹೆಲಿಕಾಪ್ಟರ್ ತಯಾರಿಕೆ

ಫ್ರಾನ್ಸ್ ಮೂಲದ ಏರ್ ಬಸ್ ಮತ್ತು ಭಾರತದ ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಲಿಮಿಟೆಡ್ (ಟಿಎಎಸ್‌ಎಲ್) ಜತೆಗೂಡಿ ಅಭಿವೃದ್ಧಿಪಡಿಸಿರುವ ದೇಶದ ಪ್ರಪ್ರಥಮ, ಖಾಸಗಿ ವಲಯದ ಹೆಲಿಕಾಪ್ಟರ್ ಜೋಡಣೆ ಘಟಕದಲ್ಲಿ ಮುಂದಿನ 20 ವರ್ಷಗಳಲ್ಲಿ ಎಚ್‌125 ದರ್ಜೆಯ 500 ಲಘು ಹೆಲಿಕಾಪ್ಟರ್ ಸಿದ್ಧವಾಗಲಿವೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ತಿಳಿಸಿದರು. ಮಂಗಳವಾರ ಕೋಲಾರ ಜಿಲ್ಲೆಯ ವೇಮಗಲ್ ಕೈಗಾರಿಕಾ ಪ್ರದೇಶದಲ್ಲಿನ ಕಂಪನಿ ಆವರಣದಲ್ಲಿ ನಡೆದ ನೂತನ ಘಟಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಈ ಘಟಕವು ರಾಜ್ಯದಲ್ಲಿ ಕಾರ್ಯಾರಂಭ ಮಾಡುತ್ತಿರುವುದು ಐತಿಹಾಸಿಕ ಸಾಧನೆಯಾಗಿ ಚಿರಸ್ಥಾಯಿಯಾಗಿ ಉಳಿಯಲಿದೆ ಎಂದ ಅವರು, ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುಯಲ್ ಮ್ಯಾಕ್ರೋನ್ ಅವರು ಮಹಾರಾಷ್ಟ್ರದ ಲೋಕಭವನದಿಂದ ವರ್ಚುಯಲ್ ಮೂಲಕ ಈ ಘಟಕವನ್ನು ಉದ್ಘಾಟಿಸಿರುವುದು ಹೆಮ್ಮೆಯ ವಿಷಯ ಎಂದರು.

ಶಾಲಾ ಮಾನ್ಯತಾ ನವೀಕರಣಕ್ಕೆ ಅವಧಿ ವಿಸ್ತರಣೆ: ಮಧು

ವಿದ್ಯಾರ್ಥಿಗಳಿಗೆ ಸಮಸ್ಯೆ ಇಲ್ಲ

ಬೆಂಗಳೂರು: ರಾಜ್ಯದಲ್ಲಿ ಶಾಲೆಗಳ ಮಾನ್ಯತೆ ನವೀಕರಣಕ್ಕೆ ಸಂಬಂಧಿಸಿದಂತೆ ಮಾನ್ಯತೆ ನವೀಕರಣ ಆಗದ ಶಾಲೆಗಳಲ್ಲಿ



ವ್ಯಾಸಂಗ ಮಾಡುತ್ತಿರುವ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಯಾವುದೇ ಸಮಸ್ಯೆಯಾಗುವುದಿಲ್ಲ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಸ್ಪಷ್ಟಪಡಿಸಿದರು.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಧ್ಯಮದವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಖಾಸಗಿ ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳ ಪ್ರಥಮ ಮಾನ್ಯತೆ ಹಾಗೂ ಮಾನ್ಯತಾ ನವೀಕರಣಕ್ಕೆ ಅರ್ಜಿ ಸಲ್ಲಿಸುವ ಅವಧಿಯನ್ನು ಮಾ. 31ರ ತನಕ ವಿಸ್ತರಣೆ ಆಗಿರುವುದರಿಂದ ಈ ಅವಧಿಯಲ್ಲಿ ಶಾಲೆಗೆ ಮಾನ್ಯತೆಯಿದೆ ಎಂದೇ ಭಾವಿಸಲಾಗುತ್ತದೆ ಎಂದು ತಿಳಿಸಿದರು.

ಮಾನ್ಯತೆ ನವೀಕರಣಕ್ಕೆ ಸಂಬಂಧಿಸಿದಂತೆ ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ನೇತೃತ್ವದ ಸದನ ಸಮಿತಿ ಅಧ್ಯಯನ ನಡೆಸುತ್ತಿದ್ದು, ಈ ಸಮಿತಿಯಿಂದ ಅಂತಿಮವಾಗಿ ಕೊಡುವ ವರದಿಯನ್ನು ನಾವು ಸ್ವೀಕರಿಸುತ್ತೇವೆ ಎಂದು ಮಾಹಿತಿ ನೀಡಿದರು. ರಾಜ್ಯದಲ್ಲಿ 12 ಸಾವಿರಕ್ಕೂ ಅಧಿಕ ಖಾಸಗಿ ಶಾಲೆಗಳಿದ್ದರೂ, ಸುಮಾರು 7 ಸಾವಿರ ಶಾಲೆಗಳು ಮಾತ್ರ ಅರ್ಜಿ ಸಲ್ಲಿಸಿವೆ. ಉಳಿದಂತೆ ಶಾಲೆಗಳು ಪುಟ್ಟಣ್ಣ ಸಮಿತಿಯ ವರದಿ ಸಲ್ಲಿಕೆಯಾದ ಬಳಿಕವೇ ನವೀಕರಣಕ್ಕೆ ಅರ್ಜಿ ಸಲ್ಲಿಸುದ ಉದ್ದೇಶ ಹೊಂದಿದೆ. ಇದೀಗ ಶಾಲೆಗಳ ಮಾನ್ಯತೆ ನವೀಕರಣಕ್ಕೆ ಅರ್ಜಿ ಸಲ್ಲಿಕೆ ಅವಧಿ ವಿಸ್ತರಿಸಿರುವುದರಿಂದ ಹಾಗೂ ಈ ವೇಳೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮುಕ್ತಾಯಗೊಳ್ಳುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಗೆ ಶಾಲಾ ಮಾನ್ಯತೆಯ ಸಮಸ್ಯೆ ಎದುರಾಗುವುದಿಲ್ಲ ಎಂದರು.

ಅಧಿಕಾರಿ ನೇಮಕ

ಪ್ರಶ್ನೆ ಪತ್ರಿಕೆ ಸೋರಿಕೆ ಮತ್ತು ತಪ್ಪು ಮಾಹಿತಿಯ ವಿರುದ್ಧ ಶಿಕ್ಷಣ ಇಲಾಖೆ ಕಟ್ಟುನಿಟ್ಟಿನ ನಿಗಾ ವಹಿಸಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಪ್ರಶ್ನೆಪತ್ರಿಕೆಯನ್ನು ಸೋರಿಕೆ ಮಾಡುವವರ ವಿರುದ್ಧ ಕೂಡಲೇ ಕಠಿಣ ಕ್ರಮ ಕೈಗೊಳ್ಳಲು ರಾಜ್ಯ ಮಟ್ಟದಲ್ಲಿ ನೋಡಲ್ ಅಧಿಕಾರಿಯೊಬ್ಬರನ್ನು ನೇಮಿಸುತ್ತಿದ್ದೇವೆ. ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿಯೂ ದೂರು ನೀಡಲು ಸೂಚಿಸಲಾಗಿದೆ ಎಂದು ಮಧು ಬಂಗಾರಪ್ಪ ತಿಳಿಸಿದರು.

> **ಪಿಯುಸಿ ಪೂರ್ವ ಸಿದ್ಧತಾ ಪರೀಕ್ಷೆಯಲ್ಲಿ ಅನುತ್ತೀರ್ಣಗೊಳ್ಳುವ ವಿದ್ಯಾರ್ಥಿಗಳ ಸಂಖ್ಯೆ ದೊಡ್ಡ ಪ್ರಮಾಣದಲ್ಲಿದೆ. ಪರೀಕ್ಷೆಯ ಭಯ ಹೋಗಲಾಡಿಸಲು ವಿದ್ಯಾರ್ಥಿಗಳಿಗೆ ಶಿಕ್ಷಕರ ನೇತೃತ್ವದಲ್ಲಿ ಸೂಕ್ತ ಮಾರ್ಗದರ್ಶನ ನೀಡಲು ಕ್ರಮ ಕೈಗೊಳ್ಳಲಾಗಿದೆ.**
> ■ **ಮಧು ಬಂಗಾರಪ್ಪ,** ಸಚಿವ

ಭೂಕಬಳಿಕೆಯಲ್ಲಿ ಸರಕಾರವೇ ಮುಂದು: ನಾರಾಯಣಸ್ವಾಮಿ

ಬೆಂಗಳೂರು: ಸರ್ಕಾರವು ಕಾನೂನು ಉಲ್ಲಂಘಿಸಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಕಚೇರಿ ನಿರ್ಮಾಣಕ್ಕೆ ಮುಂದಾಗಿದೆ. ಭೂಕಬಳಿಕೆಯಲ್ಲಿ ಸರಕಾರವೇ ನಿರತವಾಗಿದೆ ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದ್ದಾರೆ. ಇನ್ನೊಂದೆಡೆ ಛಲವಾದಿ ನಾರಾಯಣಸ್ವಾಮಿ ಅವರ ಈ ಆರೋಪಕ್ಕೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಿರುಗೇಟು ನೀಡಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಮಂಗಳವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿ, ಸರ್ಕಾರವು ಬಡವರಿಗೆ ಮನೆ ಕೊಡಬೇಕು, ಭೂರಹಿತರಿಗೆ ಭೂಮಿ ಕೊಡಬೇಕಿತ್ತು ಆದರೆ ಈ ಕೆಲಸವನ್ನು ಮಾಡುತ್ತಿಲ್ಲ. ತಾನೇ ಭೂಮಿ ಕಬಳಿಸುವ ಕೆಲಸ ಮಾಡುತ್ತಿದೆ ಎಂದು ದೂರಿದ್ದಾರೆ. ತಾಲೂಕು, ಜಿಲ್ಲೆ, ಮಂಡಲ, ಪಂಚಾಯಿತಿ ಹೀಗೆ ಎಲ್ಲಕಡೆ ನಿವೇಶನ ಪಡೆಯಲು ಅದಕ್ಕೆ ಅಧಿಕಾರ ಇಲ್ಲ. ಕಾನೂನು ಉಲ್ಲಂಘಿಸಿ ಅದು ಕಾಂಗ್ರೆಸ್ ಪಕ್ಷದ ಕಚೇರಿ ನಿರ್ಮಾಣಕ್ಕೆ ಲೀಸ್‌ಗೆ ಮುಧೋಳದಲ್ಲಿ ನಿವೇಶನ ಪಡೆಯಲು ಮುಂದಾಗಿತ್ತು. ಆದರೆ ಇಲಾಖೆಯು ಅದನ್ನು ತಿರಸ್ಕರಿಸಿತ್ತು ಎಂದು ಗಮನ ಸೆಳೆದರು.

ಡಿಕೆಶಿಯಿಂದ ಸಮರ್ಥನೆ

ಕಾಂಗ್ರೆಸ್ ಭವನಗಳಿಗೆ ಸರ್ಕಾರಿ ಜಮೀನು ಬಳಸಿಕೊಳ್ಳಲಾಗುತ್ತಿದೆ ಎಂಬ ಬಿಜೆಪಿ ನಾಯಕರ ಆರೋಪದ ಬಗ್ಗೆ ಪ್ರತಿಕ್ರಿಯಿಸಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಖಂಡಿತವಾಗಿ ನಾವು ಕಾಂಗ್ರೆಸ್ ಭವನಗಳಿಗೆ ಸರ್ಕಾರಿ ಜಾಗ ಬಳಸಿಕೊಳ್ಳುತ್ತಿದ್ದೇವೆ. ನಾವು ಮಹಾತ್ಮಾ ಗಾಂಧಿ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷತೆಯ ಶತಮಾನೋತ್ಸವ ಹಿನ್ನೆಲೆಯಲ್ಲಿ 100 ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಮುಂದಾಗಿದ್ದೇವೆ. ನಾವು 5–10 ಸಾವಿರ ಚದರ ಅಡಿಗಳಷ್ಟು ಜಾಗವನ್ನು ಮಂಜೂರು ಮಾಡುತ್ತಿದ್ದೇವೆ ಎಂದರು. ಬಿಜೆಪಿ ಆಡಳಿತ ಅವಧಿಯಲ್ಲಿ ಬೆಂಗಳೂರು ನಗರದಲ್ಲಿ 100ಕ್ಕೂ ಹೆಚ್ಚು ಕಡೆಗಳಲ್ಲಿ ವಿವಿಧ ಟ್ರಸ್ಟ್ ಗಳ ಹೆಸರಿನಲ್ಲಿ ಜಾಗ ಪಡೆದಿದ್ದಾರೆ. ಚಾಣಕ್ಯ ವಿವಿಗೆ ನೀಡಿರುವ ಜಾಗ ಪ್ರತಿ ಎಕರೆಗೆ 10 ಕೋಟಿ ರೂಪಾಯಿ ಬೆಲೆಬಾಳುತ್ತದೆ ಎಂದು ಪ್ರತಿಪಾದಿಸಿದರು.

ಹಿಂಡಲಗಾ ಜೈಲಿಗೆ ಡಿಜಿಪಿ ಭೇಟಿ

ಬೆಳಗಾವಿ: ರಾಜ್ಯದ ಕಾರಾಗೃಹ ಹಾಗೂ ಸುಧಾರಣಾ ಸೇವೆಗಳ ಇಲಾಖೆಯ ನೂತನ ಡಿಜಿಪಿ ಅಲೋಕ್ ಕುಮಾರ್ ಮಂಗಳವಾರ



ದಿಢೀರ್ ಬೆಳಗಾವಿಯ ಹಿಂಡಲಗಾ ಜೈಲಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ರಾಜ್ಯದ ಜೈಲುಗಳ ಅಕ್ರಮಗಳು ಹಾಗೂ ಕೈದಿಗಳಿಗೆ ರಾಜಾತಿಥ್ಯದ ವಿಚಾರವಾಗಿ ಹಾದಿ ಬೀದಿಯಲ್ಲಿ ಚರ್ಚೆಯಾಗುತ್ತಿದ್ದು, ಡಿಜಿಪಿ ಅಲೋಕ್ ಕುಮಾರ್ ಅವರು ಕಾರಾಗೃಹ ಇಲಾಖೆಯ ಡಿಜಿಪಿಯಾಗಿ ಕಾರ್ಯಭಾರ ವಹಿಸಿಕೊಂಡ ನಂತರ ಮೊದಲ ಬಾರಿಗೆ ಹಿಂಡಲಗಾ ಜೈಲಿಗೆ ಖುದ್ದು ಭೇಟಿ ನೀಡಿ ವಸ್ತುಸ್ಥಿತಿ ಪರಿಶೀಲಿಸಿದರು.

ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ರಾಜ್ಯದ ಕಾರಾಗೃಹ ಹಾಗೂ ಸುಧಾರಣಾ ಸೇವೆಗಳ ಇಲಾಖೆಯ ನೂತನ ಡಿಜಿಪಿಯಾಗಿ ಅಧಿಕಾರ ವಹಿಸಿಕೊಂಡ ನಂತರ ನಾನು ಮೊದಲ ಬಾರಿಗೆ ಬೆಳಗಾವಿಯ ಹಿಂಡಲಗಾ ಜೈಲಿಗೆ ಭೇಟಿ ಕೊಟ್ಟಿದ್ದೇನೆ. ಬೆಂಗಳೂರು ಪರಪ್ಪನ ಅಗ್ರಹಾರ ಬಿಟ್ಟರೆ ಬೆಳಗಾವಿ ಹಿಂಡಲಗಾ ಜೈಲಿನಲ್ಲಿ ದೊಡ್ಡ, ದೊಡ್ಡ ಆರೋಪಿಗಳು ಇಲ್ಲಿ ಇರುವುದರಿಂದ ಇಲ್ಲಿ ಹೆಚ್ಚು ಮಹತ್ವ ನೀಡಲಾಗುತ್ತಿದೆ ಎಂದರು.

ಹಿಂಡಲಗಾ ಜೈಲು ಹಳೆ ಕಟ್ಟಡವಾಗಿದ್ದರಿಂದ ಅನೇಕ ಸಮಸ್ಯೆಗಳು ಎದುರಾಗುತ್ತಿದೆ. ಈಚೆಗೆ ಹೊರಗಡೆಯಿಂದ ಜೈಲಿನೊಳಗೆ ಗಾಂಜಾ ಹಾಗೂ ಮೊಬೈಲ್ ಸೇರಿದಂತೆ ಸಿಮ್ ಕಾರ್ಡ್‌ಗಳನ್ನು ಎಸೆಯಲಾಗುತ್ತಿದೆ. ಈ ಜೈಲು ಮುಖ್ಯ ರಸ್ತೆಗೆ ಹೊಂದಿಕೊಂಡಿರುವುದರಿಂದ ಜೈಲಿನೊಳಗಿರುವ ಕೈದಿಗಳಿಗೆ ಎಲ್ಲ ವಸ್ತಗಳನ್ನು ಎಸೆಯಲಾಗುತ್ತಿದೆ. ಇಂತಹ ಕೃತ್ಯಗಳಿಗೆ ಕಡಿವಾಣ ಹಾಕಲು ಅಧಿಕಾರಿಗಳಿಗೆ ಮಾಹಿತಿ ತಿಳಿಸಲಾಗಿದೆ ಎಂದರು.

ಜಾಮರ್ ಅಳವಡಿಸಿದರೂ ನೆಟ್ ವರ್ಕ್: ಹಿಂಡಲಗಾ ಜೈಲಿನಲ್ಲಿ ಜಾಮರ್ ಅಳವಡಿಸಿದರೂ ಸಹ ಜೈಲಿನಲ್ಲಿ ಮೊಬೈಲ್ ನೆಟ್ ವರ್ಕ್ ಬರುತ್ತಿದೆ. ಇದರಿಂದ ಜೈಲಿನಲ್ಲಿರುವ ಕೈದಿಗಳಿಗೆ ಅನುಕೂಲಕರವಾಗುತ್ತಿದೆ. ಇದನ್ನು ತಡೆಗಟ್ಟಲು ಅಧಿಕಾರಿಗಳು ಸೂಚನೆ ನೀಡಿದ್ದೇನೆ. ಅಲ್ಲದೇ ಜೈಲಿನ ಅಕ್ರಮಗಳೆಲ್ಲವೂ ಬಂದ್ ಆಗಲೇಬೇಕು. ಅಕ್ರಮಗಳಿಗೆ ಕೈಜೋಡಿಸಿದರೆ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಜೈಲಿನ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಖಡಕ್ ಎಚ್ಚರಿಕೆ ಕೊಟ್ಟರು.

> **ಜೈಲಿನ ಸುತ್ತಮುತ್ತ ಸ್ವಚ್ಛತೆ ಕಾಪಾಡಬೇಕು. ಯಾವುದೇ ವಾಹನ ಬಂದರೂ ತಡೆದು ಪರಿಶೀಲಿಸಬೇಕು. ಆ ನಂತರವಷ್ಟೇ ಪ್ರವೇಶ ಕಲ್ಪಿಸಬೇಕು. ಜೈಲಿನಲ್ಲಿ ಮೊಬೈಲ್ ಬಳಸುತ್ತಿದ್ದರೆ ತಕ್ಷಣವೇ ಸಿಬ್ಬಂದಿ ವಶಕ್ಕೆ ಕೊಡಿ. ಕಳ್ಳಾಟ ಆಡಿದರೆ ಕಠಿಣ ಕ್ರಮ ಎದುರಿಸಲು ಸಜ್ಜಾಗಿ. ಇನ್ನು ಮುಂದೆ ಗಾಂಜಾ, ಬೀಡಿ, ಸಿಗರೇಟ್ ಸಿಗಲ್ಲ. ಎಲ್ಲಾ ಬಂದ್ ಆಗಬೇಕು.**
> ■ **ಅಲೋಕ್ ಕುಮಾರ್,** ಡಿಜಿಪಿ

ತಂತ್ರಜ್ಞಾನ ಬಲಪಡಿಸಲು ಫ್ರಾನ್ಸ್ ಸಚಿವ ಜತೆ ಚರ್ಚೆ

ಬೆಂಗಳೂರು: ತಂತ್ರಜ್ಞಾನ ಮತ್ತು ನಾವೀನ್ಯತೆಯಲ್ಲಿ ಫ್ರಾನ್ಸ್ ಜೊತೆಗಿನ ಸಹಕಾರ ಬಲಪಡಿಸಲು ಮಾಹಿತಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಮಂಗಳವಾರ ಬೆಂಗಳೂರಿನಲ್ಲಿ ಫ್ರಾನ್ಸ್‌ನ



ಕೃತಕ ಬುದ್ಧಿಮತ್ತೆ ಮತ್ತು ಡಿಜಿಟಲ್ ವ್ಯವಹಾರ ಸಚಿವೆ ಆ್ಯನ್ ಲಿ ಹೆನಾಫ್ ಅವರನ್ನು ಭೇಟಿಯಾಗಿ ಚರ್ಚಿಸಿದರು.

ನಾವೀನ್ಯತೆ, ಕೌಶಲ, ಕೃತಕ ಬುದ್ಧಿಮತ್ತೆ (ಎಐ), ವೈಮಾಂತರಿಕ್ಷ ಮತ್ತು ರಕ್ಷಣಾ ಉತ್ಪಾದನೆ, ನವೋದ್ಯಮ ಮತ್ತು ಡಿಜಿಟಲ್ ಆಡಳಿತದಲ್ಲಿ ಪರಸ್ಪರ ಸಹಯೋಗ ವಿಸ್ತರಿಸುವ ಬಗ್ಗೆ ಸಭೆಯಲ್ಲಿ ಸಮಾಲೋಚನೆ ನಡೆಸಲಾಯಿತು. ಫ್ರಾನ್ಸ್‌ನಲ್ಲಿ ಕುಶಲ ಎಂಜಿನಿಯರ್‌ಗಳು, ತಂತ್ರಜ್ಞಾನ ವೃತ್ತಿಪರರು ಹೆಚ್ಚುತ್ತಿರುವ ಅಗತ್ಯದ ವಿವರಗಳನ್ನು ಹಂಚಿಕೊಂಡ ಫ್ರಾನ್ಸ್ ನಿಯೋಗವು ಪ್ರವರ್ಧಮಾನಕ್ಕೆ ಬರುತ್ತಿರುವ ತಂತ್ರಜ್ಞಾನಗಳಲ್ಲಿ ರಾಜ್ಯದ ಜೊತೆಗೆ ಕೆಲಸ ಮಾಡಲು ತೀವ್ರ ಆಸಕ್ತಿ ವ್ಯಕ್ತಪಡಿಸಿತು.

ಭಾರತದಲ್ಲಿ ಸೇವೆ ಹಾಗೂ ವಹಿವಾಟು ವಿಸ್ತರಿಸಲು ಉದ್ದೇಶಿಸಿರುವ ಫ್ರಾನ್ಸ್ ಕಂಪನಿಗಳಿಗೆ ಬೆಂಗಳೂರು ಮಹಾದ್ವಾರ ಆಗಲಿದೆ. ಪ್ಯಾರಿಸ್ ಕೂಡ ನಮ್ಮ ನವೋದ್ಯಮಗಳ ಪಾಲಿಗೆ ಫ್ರಾನ್ಸ್ ಮತ್ತು ಯುರೋಪ ಒಕ್ಕೂಟದ ಮಾರುಕಟ್ಟೆ ಪ್ರವೇಶಿಸಲು ಮಹಾದ್ವಾರ ಆಗಲಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.


ಸಚಿವೆ ಆ್ಯನ್ ಲಿ ಹೆನಾಫ್ ಅವರು ಮಾತನಾಡಿ, ಡಿಜಿಟಲ್ ಜಗತ್ತಿನಲ್ಲಿ ಮಕ್ಕಳ ರಕ್ಷಣೆಗೆ ಆದ್ಯತೆ ಹಾಗೂ ಸುರಕ್ಷತೆ ಬಲಪಡಿಸುವುದು ಸದ್ಯದ ತುರ್ತು ಅಗತ್ಯವಾಗಿದೆ. ತಂತ್ರಜ್ಞಾನವು ಸಮಾಜಕ್ಕೆ ಪ್ರಯೋಜನ ನೀಡುತ್ತದೆ ಎಂಬುದನ್ನು ಖಚಿತಪಡಿಸಿ ಕೊಳ್ಳಲು ನಾವೀನ್ಯತೆ ವಿಶ್ವಾಸಾರ್ಹ ಮತ್ತು ಕೃತಕ ಜಾಣ್ಮೆ ಕ್ಷೇತ್ರಗಳಲ್ಲಿ ನಾವು ಕರ್ನಾಟಕದ ಜೊತೆ ಸಹಯೋಗದಿಂದ ಕೆಲಸ ಮಾಡುವ ಅವಕಾಶಗಳನ್ನು ಎದುರು ನೋಡುತ್ತಿದ್ದೇವೆ ಎಂದರು.

ರಾಜ್ಯದಲ್ಲಿ ಮಾದಕ ದ್ರವ್ಯ ಜಾಲಕ್ಕೆ ಕಡಿವಾಣ: ಗೃಹ ಸಚಿವ ಡಾ.ಜಿ.ಪರಮೇಶ್ವರ್

ಕರಾವಳಿಯಲ್ಲಿ ಶಾಂತಿ ಸುವ್ಯವಸ್ಥೆ ಉತ್ತಮ

ಮಂಗಳೂರು: ಮಂಗಳೂರು ಸೇರಿದಂತೆ ಕರಾವಳಿಯಲ್ಲಿ ಶಾಂತಿ ಸುವ್ಯವಸ್ಥೆ ನೆಲೆಯೂರಿದೆ ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ್ ಹೇಳಿದ್ದಾರೆ.

ಮಂಗಳೂರಿನಲ್ಲಿ ಮಂಗಳವಾರ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತ



ನಾಡಿ, ಡ್ರಗ್ಸ್ ಮಾಫಿಯಾಕ್ಕೆ ಕಡಿವಾಣ ಬಿದ್ದಿದೆ. ದ್ವೇಷ ಭಾವನೆಯಿಂದ ನಡೆಯುತ್ತಿದ್ದ ಕೊಲೆಯಂತಹ ಅಹಿತಕರ ಘಟನೆಗಳು ಕಡಿಮೆಯಾಗಿದ್ದು, ಜನತೆ ನೆಮ್ಮದಿಯಿಂದ ಬದುಕುವ ವಾತಾವರಣ ನಿರ್ಮಾಣವಾಗಿದೆ. ಕರಾವಳಿಯಲ್ಲಿ ಅಭಿವೃದ್ಧಿಗೆ ಪೂರಕ ವಾತಾವರಣ ನಿರ್ಮಾಣವಾಗಿದೆ ಎಂದರು.

ಈ ಹಿಂದೆ ಮಂಗಳೂರಿಗೆ ಬಂದಾಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಿಕೊಳ್ಳುವಂತೆ ಪೊಲೀಸ್ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿದ್ದೆ. ಪೊಲೀಸರು ಕೂಡ ಮುತುವರ್ಜಿ ವಹಿಸಿ ಸೂಕ್ತ ಕ್ರಮ ತೆಗೆದುಕೊಂಡಿದ್ದಾರೆ. ಇದರಿಂದಾಗಿ ಮಾದಕ ದ್ರವ್ಯ ಜಾಲಕ್ಕೆ ಕಡಿವಾಣ ಬಿದ್ದಿದೆ. ಡ್ರಗ್ಸ್ ಪೆಡ್ಲರ್‌ಗಳ ಸಂಖ್ಯೆಯೂ ಕಡಿಮೆಯಾಗಿದೆ. ಶಾಲಾ ಕಾಲೇಜುಗಳಲ್ಲಿ ಮಕ್ಕಳಲ್ಲಿ ಡ್ರಗ್ಸ್ ವಿರುದ್ಧ ಜಾಗೃತಿ ಕಾರ್ಯ ನಿರಂತರ ಮುಂದುವರಿಯಬೇಕು. ಸ್ಥಳೀಯ ಪೊಲೀಸರು 15 ದಿನಕ್ಕೊಮ್ಮೆ ಶಾಲೆಗಳಿಗೆ ಭೇಟಿ ನೀಡಿ ಪರಿಶೀಲಿಸಬೇಕು. 4 ತಿಂಗಳಿಗೊಮ್ಮೆ ಶಾಲಾ ಆಡಳಿತ ಮಂಡಳಿಯೊಂದಿಗೆ ಸಭೆ ನಡೆಸುವಂತೆ ಸೂಚಿಸಿದ್ದೇನೆ ಎಂದರು.

ಚಿಕ್ಕಮಗಳೂರಿನಲ್ಲಿ ಮನೆಯೊಂದರ ಮೇಲೆ ಕಲ್ಲು ತೂರಾಟ ಘಟನೆಗೆ ಸಂಬಂಧಿಸಿ ಪೊಲೀಸರು ಸೂಕ್ತ ಕ್ರಮ ಕೈಗೊಳ್ಳಲಿದ್ದಾರೆ ಎಂದು ಗೃಹ ಸಚಿವರು ತಿಳಿಸಿದರು.

ಪೊಲೀಸರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ. ಘಟನೆಯ ನಿಟ್ಟಿನಲ್ಲಿ ಕಾನೂನಾತ್ಮಕ ಕ್ರಮಕ್ಕೆ ಸೂಚಿಸಲಾಗಿದೆ. ಆ ಪ್ರಕಾರ ಪೊಲೀಸರು ಪಿಸಿಆರ್ ಆ್ಯಕ್ಟ್ ಅಡಿ ಪ್ರಕರಣ ದಾಖಲಿಸಿ ಕ್ರಮ ತೆಗೆದುಕೊಳ್ಳುತ್ತಾರೆ. ಮನೆಯ ಹೆಣ್ಣು ಮಗಳು ದಲಿತ ಸಮುದಾಯಕ್ಕೆ ಸೇರಿದವರು ಎಂದು ಗೊತ್ತಾಗಿದೆ ಎಂದರು.

ಎಚ್.ಸಿ ಮಹದೇವಪ್ಪ ದಲಿತ ಸಿ.ಎಂ ಹೇಳಿಕೆ ವಿಚಾರಕ್ಕೆ ಸಂಬಂಧಿಸಿದ ಪ್ರಶ್ನೆಗೆ ಉತ್ತರಿಸಿದ ಅವರು, ಸಚಿವ ಮಹದೇವಪ್ಪ ಅವರ ಅಭಿಪ್ರಾಯ ಹೇಳಿದ್ದಾರೆ. ಅವರು ಸಿಎಂ ಆಗಲು ಸಮರ್ಥರಿದ್ದಾರೆ. ಯಾವುದೇ ಜವಾಬ್ದಾರಿ ಕೊಟ್ಟರೂ ನಿಭಾಯಿಸುವ ಸಾಮರ್ಥ್ಯ ಅವರಲ್ಲಿದೆ. ಅದಕ್ಕೆ ಅವರು ಆ ರೀತಿ ಹೇಳಿದ್ದಾರೆ. ಜನಸಮುದಾಯದಲ್ಲಿ ಕೆಲವರು ಅವರವರ ಲೀಡರ್ ಅಂತಾ ಆರಿಸಿಕೊಳ್ಳುತ್ತಾರೆ. ಜನ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಅದನ್ನು ತಪ್ಪೆಂದು ನಾವು ಹೇಳುವುದಕ್ಕೆ ಆಗುವುದಿಲ್ಲ. ಏನೇ ಆದರೂ ಕೊನೆಗೆ ಕಾಂಗ್ರೆಸ್ ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳುತ್ತದೆ. ಈಗ ದಲಿತ ಸಿಎಂ ಚರ್ಚೆಯೇ ಇಲ್ಲ ಎಂದರು. ಪ್ರಿಯಾಂಕ ಖರ್ಗೆ ಅವರು ಆರ್‌ಎಸ್‌ಎಸ್ ಕುರಿತು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎಂದರು.


ಅಂತಿಮ ವರದಿ ಎಸ್‌ಐಟಿ ನೀಡಿಲ್ಲ

ಧರ್ಮಸ್ಥಳ ಎಸ್‌ಐಟಿ ಪ್ರಕರಣದ ಕುರಿತ ಪ್ರಶ್ನೆಗೆ, ಅಂತಿಮ ವರದಿಯನ್ನು ಎಸ್‌ಐಟಿ ನೀಡಿ ಅದರ ವರದಿಯನ್ನು ಸರಕಾರಕ್ಕೆ ಸಲ್ಲಿಸುವ ಕೆಲಸ ಆಗಿಲ್ಲ. ಮಧ್ಯಂತರ ವರದಿ ಸಲ್ಲಿಕೆಯಾಗಿದ್ದು, ಅದನ್ನು ಸದನದಲ್ಲಿ ಬೇರೆಡೆಗಳಲ್ಲಿ ತಿಳಿಸಿದ್ದೇನೆ. ಆದರೆ ಅಂತಿಮ ವರದಿ ಬಂದ ಬಳಿಕ ಅದನ್ನು ಸರಕಾರ, ಕ್ಯಾಬಿನೆಟ್ ಮುಂದಿರಿಸಿ ಬಹಿರಂಗಗೊಳಿಸುವ ಕೆಲಸ ಮಾಡಲಿದ್ದೇವೆ. ಅದನ್ನು ಕೊಡುವವರೆಗೆ ನಾವು ಯಾವುದೇ ತೀರ್ಮಾನಕ್ಕೂ ಬರಲು ಸಾಧ್ಯವಿಲ್ಲ ಎಂದರು.

ಮಹಿಳೆ, ಅಪ್ರಾಪ್ತರ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣ

ಸಂತ್ರಸ್ತರ ಗೌಪ್ಯತೆ ಕಾಪಾಡಲು ಆದೇಶ

ಬೆಂಗಳೂರು: ಮಹಿಳೆಯರು, ಅಪ್ರಾಪ್ತರ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ ಪ್ರಕರಣಗಳ ತನಿಖೆ ಹಾಗೂ



ನ್ಯಾಯಾಂಗ ಪ್ರಕ್ರಿಯೆಯಲ್ಲಿ ಸಂತ್ರಸ್ತರ ಗೌಪ್ಯತೆಯನ್ನು ಕಾಪಾಡುವ ನಿಟ್ಟಿನಲ್ಲಿ ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎ. ಸಲೀಂ ಅವರು ಮಹತ್ವದ ಆದೇಶ ಹೊರಡಿಸಿದ್ದಾರೆ. ಸುಪ್ರೀಂ ನೀಡಿದ ನಿರ್ದೇಶನಗಳ ಅನ್ವಯ ಈ ಹೊಸ ಮಾರ್ಗಸೂಚಿಗಳನ್ನು ಜಾರಿಗೆ ತರಲಾಗಿದೆ.

ಹೆಸರು ಬಹಿರಂಗಪಡಿಸುವಂತಿಲ್ಲ: ಲೈಂಗಿಕ ದೌರ್ಜನ್ಯಕ್ಕೊಳಗಾದ ಮಹಿಳೆಯರು ಅಥವಾ ಅಪ್ರಾಪ್ತರ ಹೆಸರು, ವಿಳಾಸ ಸೇರಿದಂತೆ ಅವರ ಗುರುತನ್ನು ಪತ್ತೆಹಚ್ಚಲು ಸಹಕಾರಿಯಾಗುವ ಯಾವುದೇ ವಿವರಗಳನ್ನು ಸಾರ್ವಜನಿಕವಾಗಿ ಅಥವಾ ಅಧಿಕೃತ ದಾಖಲೆಗಳಲ್ಲಿ ಬಹಿರಂಗಪಡಿಸುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಈ ನಿಯಮವು ತನಿಖೆಯ ಎಲ್ಲಾ ಹಂತಗಳಿಗೂ ಅನ್ವಯವಾಗಲಿದೆ.

ಸಾಂಕೇತಿಕ ಹೆಸರಿನ ಬಳಕೆ: ದೂರು ಸ್ವೀಕರಿಸಿದ ಕೂಡಲೇ ಠಾಣಾಧಿಕಾರಿ ಅಥವಾ ತನಿಖಾಧಿಕಾರಿಯು ಸಂತ್ರಸ್ತೆಯ ಮೂಲ ಹೆಸರಿನ ಬದಲಿಗೆ ಒಂದು ಸಾಂಕೇತಿಕ ಹೆಸರನ್ನು ಬಳಸಬೇಕು. ಪ್ರಥಮ ಮಾಹಿತಿ ವರದಿ (ಎಫ್‌ಐಆರ್) ನಲ್ಲಿಯೂ ಈ ಬದಲಾದ ಹೆಸರನ್ನೇ ನಮೂದಿಸಬೇಕು ಮತ್ತು ಅದರ ಪಕ್ಕದಲ್ಲೇ ಹೆಸರು ಬದಲಿಸಲಾಗಿದೆ ಎಂದು ಸ್ಪಷ್ಟವಾಗಿ ಉಲ್ಲೇಖಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಮುಚ್ಚಿದ ಲಕೋಟೆಯಲ್ಲಿ ದಾಖಲೆ ಸಲ್ಲಿಕೆ: ನ್ಯಾಯಾಲಯಕ್ಕೆ ಸಲ್ಲಿಸುವ ದೂರು ಪ್ರತಿ, ಸ್ಥಳ ಮಹಜರು ವರದಿ ಹಾಗೂ ದೋಷಾರೋಪ ಪಟ್ಟಿ ಸೇರಿದಂತೆ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಪ್ರಮುಖ ದಾಖಲೆಗಳನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವುದನ್ನು ಇನ್ನು ಮುಂದೆ ಕಡ್ಡಾಯಗೊಳಿಸಲಾಗಿದೆ.

ಸಾಮಾಜಿಕ ಸುರಕ್ಷತೆಗೆ ಆದ್ಯತೆ

ಅನೇಕ ಪ್ರಕರಣಗಳಲ್ಲಿ ಸಂತ್ರಸ್ತರ ಗುರುತು ಬಹಿರಂಗವಾಗುವುದರಿಂದ ಅವರು ಸಮಾಜದಲ್ಲಿ ಮುಜುಗುರ ಮತ್ತು ಮಾನಸಿಕ ಕಿರುಕುಳ ಅನುಭವಿಸುತ್ತಿದ್ದರು. ಇದು ಅವರ ನ್ಯಾಯಾಂಗ ಹೋರಾಟದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತಿತ್ತು. ಸುಪ್ರೀಂಕೋರ್ಟ್‌ನ ಆಶಯದಂತೆ ಸಂತ್ರಸ್ತರಿಗೆ ಸಂಪೂರ್ಣ ಸುರಕ್ಷತೆ ಮತ್ತು ಘನತೆ ಒದಗಿಸಲು ಪೊಲೀಸ್ ಇಲಾಖೆ ಈ ಕಠಿಣ ಕ್ರಮ ಕೈಗೊಂಡಿದೆ. ತನಿಖಾಧಿಕಾರಿಗಳು ಈ ನಿಯಮ ಪಾಲನೆಯಲ್ಲಿ ಯಾವುದೇ ನಿರ್ಲಕ್ಷ್ಯ ವಹಿಸುವಂತಿಲ್ಲ ಎಂದು ಡಿಜಿಪಿ ಎಚ್ಚರಿಸಿದ್ದಾರೆ.

ಸಂಪಾದಕೀಯ

ಎಐನಿಂದ ಲಾಭಗಳೇ ಹೆಚ್ಚು

ಭಾರತ ಎಐ ಇಂಪ್ಯಾಕ್ಟ್ ಎಕ್ಸ್‌ಪೋ 2026 ಕೇವಲ ತಂತ್ರಜ್ಞಾನ ಪ್ರದರ್ಶನವಲ್ಲ; ಅದು ಭಾರತದ ಭವಿಷ್ಯದ ಆರ್ಥಿಕ, ಸಾಮಾಜಿಕ ಹಾಗೂ ಜ್ಞಾನಾಧಾರಿತ ದಿಕ್ಕಿನ ಘೋಷಣೆ. ಎಐ ಕ್ಷೇತ್ರದಲ್ಲಿ ಭಾರತದ ಉತ್ಸಾಹ, ಸಾಮರ್ಥ್ಯ ಹಾಗೂ ಜಾಗತಿಕ ಆಶಯಗಳು ಒಂದೇ ವೇದಿಕೆಯಲ್ಲಿ ಪ್ರತಿಫಲಿಸಿದ ಕ್ಷಣ ಇದು.

ಪ್ರಧಾನಿ ನರೇಂದ್ರ ಮೋದಿ ಉಲ್ಲೇಖಿಸಿದ ಆಲೋಚನೆ, ಹೊಸತನ ಮತ್ತು ಉದ್ದೇಶಗಳ ಸಂಗಮ ಎಂಬ ಮಾತುಗಳಲ್ಲಿ ಗಂಭೀರ ಅರ್ಥವಿದೆ. ಎಐ ಈಗ ಕೇವಲ ಉದ್ಯಮಗಳ ಸಾಧನವಲ್ಲ, ಅದು ಆಡಳಿತ, ಆರೋಗ್ಯ, ಕೃಷಿ, ಶಿಕ್ಷಣ ಸೇರಿದಂತೆ ಎಲ್ಲ ಕ್ಷೇತ್ರಗಳ ರೂಪಾಂತರದ ಕೇಂದ್ರಬಿಂದು. ಸ್ಟಾರ್ಟ್‌ಅಪ್‌ಗಳ ಸಕ್ರಿಯ ಹಾಜರಾತಿ ಭಾರತದಲ್ಲಿ ಆವಿಷ್ಕಾರಶೀಲತೆಯ ಜೀವಂತತೆಯನ್ನು ತೋರಿಸುತ್ತದೆ. ಆದರೆ, ಎಐ ವಿಸ್ತರಣೆ ಕೇವಲ ಅವಕಾಶಗಳ ಕಥೆಯಲ್ಲ. ಡೇಟಾ ಸುರಕ್ಷತೆ, ಉದ್ಯೋಗ ಬದಲಾವಣೆ, ಅಲ್ಗೋರಿದಮ್ ಪಾರದರ್ಶಕತೆ, ನೈತಿಕ ಬಳಕೆ ಇವುಗಳನ್ನು ನಿರ್ಲಕ್ಷಿಸುವುದಕ್ಕೆ ಅವಕಾಶವಿಲ್ಲ. ತಂತ್ರಜ್ಞಾನ ವೇಗವಾಗಿ



ಬೆಳೆಯುವಾಗ ನೀತಿ, ನಿಯಂತ್ರಣ ಹಾಗೂ ಜವಾಬ್ದಾರಿ ಅದಕ್ಕಿಂತ ವೇಗವಾಗಿ ಸಾಗಬೇಕು.

ಎಐ ಅನ್ನು ಜವಾಬ್ದಾರಿಯುತ ಮತ್ತು ಎಲ್ಲರನ್ನು ಒಳಗೊಂಡಂತೆ ಬಳಸುವ ಭಾರತದ ಬದ್ಧತೆ ಪ್ರಾಯೋಗಿಕ ಕ್ರಮಗಳಲ್ಲಿ ಕಾಣಬೇಕು. ನಗರಗಳಷ್ಟೇ ಅಲ್ಲ, ಗ್ರಾಮೀಣ ಭಾರತಕ್ಕೂ ಎಐ ಪ್ರಯೋಜನ ತಲುಪಬೇಕು. ತಂತ್ರಜ್ಞಾನವು ಅಸಮಾನತೆಯನ್ನು ಕಡಿಮೆ ಮಾಡಬೇಕೇ ಹೊರತು ಹೆಚ್ಚಿಸಬಾರದು. ಈ ಎಕ್ಸ್‌ಪೋ ನೀಡಿದ ಸಂದೇಶ ಸ್ಪಷ್ಟವಾಗಿದೆ. ಭಾರತ ಎಐ ಯಲ್ಲಿ ಕೇವಲ ಪಾಲ್ಗೊಳ್ಳುವ ದೇಶವಲ್ಲ. ಅದು ದಿಕ್ಕು ತೋರಿಸಲು ಸಿದ್ಧವಾಗಿರುವ ರಾಷ್ಟ್ರ. ಈಗ ಅಗತ್ಯವಿರುವುದು ದೃಢ ನೀತಿ, ನೈತಿಕ ಮಾರ್ಗದರ್ಶನ ಮತ್ತು ಮಾನವಕೇಂದ್ರಿತ ದೃಷ್ಟಿಕೋನ. ಎಐ ನಿಜವಾದ ಅರ್ಥದಲ್ಲಿ ಮಾನವ ಪ್ರಗತಿಗೆ ದಾರಿಯಾಗಲಿದೆ.

ಈ ಪ್ರದರ್ಶನದಲ್ಲಿ ಕೆಲವೊಂದು ಅಡೆತಡೆಗಳು, ಗೊಂದಲಗಳು ಆಗಿವೆ. ಆದರೆ, ದೊಡ್ಡ ಪ್ರದರ್ಶನಗಳಲ್ಲಿ ಅಥವಾ ಕಾರ್ಯಕ್ರಮಗಳಲ್ಲಿ ಇಂಥ ಕೆಲವು ಘಟನೆಗಳು ನಡೆಯುವುದು ಸಾಮಾನ್ಯ. ಆದರೂ, ಇದಕ್ಕೆ ಪ್ರತಿಯಾಗಿ ಕೇಂದ್ರ ಐಟಿ ಸಚಿವ ಅಶ್ವಿನಿ ವೈಷ್ಣವ್ ಅವರು ಕ್ಷಮೆ ಕೇಳಿದ್ದಾರೆ. ಹೀಗಾಗಿ, ಇಂಥ ಸಂಗತಿಗಳನ್ನು ದೊಡ್ಡದು ಮಾಡುವುದರಲ್ಲಿ ಅಗತ್ಯವೇನಿಲ್ಲ. ಇಲ್ಲಿ ಒಂದು ವಿಷಯವನ್ನು ನೆನಪಿನಲ್ಲಿ ಇಡಬೇಕು. ಎಐ ವಿಚಾರದಲ್ಲಿ ಪಾಶ್ಚಿಮಾತ್ಯ ದೇಶಗಳು ಅಥವಾ ಅಮೆರಿಕ ಮತ್ತು ಚೀನಾದಂಥ ದೇಶಗಳನ್ನು ನಾವು ಗುರುತಿಸುತ್ತೇವೆ. ಭಾರತವನ್ನು ಗುರುತಿಸುವುದು ಯಾವಾಗ ಎಂಬ ಪ್ರಶ್ನೆಗೆ ಇಲ್ಲಿ ಉತ್ತರ ಸಿಕ್ಕಿದೆ. ಸರ್ವಂನಂಥ ಎಐ ಕಂಪನಿಗಳು ತಮ್ಮ ಸಾಧನಗಳು ಮತ್ತು ಸಾಧನೆಗಳನ್ನು ಇಲ್ಲಿ ಪ್ರದರ್ಶಿಸಿವೆ. ಅಷ್ಟೇ ಅಲ್ಲ, ಭಾರತದಲ್ಲೇ ತಯಾರಾದ ಹಲವಾರು ವೇದಿಕೆಗಳಿಗೆ ಇಲ್ಲಿ ಜಾಗತಿಕ ಸ್ಪರ್ಷ ಸಿಕ್ಕಿದೆ. ಈ ವಿಚಾರದಲ್ಲಿ ನಾವೇನು ಕಡಿಮೆ ಇಲ್ಲ ಎಂದು ಭಾರತೀಯರೂ ಜಗತ್ತಿಗೆ ತೋರಿದ್ದಾರೆ. ಮುಂದಿನ ದಿನಗಳಲ್ಲಿ ಎಐ ಅಪಾಯವನ್ನು ಮುಂದಿಟ್ಟುಕೊಂಡೇ, ಹೆಜ್ಜೆ ಇಡಬೇಕು. ನಮ್ಮ ಸುಧಾರಣೆಗಾಗಿ ಹೇಗೆ ಇದನ್ನು ಬಳಕೆ ಮಾಡಿಕೊಳ್ಳಬೇಕು ಎಂಬ ಅರಿವೂ ಮೂಡಬೇಕು. ಅದನ್ನು ಕೇಂದ್ರ ಸರ್ಕಾರ ಮಾಡುತ್ತಿದ್ದು, ಮುಂದಿನ ದಿನಗಳಲ್ಲೂ ಮಾಡಿಕೊಂಡು ಹೋಗಲಿದೆ ಎಂಬುದು ಸ್ಪಷ್ಟ.

ಹೃದಯ ಹೊಕ್ಕ ಮೂರು ವಸ್ತುಗಳು

ಸಂಚಿಂತ್ಯ ಸಂಚಿತ್ಯ ಜಗತ್ ಸಮಸ್ತಂ
ತ್ರಯಃ ಪದಾರ್ಥಾಃ ಹೃದಯಂ ಪ್ರವಿಷ್ಟಾಃ।
ಇಕ್ಷೋರ್ವಿಕಾರಾ ಮತಯಃ ಕವಿನಾಂ
ಮುಗ್ಧಾಂಗನಾಪಾಂಗತರಂಗಿತಾನಿ॥ –ಭೋಜಪ್ರಬಂಧ

ಪ್ರಪಂಚವನ್ನೆಲ್ಲ ಕುರಿತು ಪರ್ಯಾಲೋಚಿಸಿದಾಗ, ಮೂರು ವಸ್ತುಗಳು ಮಾತ್ರ ನನ್ನ ಹೃದಯವನ್ನು ಹೊಕ್ಕವು. ಒಂದು ಕಬ್ಬಿನ ಪರಿಣಾಮ (ಬೆಲ್ಲ, ಸಕ್ಕರೆ.... ಇತ್ಯಾದಿ), ಎರಡು ಕವಿಗಳ ಬುದ್ಧಿವೈಭವ, ಮೂರು ಯುವತಿಯರ ಕಡೆಗಣ್ಣಿನ ನೋಟದ ಚಾಪಲ್ಯ –ಎಂಬುದು ಶ್ಲೋಕಾರ್ಥ.

ಭಗವಂತನ ಸೃಷ್ಟಿ ಅತ್ಯಂತ ವಿಚಿತ್ರ. ಸೋಜಿಗ ಕೂಡ. ಎಷ್ಟೊಂದು ಬಗೆಯ ಸೃಷ್ಟಿ, ಒಂದರಂತೆ ಇನ್ನೊಂದಿಲ್ಲ. ಒಂದೊಂದೂ ಕೂಡ ವಿಶಿಷ್ಟ. ಎಷ್ಟೊಂದು ಬಗೆಯ ಚಿತ್ರ-ವಿಚಿತ್ರಗಳು ಮನುಷ್ಯನನ್ನು ಆಕರ್ಷಿಸುವುದಿಲ್ಲ! ಎಲ್ಲವೂ ಬೇಕೆನಿಸುತ್ತದೆ. ಎಲ್ಲವನ್ನೂ ಬಾಚಿಕೊಳ್ಳಬೇಕು ಅನ್ನಿಸುತ್ತದೆ.



ಇದು ಸಾಮಾನ್ಯ ಜನರ ಅನಿಸಿಕೆ. ಆದರೆ ಪ್ರಕೃತ ಶ್ಲೋಕ ರಚಿಸಿದ ಕವಿಯು ಪ್ರಪಂಚವನ್ನೆಲ್ಲ ಅವಲೋಕಿಸಿ, ಪರ್ಯಾಲೋಚಿಸಿದಾಗ ಮೂರು ವಸ್ತುಗಳು ಅಥವಾ ವಿಷಯಗಳು ಅವನ ಹೃದಯವನ್ನು ಹೊಕ್ಕವು ಎನ್ನುತ್ತಾನೆ. ಅವನ ಹೃದಯವನ್ನು ಪ್ರವೇಶಿಸಿ ನೆಲೆನಿಂತ ಆ ಮೂರು ವಿಷಯಗಳೆಂದರೆ ಕಬ್ಬಿನ ಪರಿಣಾಮಗಳು, ಕವಿಗಳ ಬುದ್ಧಿ ವೈಭವ ಹಾಗೂ ಯುವತಿಯರ ಕಡೆಗಣ್ಣ ನೋಟ. ಅಂದರೆ ಇಷ್ಟು ವಿಶಾಲವಾದ ಪ್ರಪಂಚದಲ್ಲಿ ಸೂಕ್ಷ್ಮಮತಿಯಾದ ಕವಿಯ ಅಂತರಂಗ ಪ್ರವೇಶಿಸಿದ್ದು ಈ ಮೂರೇ ವಸ್ತುಗಳೆಂದಾದರೆ ಅವುಗಳಲ್ಲಿ ಅಂತಹ ವಿಶೇಷತೆಯಿರಬೇಕಷ್ಟೆ!

ಮೊದಲನೆಯದು ಇಕ್ಷುವಿಕಾರ. ಇಕ್ಷು ಎಂದರೆ ಕಬ್ಬು. ಇದರ ವಿಕಾರವೆಂದರೆ ಇದರಿಂದ ಉಂಟಾಗಬಲ್ಲ ಪದಾರ್ಥಗಳಾದ ಸಕ್ಕರೆ, ಬೆಲ್ಲ, ಕಬ್ಬಿನ ರಸವನ್ನು ಕುದಿಸಿದಾಗ ಮಾದಕದ್ರವ್ಯಕ್ಕೆ ಪೂರಕವಾದ ಗೊಬ್ಬರದ ಅಂಶಗಳು.... ಇತ್ಯಾದಿ. ಕಬ್ಬಿನ ರಸಕ್ಕಾಗಲಿ, ಸಿಹಿಗೆ ಮೂಲ ಕಾರಣವಾದ ಸಕ್ಕರೆ, ಬೆಲ್ಲ... ಇತ್ಯಾದಿಗಳಿಗಾಗಲಿ ಮನಸೋಲದವರಿಲ್ಲ. ಇದು ಕಬ್ಬಿನದೇ ವಿಶೇಷ. ಇವುಗಳಿಗಾಗಿ ಪ್ರಪಂಚವೇ ಆಸೆಪಡುತ್ತದೆ. ಇದು ಕವಿಯ ಮೇಲೆ ಎಷ್ಟು ಪ್ರಭಾವ ಬೀರುತ್ತದೆ ಎಂಬುದನ್ನು ಇದು ತನ್ನ ಹೃದಯವನ್ನು ಹೊಕ್ಕಿತು ಎಂಬ ಮಾತೇ ತಿಳಿಸಿಕೊಡುತ್ತದೆ.

ಎರಡನೆಯದು ಕವಿಗಳ ಬುದ್ಧಿವೈಭವ. ಕವಿಯೆಂದರೆ ಕ್ರಾಂತದರ್ಶಿ. ರವಿ ಕಾಣದ್ದನ್ನೂ ಕಾಣುವ ಅಂತಃದೃಷ್ಟಿಯುಳ್ಳವ. ಕವಿ ಸಾಮಾನ್ಯರಂತೆ ಇದ್ದರೂ ಅವನು ನೋಡುವುದು ಸಾಮಾನ್ಯರಾರೂ ಕಾಣದ್ದನ್ನು, ಕಲ್ಪಿಸಿಕೊಳ್ಳುವುದು ಸಾಮಾನ್ಯರಿಗೆ ಎಟುಕದ್ದನ್ನು. ತನ್ನ ಅಭಿರುಚಿಗೆ ತಕ್ಕಂತೆ ಲೋಕವನ್ನೇ ಬದಲಾಯಿಸುವವ ಕವಿ. ಕವಿ ಕಲ್ಪನೆ ಅನ್ಯಾದೃಶವಾದದ್ದು. ಆದ್ದರಿಂದಲೇ ಕವಿ ವಿಶಿಷ್ಟ. ಕಾವ್ಯ ಕಲ್ಪನೆ ಮೈದಾಳಿರುವ ಭೋಜನಿಗೆ ಕವಿವೈಭವ ಮನಸ್ಸನ್ನು ಸೂರೆಗೊಂಡರೆ ಆಶ್ಚರ್ಯವೇನಲ್ಲ. ಕಥನದಲ್ಲಿ ಉತ್ಪ್ರೇಕ್ಷೆಯೂ ಇಲ್ಲ.

ಮೂರನೆಯದೇ ಸುಂದರಿಯರ, ಯುವತಿಯರ ಕಡೆಗಣ್ಣಿನ ನೋಟದ ಚಾಪಲ್ಯ. ಸುಂದರಿಯರ ಕುಡಿನೋಟಕ್ಕೆ ಮನಸೋತು ಎಂತೆಂಥಹ ಮಹಾತ್ಮರು ಅವರ ಹಿಂದೆ ಬಿದ್ದಿದ್ದಾರೆ. ಮಾದಕ ನೋಟ ಪಾಶವಿಲ್ಲದೇ ಬಂಧಿಸಬಲ್ಲದು. ಸೂಜಿಗಲ್ಲಿನಂತೆ ಎಂಥವರನ್ನೂ ಸೆಳೆಯಬಲ್ಲದು. ಮಾದಕ ನೋಟದ ಸುಳಿಯಲ್ಲಿ ಸಿಕ್ಕರೆ ಹೊರಬರುವುದೇ ಕಷ್ಟ.ಈ ಕಾರಣಕ್ಕಾಗಿಯೇ ಈ ಮೂರು ಭೋಜನ ಅಂತರಂಗವನ್ನು ಹೊಕ್ಕವು. ಇವುಗಳನ್ನು ಮೀರಿದ್ದು ಬೇರೊಂದಿಲ್ಲ ಎಂಬ ಅನುಭವವನ್ನು ನೀಡಿದವು. ಈ ರೀತಿ ಹೇಳುವ ಮೂಲಕ ಈ ಮೂರರ ಮಹಿಮೆಯನ್ನು ಕವಿಯು ಅನಾವರಣಗೊಳಿಸಿದ್ದಾನೆ.

ಸ್ವರ್ಗ ಮತ್ತು ನರಕಲೋಕಗಳ ಕಲ್ಪನೆಯ ಹಿಂದಿನ ವಿಚಾರಗಳು



ಸ್ವರ್ಗ-ನರಕಗಳ ಮೇಲಿನ ನಂಬಿಕೆ ಕೇವಲ ಸನಾತನಧರ್ಮದಲ್ಲಿಯಷ್ಟೇ ಅಲ್ಲ, ಬದಲಿಗೆ ಒಂದೇ ಗ್ರಂಥ, ಒಂದೇ ದೇವ ಎಂಬ ಕಟ್ಟುಪಾಡಿನ ರಿಲಿಜನ್‌ಗಳಲ್ಲೂ ಕೂಡ ಸ್ವರ್ಗ-ನರಕಗಳ ಕಲ್ಪನೆಯಿದೆ. ಸನಾತನ ಧರ್ಮದಲ್ಲಿ ಸ್ವರ್ಗ- ನರಕ ಕಲ್ಪನೆಯು ಬಹಳ ವಿಸ್ತೃತವಾದ ಹರಹುಳ್ಳದ್ದು. ಇದಕ್ಕೆ ಕರ್ಮಸಿದ್ಧಾಂತವೇ ಆಧಾರ. ಮಾಡಿದ ಪ್ರತಿಯೊಂದು ಕರ್ಮವೂ ಅದಕ್ಕೆ ತಕ್ಕುದಾದ ಫಲವೊಂದನ್ನು ಸೃಜಿಸುತ್ತದೆ ಮತ್ತು ಅದನ್ನು ಆಯಾ ಕರ್ಮದ ಕರ್ತೃವೇ ಅನುಭವಿಸಬೇಕಾಗುತ್ತದೆ ಎಂಬ ದೃಢನಂಬಿಕೆ ಇಲ್ಲಿದೆ. ತಾನು ಮಾಡಿದ ಕರ್ಮಕ್ಕನುಗುಣವಾಗಿಯೇ ಇಲ್ಲಿ ಮುಂದಿನ ಜನ್ಮವನ್ನೂ ತಿಳಿಸಲಾಗಿದೆ. ಕರ್ಮಗಳು ನಮಗೆಲ್ಲ ಗೊತ್ತಿರುವಂತೆ ಮೂರು ವಿಧವಾಗಿವೆ. ಸಂಚಿತಕರ್ಮ, ಪ್ರಾರಬ್ಧಕರ್ಮ ಮತ್ತು ಆಗಾಮಿಕರ್ಮ ಎಂಬುದಾಗಿ. ಸನಾತನ ಧರ್ಮವು ಈ ಜನ್ಮಪರಂಪರೆಯನ್ನು ಅನಾದಿಯೆಂದು ಅಂಗೀಕರಿಸಿದೆ. ಇದಕ್ಕೊಂದು ಆರಂಭವೆಂಬುದಿಲ್ಲ. ಆದರೆ ಮೋಕ್ಷವೆಂಬಲ್ಲಿ ಕೊನೆಯಾಗುತ್ತದೆ ಎಂಬುದು ಇದರ ಮುಖ್ಯಸಿದ್ಧಾಂತ.

ಅನಾದಿ ಪರಂಪರೆಯಾಗಿರುವುದರಿಂದ, ಹಿಂದಿನ ಎಲ್ಲ ಜನ್ಮಗಳಲ್ಲಿ ಒಟ್ಟಾದ ಮತ್ತು ಇದುವರೆಗೆ ಅನುಭವಿಸದೆ ಉಳಿದಿರುವ ಒಟ್ಟು ಕರ್ಮವನ್ನು ಸಂಚಿತಕರ್ಮವೆಂಬುದಾಗಿ ಗುರುತಿಸಲಾಗುತ್ತದೆ. ಆ ಕರ್ಮರಾಶಿಯಿಂದ ಸಜಾತೀಯವಾದ ಮತ್ತು ಉತ್ಕಟವಾದ ಕರ್ಮಗಳು ಒಂದುಗೂಡಿ ಒಂದು ನಿರ್ದಿಷ್ಟ ಜನ್ಮಪ್ರಾಪ್ತಿಗೆ ಕಾರಣವಾಗುತ್ತವೆ. ಅವು ಒಂದು ಶರೀರದ ಆಯುವಿಗೆ ಸೀಮಿತವಾಗಿರುತ್ತವೆ. ಇವು ಕೇವಲ ಅನುಭೋಗದಿಂದ ನಾಶವಾಗುವ ಕರ್ಮವಾಗಿವೆ ಮತ್ತು ಪ್ರಕೃತ ಶರೀರದ ಆರಂಭಕ್ಕೆ ಕಾರಣವಾಗಿರುವುದಷ್ಟೇ ಅಲ್ಲ, ಕರ್ಮಫಲವನ್ನು ಕೊಡಲು ಉದ್ಯುಕ್ತವಾಗಿರುವುದರಿಂದ ಅದನ್ನು ಪ್ರಾರಬ್ಧ ಕರ್ಮ ಎಂದು ಕರೆಯುತ್ತಾರೆ.

ಸಂಚಿತದಿಂದ ಆಯ್ದ ಪ್ರಾರಬ್ಧಕರ್ಮವನ್ನು ಈ ಶರೀರದಲ್ಲಿ ಅನುಭವಿಸುವ ಸಮಯದಲ್ಲಿಯೂ ನಾವು ಹಲವು ಕರ್ಮಗಳನ್ನು ಮಾಡುತ್ತಿರುತ್ತೇವೆ. ಒಂದು ಕ್ಷಣವೂ ಜೀವನು ನಿಷ್ಕ್ರಿಯನಾಗಿರಲು ಸಾಧ್ಯವಿಲ್ಲ. ಶುಭವೋ, ಅಶುಭವೋ ಯಾವುದಾದರೊಂದು ಕ್ರಿಯೆಯಲ್ಲಿ ತೊಡಗಿಯೇ ಇರುತ್ತಾನೆ. ಹೀಗೆ ಪ್ರಾರಬ್ಧದ ಅನುಭವದ ಅವಸ್ಥೆಯಲ್ಲಿ ಮತ್ತೆ ಹೊಸದಾಗಿ ಮಾಡಲ್ಪಡುವ ಕರ್ಮಗಳನ್ನು ಆಗಾಮಿ ಕರ್ಮವೆಂಬುದಾಗಿ ಕರೆಯಲಾಗುತ್ತದೆ. ಇದು ಹೋಗಿ ಮತ್ತೆ ಸಂಚಿತವನ್ನೇ ಸೇರಿಕೊಳ್ಳುತ್ತದೆ.

ಕರ್ಮದ ಫಲವನ್ನು ಯೋಗಶಾಸ್ತ್ರವು ಮೂರುವಿಧವಾಗಿ ವಿಭಜಿಸಿದೆ. ಅವೆಂದರೆ, ಶರೀರ (ಜಾತಿ), ಆಯುಸ್ಸು, ಭೋಗ ಎಂಬುದಾಗಿ. ಅರ್ಥಾತ್ ಆಯಾ ಜೀವನು ಕರ್ಮಕ್ಕನುಗುಣವಾಗಿ ಆತನ ಮುಂದಿನ ಜನ್ಮ, ಆತನ ಜೀವಿತಾವಧಿ ಮತ್ತು ಯಾವೆಲ್ಲ ರೀತಿಯ ಭೋಗವನ್ನು ಆತ ಅನುಭವಿಸಲಿಕ್ಕಿದೆ ಎಂಬುದು ನಿಶ್ಚಿತವಾಗುತ್ತದೆ. ಹೀಗೆ ಕರ್ಮಸಿದ್ಧಾಂತದ ಪ್ರಕಾರ ಪುನರ್ಜನ್ಮವೆಂಬುದಿದೆ ಮತ್ತು ಕರ್ಮವೇ ಈ ಜನ್ಮಪರಂಪರೆಗೆ ನಿರ್ಣಾಯಕವಾಗಿದೆ. ಈ ಕರ್ಮಗಳು ಮತ್ತೆ ಶುಭ, ಅಶುಭ ಮತ್ತು ಮಿಶ್ರವೆಂಬುದಾಗಿ ಮೂರು ವಿಧವಾಗಿವೆ. ಶುಭಕರ್ಮವು ಪುಣ್ಯಕರ್ಮವೆಂಬುದಾಗಿಯೂ, ಅಶುಭಕರ್ಮವು ಪಾಪಕರ್ಮವೆಂಬುದಾಗಿಯೂ, ಮಿಶ್ರವೆಂದರೆ ಪುಣ್ಯ-ಪಾಪಗಳ ಮಿಶ್ರಣವೆಂಬುದಾಗಿಯೂ ಲೋಕದಲ್ಲಿ ಪ್ರಸಿದ್ಧವಾಗಿದೆ.

ಯೋಗಶಾಸ್ತ್ರದಲ್ಲಿ ಇವನ್ನೇ ನಾಲ್ಕು ವಿಧವಾಗಿ ವಿಭಾಗಿಸಲಾಗಿದೆ. ಶುಕ್ಲ, ಕೃಷ್ಣ, ಶುಕ್ಲಕೃಷ್ಣ, ಅಶುಕ್ಲಾಕೃಷ್ಣ ಎಂಬುದಾಗಿ. ಅಶುಕ್ಲಾಕೃಷ್ಣವೆಂದರೆ ಅದು ಶುಭವೂ ಅಲ್ಲ, ಅಶುಭವೂ ಅಲ್ಲ, ಅವೆರಡರ ಮಿಶ್ರಣವೂ ಅಲ್ಲದ ಇನ್ನೊಂದು ಬಗೆ. ಅದು ಯೋಗಿಗಳಿಗೆ ದೊರಕುವಂಥದ್ದು ಮತ್ತು ಕೈವಲ್ಯಕ್ಕೆ ಅಬಾಧಕ ಮತ್ತು ಸಾಧಕವಾದಂಥದ್ದು. ಉಪನಿಷತ್ತು ಶುಭಕರ್ಮಗಳನ್ನು ಮಾಡಿದವರನ್ನು ರಮಣೀಯಚರಣರು ಎಂಬುದಾಗಿಯೂ, ಪಾಪಕರ್ಮಿಗಳನ್ನು ಕಪೂಯಚರಣರು ಎಂಬುದಾಗಿಯೂ ಕರೆಯುತ್ತದೆ. ಚರಣಶಬ್ದಕ್ಕೆ ಕರ್ಮವೆಂದರ್ಥ. ಅವೆರಡರ ಫಲವನ್ನೂ ಅದು ತಿಳಿಸಿದೆ. ಶುಭಕರ್ಮವನ್ನು ಮಾಡಿದವರು ಒಳ್ಳೆಯ ಯೋನಿಗಳನ್ನು, ಪಾಪಕರ್ಮವನ್ನು ಮಾಡಿದವರು ಕಪೂಯ (ನಿಕೃಷ್ಟ) ಯೋನಿಗಳನ್ನು ಹೊಂದುತ್ತಾರೆ ಎಂಬುದಾಗಿ. ಈ ಕರ್ಮಗಳು ಮತ್ತೆ ಕಾಯಿಕ, ವಾಚಿಕ ಮತ್ತು ಮಾನಸಿಕ ಎಂಬುದಾಗಿ ಮೂರು ವಿಧವಾಗಿವೆ. ದೇಹದಿಂದ ಮಾಡಲ್ಪಟ್ಟ ಕರ್ಮಗಳು ಕಾಯಿಕಕರ್ಮಗಳು, ಮನಸ್ಸಿನಿಂದ ಮಾಡಿದ ಶುಭಾಶುಭ ಚಿಂತನಾತ್ಮಕವಾದ ಕರ್ಮಗಳು ಮಾನಸಕರ್ಮಗಳು, ಮಾತಿನಿಂದ ಮಾಡಿದ ಕರ್ಮಗಳು ವಾಚಿಕಕರ್ಮಗಳೆಂಬುದು ಅವುಗಳ ವಿವರಣೆ. ಈ ಮೂರೂ ಕೂಡ ಕರ್ಮದ ಮಾಧ್ಯಮಗಳೇ ಆಗಿವೆ. ಹಾಗಾಗಿ ಕಾಯಿಕಪುಣ್ಯಕರ್ಮ, ಕಾಯಿಕ ಪಾಪಕರ್ಮ, ಕಾಯಿಕಮಿಶ್ರಕರ್ಮ, ಮಾನಸಿಕಪುಣ್ಯಕರ್ಮ, ಮಾನಸಿಕಪಾಪಕರ್ಮ, ಮಾನಸಿಕಮಿಶ್ರಕರ್ಮ, ವಾಚಿಕಪುಣ್ಯಕರ್ಮ, ವಾಚಿಕಪಾಪಕರ್ಮ, ವಾಚಿಕಮಿಶ್ರಕರ್ಮವೆಂಬುದಾಗಿ ಒಂಭತ್ತಾಗಿ ವಿಭಾಗಿಸಿ ತಿಳಿಸಿಕೊಳ್ಳಬಹುದು. ಈ ಎಲ್ಲ ವಿಧದ ಕರ್ಮಗಳೂ ಅದಕ್ಕೆ ತಕ್ಕುದಾದ ಫಲವನ್ನು ಕೊಡುತ್ತವೆ. ಪ್ರಾಯಃ ಆಯಾ ಮಾಧ್ಯಮದಿಂದ ಮಾಡಲ್ಪಟ್ಟ ಕರ್ಮಗಳು ಅದೇ ಮಾಧ್ಯಮದಲ್ಲಿಯೇ ಅನುಭವಿಸಬೇಕಾಗುತ್ತದೆ.



ಈ ಕರ್ಮಗಳು ಮತ್ತೆ ತೀವ್ರ, ಮಂದ ಮತ್ತು ಮಧ್ಯಮಕರ್ಮಗಳು ಎಂಬುದಾಗಿ ಮೂರು ವಿಧ. ಇವನ್ನು ಈ ಹಿಂದಿನ ಒಂಬತ್ತು ವಿಧದ ಕರ್ಮಗಳಿಗೆ ಅನ್ವಯಿಸಿಕೊಂಡರೆ ಇಪ್ಪತ್ತೇಳು ವಿಧದ ಕರ್ಮಗಳಾಗುತ್ತವೆ. ಯಾವುದು ತೀವ್ರಕರ್ಮವೋ ಅದು ಬೇಗ ಫಲಿಸುತ್ತದೆ. ಉಳಿದವು ಫಲದಾನಕ್ಕಾಗಿ ಪ್ರತೀಕ್ಷೆಯಲ್ಲಿರುತ್ತವೆ. ಒಟ್ಟಿನಲ್ಲಿ ಈ ಎಲ್ಲ ಕರ್ಮಗಳೂ ತಮಗೆ ತಕ್ಕುದಾದ ಫಲವನ್ನು ಕೊಡುತ್ತವೆ ಎಂಬುದಂತೂ ನಿಶ್ಚಿತ. ಈ ಕರ್ಮಗಳು ನಾಶವಾಗಲು ಇರುವ ದಾರಿ ಎರಡೇ ಎರಡು. ಒಂದೋ ಆಯಾ ಕರ್ಮಗಳ ಫಲವನ್ನು ಅನುಭವಿಸಿದಾಗ ಅವು ನಾಶವಾಗುತ್ತವೆ. ಆದರೆ ಅನಂತಕಾಲದಿಂದ ಅನಂತಕ್ಷಣಗಳಲ್ಲಿ ನಾವು ಮಾಡಿದ ಇಂಥ ಅನಂತಕರ್ಮಗಳು ಇರುವುದರಿಂದ ಅನುಭವ ಮಾತ್ರದಿಂದ ಎಲ್ಲ ಕರ್ಮಗಳನ್ನು ಅನುಭವಿಸಿ ಮುಗಿಸುವುದಕ್ಕೆ ಸಾಧ್ಯವಿಲ್ಲ. ಕಾಯವ್ಯೂಹವೆಂಬ ಒಂದು ಸಿದ್ಧಿಯನ್ನು ಶಾಸ್ತ್ರವು ತಿಳಿಸುತ್ತದೆಯಾದರೂ ಅದು ಯೋಗಿಗಳಿಗೆ ಮಾತ್ರ ಸಾಧ್ಯವಾದುದು.

ಕಾಯವ್ಯೂಹವೆಂದರೆ, ಒಬ್ಬ ಯೋಗಿಯು ತನ್ನ ಉಳಿದ ಎಲ್ಲ ಕರ್ಮಗಳನ್ನು ಆತ ತಿಳಿದುಕೊಳ್ಳಬಲ್ಲ. ಅವಶಿಷ್ಟವಾದ ಕರ್ಮಗಳೆಷ್ಟು ಮತ್ತು ಅವುಗಳಿಗೆ ತಕ್ಕುದಾದ ಶರೀರಗಳು ಯಾವುದು ಎಂಬುದನ್ನು ತಿಳಿದು ಆತ ಒಟ್ಟಿಗೆ ಆ ಎಲ್ಲ ಶರೀರಗಳನ್ನು ನಿರ್ಮಿಸಿಕೊಂಡು ಎಲ್ಲ ಶರೀರಗಳಲ್ಲಿಯೂ ಒಮ್ಮೆಲೇ ಪ್ರವೇಶಿಸಿ, ಎಲ್ಲ ಕರ್ಮಗಳನ್ನು ಒಟ್ಟಿಗೆ ಅನುಭವಿಸುತ್ತಾನೆ ಎಂಬ ಉಲ್ಲೇಖ ಶಾಸ್ತ್ರಗಳಲ್ಲಿ ಸಿಗುತ್ತದೆ. ಆದರೆ ಅದು ಅಂಥ ಸಿದ್ಧಿಯನ್ನು ಪಡೆದುಕೊಂಡ ಯೋಗಿಶ್ರೇಷ್ಠನಿಗೆ ಮಾತ್ರ ಸಾಧ್ಯ. ಉಳಿದವರು ಅನುಭವಿಸಿಯೇ ನಾಶಮಾಡಿಕೊಳ್ಳಬೇಕು. ಇದಕ್ಕೆ ಹೊರತಾದ ಇನ್ನೊಂದು ಸಾಧನವೆಂದರೆ ಆತ್ಮಸಾಕ್ಷಾತ್ಕಾರ. ಆತ್ಮಜ್ಞಾನವುಂಟಾದಾಗ ಪ್ರಾರಬ್ಧದ ಹೊರತಾದ ಎಲ್ಲ ಕರ್ಮಗಳೂ ನಿಶ್ಶೇಷವಾಗಿ ನಾಶವಾಗುತ್ತವೆ.

ಕರ್ಮಕ್ಕನುಗುಣವಾಗಿ ಶರೀರದ ಪ್ರಾಪ್ತಿಯಾಗುತ್ತದೆ ಎಂಬ ವಿಷಯದಲ್ಲಿ 'ಯೋನಿಮನ್ಯೇ ಪ್ರಪದ್ಯಂತೇ ಶರೀರತ್ವಾಯ ದೇಹಿನಃ। ಸ್ಥಾಣುಮನ್ಯೇಧಿನುಸಂಯಂತಿ ಯಥಾಕರ್ಮ ಯಥಾಶ್ರುತಮ್॥' ಎಂಬ ಕಠೋಪನಿಷತ್ತಿನ ಮಂತ್ರ, 'ರಮಣೀಯಚರಣಾಃ ರಮಣೀಯಾಂ ಯೋನಿಮಾಪದ್ಯೇರನ್' ಮೊದಲಾದ ಉಪನಿಷದ್ವಾಕ್ಯಗಳು ಇಲ್ಲಿ ಪ್ರಮಾಣ. ಭಗವದ್ಗೀತೆಯು ಕೂಡ 'ವಾಸಾಂಸಿ ಜೀರ್ಣಾನಿ ಯಥಾ ವಿಹಾಯ...' ಮುಂತಾದ ಶ್ಲೋಕಗಳಿಂದ ಇಂಥ ಪುನರ್ಜನ್ಮವನ್ನೇ ತಿಳಿಸುತ್ತದೆ. ಈ ಮೂಲಕ ಶ್ರುತಿ-ಸ್ಮೃತಿಗಳು ನಮ್ಮ ಇಂದಿನ ಈ ಸ್ಥಿತಿಗೆ ಹಿಂದಿನ ಕರ್ಮಗಳು ಕಾರಣವೆಂಬುದಾಗಿಯೂ, ನಮ್ಮ ಮುಂದಿನ ಸ್ಥಿತಿಗೆ ನಾವು ಈಗ ಮಾಡುತ್ತಿರುವ ಕರ್ಮಗಳೂ ಕಾರಣವೆಂಬುದಾಗಿಯೂ ತಿಳಿಸುತ್ತವೆ. ಒಂದು ವೃಕ್ಷದಿಂದ ಹಿಡಿದು, ಇರುವೆ, ಸೊಳ್ಳೆ, ಬ್ಯಾಕ್ಟೀರಿಯಾವರೆಗೆ ಜೀವಿಗಳಿದ್ದಾವೆ. ಅವರೆಲ್ಲ ತಮ್ಮ ತಮ್ಮ ಕರ್ಮದ ಅನುಭೋಗಕ್ಕಾಗಿಯೇ ಆಯಾ ಶರೀರವನ್ನು ಹೊಂದಿವೆ. ಅವೆಲ್ಲ ಕರ್ಮದ ಫಲದ ಅನುಭವಕ್ಕಾಗಿ ಮಾತ್ರ ದೊರಕಿದ ಶರೀರಗಳಾಗಿವೆ. ಮನುಷ್ಯಶರೀರವು ಮಿಶ್ರಕರ್ಮದ ಫಲವಾಗಿದೆ. ಅರ್ಥಾತ್ ಪಾಪ-ಪುಣ್ಯಗಳ ಮಿಶ್ರಣದಿಂದ ದೊರೆತದ್ದಾಗಿದೆ. ಹಾಗಾಗಿ ಇಲ್ಲಿ ದುಃಖವನ್ನೂ ಅನುಭವಿಸಬೇಕಾಗುತ್ತದೆ ಮತ್ತು ಸ್ವಲ್ಪಮಟ್ಟಿಗೆ ವಿಷಯಸುಖವೂ ಪ್ರಾಪ್ತವಾಗುತ್ತದೆ.

ಇಡೀ ಬ್ರಹ್ಮಾಂಡದಲ್ಲಿ ಹದಿನಾಲ್ಕು ಭುವನಗಳಿವೆ ಎಂಬುದಾಗಿ ತಿಳಿಸಿ, ಮನುಷ್ಯಲೋಕವು ಮಧ್ಯದಲ್ಲಿದೆ ಎಂಬುದಾಗಿ ಶಾಸ್ತ್ರಗಳು ತಿಳಿಸುತ್ತವೆ. ಈ ಮನುಷ್ಯಶರೀರದಿಂದ ಆರಂಭಿಸಿ ಮೇಲಿನ ಎಲ್ಲ ಶರೀರಗಳೂ ಪುಣ್ಯಾಧಿಕ್ಯದಿಂದ ದೊರೆಯುವಂಥವು. ಮೇಲೆ ಮೇಲೆ ಹೋದಂತೆ ದೇವತಾಶರೀರಗಳಿವೆ. ಅವುಗಳು ಸ್ವರ್ಗವೆಂಬ ಮೇಲಿನ ಲೋಕದಲ್ಲಿ ತಮ್ಮ ಪುಣ್ಯಕರ್ಮದ ಫಲವನ್ನು ಅನುಭವಿಸಿ ಮತ್ತೆ ಕೆಳಗಿನ ಲೋಕಗಳಲ್ಲಿ ಜನ್ಮವನ್ನು ಪ್ರಾಪ್ತಿಗೊಳಿಸಿಕೊಳ್ಳುತ್ತವೆ. ಒಟ್ಟಿನಲ್ಲಿ ಯಾರೂ ಯಾವ ಲೋಕದಲ್ಲಿಯೂ ಶಾಶ್ವತರಲ್ಲ. ಇದು ಮೇಲಿಂದ ಕೆಳಗೆ ಮತ್ತು ಕೆಳಗಿನಿಂದ ಮೇಲಕ್ಕೆ ಸಂಚರಿಸುತ್ತಿರುವ ಒಂದು ಚಕ್ರವಷ್ಟೇ. ಇಲ್ಲಿ ಎಲ್ಲರಿಗೂ ಸಂಚಾರವಿದೆ. ಜ್ಞಾನಿಮಾತ್ರವೇ ಈ ಸಂಸಾರಚಕ್ರದಿಂದ ಪಾರಾಗಲು ಸಾಧ್ಯವೆಂಬುದು ಸನಾತನಧರ್ಮದ ಸಿದ್ಧಾಂತವಾಗಿದೆ.

ಇಲ್ಲಿ ಒಂದು ಜಿಜ್ಞಾಸೆಯೆಂದರೆ, ವೈಜ್ಞಾನಿಕವಾಗಿ ಈ ಬ್ರಹ್ಮಾಂಡದಲ್ಲಿ ಮೇಲೂ ಇಲ್ಲ ಮತ್ತು ಕೆಳಗೂ ಇಲ್ಲವೆಂಬುದು ಸಾಬೀತಾಗಿದೆ. ಹೀಗಿರುವಾಗ ಸ್ವರ್ಗಲೋಕ ಮತ್ತು ನರಕಲೋಕಗಳು ಯಾಕೆ ಕ್ರಮವಾಗಿ ಮೇಲೆ ಮತ್ತು ಕೆಳಗಿವೆ ಎಂಬುದಾಗಿ ನಿರೂಪಲ್ಪಟ್ಟಿವೆ? ಏನಿದರ ಸ್ವಾರಸ್ಯ ಎಂಬ ಪ್ರಶ್ನೆ ಉಂಟಾಗುತ್ತದೆ. ಆದರೆ ಕರ್ಮಸಿದ್ಧಾಂತದಲ್ಲಿ ಇದಕ್ಕೆ ತುಂಬ ಯುಕ್ತಿಯುಕ್ತವಾದ ಉತ್ತರವಿದೆ. ಯಾಕೆಂದರೆ ಇವೆಲ್ಲವೂ ತ್ರಿಗುಣಗಳ ಆಧಾರದಲ್ಲಿಯೇ ನಿಶ್ಚಿತಗೊಂಡಂಥವು. ಹಾಗಾಗಿ ತ್ರಿಗುಣಗಳ ಸ್ವಭಾವವನ್ನು ಅರಿತಾಗ, ಸ್ವರ್ಗ ಮೇಲೆ ಮತ್ತು ನರಕ ಕೆಳಗೆ ಯಾಕೆ ಎಂಬುದು ಅರ್ಥವಾಗುತ್ತದೆ. ಈ ವಿಷಯವನ್ನು ಮುಂದಿನ ಲೇಖನದಲ್ಲಿ ನೋಡೋಣ.

ನಮ್ಮ ಕಂಟೆಂಟ್‌ಗಳಿಗೆ ನಾವೇ ಕ್ರಿಯೇಟರ್ ಆಗೋಣ

ಡಾ.ರವೀಶ.ಎನ್.ಎಸ್

ಭಾರತದ ಸನಾತನ ಸಂಸ್ಕೃತಿ ಎಂದರೆ ಕೇವಲ ಧಾರ್ಮಿಕ ಆಚರಣೆಗಳ ಸಂಕಲನವಲ್ಲ. ಅದು ದಾರ್ಶನಿಕರು ನೀಡಿರುವ ಸಮಗ್ರ ತತ್ತ್ವಶಾಸ್ತ್ರ. 'ಸನಾತನ' ಎಂದರೆ ಶಾಶ್ವತ. ಕಾಲ ಬದಲಾಗಿದರೂ ಸತ್ಯ, ಧರ್ಮ, ಕರುಣೆ, ಸಹಿಷ್ಣುತೆ ಮತ್ತು ಜ್ಞಾನ ಎಂಬ ಮೌಲ್ಯಗಳು ಬದಲಾಗುವುದಿಲ್ಲ. ವೇದ, ಉಪನಿಷತ್ತುಗಳು, ರಾಮಾಯಣ-ಮಹಾಭಾರತ, ಪುರಾಣಗಳು, ವಚನ ಸಾಹಿತ್ಯ, ದಾಸರ ಕೀರ್ತನೆಗಳು-ಇವೆಲ್ಲವೂ ಮಾನವ ಜೀವನವನ್ನು ಉನ್ನತಗೊಳಿಸುವ ಜ್ಞಾನಸಂಪತ್ತು. ದೇವಸ್ಥಾನಗಳು ಕಲೆ, ಸಂಗೀತ, ನೃತ್ಯ, ವಾಸ್ತುಶಿಲ್ಪ ಮತ್ತು ಶೈಕ್ಷಣಿಕ ಕೇಂದ್ರಗಳು. ಪ್ರಕೃತಿಯೊಂದಿಗಿನ ಸಾಮರಸ್ಯ, ಕುಟುಂಬ ಮೌಲ್ಯಗಳ ಮಹತ್ವ ಮತ್ತು ಆತ್ಮೋನ್ನತಿಯ ದಾರಿಯನ್ನು ತೋರಿಸುವುದು ಸನಾತನ ಸಂಸ್ಕೃತಿಯ ವೈಶಿಷ್ಟ್ಯ. ಇದು ಭೂತಕಾಲದ ಅವಶೇಷವಲ್ಲ. ಅದು ಇಂದಿಗೂ ಉಸಿರಾಡುತ್ತಿರುವ ಜೀವಂತ ಪರಂಪರೆ.



ಈ ಪರಂಪರೆಯಲ್ಲೇ ಕೇಸರಿ ಅಥವಾ ಕಿತ್ತಳೆ ಬಣ್ಣಕ್ಕೆ ಅಪಾರ ಮಹತ್ವವಿದೆ. ಕೇಸರಿ ತ್ಯಾಗದ ಸಂಕೇತ, ಜ್ಞಾನೋದಯದ ಸಂಕೇತ, ಆತ್ಮಶುದ್ಧಿಯ ಸಂಕೇತ. ಅಗ್ನಿಯ ಜ್ವಾಲೆಯ ಬಣ್ಣವೂ ಇದೇ. ಉದಯಕಾಲದ ಸೂರ್ಯನ ಕಿತ್ತಳೆ ಕಿರಣಗಳು ಹೊಸ ಆರಂಭ, ಚೈತನ್ಯ ಮತ್ತು ಆಶೆಯನ್ನು ಸೂಚಿಸುತ್ತವೆ. ಇದೇ ಮನೋಭಾವ 'ಕಿತ್ತಳೆ ಆರ್ಥಿಕತೆ'ಯ ತತ್ತ್ವದ ಮೂಲವಾಗಿದೆ. ಕಲೆ, ವಿನ್ಯಾಸ, ಬೌದ್ಧಿಕ ಆಸ್ತಿ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ಆರ್ಥಿಕ ಮೌಲ್ಯ ಸೃಷ್ಟಿಸುವ ವ್ಯವಸ್ಥೆಯೇ ಈ ಕಿತ್ತಳೆ ಆರ್ಥಿಕತೆ (Orange Economy).

ಜ್ಞಾನವು ಮೌಲ್ಯವನ್ನು ಸೃಷ್ಟಿಸಿದಾಗ ಅದು ಆರ್ಥಿಕ ಸಂಪತ್ತಾಗುತ್ತದೆ. ಈ ಹಿನ್ನೆಲೆಯಲ್ಲಿ ಅನಿಮೇಷನ್, ಗೇಮಿಂಗ್, ಡಿಜಿಟಲ್ ಮೀಡಿಯಾ ಮತ್ತು ಕೃತಕ ಬುದ್ಧಿಮತ್ತೆಯೊಂದಿಗೆ ಭಾರತ ತನ್ನ ಸಾಂಸ್ಕೃತಿಕ ಶಕ್ತಿಯನ್ನು ಜಗತ್ತಿಗೆ ತಲುಪಿಸುವ ಯುಗ ಪ್ರಾರಂಭವಾಗಿದೆ. 'ಕಿತ್ತಳೆ ಆರ್ಥಿಕತೆ" ಎಂಬುದು ಸೃಜನಶೀಲ ಆರ್ಥಿಕತೆ (Creative Economy)ಗೆ ಇರುವ ಮತ್ತೊಂದು ಹೆಸರು. ಜಾನ್ ಹೌಕಿನ್ಸ್ ಈ ಪದವನ್ನು ಜಾಗತಿಕ ಮಟ್ಟದಲ್ಲಿ ಜನಪ್ರಿಯಗೊಳಿಸಿದರು. ಕಿತ್ತಳೆ ಆರ್ಥಿಕತೆ ಎಂದರೆ ಜ್ಞಾನಾಧಾರಿತ ಸೃಜನಾತ್ಮಕ ವಲಯಗಳು. ಸಿನಿಮಾ, ಸಂಗೀತ, ಅನಿಮೇಷನ್, ಗೇಮಿಂಗ್, ಡಿಜಿಟಲ್ ಮೀಡಿಯಾ, ಫ್ಯಾಷನ್, ಡಿಸೈನ್, ಸಾಹಿತ್ಯ ಇತ್ಯಾದಿಗಳ ಆರ್ಥಿಕ ವ್ಯವಸ್ಥೆ. ಇಲ್ಲಿ ಮೌಲ್ಯ ಸೃಷ್ಟಿ ಭೌತಿಕ ಉತ್ಪನ್ನಗಳಿಂದಲ್ಲ. ವಿಷಯ (content) ಮತ್ತು ಸೃಜನಶೀಲತೆ (Creativity)ಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ನಡೆದ WAVES 2025 ಶೃಂಗಸಭೆಯ ನಾಯಕತ್ವ ವಹಿಸಿದ್ದ ಭಾರತವು ತನ್ನ ಸೃಜನಾತ್ಮಕ ಸಾಮರ್ಥ್ಯವನ್ನು ಜಗತ್ತಿಗೆ ಪರಿಚಯಿಸಿದೆ.

ವಿವಿಧ ಅಧ್ಯಯನಗಳ ಪ್ರಕಾರ ಭಾರತದ Creator Economy ವೇಗವಾಗಿ ಬೆಳೆಯುತ್ತಿದೆ. ಇದು ಕೇವಲ ಮನರಂಜನಾ ಕ್ಷೇತ್ರವಲ್ಲ. ಉದ್ಯೋಗ ಸೃಷ್ಟಿ, ಸ್ಟಾರ್ಟ್‌ಅಪ್ ವೃದ್ಧಿ ಮತ್ತು ವಿದೇಶಿ ವಿನಿಮಯ ಆದಾಯವನ್ನು ಹೆಚ್ಚಿಸುವ ಪ್ರಮುಖ ವಲಯವಾಗಿದೆ.

ಭಾರತದ ಬಜೆಟ್ 2026ರಲ್ಲಿ ಸೃಜನಶೀಲ ವಲಯ, ಡಿಜಿಟಲ್ ವಿಷಯ ನಿರ್ಮಾಣ, ಅನಿಮೇಷನ್, ಗೇಮಿಂಗ್, AI ಮತ್ತು ಸ್ಟಾರ್ಟ್‌ಅಪ್ ಪರಿಸರಕ್ಕೆ ಒತ್ತು ನೀಡಿದೆ. ಭವಿಷ್ಯದ ಉದ್ಯೋಗಗಳು ಕೇವಲ ಕಾರ್ಖಾನೆಗಳಲ್ಲಿ ಹುಟ್ಟುವುದಿಲ್ಲ. ಅವು ಕಲ್ಪನೆ ಮತ್ತು ಸೃಜನಶೀಲತೆಯಲ್ಲಿ ಹುಟ್ಟುತ್ತವೆ. ಕಿತ್ತಳೆ ಆರ್ಥಿಕತೆಯ ದೊಡ್ಡ ಶಕ್ತಿ ಎಂದರೆ ಉದ್ಯೋಗಕ್ಕಾಗಿ ನಗರಗಳಿಗೆ ವಲಸೆ ಹೋಗುವ ಅಗತ್ಯವಿಲ್ಲ. ಒಂದು ಮೊಬೈಲ್, ಒಂದು ಲ್ಯಾಪ್‌ಟಾಪ್ ಮತ್ತು ಇಂಟರ್‌ನೆಟ್ ಸಂಪರ್ಕ ಇದ್ದರೆ ಸಾಕು. Work from Home ಮಾದರಿಯಲ್ಲಿ ಗ್ರಾಮೀಣ ಯುವಕರು, ಮಹಿಳೆಯರು ಮತ್ತು ಸ್ಥಳೀಯ ಕಲಾವಿದರು ಜಾಗತಿಕ ಮಾರುಕಟ್ಟೆಗೆ ತಲುಪಬಹುದು.

ಸ್ಥಳೀಯ ಕಥೆಗಾರರು ತಮ್ಮ ಹಳ್ಳಿಯ ಪುರಾಣ, ಇತಿಹಾಸ ಮತ್ತು ಜನಪದ ಕಥೆಗಳನ್ನು YouTube, Podcast ಅಥವಾ OTT ವೇದಿಕೆಗಳ ಮೂಲಕ ಹಂಚಬಹುದು. ಗೃಹಿಣಿಯರು ಸ್ವಚ್ಛತೆ, ಪೌಷ್ಟಿಕ ಆಹಾರ, ಸಾಂಪ್ರದಾಯಿಕ ಅಡುಗೆ ಪದ್ಧತಿಗಳು ಮತ್ತು ಆಯುರ್ವೇದ ವೈದ್ಯಕೀಯ ಪದ್ಧತಿಯ ಬಗ್ಗೆ ವಿಷಯ ನಿರ್ಮಾಣ ಮಾಡಿ ಜಗತ್ತಿಗೆ ಪರಿಚಯಿಸಬಹುದು. Hygiene Food ಕ್ಷೇತ್ರದಲ್ಲಿ ಆರೋಗ್ಯಕರ ಭಾರತೀಯ ಪಾಕಶೈಲಿಗೆ ದೊಡ್ಡ ಅವಕಾಶವಿದೆ. ಭಾಷಾ ತಜ್ಞರು ಮತ್ತು ವಿದ್ಯಾರ್ಥಿಗಳು AI ಸಹಾಯದಿಂದ ಕನ್ನಡದ ವಚನಗಳು, ದಾಸ ಸಾಹಿತ್ಯ ಮತ್ತು ಪುರಾಣ ಕಥೆಗಳನ್ನು ಜಗತ್ತಿನ ವಿವಿಧ ಭಾಷೆಗಳಿಗೆ ಅನುವಾದಿಸಿ ಜಾಗತಿಕ ಪ್ರೇಕ್ಷಕರಿಗೆ ತಲುಪಿಸಬಹುದು. Vocal for Local ಎಂಬ ತತ್ವ ಇಲ್ಲಿ ಆರ್ಥಿಕ ಶಕ್ತಿಯಾಗುತ್ತದೆ.

ನಮ್ಮ ಸಂಸ್ಕೃತಿಯ ಕಥೆಗಳು ಮಹತ್ತರ ಬೌದ್ಧಿಕ ಆಸ್ತಿಗಳು. ರಾಮಾಯಣ ಮತ್ತು ಮಹಾಭಾರತದ ವೀರಗಾಥೆಗಳನ್ನು ಆಧರಿಸಿ ವಿಶ್ವದರ್ಜೆಯ ಗೇಮ್‌ಗಳನ್ನು ರೂಪಿಸಬಹುದು. ಜಪಾನ್ ತನ್ನ ಸಂಸ್ಕೃತಿಯನ್ನು ಜಗತ್ತಿಗೆ ತಲುಪಿಸಿದಂತೆ, ಭಾರತವೂ ತನ್ನ ಪುರಾಣ ಪಾತ್ರಗಳನ್ನು ಅಂತರಾಷ್ಟ್ರೀಯ ಮಟ್ಟದ ಅನಿಮೇಷನ್ ರೂಪದಲ್ಲಿ ಮಕ್ಕಳ ಮುಂದೆ ಇಡಬಹುದು. ಇಂದಿನ ಮಕ್ಕಳ ಪರದೆಗಳಲ್ಲಿ BGMI, Roblox, Minecraft ಮುಂತಾದ ವಿದೇಶಿ ಗೇಮ್‌ಗಳು ಮೇಲುಗೈ ಸಾಧಿಸಿವೆ. ಹಿಂಸಾತ್ಮಕ ವಿಷಯ ಮತ್ತು ಅತಿಯಾದ ಸ್ಕ್ರೀನ್ ಸಮಯವು ಮಕ್ಕಳ ಮನೋವೈಜ್ಞಾನಿಕ ಆರೋಗ್ಯಕ್ಕೂ ಪರಿಣಾಮ ಬೀರುತ್ತಿದೆ. ಇದರ ಬದಲಿಗೆ ಪಂಚತಂತ್ರ, ಹಿತೋಪದೇಶ, ಕಥಾಸರಿತ್ಸಾಗರಗಳ ಆಧಾರಿತ ಅನಿಮೇಷನ್ ಮತ್ತು ಗೇಮ್‌ಗಳು ಬಂದರೆ, ಮನರಂಜನೆಯ ಜೊತೆಗೆ ಮೌಲ್ಯ ಶಿಕ್ಷಣವೂ ಸಾಧ್ಯ. ಮಕ್ಕಳ ಹೀರೋಗಳು ನಮ್ಮ ಸಂಸ್ಕೃತಿಯಿಂದ ಬಂದಾಗ ಮಾತ್ರ ಅವರು ಮೌಲ್ಯಪೂರ್ಣ ಚಿಂತನೆಗಳೊಂದಿಗೆ ಬೆಳೆಯುತ್ತಾರೆ.

ಭಾರತೀಯ ಜ್ಞಾನ ಪರಂಪರೆಯ ಕಂಟೆಂಟ್‌ಗಳ ನಿರ್ಮಾಣ ಆಲೋಚನೆಯಾಗದೆ ಚಳವಳಿ ಆಗಬೇಕು. ಭಾರತದ ವೈಭವಮಯ ಇತಿಹಾಸ, ಸನಾತನ ಪರಂಪರೆ ಮತ್ತು ಅಪಾರ ಸಾಂಸ್ಕೃತಿಕ ಸಂಪತ್ತನ್ನು ಜಾಗತಿಕ ಮಟ್ಟದಲ್ಲಿ ಪ್ರತಿಷ್ಠಿತವಾಗಿ ಪ್ರದರ್ಶಿಸುವ ಹೊಣೆಗಾರಿಕೆ ಇಂದಿನ ಕಂಟೆಂಟ್ ಕ್ರಿಯೇಟರ್‌ಗಳ ಮೇಲಿದೆ. ನಮ್ಮ ಇತಿಹಾಸವು ದಿನಾಂಕಗಳ ಸರಮಾಲೆ ಅಲ್ಲ; ಅದು ವಿಜ್ಞಾನ, ತತ್ವಜ್ಞಾನ, ಕಲೆ, ವಾಸ್ತುಶಿಲ್ಪ, ಸಾಹಿತ್ಯ ಮತ್ತು ಆಧ್ಯಾತ್ಮಿಕತೆಯ ಮಹಾಸಾಗರ. ಇವೆಲ್ಲವೂ ಜಗತ್ತಿಗೆ ಪರಿಚಯವಾಗಬೇಕಾದ ವಿಷಯಗಳು.

ಕಿತ್ತಳೆ ಆರ್ಥಿಕತೆ ಕೇವಲ ಆದಾಯದ ಸಾಧನವಲ್ಲ; ಅದು ಆತ್ಮಗೌರವದ ಅಭಿವ್ಯಕ್ತಿ. ಪ್ರತಿಯೊಂದು ಮನೆಯೂ ಒಂದು ಕಲಾಕೇಂದ್ರವಾಗಬಹುದು.

ಪ್ರತಿಯೊಂದು ಹಳ್ಳಿಯೂ ಒಂದು ಕಥಾ ವಿಶ್ವವಾಗಬಹುದು. ಸನಾತನ ಸಂಸ್ಕೃತಿಯ ಆಳ ಮತ್ತು ಕಿತ್ತಳೆ ಆರ್ಥಿಕತೆಯ ಅವಕಾಶಗಳು ಒಂದಾದಾಗ ಅದು ಕೇವಲ ಆರ್ಥಿಕ ಬೆಳವಣಿಗೆಯ ಜೊತೆಗೆ ರಾಷ್ಟ್ರೀಯ ಆತ್ಮಜಾಗೃತಿಯೂ ಆಗುತ್ತದೆ. ಕೇಂದ್ರ ಬಜೆಟ್ 2026 ಕಿತ್ತಳೆ ಆರ್ಥಿಕತೆಯ ಬೆಳವಣಿಗೆಗೆ ನೀಡಿರುವ ಮಹತ್ವವು ಜಾಗತಿಕ ಮಾರುಕಟ್ಟೆಗೆ ನೀಡಿದ ಸೂಕ್ಷ್ಮ ಮತ್ತು ಸ್ಪಷ್ಟ ಸಂಕೇತವೂ ಹೌದು. ಭಾರತ ಕೇವಲ ಉತ್ಪಾದನಾ ಕೇಂದ್ರವಲ್ಲ; ಅದು Intellectual Property Hub, Creative Content Powerhouse ಮತ್ತು Digital Innovation Leader ಆಗಲು ಸಜ್ಜಾಗಿದೆ ಎಂಬ ಸಂದೇಶವನ್ನು ನೀಡಿದೆ. ಜಾಗತಿಕ ಹೂಡಿಕೆದಾರರಿಗೆ ಇದು ಒಂದು ಮುಕ್ತ ಆಹ್ವಾನ. ಭಾರತದಲ್ಲಿ ಕೇವಲ ಮಾನವ ಸಂಪನ್ಮೂಲವಷ್ಟೇ ಇಲ್ಲ, ಅಪಾರ ಸಾಂಸ್ಕೃತಿಕ ಬಂಡವಾಳ ಮತ್ತು ಕಥನಶಕ್ತಿ ಕೂಡ ಇದೆ ಎಂಬುದನ್ನು ಜಗತ್ತಿಗೆ ಸಾರಿದಂತಾಗಿದೆ.

ಇದು ಕೇವಲ ಮನರಂಜನೆಯ ಸ್ಪರ್ಧೆಯಲ್ಲ; ಇದು ನರೇಟಿವ್‌ಗಳ ಯುದ್ಧ. ಕಿತ್ತಳೆ ಆರ್ಥಿಕತೆಯು ಭಾರತದ ಹೊಸ ಭವಿಷ್ಯ ಬರೆಯಲು ವೇದಿಕೆ ಸಿದ್ಧಪಡಿಸಲಿದೆ. ಜಗದಗಲ ವಿಸ್ತಾರಗೊಳ್ಳುವ ಕಾಲ ಸನ್ನಿಹಿತವಾಗಿದೆ. ನಮ್ಮ ಕಥೆಗಳನ್ನು ನಾವೇ ಹೇಳಲಿಲ್ಲವಾದರೆ ಬೇರೆಯವರು ನಮ್ಮ ಕಥೆಯನ್ನು ಅಪೂರ್ಣವಾಗಿಯೋ ಅಥವಾ ತಪ್ಪಾಗಿ ಹೇಳುತ್ತಾರೆ. ಬನ್ನಿ, ನಮ್ಮ ಕಂಟೆಂಟ್‌ಗಳಿಗೆ ನಾವೇ ಕ್ರಿಯೇಟರ್ ಆಗೋಣ. ನಮ್ಮ ದೇಶದ ಸೃಜನಶೀಲ ಸಾಹಿತ್ಯಕ್ಕೆ ಜಾಗತಿಕ ಮೌಲ್ಯ ಸೃಷ್ಟಿಸೋಣ.

ಕೇರಳದ ಪ್ರಗತಿಗೆ ಪ್ರತಿಕೂಲವಾಗಿರುವ 'ಹರತಾಳ'ಗಳು!

ದಿನೇಶ್

ಕೆಲವು ಕಾರ್ಮಿಕ ಸಂಘಟನೆಗಳು ಭಾರತ – ಅಮೆರಿಕ ವ್ಯಾಪಾರ ಒಪ್ಪಂದ ವಿರೋಧಿಸಿ ಫೆಬ್ರವರಿ 12ರಂದು ರಾಷ್ಟ್ರ ವ್ಯಾಪಿ ಬಂದ್‌ಗೆ ಕರೆ ನೀಡಿದ್ದವು. ಆದರೆ ದೇಶಾದ್ಯಂತ ಈ ಬಂದ್ ಕರೆಗೆ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಎಲ್ಲಿಯೂ ಜನಜೀವನ ಅಸ್ತವ್ಯಸ್ತವಾಗಲಿಲ್ಲ.

ಆದರೆ ಕೇರಳ ಮಾತ್ರ ಅದಕ್ಕೆ ಅಪವಾದವಾಗಿತ್ತು. ಅಲ್ಲಿ ಬಂದ್ ಆಚರಿಸಲ್ಪಟ್ಟಿತು. ಜನರು ಸಂಕಷ್ಟ ಅನುಭವಿಸುವಂತಾಯಿತು.

ಪ್ರತಿ ಬಾರಿಯೂ ಅಷ್ಟೆ. ಎಡಪಕ್ಷಗಳು, ಎಡಪಕ್ಷ ಬೆಂಬಲಿತ ಸಂಘಟನೆಗಳು ಬಂದ್‌ಗೆ ಕರೆ ನೀಡಿದಾಕ್ಷಣ ಕೇರಳ ಸ್ತಬ್ಧವಾಗುತ್ತದೆ. ಅಂಗಡಿ ಮುಂಗಟ್ಟುಗಳು ಬಾಗಿಲು ಮುಚ್ಚುತ್ತವೆ. ಹಾಗೆ ಬಾಗಿಲು ಮುಚ್ಚದಿದ್ದರೆ ಬಲವಂತವಾಗಿ ಮುಚ್ಚಿಸಲು ಎಡಪಕ್ಷಗಳ ಗೂಂಡಾಗಳು ಸಿದ್ಧರಿರುತ್ತಾರೆ.

ಕೇರಳ ಮೊದಲಿನಿಂದಲೂ ಇಂತಹ ಬಂದ್‌ಗಳಿಗೆ ಕುಪ್ರಸಿದ್ಧ. 1990ರ ದಶಕಕ್ಕಿಂತ ಮುನ್ನವಂತೂ ಕೇರಳವು ಸದಾ ಬಂದ್ ಆಚರಿಸುವಂತಾಗುತ್ತಿತ್ತು. ಬಂದ್ ಮತ್ತು ಅದರಿಂದ ಉಂಟಾಗುವ ಹಿಂಸಾಚಾರಗಳು ರಾಜ್ಯವನ್ನು ಕಂಗಾಲು ಮಾಡುತ್ತಿತ್ತು. ಪಕ್ಷದ ಗೂಂಡಾಗಳು ಪ್ರತಿಯೊಂದು ಅಂಗಡಿಯನ್ನು ಮುಚ್ಚಿಸುತ್ತಿದ್ದರು.

ಜನರು ಇಂತಹ ಸಂಪೂರ್ಣ ಬಂದ್ ವಿರೋಧಿಸುತ್ತಿದ್ದರಾದರೂ ಅದರ ವಿರುದ್ಧ ತಿರುಗಿ ಬೀಳುವ ಧೈರ್ಯವಿರಲಿಲ್ಲ. ಕೇರಳದಲ್ಲಿ ಬಂದ್‌ನ ಹಾವಳಿ ಅದೆಷ್ಟು ಮಿತಿಮೀರಿತೆಂದರೆ 1997ರಲ್ಲಿ ಕೇರಳ ಹೈಕೋರ್ಟ್ ಬಂದ್‌ನ್ನು ನಿಷೇಧಿಸಿ ಆದೇಶ ಹೊರಡಿಸಿತ್ತು. ಬಂದ್ ಕಾನೂನುಬಾಹಿರ ಮತ್ತು ಅಸಂವಿಧಾನಿಕ ಎಂದು ಕೋರ್ಟ್ ಘೋಷಿಸಿತು. ಇದು ಜನರಿಗೆ ನಿರಾಳತೆ ತಂದಿತಾದರೂ ಅದು ಅತ್ಯಲ್ಪ ಕಾಲ ಮಾತ್ರ. ಪಕ್ಷಗಳು ಮತ್ತು ಸಂಘಟನೆಗಳು ಬಂದ್‌ಗೆ ಬೇರೇಯೇ ದಾರಿ ಹುಡುಕಿದವು. ಬಂದ್ ಬದಲಿಗೆ 'ಹರತಾಳ'ಕ್ಕೆ ಕರೆ ನೀಡತೊಡಗಿದವು. ಹರತಾಳದ ಹೆಸರಿನಲ್ಲಿ ನಡೆಯುತ್ತಿದ್ದುದು ಮತ್ತದೇ ಬಂದ್. ಹರತಾಳವೆಂಬುದು ಬಂದ್‌ನ ಪರ್ಯಾಯ ಹೆಸರಾಯಿತು.

ಕೇರಳದಲ್ಲಿ ರಾಜಕೀಯ ಪಕ್ಷಗಳು ಬಿಡಿ, ಹೆಚ್ಚು ಜನಬೆಂಬಲವಿಲ್ಲದ ಸಂಘಟನೆಗಳು ಕೂಡಾ ಹರತಾಳಕ್ಕೆ ಕರೆಗೊಡುವುದಿದೆ ಹಾಗೂ ಈ ಕರೆಯು ಸಂಪೂರ್ಣ ಬಂದ್‌ಗೆ ಕಾರಣವಾಗುವುದಿದೆ. ತಮ್ಮ ಅಂಗಡಿ, ವಾಹನಗಳ ಮೇಲೆ ದಾಳಿ ನಡೆಯುವ ಭೀತಿಯಿಂದ ಜನರು ಅಂದು ಮನೆಯಲ್ಲೇ ಕೂರುತ್ತಾರೆ. 2017ರಲ್ಲಿ ಕೇರಳದಲ್ಲಿ 120 ಹರತಾಳಗಳು ನಡೆದಿದ್ದವು. 2018ರಲ್ಲಿ 98 ಹರತಾಳ ನಡೆದಿದ್ದವು. ಅದರಲ್ಲಿ ಏಪ್ರಿಲ್ ತಿಂಗಳೊಂದರಲ್ಲೇ 12 ಹರತಾಳಗಳು ನಡೆದಿದ್ದವು.



2018ರಲ್ಲಿ ಕುತೂಹಲಕಾರಿ ಪ್ರಸಂಗವೊಂದು ನಡೆಯಿತು. ಯಾವುದೇ ಸಂಘಟನೆ ಕರೆ ನೀಡದಿದ್ದರೂ ಹರತಾಳ ನಡೆಯುವಂತಾಯಿತು. ಅದಕ್ಕೆ ಕಾರಣವಾದುದು ವಾಟ್ಸಪ್‌ನಲ್ಲಿ ಹರಿದಾಡಿದ ಒಂದು ಸಂದೇಶ. ಕಥುವಾ ಅತ್ಯಾಚಾರ ಪ್ರಕರಣವನ್ನು ವಿರೋಧಿಸಿ ಏಪ್ರಿಲ್ 16ರಂದು ಹರತಾಳ ನಡೆಯಲಿದೆಯೆಂದು ಯಾವುದೋ ಸಂಘಟನೆಯ ಹೆಸರಿನಲ್ಲಿ ಸಂದೇಶಗಳು ಹರಿದಾಡಿದವು. ಸಂದೇಶ ನೀಡಿದ ಅಂತಹ ಸಂಘಟನೆ ಯಾವುದೂ ಇಲ್ಲವೆಂದು ಪೊಲೀಸರು ಸ್ಪಷ್ಟಪಡಿಸಿದರೂ ಜನರಿಗೆ ಭರವಸೆ ಮೂಡಲಿಲ್ಲ. ನಿಗದಿತ ದಿನದಂದು ಜನರು ಬೀದಿಗಿಳಿಯಲು ಹಿಂಜರಿದ ಕಾರಣ ಅಂದೂ ಬಂದ್ ಆಚರಿಸಲ್ಪಟ್ಟಿತು.

> ಬಂದ್ ಸಂಸ್ಕೃತಿಗೆ ಅಂತ್ಯ ಹಾಕದ ಹೊರತು ಕೇರಳವು ಪ್ರಗತಿ ಕಾಣಲಾರದು.

ಕೇರಳದಲ್ಲಿ ಕೆಲವೊಮ್ಮೆಯಂತೂ 'ಹಠಾತ್ ಹರತಾಳ' ನಡೆಯುವುದಿದೆ. ಇದಂತೂ ಜನಜೀವನವನ್ನು ಅಸ್ತವ್ಯಸ್ತಗೊಳಿಸುತ್ತದೆ. ಕೇರಳ ಹೈಕೋರ್ಟ್ 2019ರಲ್ಲಿ ಈ ರೀತಿಯ ಹಠಾತ್ ಹರತಾಳವನ್ನು ನಿಷೇಧಿಸಿತು. ಇಂತಹ ಹಠಾತ್ ಹರತಾಳಕ್ಕೆ ಕರೆ ನೀಡುವ ರಾಜಕೀಯ ಪಕ್ಷಗಳು ಅಥವಾ ಸಂಘಟನೆಯನ್ನು ಅದಕ್ಕೆ ಹೊಣೆಗಾರರನ್ನಾಗಿಸಲಾಗುವುದು ಎಂದು ಹೇಳಿತು. ಆ ಬಳಿಕ ಕೇರಳದಲ್ಲಿ ಹರತಾಳಗಳ ಸಂಖ್ಯೆ ಕಡಿಮೆಯಾಯಿತೆನ್ನಬೇಕು. ಅದರಿಂದಾಗಿ 2019ರಲ್ಲಿ ಕೇವಲ 12 ಹರತಾಳಗಳು ನಡೆದವು.

ಬಂದ್ ಮತ್ತು ಹರತಾಳದ ಬಗ್ಗೆ ಜನರಲ್ಲಿ ತೀವ್ರ ವಿರೋಧವಿದೆ ಹಾಗೂ ಅಸಮಾಧಾನವಿದೆ. ಹಾಗಿದ್ದರೂ ರಾಜಕೀಯ ಪಕ್ಷಗಳು ಆಗೊಮ್ಮೆ ಈಗೊಮ್ಮೆಯಾದರೂ ಹರತಾಳಕ್ಕೆ ಕರೆ ನೀಡುವುದನ್ನು ನಿಲ್ಲಿಸುವುದಿಲ್ಲ. ಹರತಾಳವು ಯಶಸ್ವಿಯಾಯಿತೇ ಇಲ್ಲವೇ ಎಂಬುದರ ಮಾನದಂಡವೇ ಬಂದ್ ಎಂಬಂತಾಗಿದೆ. ಹಾಗಾಗಿ ತಾವು ನೀಡಿದ ಹರತಾಳದ ಕರೆ ಯಶಸ್ವಿಯಾಗಬೇಕಾದರೆ ರಾಜ್ಯವಿಡೀ ಬಂದ್ ಆಚರಿಸಬೇಕು, ಜನರು ಮನೆಯಲ್ಲೇ ಕೂರುವಂತಾಗಬೇಕು ಎಂದು ರಾಜಕೀಯ ಪಕ್ಷಗಳು ಅಥವಾ ಸಂಘಟನೆಗಳು ಆಶಿಸುತ್ತವೆ. ಆ ನಿಟ್ಟಿನಲ್ಲೇ ಪ್ರಯತ್ನಿಸುತ್ತವೆ.

ಕೇರಳವು ಔದ್ಯಮಿಕವಾಗಿ ಹಿಂದುಳಿಯಲು ಇದು ಕೂಡಾ ಒಂದು ಕಾರಣವಾಗಿದೆ. ಕೇರಳದಲ್ಲಿ ಕಂಪನಿ ಸ್ಥಾಪಿಸಲು ಯಾರೂ ಮುಂದೆ ಬರುತ್ತಿಲ್ಲ. ಕೇರಳದಲ್ಲಿ ಯಾವ ಉದ್ಯಮಿಯೂ ಹೂಡಿಕೆ ಮಾಡಲು ಆಸಕ್ತಿ ತೋರುತ್ತಿಲ್ಲ. ಕಮ್ಯುನಿಸ್ಟರು ಅಧಿಕಾರದಲ್ಲಿ ಇರುವ ರಾಜ್ಯಗಳು ಪ್ರಗತಿ ಸಾಧಿಸದೆ ಹಿಂದುಳಿದಿವೆ ಎಂದು ಇತ್ತೀಚೆಗೆ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದರು. ಕೈಟೆಕ್ಸ್ ಕಂಪನಿಯು ಕೇರಳದಿಂದ ತೆರಳಿದ್ದನ್ನು ಅವರು ಇದಕ್ಕೆ ಉದಾಹರಣೆಯಾಗಿ ನೀಡಿದ್ದರು. ಕೇರಳದಲ್ಲಿ 3500 ಕೋಟಿ ರೂಪಾಯಿ ಹೂಡಿಕೆ ಮಾಡಿದ್ದ ಕೈಟೆಕ್ಸ್ ಗ್ರೂಪ್ ಅಲ್ಲಿನ ಎಡಪಂಥೀಯ ಕಾರ್ಮಿಕ ಸಂಘಟನೆಗಳ ಕಿರುಕುಳದ ಕಾರಣದಿಂದಾಗಿ ಬಳಿಕ ಅಲ್ಲಿಂದ ಕಾಲ್ತೆಗೆದಿತ್ತು.

ಕಾರ್ಮಿಕ ಸಂಘಟನೆಗಳ ಹೆಸರಿನಲ್ಲಿ ನಡೆಯುವ ಗೂಂಡಾಗಿರಿ, ಬೆದರಿಕೆ, ಹಣ ವಸೂಲಿ ಮುಂತಾದ ಕ್ರಮಗಳನ್ನು ಹತ್ತಿಕ್ಕದಿದ್ದರೆ ಕೇರಳದಲ್ಲಿ ಯಾವುದೇ ಕಂಪೆನಿಯೂ ಹಣ ಹೂಡಲು ಮುಂದೆ ಬರಲಾರದು. ಮೊದಲಿಗೆ ಬಂದ್ ಸಂಸ್ಕೃತಿಗೆ ಕೇರಳವು ಇತಿಶ್ರೀ ಹಾಕಬೇಕಾಗಿದೆ. ಹಾಗಾದರಷ್ಟೇ ಅಭಿವೃದ್ಧಿಯ ಬಾಗಿಲು ತೆರೆಯಬಹುದು.

ಮಹತ್ವಾಕಾಂಕ್ಷೆ ಆಧಾರಿತ ಬಾಂಧವ್ಯ ವಿಶಿಷ್ಟ

ದ್ವಿಪಕ್ಷೀಯ ಬಾಂಧವ್ಯ ವಿಶಿಷ್ಟ, ಗಮನಾರ್ಹ

ಹೊಸದಿಲ್ಲಿ : ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಫ್ರಾನ್ಸ್ ಅಧ್ಯಕ್ಷ ಇಮ್ಯಾನುವಲ್ ಮ್ಯಾಕ್ರನ್ ಮಂಗಳವಾರ, ಭಾರತ-ಫ್ರಾನ್ಸ್ ನಡುವಿನ ದೀರ್ಘಕಾಲೀನ ವ್ಯೂಹಾತ್ಮಕ ಪಾಲುದಾರಿಕೆಯನ್ನು ಬಲಪಡಿಸುವ ಬಗ್ಗೆ ನಿಯೋಗ ಮಟ್ಟದ ಚರ್ಚೆ ನಡೆಸಿದರು ಮತ್ತು ಬೆನ್ನಲ್ಲೇ ಮುಂಬೈಯಲ್ಲಿ ಜಂಟಿ ಸುದ್ದಿಗೋಷ್ಠಿ ನಡೆಸಿದರು.

ರಕ್ಷಣಾ ರಂಗ, ತಂತ್ರಜ್ಞಾನ ಮತ್ತು ಸಾಂಸ್ಕೃತಿಕ ಸಹಕಾರ ರಂಗಗಳಲ್ಲಿನ ತಮ್ಮ ಸಮಾನ ದೃಷ್ಟಿಕೋನಗಳನ್ನು ಪ್ರತಿಪಾದಿಸಿದ ಉಭಯ ನಾಯಕರು, ದ್ವಿಪಕ್ಷೀಯ ಸಹಕಾರಗಳ ಹೊಸ ಆಯಾಮಕ್ಕೆ ವೇದಿಕೆ ಸಜ್ಜುಗೊಳಿಸಿದರು. ಉಭಯ ರಾಷ್ಟ್ರಗಳು ರಕ್ಷಣಾ ರಂಗದಲ್ಲಿ ತಮ್ಮ ಸಹಕಾರ -ಸಹಯೋಗವನ್ನು ವಿಸ್ತರಿಸುತ್ತಿವೆ ಎಂದು ಜಂಟಿ ಸುದ್ದಿಗೋಷ್ಠಿಯಲ್ಲಿ ಘೋಷಿಸಿದ ಮ್ಯಾಕ್ರನ್, ಉಭಯ ರಾಷ್ಟ್ರಗಳ ನಡುವಣ ವಿಶ್ವಾಸಾರ್ಹತೆ, ಮುಕ್ತತೆ ಮತ್ತು ಮಹತ್ವಾಕಾಂಕ್ಷೆ ಆಧಾರಿತ ದ್ವಿಪಕ್ಷೀಯ ಬಾಂಧವ್ಯ ವಿಶಿಷ್ಟವಾದುದು ಮತ್ತು ಗಮನಾರ್ಹವೆಂದು ಬಣ್ಣಿಸಿದರು.

ಪ್ರತೀ ವರ್ಷ ಹೊಸ ಹೊಸ ಸಹಕಾರ ಕೊಂಡಿ: ಪ್ರತೀ ವರ್ಷವೂ ಇಂಡೋ ಪೆಸಿಫಿಕ್, ತಂತ್ರಜ್ಞಾನ ರಂಗ ಸಹಿತ ಅನ್ಯಾನ್ಯ ರಂಗಗಳಲ್ಲಿ ನಿರಂತರ ನೆಲೆಯಲ್ಲಿ ಸಹಕಾರ ಕೊಂಡಿಗಳ ನವ ಮಾರ್ಗಗಳನ್ನು ನಾವು ಬೆಸೆಯುತ್ತಾ ಬಂದಿದ್ದೇವೆ. ಐಎಂಇಸಿ, ಕೃತಕ ಬುದ್ಧಿಮತ್ತೆ ರಂಗದಲ್ಲಿ ಸಹಯೋಗ, ಅಂತಾರಾಷ್ಟ್ರೀಯ ಸೋಲಾರ್ ಜಾಲಕ್ಕೆ ಸಂಬಂಧಿಸಿದಂತೆ ಪ್ರಗತಿ ಸೇರಿದಂತೆ ಹಲವು ಜಂಟಿ ಉಪಕ್ರಮಗಳಿಗೂ ಮುಂದಾಗಿದ್ದೇವೆ. ಉಭಯ ರಾಷ್ಟ್ರಗಳು ನಾಡಿನ ಕಾನೂನು ಮತ್ತು ಸಹಕಾರ ತತ್ತ್ವಗಳಿಗೆ ತುಂಬು ಮಹತ್ವ ನೀಡಿವೆ ಎಂದು ಮ್ಯಾಕ್ರನ್ ಪ್ರತಿಪಾದಿಸಿದ್ದಾರೆ.

ಜನಾಧಾರಿತ ಸಹಯೋಗ: ಭಾರತ-ಫ್ರಾನ್ಸ್ ಆವಿಷ್ಕಾರ ವರ್ಷಕ್ಕೆ ನಾಂದಿ ಹಾಡುವ ಮುಖೇನ ಉಭಯ ರಾಷ್ಟ್ರಗಳು ತಮ್ಮ ವ್ಯೂಹಾತ್ಮಕ ಪಾಲುದಾರಿಕೆಯನ್ನು ಜನಾಧಾರಿತ ಸಹಯೋಗವಾಗಿ ಪರಿವರ್ತಿಸಿವೆ ಎಂದು ಪ್ರಧಾನಿ ನರೇಂದ್ರ ಮೋದಿ ವಿಶ್ಲೇಷಿಸಿದ್ದಾರೆ. ಸಹಕಾರ ಮುಖೇನ ಆವಿಷ್ಕಾರಗಳ ಬಲವರ್ಧನೆಯಾಗುತ್ತೆ ಮತ್ತು ಪ್ರಸ್ತುತ ಯೋಜನೆಗಳು ಉಭಯ ರಾಷ್ಟ್ರಗಳ ಜನರು, ಉದ್ದಿಮೆಗಳು ಮತ್ತು ಸಂಸ್ಥೆಗಳ ಸಂಪರ್ಕಕೊಂಡಿಯನ್ನು ಬಲಪಡಿಸುತ್ತದೆ ಎಂದು ಪ್ರಧಾನಿ ಮೋದಿ ಹೇಳಿದರು. ಅದು ರಕ್ಷಣಾ ರಂಗವಿರಲಿ, ಪರಿಶುದ್ಧ ಇಂಧನ, ಬಾಹ್ಯಾಕಾಶ ಅಥವಾ ಉದಯೋನ್ಮುಖ ತಂತ್ರಜ್ಞಾನಗಳೇ ಆಗಿರಲಿ ಪ್ರತಿಯೊಂದು ರಂಗಗಳಲ್ಲೂ ನಾವು ನಮ್ಮ ಉದ್ದಿಮೆಗಳು ಹಾಗೂ ಆವಿಷ್ಕಾರಗಳಿಗೆ ಉತ್ತೇಜನ ನೀಡುತ್ತೇವೆ. ಸ್ಟಾರ್ಟ್‌ಅಪ್ ಮತ್ತು ಎಂಎಸ್‌ಎಂಇಎಸ್ ನಡುವೆ ಬಲಿಷ್ಠ ಜಾಲಗಳ ನಿರ್ಮಿಸಲಿದ್ದೇವೆ. ನಮ್ಮ ವಿದ್ಯಾರ್ಥಿಗಳು ಮತ್ತು ಸಂಶೋಧಕರ ನಡುವೆ ಪರಸ್ಪರ ವಿಚಾರ ವಿನಿಮಯಗಳ ಉತ್ತೇಜಿಸುತ್ತೇವೆ ಮತ್ತು ಜಂಟಿ ಆವಿಷ್ಕಾರಗಳಿಗಾಗಿ ಹೊಸ ಕೇಂದ್ರಗಳನ್ನು ಸ್ಥಾಪಿಸಲಿದ್ದೇವೆ ಎಂದು ಮೋದಿ ಘೋಷಿಸಿದರು.



ಪಾಲುದಾರಿಕೆಗೆ ಹೊಸ ಸ್ಥಾನಮಾನ

ರಾಫೆಲ್‌ನಿಂದ ತೊಡಗಿ ಸಬ್‌ಮರೈನ್‌ವರೆಗೆ ರಕ್ಷಣಾ ರಂಗದಲ್ಲಿ ಸಹಕಾರ ಕೊಂಡಿಗಳನ್ನು ನಾವು ಬಲಪಡಿಸುತ್ತಿದ್ದೇವೆ. ನಮ್ಮೊಳಗಿನ ಪಾಲುದಾರಿಕೆಯನ್ನು ವಿಶೇಷ ವ್ಯೂಹಾತ್ಮಕ ಪಾಲುದಾರಿಕೆಯಾಗಿಸಲು ಮತ್ತು ಇದಕ್ಕೊಂದು ಹೊಸ ಸ್ಥಾನಮಾನ ನೀಡಲು ನಾವಿಂದು ನಿರ್ಧರಿಸಿದ್ದೇವೆ. ಈ ವಿಚಾರದಲ್ಲಿ ಶಂಕೆಗೆ ಎಡೆಯಿಲ್ಲ. ಯಾಕೆಂದರೆ ಈ ಬಾಂಧವ್ಯದಲ್ಲಿ ನಮಗೆ ಸಂಪೂರ್ಣ ವಿಶ್ವಾಸವಿದೆ ಮತ್ತು ಕಳೆದ ಎಂಟು ವರ್ಷಗಳಿಂದ ನಾವು ಈ ಬಾಂಧವ್ಯವನ್ನು ಉತ್ತಮ ರೀತಿ ಕಾಯ್ದುಕೊಂಡು ಬಂದಿದ್ದೇವೆಂದು ಮ್ಯಾಕ್ರನ್ ಘೋಷಿಸಿದರು.

ಮಾ.19ಕ್ಕೆ ಅಯೋಧ್ಯೆಗೆ ಮುರ್ಮು

ಅಯೋಧ್ಯೆ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಾ.19ಕ್ಕೆ ಅಯೋಧ್ಯೆಗೆ ಭೇಟಿ ನೀಡಲಿದ್ದು, ದೇವಾಲಯದ ಸಂಕೀರ್ಣದಲ್ಲಿ ಸುಮಾರು ನಾಲ್ಕು ಗಂಟೆಗಳ ಕಾಲ ಇರಲಿದ್ದಾರೆ ಎಂದು ಜನ್ಮಭೂಮಿ ಮಂದಿರ ನಿರ್ಮಾಣ ಸಮಿತಿಯ ಅಧ್ಯಕ್ಷ ನೃಪೇಂದ್ರ ಮಿಶ್ರಾ ಮಾಹಿತಿ ನೀಡಿದ್ದಾರೆ. ಎರಡು ದಿನಗಳ ಸಭೆಯಲ್ಲಿ ಭಾಗವಹಿಸಲು ಅಯೋಧ್ಯೆಗೆ ಆಗಮಿಸಿದ ರಾಮಯಾತ್ರಿ ನಿವಾಸದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಮಿಶ್ರಾ, ರಾಮ ಮಂದಿರ ಸಂಕೀರ್ಣದ ಅಭಿವೃದ್ಧಿ ಕಾರ್ಯಗಳ ಕುರಿತು ಮಾಹಿತಿ ನೀಡಿದರು.

ದೇವಾಲಯ ನಿರ್ಮಾಣ ಕಾರ್ಯದಲ್ಲಿ ಸೇವೆಯನ್ನು ಮಾಡಿದ 400 ಜನ ಕಾರ್ಮಿಕರನ್ನು ರಾಷ್ಟ್ರಪತಿ ಸನ್ಮಾನಿಸಲಿದ್ದಾರೆ. ಹುತಾತ್ಮರ ಸ್ಮಾರಕ ಮತ್ತು ತಾತ್ಕಾಲಿಕವಾಗಿ ನಿರ್ಮಾಣವಾಗಿದ್ದ ರಾಮಲಲಾ ಮಂದಿರವನ್ನು ಸ್ಮಾರಕವಾಗಿ ಅಭಿವೃದ್ಧಿಪಡಿಸಲಾಗುವುದು, ಎಪ್ರಿಲ್ ಅಂತ್ಯದ ವೇಳೆಗೆ ಅಭಿವೃದ್ಧಿ ಕಾರ್ಯಗಳನ್ನು ಪೂರ್ಣಗೊಳಿಸುವ ಗುರಿ ಹೊಂದಿದೆ ಎಂದರು. ರಾಮ ಕಥಾ ವಸ್ತುಸಂಗ್ರಹಾಲಯದ ಪ್ರಗತಿಯ ಬಗ್ಗೆ ಮಾಹಿತಿ ನೀಡಿದ ಅವರು ಅತ್ಯಾಧುನಿಕ 3ಡಿ ಹನುಮಾನ್ ಗ್ಯಾಲರಿ ಸೇರಿದಂತೆ ವಸ್ತುಸಂಗ್ರಹಾಲಯದಲ್ಲಿ 20 ಗ್ಯಾಲರಿಯನ್ನು ನಿರ್ಮಿಸಲಾಗುತ್ತಿದ್ದು, ಹನುಮಾನ್ ಗ್ಯಾಲರಿಯಲ್ಲಿ 3ಡಿ ತಂತ್ರಜ್ಞಾನವನ್ನು ಬಳಸಿಕೊಂಡು 12 ನಿಮಿಷಗಳ ಕಾಲ ರಾಮನ ಸನ್ನಿವೇಶವನ್ನು ವೀಕ್ಷಿಸಬಹುದು ಎಂದರು. ಮಂದಿರದ ಸುರಕ್ಷಾ ಗಡಿ ಗೋಡೆಯ ನಿರ್ಮಾಣದ ಕಾರ್ಯ ಬಹಳ ವೇಗವಾಗಿ ನಡೆಯುತ್ತಿದ್ದು ಭೂಮಿಯನ್ನು ಒದುಗಿಸುವಂತೆ ಅರವಿಂದಾಶ್ರಮಕ್ಕೆ ವಿನಂತಿಸಲಾಗಿದೆ. ರಾಮ ನವಮಿಯ ಉತ್ಸವದ ಸಿದ್ಧತೆ ಭರದಿಂದ ಸಾಗುತ್ತಿದ್ದು ರಾಮ ನವಮಿಯ ದಿನದಂದು ಸೂರ್ಯ ತಿಲಕ ಪುನರಾವರ್ತಿಸಲಾಗುವುದು, ಅದಕ್ಕಾಗಿ ಸಿಬಿಆರ್‌ಐ ರೂರ್ಕಿಯೊಂದಿಗೆ 10 ವರ್ಷಗಳಕಾಲ ಒಪ್ಪಂದ ಮಾಡಿಕೊಳ್ಳಲಾಗುತ್ತಿದೆ ಎಂದರು.



ಸ್ಮಾರ್ಟ್ ದೇಶಕ್ಕಾಗಿ

ಸರ್ವಂ ಕಾಜಿ ಗ್ಲಾಸ್

ಇಂಡಿಯಾ ಎಐ ಇಂಪ್ಯಾಕ್ಟ್ ಶೃಂಗದಲ್ಲಿ ಪ್ರಧಾನಿ ನರೇಂದ್ರ ಮೋದಿ ಒಂದು ಸ್ಮಾರ್ಟ್ ಗ್ಲಾಸ್ ಧರಿಸಿಕೊಂಡು ಎಲ್ಲರ ಗಮನಸೆಳೆದರು. ಇದು ಸಾಧಾರಣ ಸನ್‌ಗ್ಲಾಸ್ ಅಲ್ಲ, ಎಐ ನವೋದ್ಯಮ ಕಂಪನಿ ಸರ್ವಂ ಎಐ ನಿರ್ಮಿಸಿದ ಎಐ ವೇರೇಬಲ್ ಸ್ಮಾರ್ಟ್ ಗ್ಲಾಸ್ ಆಗಿದೆ. ಸ್ಮಾರ್ಟ್ ಗ್ಲಾಸ್ ಹೆಸರು ಸರ್ವಂ ಕಾಜಿ. ಇಂಡಿಯಾ ಎಐ ಇಂಪ್ಯಾಕ್ಟ್ ಶೃಂಗದಲ್ಲಿ ಜಿಯೋ ಕಂಪನಿಯೂ ತನ್ನ ಸ್ಮಾರ್ಟ್ ಗ್ಲಾಸ್ ಪ್ರಸ್ತುತಪಡಿಸಿದೆ. ದೇಶದ ಪ್ರಧಾನಿ ದೇಶೀಯ ಎಐ ಸ್ಮಾರ್ಟ್ ಗ್ಲಾಸ್ ಧರಿಸಿರುವುದು ಖಂಡಿತ ಸಾಧಾರಣ ಸಂಗತಿಯಲ್ಲ. ಎಐ ವೇರೆಬಲ್ ಗ್ಲಾಸ್‌ಗಳು ಹಲವು ವಿಶೇಷತೆಗಳನ್ನು ಹೊಂದಿವೆ. ಸರ್ವಂ ಕಾಜಿ ಗ್ಲಾಸ್ ವಿಶೇಷತೆಗಳೇನು? ಅದು ಹೇಗೆ ಕೆಲಸ ಮಾಡುತ್ತದೆ? ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರ ಇಲ್ಲಿದೆ.

- ಎಐ ಆಧಾರಿತ ವೇರೆಬಲ್ ಉಪಕರಣ ಸರ್ವಂ ಕಾಜಿ
- ಕ್ಲೌಡ್ ಸ್ಟೋರೇಜ್, ಇಂಟರ್‌ನೆಟ್ ಇಲ್ಲದೆ ಕಾರ್ಯಾಚರಿಸುವ ಸಾಫ್ಟ್‌ವೇರ್ ಎಐ ಮಾಡೆಲ್ ಸರ್ವಂ ಎಜ್
- ಮೆಟಾ ರೇ-ಬನ್ ಸ್ಮಾರ್ಟ್ ಗ್ಲಾಸ್‌ಗಳಿಗೆ ಸರ್ವಂ ಕಾಜಿ ಟಕ್ಕರ್
- ಆಫ್‌ಲೈನ್‌ನಲ್ಲೂ ಕೆಲಸ ಮಾಡಲಿದೆ ಸರ್ವಂ ಎಜ್



ಎಐ ಸ್ಮಾರ್ಟ್ ಗ್ಲಾಸ್ ಪರೀಕ್ಷಿಸಿದ ಪ್ರಧಾನಿ

ಫೆ.16ರಂದು ದಿಲ್ಲಿಯ ಭಾರತ ಮಂಟಪಂನಲ್ಲಿ ಆರಂಭವಾದ ಇಂಡಿಯಾ ಎಐ ಇಂಪ್ಯಾಕ್ಟ್ ಶೃಂಗ 2026ರಲ್ಲಿ ನವೋದ್ಯಮ ಕಂಪನಿ ಸರ್ವಂ ಎಐ ತನ್ನ ಎಐ ವೇರೆಬಲ್ ಪರಿಚಯಿಸಿದೆ. ಪ್ರಧಾನಿ ಮೋದಿಯವರು ಸರ್ವಂ ಕಾಜಿ ಸ್ಮಾರ್ಟ್ ಗ್ಲಾಸ್ ಅನ್ನು ಧರಿಸಿ ಪರೀಕ್ಷಿಸಿದ್ದಾರೆ.

ಮೇನಲ್ಲಿ ಅಧಿಕೃತ ಲಾಂಚ್

ಮೇ ತಿಂಗಳಲ್ಲಿ ಕಾಜಿ ಸ್ಮಾರ್ಟ್ ಗ್ಲಾಸ್‌ಗಳನ್ನು ಭಾರತೀಯ ಮಾರುಕಟ್ಟೆಗೆ ಪರಿಚಯಿಸಲು ಸರ್ವಂ ಎಐ ಸಕಲಸಿದ್ಧತೆಗಳನ್ನು ನಡೆಸುತ್ತಿದೆ.

ಚ್ಯಾಟ್ ಸಪೋರ್ಟ್ ತರಲಿದೆ ಸರ್ವಂ

ಸರ್ವಂ ಕಾಜಿ ಸ್ಮಾರ್ಟ್ ಗ್ಲಾಸ್‌ನಲ್ಲಿ ವಾರದೊಳಗೆ ಎಐ ಚ್ಯಾಟ್ ಸಪೋರ್ಟ್ ಫೀಚರ್ ಅನಾವರಣಗೊಳಿಸುವ ಸಾಧ್ಯತೆಯಿದೆ. ನೈಜ ಸಮಯದ ಧ್ವನಿ ಮತ್ತು ದೃಶ್ಯ ಸಂವಹನದ ಮುಖೇನ ದೈನಂದಿನ ಜೀವನದಲ್ಲಿ ಎಐ ಬಳಸಲು ವಿನ್ಯಾಸ ಮಾಡಲಾಗಿದೆ.



ಒಮ್ಮೆ ನೋಡಿದರೆ ಕ್ಯಾಪ್ಚರ್!

ಅತ್ಯಾಧುನಿಕ ಎಐ ತಂತ್ರಜ್ಞಾನ ಮತ್ತು ಉನ್ನತ ಗುಣಮಟ್ಟದ ಕ್ಯಾಮರಾ ಅಳವಡಿಸಿದ ಸರ್ವಂ ಕಾಜಿ ಸ್ಮಾರ್ಟ್ ಗ್ಲಾಸ್‌ಗಳು ನೀವು ಯಾವ ದೃಶ್ಯವನ್ನು ನೋಡುತ್ತಿರೋ ಅಥವಾ ನೀವು ಯಾವ ದೃಶ್ಯಗಳನ್ನು ಸೆರೆಹಿಡಿಯಲು ಬಯಸುವಿರೋ ಅವುಗಳತ್ತ ಒಮ್ಮೆ ದೃಷ್ಟಿ ಹರಿಸಿದರೆ ಸಾಕು, ಅವುಗಳನ್ನೇ ಸ್ಮಾರ್ಟ್ ಗ್ಲಾಸ್ ಸೆರೆಹಿಡಿಯಲಿದೆ.

ಧ್ವನಿ ಕೇಳಿದರೆ ಸಾಕು, ನೀಡಲಿದೆ ಪ್ರತಿಕ್ರಿಯೆ

ಬಳಕೆದಾರರ ಧ್ವನಿಯನ್ನು ಗುರುತಿಸುವ ಸ್ಮಾರ್ಟ್ ಗ್ಲಾಸ್, ಬಳಕೆದಾರ ಏನೇ ಮಾತನಾಡಿದರೂ ಅಥವಾ ಪ್ರಶ್ನೆ ಕೇಳಿದರೂ ಆಯಾ ಸಂದರ್ಭ ಆಧರಿಸಿ ಸರಿಯಾದ ಮಾಹಿತಿ ನೀಡಲಿದೆ ಅಥವಾ ಉತ್ತರಿಸಲಿದೆ. ಧ್ವನಿ ಬುದ್ಧಿಮತ್ತೆ ಇರುವುದರಿಂದ ಬಳಕೆದಾರ ಏನೇ ಹೇಳಿದರೂ, ತಕ್ಷಣ ಗ್ಲಾಸ್ ಪ್ರತಿಕ್ರಿಯೆ ನೀಡಲಿದೆ. ಬಳಕೆದಾರರು ಅಗತ್ಯಾನುಸಾರ ಫೀಚರ್‌ಗಳಲ್ಲಿ ಬದಲಾವಣೆ ಮಾಡಿಕೊಳ್ಳುವ ಅವಕಾಶವೂ ಇರಲಿದೆ.

ಸ್ವದೇಶಿ ಎಐ- ಸ್ವಾವಲಂಬಿ ದೇಶ

ಎಐ ಜಾಗತಿಕ ಮಾರುಕಟ್ಟೆಯಲ್ಲಿ ಭಾರತವನ್ನು ಅಗ್ರಸ್ಥಾನಕ್ಕೇರಿಸಲೇ ಬೇಕೆಂದು ಭಾರತೀಯ ಎಐ ನವೋದ್ಯಮ ಕಂಪನಿಗಳೂ ದೃಢ ನಿಶ್ಚಯ ಮಾಡಿಕೊಂಡಿವೆ. ಕೇಂದ್ರ ಸರ್ಕಾರದ ಮೇಕ್ ಇನ್ ಇಂಡಿಯಾ ಉಪಕ್ರಮ ಮತ್ತು ವೋಕಲ್ ಫಾರ್ ಲೋಕಲ್ ಇತ್ಯಾದಿ ಸ್ವದೇಶಿ ಚಿಂತನೆಗಳಿಂದಾಗಿ ಎಐ ಕ್ಷೇತ್ರದಲ್ಲಿ ಆತ್ಮನಿರ್ಭರ (ಸ್ವಾವಲಂಬಿ) ಕನಸು ನನಸಾಗಿಸಲು ಕೇಂದ್ರ ಸರ್ಕಾರ ಮತ್ತು ಕಂಪನಿಗಳು ಟೊಂಕ ಕಟ್ಟಿವೆ.

ಆಫ್‌ಲೈನ್ ನಲ್ಲೂ ಎಐ!

ಭಾರತೀಯ ನವೋದ್ಯಮ ಸರ್ವಂ ಎಐ ಇತ್ತೀಚೆಗೆ ತನ್ನ ಸರ್ವಂ ಎಜ್ ಎಂಬ ಅಪ್ಲಿಕೇಶನ್ ಅನಾವರಣಗೊಳಿಸಿದ್ದು, ಇದು ಇಂಟರ್‌ನೆಟ್ ಇಲ್ಲದೆ ಕಾರ್ಯನಿರ್ವಹಿಸುವ ಎಐ ಅಪ್ಲಿಕೇಶನ್ ಆಗಿದೆ. ಈ ಅಪ್ಲಿಕೇಶನ್ ಅನ್ನು ನಿಮ್ಮ ಫೋನ್ ಅಥವಾ ಲ್ಯಾಪ್‌ಟಾಪ್‌ನಲ್ಲಿ ಇಂಟರ್‌ನೆಟ್ ಇಲ್ಲದೆಯೇ ಆಫ್‌ಲೈನ್‌ನಲ್ಲಿ ಬಳಸಬಹುದು. ಸರ್ವಂ ಎಜ್ ಅಪ್ಲಿಕೇಶನ್ ಬಳಸಲು ಕ್ಲೌಡ್ ಸ್ಟೋರೇಜ್ ಅಥವಾ ಇಂಟರ್‌ನೆಟ್ ಸಂಪರ್ಕ ಅಗತ್ಯವಿಲ್ಲವೆಂದು ಸರ್ವಂ ಎಐ ಹೇಳಿದೆ.

ಇಂಟರ್‌ನೆಟ್ ಬಳಸದ ಮೊಬೈಲ್ ಬಳಕೆದಾರರನ್ನೂ ಸರ್ವಂ ಎಜ್ ಆ್ಯಪ್ ಕೃತಕ ಬುದ್ಧಿಮತ್ತೆ(ಎಐ) ಅನ್ನು ತಲುಪಿಸಲಿದೆ. ಸರ್ವಂ ಎಜ್ ಆ್ಯಪ್ ನಿಮ್ಮ ಫೋನ್‌ನ ಪ್ರಾಸೆಸಿಂಗ್ ಪವರ್ ಬಳಸಿಕೊಳ್ಳಲಿದ್ದು, ಇಂಟರ್‌ನೆಟ್ ಸಂಪರ್ಕ ಇಲ್ಲದಿದ್ದರೂ ಸುರಕ್ಷಿತವಾಗಿ ಕಾರ್ಯ ನಿರ್ವಹಿಸಲಿದೆ.

ಸರ್ವಂ ಕಾಜಿ ವಿಶೇಷತೆಗಳು

ಸರ್ವಂ ಎಐ ತನ್ನ ಕಾಜಿ ಸ್ಮಾರ್ಟ್ ಗ್ಲಾಸ್ ವಿಶೇಷತೆಗಳನ್ನು ಅಧಿಕೃತವಾಗಿ ಘೋಷಿಸಿಲ್ಲ. ಆದರೆ ಕಾಜಿ ಈ ಕೆಳಗಿನ ಎಐ ಸಾಮರ್ಥ್ಯ ಹೊಂದಿರಲಿವೆ ಎಂಬ ನಿರೀಕ್ಷೆಗಳಿವೆ.

ಕೈ ಬಳಸದೆ ಎಐ ಸಂವಹನ: ಸ್ಮಾರ್ಟ್ ಗ್ಲಾಸ್‌ಗಳು ನಮ್ಮ ಮಾತನ್ನು ಕೇಳಿ ಅರ್ಥ ಮಾಡಿಕೊಳ್ಳಲಿದ್ದು, ಬುದ್ಧಿವಂತಿಕೆಯ ಪ್ರತಿಕ್ರಿಯೆಗಳನ್ನು ನೀಡಲಿದೆ. ಇದು ಪ್ರತಿದಿನ ನಿಮ್ಮ ಫೋನ್ ಅಥವಾ ಸ್ಕ್ರೀನ್‌ನ ಮೂಲಕ ಎಐ ಸಹಾಯ ಮಾಡಲಿದೆ.

ಧ್ವನಿ, ದೃಶ್ಯ ಮತ್ತು ಭಾಷಾ ಬುದ್ಧಿಮತ್ತೆ: ಬಿಲ್ಟ್-ಇನ್ ಸೆನ್ಸಾರ್‌ಗಳು ಮತ್ತು ಎಐ ಮಾದರಿಗಳನ್ನು ಬಳಸಿಕೊಂಡು ನಿಮ್ಮ ಸುತ್ತಮುತ್ತಲಿನ ಪರಿಸರವನ್ನು ಅರ್ಥೈಸಿಕೊಂಡ ಸ್ಮಾರ್ಟ್ ಗ್ಲಾಸ್, ನೀವು ಫೋನ್ ಬಳಸದೆಯೇ ಕೇಳಿದ ಪ್ರಶ್ನೆಗಳಿಗೆ ಸಲಹೆಗಳನ್ನು ನೀಡಲಿದೆ.

ಖಾಸಗಿ ಅನುಭವಗಳು: ಸರ್ವಂ ಪ್ಲಾಟ್‌ಫಾರಂ ಬಳಸಿಕೊಂಡು ಆ್ಯಪ್ ಡೆವಲಪರ್‌ಗಳು ಫೋಟೋ-ಆಧಾರಿತ (ಟೈಲರ್ಡ್) ಮೊಬೈಲ್ ಆ್ಯಪ್‌ಗಳನ್ನು ನಿರ್ಮಿಸಬಹುದು. ಇಂತಹಾ ಆ್ಯಪ್‌ಗಳನ್ನು ಫ್ಯಾಷನ್ ಬ್ರ್ಯಾಂಡ್‌ಗಳು ಹೆಚ್ಚಾಗಿ ಬಳಸುತ್ತವೆ.

ದೇಸಿ ವಿನ್ಯಾಸ ಮತ್ತು ನಿರ್ಮಾಣ: ಇದು ಸಂಪೂರ್ಣ ದೇಸಿ ವಿನ್ಯಾಸ ಮತ್ತು ನಿರ್ಮಾಣದ ಎಐ ಹಾರ್ಡ್‌ವೇರ್ ಉಪಕರಣವಾಗಿದೆ. ಸ್ಥಳೀಯ ಭಾಷೆಗಳಿಗೂ ಸಂಸ್ಕೃತಿಗೂ ಪ್ರಾಧಾನ್ಯತೆ ನೀಡಲಾಗಿದೆ.

ಎಐ ಚ್ಯಾಟ್ ಸಪೋರ್ಟ್: ಎಐ ಚ್ಯಾಟ್ ಸಪೋರ್ಟ್ ಸೇವೆಯನ್ನು ಪರಿಚಯಿಸಲು ಸರ್ವಂ ಯೋಜನೆ ಹಾಕಿಕೊಂಡಿದೆ. ಸ್ಮಾರ್ಟ್ ಗ್ಲಾಸ್‌ನಲ್ಲಿ ಎಐ ಚ್ಯಾಟ್ ಬಾಟ್ ಬರಲಿದ್ದು, ಅಗತ್ಯ ಸೇವೆಗಳಿಗಾಗಿ ಬಳಕೆದಾರರು ಚ್ಯಾಟ್ ಬಾಟ್‌ನೊಂದಿಗೆ ಸಂವಹನ ನಡೆಸಬಹುದು.

ಕಿರುಸುದ್ದಿ

ಛತ್ತೀಸ್‌ಗಢದಲ್ಲಿ 22 ನಕ್ಸಲರ ಶರಣಾಗತಿ

ರಾಯ್ಪುರ: ಛತ್ತೀಸ್‌ಗಢದ ಸುಕ್ಮಾ ಜಿಲ್ಲೆಯಲ್ಲಿ ಮಂಗಳವಾರ 22 ನಕ್ಸಲರು ಪೊಲೀಸರ ಮುಂದೆ ಶರಣಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸರ್ಕಾರದ ಪೂನಾ ಮಾರ್ಗೆಮ್ ಪುನರ್‌ವಸತಿ ಯೋಜನೆಯಲ್ಲಿ ಓರ್ವ ಮಹಿಳೆ ಸೇರಿದಂತೆ ಕಾರ್ಯಕರ್ತರು ಹಿರಿಯ ಪೊಲೀಸ್ ಮತ್ತು ಸಿಆರ್‌ಪಿಎಫ್ ಅಧಿಕಾರಿಗಳ ಮುಂದೆ ಶರಣಾಗಿದ್ದಾರೆ ಎಂದು ಸುಕ್ಮಾ ಪೊಲೀಸ್ ವರಿಷ್ಠಾಧಿಕಾರಿ ಕಿರಣ್ ಚವಾಣ್ ತಿಳಿಸಿದ್ದಾರೆ. ನಕ್ಸಲ್ ವಿರೋಧಿ ಕಾರ್ಯಾಚರಣೆಗಳು, ಹೊಸ ಭದ್ರತಾ ಶಿಬಿರಗಳ ಸ್ಥಾಪನೆ ಮತ್ತು ಅಭಿವೃದ್ಧಿ ಯೋಜನೆಗಳ ಹೆಚ್ಚಿದ ವ್ಯಾಪ್ತಿಯಿಂದಾಗಿ ಜಿಲ್ಲೆಯಲ್ಲಿ ಮಾವೋವಾದಿಗಳ ಪ್ರಭಾವವು ಸ್ಥಿರವಾಗಿ ಕುಸಿಯುತ್ತಿದೆ ಎಂದು ಅವರು ಹೇಳಿದರು.

ರೈಲು ಶೌಚಾಲಯದಲ್ಲಿ ನೈರ್ಮಲ್ಯಕ್ಕೆ ಆದ್ಯತೆ

ಹೊಸದಿಲ್ಲಿ: ರೈಲು ಶೌಚಾಲಯಗಳಲ್ಲಿ ನೀರಿನ ಕೊಳವೆಗಳು ಮತ್ತು ಚೈನ್ಡ್ ಸ್ಟೈನ್‌ಲೆಸ್ ಸ್ಟೀಲ್ ಮಗ್‌ಗಳನ್ನು ಜೆಟ್ ಸ್ಪ್ರೇಗಳೊಂದಿಗೆ ಬದಲಾಯಿಸುವಂತೆ ರೈಲ್ವೆ ಸಚಿವಾಲಯವು ಎಲ್ಲಾ ವಲಯ ರೈಲ್ವೆಗೆ ನಿರ್ದೇಶನ ನೀಡಿದೆ. ನೀರು ನಿಲ್ಲುವುದನ್ನು ತಡೆಗಟ್ಟುವ ಮತ್ತು ಪ್ರಯಾಣಿಕರಿಗೆ ನೈರ್ಮಲ್ಯದ ಮಾನದಂಡಗಳನ್ನು ಸುಧಾರಿಸುವ ಗುರಿಯನ್ನು ಹೊಂದಿರುವ ಉತ್ತರ ರೈಲ್ವೆಯ ಯಶಸ್ವಿ ಪ್ರಯೋಗದ ಬಳಿಕ ಈ ನಿರ್ದೇಶನ ಬಂದಿದೆ. 2026ರ ಫೆಬ್ರವರಿ 17ರಂದು ಹೊರಡಿಸಲಾದ ಸುತ್ತೋಲೆಯಲ್ಲಿ, ಕೋಚ್ ಶೌಚಾಲಯದ ಮಹಡಿಗಳಲ್ಲಿ ನೀರು ಸಂಗ್ರಹವಾಗುವುದರಿಂದ ಅನಾರೋಗ್ಯಕರ ಪರಿಸ್ಥಿತಿಗಳು ಮತ್ತು ಪ್ರಯಾಣಿಕರ ಪ್ರತಿಕೂಲ ಪ್ರತಿಕ್ರಿಯೆಗಳು ಉಂಟಾಗುತ್ತವೆ ಎಂದು ಸಚಿವಾಲಯವು ಗಮನಿಸಿತ್ತು.

ದ್ವಿಪಕ್ಷೀಯ ಸಂಬಂಧ ವೃದ್ಧಿಯ ಆಶಯ

ಹೊಸದಿಲ್ಲಿ: ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರು ಮಂಗಳವಾರ ಬಾಂಗ್ಲಾದೇಶದ ಪ್ರಧಾನಿಯಾಗಿ ಬಿಎನ್‌ಪಿ ನಾಯಕ ಪ್ರಮಾಣ ವಚನ ಸ್ವೀಕರಿಸಿದ ಬಳಿಕ ನೂತನ ಪ್ರಧಾನಿ ತಾರಿಕ್ ರೆಹಮಾನ್ ಅವರನ್ನು ಭೇಟಿಯಾದರು. ಅವರ ಭಾರತೀಯ ಸಹವರ್ತಿ ನರೇಂದ್ರ ಮೋದಿಯವರ ಅಭಿನಂದನಾ ಪತ್ರವನ್ನು ಹಸ್ತಾಂತರಿಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನಮ್ಮ ಬಹುಮುಖಿ ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸಲು, ಪ್ರಾದೇಶಿಕ ಸಹಕಾರವನ್ನು ಹೆಚ್ಚಿಸಲು ಮತ್ತು ಸಂಪರ್ಕ, ವ್ಯಾಪಾರ, ತಂತ್ರಜ್ಞಾನ, ಶಿಕ್ಷಣ, ಕೌಶಲ್ಯ ಅಭಿವೃದ್ಧಿ, ಇಂಧನ, ಆರೋಗ್ಯ ರಕ್ಷಣೆ, ಸಂಸ್ಕೃತಿ ಮತ್ತು ಜನರ ನಡುವಿನ ವಿನಿಮಯದಂತಹ ವ್ಯಾಪಕ ಕ್ಷೇತ್ರಗಳಲ್ಲಿ ನಮ್ಮ ಸಾಮಾನ್ಯ ಗುರಿಗಳನ್ನು ಮುನ್ನಡೆಸಲು ನಿಮ್ಮೊಂದಿಗೆ ಕೆಲಸ ಮಾಡಲು ನಾನು ಎದುರು ನೋಡುತ್ತಿದ್ದೇನೆ ಎಂದು ಮೋದಿ ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಫೆ.22ಕ್ಕೆ ಬೋರಾ ಬಿಜೆಪಿಗೆ ಸೇರ್ಪಡೆ

ಗುವಾಹಟಿ: ಅಸ್ಸಾಂ ಕಾಂಗ್ರೆಸ್ ಭವಿಷ್ಯ ಅತಂತ್ರ ಸ್ಥಿತಿಯಲ್ಲಿದ್ದು, ಅಸ್ಸಾಂನ ಮಾಜಿ ರಾಜ್ಯ ಕಾಂಗ್ರೆಸ್ ಮುಖ್ಯಸ್ಥ ಭೂಪೇನ್ ಬೋರಾ ರಾಜೀನಾಮೆ ನೀಡಿದ ಬೆನ್ನಲ್ಲೇ ಬಿಜೆಪಿಗೆ ಸೇರ್ಪಡೆಯಾಗುತ್ತಿದ್ದಾರೆ. ಬೋರಾ ಅವರು ಫೆಬ್ರವರಿ 22 ರಂದು ಬಿಜೆಪಿ ಸೇರಲಿದ್ದಾರೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತಾ ಬಿಸ್ವ ಶರ್ಮಾ ಮಂಗಳವಾರ ಘೋಷಿಸಿದ್ದಾರೆ.

ಫೆಬ್ರವರಿ 22ರಂದು ಭೂಪೇನ್ ಬೋರಾ ಬಿಜೆಪಿ ಸೇರಲಿದ್ದಾರೆ. ಅವರ ಜತೆಗೆ ಗುವಾಹಟಿ ಮತ್ತು ಉತ್ತರ ಲಖಿಂಪುರದಲ್ಲಿ ನೂರಾರು ಕಾಂಗ್ರೆಸ್ ನಾಯಕರು ಅಧಿಕೃತವಾಗಿ ಬಿಜೆಪಿ ಸೇರಲಿದ್ದಾರೆ ಎಂದು ಬೋರಾ ಜತೆಗಿನ ಜಂಟಿ ಪ್ರತಿಕಾಗೋಷ್ಠಿಲ್ಲಿ ಸಿಎಂ ಶರ್ಮಾ ಹೇಳಿದ್ದಾರೆ. ನಮ್ಮ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರು ಈಗಾಗಲೇ ಅವರ ಸೇರ್ಪಡೆಗೆ ಅನುಮೋದನೆ ನೀಡಿದ್ದಾರೆ. ಭೂಪೇನ್ ಬೋರಾ ಅವರಿಗೆ ಎಲ್ಲಾ ಗೌರವ ಮತ್ತು ಘನತೆಯನ್ನು ನೀಡಲಾಗುವುದು. ಬಿಜೆಪಿ ಸೇರುವುದು ಅವರಿಗೆ ಮನೆಗೆ ಮರಳುವಂತಿದೆ, ಏಕೆಂದರೆ ಇದು ಅವರಂತಹ ಅನೇಕರನ್ನು ಹೊಂದಿರುವ ಪಕ್ಷವಾಗಿದೆ ಎಂದಿದ್ದಾರೆ. ಈ ಬೆಳವಣಿಗೆಗಳು ಮುಖ್ಯಮಂತ್ರಿ ಹಿಮಂತಾ ಬಿಸ್ವ ಶರ್ಮಾ ಅವರು ಭೋರಾ ಅವರ ಅಧಿಕೃತ ನಿವಾಸಕ್ಕೆ ಭೇಟಿ ನೀಡಿದ ಬೆನ್ನಲ್ಲೇ ಬಂದಿದೆ. ಸೋಮವಾರ, ಬೋರಾ ಅವರು ತಮ್ಮ ರಾಜೀನಾಮೆ ಸಲ್ಲಿಸಿದ್ದರು. ಬೋರಾ ಅವರು ತಮ್ಮ ರಾಜೀನಾಮೆ ಪತ್ರದಲ್ಲಿ, ಪಕ್ಷದ ನಾಯಕತ್ವದಿಂದ ತಮ್ಮನ್ನು ನಿರ್ಲಕ್ಷಿಸಲಾಗುತ್ತಿದೆ ಮತ್ತು ರಾಜ್ಯ ಘಟಕದಲ್ಲಿ ತಮಗೆ ಸಿಗಬೇಕಾದ ಅರ್ಹತೆಯನ್ನು ನೀಡಲಾಗಿಲ್ಲ ಎಂದು ಹೇಳಿದ್ದರು.

ಎಐ ಆಧಾರಿತ ಮಾದರಿ ಕ್ಲಿನಿಕ್ ಆರೋಗ್ಯ ಕೇಂದ್ರ

ಹೊಸದಿಲ್ಲಿ: ನಿಮಿಷಗಳಲ್ಲಿ ಹೆಲ್ತ್ ರಿಪೋರ್ಟ್ ವಿಶ್ಲೇಷಣೆ ಮಾಡಿ, ಅದರ ಫಲಿತಾಂಶವನ್ನು ಕೈಗಿಡುವ ಎಐ ಆಧಾರಿತ ಕ್ಲಿನಿಕ್ ಮಾದರಿ ಇಲ್ಲಿ ನಡೆಯುತ್ತಿರುವ ಎಐ ಇಂಪ್ಯಾಕ್ಟ್ ಶೃಂಗಸಭೆಯಲ್ಲಿ ಗಮನ ಸೆಳೆಯುತ್ತಿದೆ. ಇದರ ಪ್ರದರ್ಶನ ಇರುವುದು ಜಿಯೋ ಪೆವಿಲಿಯನ್‌ನಲ್ಲಿದ್ದು, ಅಲ್ಲಿ ಪ್ರದರ್ಶಿಸಲಾದ ಜಿಯೋ ಆರೋಗ್ಯ ಎಐ, ಪ್ರಾಥಮಿಕ ಆರೋಗ್ಯ ಕ್ಷೇತ್ರದಲ್ಲಿ ಎಐ-ಆಧಾರಿತ ಕ್ಲಿನಿಕ್ ಮಾದರಿಯನ್ನು ಪರಿಚಯಿಸಿದೆ. ಈ ಎಐ-ಚಾಲಿತ ವ್ಯವಸ್ಥೆಯು ರೋಗಿಯ ಪ್ರಮುಖ ಆರೋಗ್ಯ ಅಂಶಗಳನ್ನು ಅಳೆದು- ತೂಗಿ, ಕೆಲವೇ ನಿಮಿಷಗಳಲ್ಲಿ ಸ್ಕ್ರೀನ್ ಮಾಡುತ್ತದೆ ಮತ್ತು ವಿಶ್ಲೇಷಿಸುತ್ತದೆ, ಸಂಭಾವ್ಯ ಅಪಾಯಗಳನ್ನು ಗುರುತಿಸುತ್ತದೆ. ಅಗತ್ಯವಿರುವಂತೆ ತಜ್ಞರ ಉಲ್ಲೇಖಗಳನ್ನು ಶಿಫಾರಸು ಮಾಡುತ್ತದೆ. ದೇಶದ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಎಐ-ಸಕ್ರಿಯಗೊಳಿಸಿದ ಚಿಕಿತ್ಸಾಲಯಗಳಾಗಿ ಪರಿವರ್ತಿಸುವುದು, ಕೈಗೆಟುಕುವ ಆರೋಗ್ಯ ಸೇವೆಯನ್ನು ಒದಗಿಸುವುದು ತನ್ನ ಗುರಿಯಾಗಿದೆ ಎಂದು ಕಂಪನಿ ಹೇಳಿಕೊಂಡಿದೆ.

ಈ ವ್ಯವಸ್ಥೆಯಲ್ಲಿ, ರೋಗಿಯು ಎಐ-ಸಕ್ರಿಯಗೊಳಿಸಿದ ರೋಗನಿರ್ಣಯ (ಡಯಾಗ್ನೋಸ್ಟಿಕ್) ಸಾಧನ, ಸ್ಮಾರ್ಟ್ ಮಿರರ್ ಮುಂದೆ ನಿಲ್ಲುತ್ತಾನೆ, ಇದು ಕಣ್ಣುಗಳು, ಚರ್ಮ ಮತ್ತು ಇತರ ದೃಶ್ಯ ಸೂಚನೆಗಳ ಆಧಾರದ ಮೇಲೆ ಅಗತ್ಯವಾದ ರೀಡಿಂಗ್ ತೆಗೆದುಕೊಳ್ಳುತ್ತದೆ. ಎಐ ಈ ಡೇಟಾವನ್ನು ವಿಶ್ಲೇಷಿಸುತ್ತದೆ. ಪ್ರಾಥಮಿಕ ಆರೋಗ್ಯ ಮೌಲ್ಯಮಾಪನವನ್ನು ಜನರೇಟ್ ಮಾಡುತ್ತದೆ. ರೋಗಿಯು ಸಮಸ್ಯೆಯನ್ನು ವಾಯ್ಸ್ ಎಐ ವೈದ್ಯರಿಗೆ ಮೌಖಿಕವಾಗಿ ವಿವರಿಸಬಹುದು. ಅಗತ್ಯವಿದ್ದರೆ, ವಾಯ್ಸ್ ಎಐ ವೈದ್ಯರು ರೋಗಿಗೆ ಹೆಚ್ಚುವರಿ ಪ್ರಶ್ನೆಗಳನ್ನು ಸಹ ಕೇಳುತ್ತಾರೆ. ಇದರ ವೈಶಿಷ್ಟ್ಯವೆಂದರೆ ಅದು ಹಲವಾರು ಪ್ರಮುಖ ಭಾರತೀಯ ಭಾಷೆಗಳಲ್ಲಿ ಸಂವಹನ ನಡೆಸಬಹುದು.

ರಾಷ್ಟ್ರೀಯ ಗೀತೆಗೆ ವಿರೋಧ ದೇಶದ್ರೋಹಕ್ಕಿಂತ ಕಮ್ಮಿಯಲ್ಲ

ಲಖನೌ: ವಂದೇ ಮಾತರಂ ಅನ್ನು ವಿರೋಧಿಸುವವರಿಗೆ ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ರಾಷ್ಟ್ರೀಯ ಗೀತೆಗೆ ವಿರೋಧ ವ್ಯಕ್ತಪಡಿಸುವುದು ದೇಶದ್ರೋಹಕ್ಕಿಂತ ಕಡಿಮೆಯೇನಲ್ಲ ಎಂಬ ಸ್ಪಷ್ಟವಾದ ಎಚ್ಚರಿಕೆ ನೀಡಿದ್ದಾರೆ. ವಂದೇ ಮಾತರಂ ಅನ್ನು ವಿರೋಧಿಸುವುದಾಗಲಿ ಅಥವಾ ರಾಷ್ಟ್ರೀಯ ಅಸ್ಮಿತೆಯ ಸಂಕೇತಗಳನ್ನು ಅವಮಾನಿಸುವುದಾಗಲಿ ದೇಶದ್ರೋಹಕ್ಕಿಂತ ಕಮ್ಮಿಯೇನಲ್ಲ ಎಂದು ಸಮಾಜವಾದಿ ಪಕ್ಷ ಮತ್ತು ಕಾಂಗ್ರೆಸ್ ಪಕ್ಷದವರಿಗೆ ಖಡಕ್ ಸಂದೇಶ ರವಾನಿಸಿದ್ದಾರೆ. ವಿಧಾನಸಭೆಯ ಬಜೆಟ್ ಅಧಿವೇಶನದಲ್ಲಿ ಮಾತನಾಡಿದ ಯೋಗಿ, ವಿರೋಧ ಪಕ್ಷದವರು ರಾಷ್ಟ್ರೀಯ ಗೀತೆಯನ್ನು ಅಗೌರವಿಸಿರುವುದನ್ನು ಪ್ರಸ್ತಾಪಿಸಿದರು. ಭಾರತ ವಿರೋಧಿಗಳ ಪರವಾಗಿ ಅಸಂಬದ್ಧ ಹೇಳಿಕೆಗಳನ್ನು ನೀಡುತ್ತಾರೆ. ಇದು ದೇಶದ್ರೋಹಕ್ಕಿಂತ ಕಡಿಮೆಯೇನಲ್ಲ ಎಂದು ಯೋಗಿ ಎಚ್ಚರಿಕೆ ನೀಡಿದರು. 1950ರ ಜ.24ರಂದು ದೇಶದ ಸಂಸತ್ತಿನಲ್ಲೇ ವಂದೇ ಮಾತರಂ ರಾಷ್ಟ್ರೀಯ ಗೀತೆ ಮಾನ್ಯತೆ ಪಡೆದಿತ್ತೆಂದು ಸಿಎಂ ಯೋಗಿ ಸದಸ್ಯರಿಗೆ ನೆನಪಿಸಿದರು. ತ್ರಿವರ್ಣ, ರಾಷ್ಟ್ರಗೀತೆ, ರಾಷ್ಟ್ರೀಯ ಗೀತೆ ಮತ್ತು ರಾಷ್ಟ್ರೀಯ ಮಹಾತ್ಮರನ್ನು ಗೌರವಿಸುವುದು ಪ್ರತಿ ಭಾರತೀಯನ ಆದ್ಯ ಕರ್ತವ್ಯವಾಗಿದೆ ಎಂದು ಯೋಗಿ ಹೇಳಿದರು. ಸಂವಿಧಾನದ ಹೆಸರಿನಲ್ಲಿ ಸಮಾಜವಾದಿ ಪಕ್ಷ ಮತ್ತು ಕಾಂಗ್ರೆಸ್ ಜನರ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಇನ್ನೊಂದೆಡೆ ಇದೇ ಪಕ್ಷದವರು ವಂದೇ ಮಾತರಂ ವಿರೋಧಿಸುತ್ತಿದ್ದಾರೆ. ಈ ದೇಶದಲ್ಲಿ ಬದುಕಬೇಕು, ಆದರೆ ರಾಷ್ಟ್ರಗೀತೆ ಮತ್ತು ರಾಷ್ಟ್ರೀಯ ಗೀತೆಯಿಂದ ಸಮಸ್ಯೆಯೇ? ಇದನ್ನು ಸಹಿಸಲು ಸಾಧ್ಯವಿಲ್ಲ ಎಂದು ಯೋಗಿ ರಾಷ್ಟ್ರೀಯ ಗೀತೆ ವಿರೋಧಿಗಳನ್ನು ತರಾಟೆಗೆತ್ತಿಕೊಂಡರು.

ಇಮ್ರಾನ್‌ಗೆ ಸೂಕ್ತ ಚಿಕಿತ್ಸೆ ನೀಡಿ: ಮಾಜಿ ನಾಯಕರ ಮನವಿ

ಹೊಸದಿಲ್ಲಿ: ಪಾಕಿಸ್ತಾನ ಮಾಜಿ ಪ್ರಧಾನಿ ಮತ್ತು ವಿಶ್ವಕಪ್ ವಿಜೇತ ನಾಯಕ ಇಮ್ರಾನ್ ಖಾನ್ ಅವರಿಗೆ ತಕ್ಷಣ ವೈದ್ಯಕೀಯ ಚಿಕಿತ್ಸೆ ನೀಡಿ. ಬಂಧನದಲ್ಲಿ ಅವರನ್ನು ಗೌರವಯುತವಾಗಿ ಚಿಕಿತ್ಸೆ ನೀಡುವುದನ್ನು ಖಚಿತಪಡಿಸಿಕೊಳ್ಳುವಂತೆ ಪಾಕಿಸ್ತಾನ ಸರ್ಕಾರವನ್ನು ಭಾರತ ಕ್ರಿಕೆಟ್ ತಂಡ ಮತ್ತು ಅಂತಾರಾಷ್ಟ್ರೀಯ ಕ್ರಿಕೆಟ್ ತಂಡದ ಮಾಜಿ ನಾಯಕರು ಮನವಿ ಮಾಡಿದ್ದಾರೆ. ಭಾರತದ ಕ್ರಿಕೆಟ್ ತಂಡ ಮಾಜಿ ನಾಯಕರಾದ ಸುನಿಲ್ ಗವಾಸ್ಕರ್ ಮತ್ತು ಕಪಿಲ್ ದೇವ್ ಸೇರಿದಂತೆ ಮಾಜಿ ಅಂತಾರಾಷ್ಟ್ರೀಯ ಕ್ರಿಕೆಟ್ ನಾಯಕರ ಗುಂಪು ಜಂಟಿ ಹೇಳಿಕೆಯಲ್ಲಿ ಒತ್ತಾಯಿಸಿದೆ. ಇಮ್ರಾನ್ ಖಾನ್ ಅವರ ಸಹೋದರಿ ಅಲೀಮಾ ಖಾನುಮ್ ಅವರು ಜೈಲಿನಲ್ಲಿ ಖಾನ್ ಅವರಿಗೆ ನೀಡಲಾಗುತ್ತಿರುವ ಚಿಕಿತ್ಸೆ ಮತ್ತು ಅವರ ಆರೋಗ್ಯ ಹದಗೆಡುತ್ತಿರುವುದರ ಬಗ್ಗೆ ಕಳವಳ ವ್ಯಕ್ತಪಡಿಸಿದ್ದರು. ಅವರ ಚಿಕಿತ್ಸೆ ಮತ್ತು ಸೆರೆವಾಸದ ಪರಿಸ್ಥಿತಿಗಳ ಬಗ್ಗೆ ಆಳವಾದ ಕಳವಳದಿಂದ ಈ ಪತ್ರ ಬರೆದಿದ್ದೇವೆ ಎಂದು ಹೇಳಿಕೆಯಲ್ಲಿ ಅವರು ಉಲ್ಲೇಖಿಸಿದ್ದಾರೆ.

ವಯಸ್ಸು ಆಧಾರಿತ ಸಾಮಾಜಿಕ ಜಾಲತಾಣ ನಿರ್ಬಂಧ ಜಾರಿ ಸಾಧ್ಯತೆ | ಜಾಲತಾಣ ವ್ಯಸನಮುಕ್ತ ಭಾರತಕ್ಕಾಗಿ ಕೇಂದ್ರ ಪಣ

ಮಕ್ಕಳಿಗೆ ಸಾಮಾಜಿಕ ಜಾಲತಾಣ ನಿರ್ಬಂಧ ಕುರಿತ ಚರ್ಚೆ

ಹೊಸದಿಲ್ಲಿ: ವ್ಯಸನಕಾರಿ ಡಿಜಿಟಲ್ ಸೇವೆಗಳು ಮಕ್ಕಳ ಕೈ ಸೇರುವುದನ್ನು ತಡೆಯಬೇಕೆಂಬ ಕೂಗು ಜಾಗತಿಕ ಮಟ್ಟದಲ್ಲಿ ಕೇಳಿಬಂದಿದ್ದು, ಸಾಮಾಜಿಕ ಜಾಲತಾಣಗಳ ಮೇಲೆ ವಯಸ್ಸು ಆಧಾರಿತ ನಿರ್ಬಂಧ ಹೇರುವ ಕುರಿತು ಕೇಂದ್ರ ಸರ್ಕಾರ ಚರ್ಚೆ ನಡೆಸುತ್ತಿದೆ ಎಂದು ಕೇಂದ್ರ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ದಿಲ್ಲಿಯ ಭಾರತ ಮಂಟಪಂನಲ್ಲಿ ಸೋಮವಾರ ಆರಂಭವಾದ ಎಐ ಇಂಪ್ಯಾಕ್ಟ್ ಶೃಂಗದಲ್ಲಿ ಮಾತನಾಡಿದ ಸಚಿವ ವೈಷ್ಣವ್, ಸಾಮಾಜಿಕ ಜಾಲತಾಣಗಳ ಮೇಲೆ ವಯಸ್ಸಿನ ಆಧಾರದಲ್ಲಿ ನಿರ್ಬಂಧಗಳನ್ನು ಹೇರುವ ಮತ್ತು ಡೀಪ್‌ಫೇಕ್ ಸಮಸ್ಯೆಗಳ ಬಗ್ಗೆ ಕೇಂದ್ರ ಸರ್ಕಾರ ಚರ್ಚೆ ನಡೆಸುತ್ತಿದೆ ಎಂದು ಸಚಿವ ವೈಷ್ಣವ್ ಸ್ಪಷ್ಟಪಡಿಸಿದ್ದಾರೆ.

ಶೃಂಗದಲ್ಲಿ ಜನದಟ್ಟಣೆ; ಕ್ಷಮೆ ಕೇಳಿದ ಸಚಿವರು: ಅಂತಾರಾಷ್ಟ್ರೀಯ ಮಟ್ಟದಲ್ಲಿ ಆಯೋಜನೆ ಮಾಡಿರುವ ಎಐ ಶೃಂಗದಲ್ಲಿ ಸಾವಿರಾರು ಜನ ಸೇರಿದ್ದರಿಂದ ಉಂಟಾದ ಜನದಟ್ಟಣೆ ಸಮಸ್ಯೆಗಳಿಗಾಗಿ ಸಚಿವ ಅಶ್ವಿನಿ ವೈಷ್ಣವ್ ಕ್ಷಮೆಯಾಚಿಸಿದ್ದಾರೆ. ಭಾರೀ ಸಂಖ್ಯೆಯಲ್ಲಿ ಜನ ಭೇಟಿ ನೀಡಿದ್ದರಿಂದ ಸುದೀರ್ಘ ಕ್ಯೂ, ಕಳ್ಳತನ ಮತ್ತು ಇಂಟರ್‌ನೆಟ್ ವೈಫಲ್ಯ ಇತ್ಯಾದಿ ಸಮಸ್ಯೆಗಳು ಎದುರಾಗಿದ್ದವು. ಇದರಿಂದ ತೊಂದರೆ ಅನುಭವಿಸಿದವರಲ್ಲಿ ನಾವು ಮುಕ್ತ ಮನಸ್ಸಿನಿಂದ ಕ್ಷಮೆಯಾಚಿಸುತ್ತೇವೆ ಎಂದು ಸಚಿವರ ಹೇಳಿದ್ದಾರೆ.



ಜಟಿಲ ಸಮಸ್ಯೆಗಳ ಬಗೆಹರಿಸಲಿದೆ ಎಐ: 2047ಕ್ಕೆ ಸಂಪನ್ನ ರಾಷ್ಟ್ರವಾಗೋ ನಿಟ್ಟಿನಲ್ಲಿ ಭಾರತದ ಯಾನಕ್ಕೆ ಎಐಯು ಶಕ್ತಿ ತುಂಬಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿರುವ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್, ಕೃತಕ ಬುದ್ಧಿಮತ್ತೆಯ ಸಂಪೂರ್ಣ ಪ್ರಯೋಜನಗಳ ಬಳಸುವಂತೆ ಭಾರತದ ಯುವಶಕ್ತಿಗೆ ಕರೆಯಿತ್ತಿದ್ದಾರೆ. ವಿಕಸಿತ ಭಾರತ ದೃಷ್ಟಿಕೋನದ ಸಾಕಾರದಲ್ಲಿ ತಂತ್ರಜ್ಞಾನಗಳು ಮಹತ್ವದ ಪಾತ್ರ ವಹಿಸಲಿವೆ ಎಂದು ಸಚಿವರು ಹೇಳಿದ್ದಾರೆ.

ಎಐ ಜತೆಗಿನ ಸಖ್ಯವನ್ನು ಗಾಢಗೊಳಿಸಿ, ಟೀಮ್‌ವರ್ಕ್ ಬಲವರ್ಧಿಸಿ ಮತ್ತು ತಂತ್ರಜ್ಞಾನಗಳು ತೆರೆದಿಟ್ಟಿರುವ ಅಗಾಧ ಅವಕಾಶಗಳ ಕಂಡುಕೊಂಡು ಬಳಸಿಕೊಳ್ಳಿ ಎಂದು ಸಚಿವರು ಮುಂದಿನ ತಲೆಮಾರಿನ ಯುವಶಕ್ತಿಗೆ ಕರೆ ನೀಡಿದ್ದಾರೆ. ಎಐ ಇಂಪ್ಯಾಕ್ಟ್ ಸಮ್ಮಿಟ್ ಉದ್ದೇಶಿಸಿ ಸಚಿವರು ಮಾತನಾಡಿದರು. ಭಾರತದ ಸಂಪನ್ನ ಚರಿತ್ರೆ ಮತ್ತು ದಂತಕಥೆಗಳೊಂದಿಗೆ ರಾಷ್ಟ್ರದ ಬಹು ಆಯಾಮಗಳು, ವೈವಿಧ್ಯಮಯ ಸಂಸ್ಕೃತಿ, ಬಹುಭಾಷಾ ಪರಂಪರೆಯನ್ನು ಉಲ್ಲೇಖಿಸಿದ ಸಚಿವ ಪ್ರಧಾನ್, ಎಐಯು ಭಾರತಕ್ಕೆ ಮಹತ್ತ್ವಪೂರ್ಣ ಅವಕಾಶಗಳ ತೆರೆದಿಟ್ಟಿದೆ. ಜಟಿಲ ಸವಾಲುಗಳ ನಿಭಾಯಿಸುವಲ್ಲಿ ಎಐಯು ಶಕ್ತಿಶಾಲಿ ಮಾಧ್ಯಮವಾಗಬಲ್ಲುದು ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಎಐ ಜ್ಞಾನವನ್ನು ಮತ್ತಷ್ಟು ಗಹನಗೊಳಿಸಲು ಸಲಹೆ ಬಹುಆಯಾಮಗಳ ಸಹಿತ ವಿವಿಧತೆಯ ಸಂಸ್ಕೃತಿಸಂಪನ್ನ ಭಾರತೀಯ ಸಮಾಜದ ಸಂಕ್ಲಿಷ್ಟತೆಗಳನ್ನು ಅರಿಯುವಲ್ಲಿ ಎಐ ಪ್ರಮುಖ ಮಾಧ್ಯಮವಾಗಬಲ್ಲುದು ಎಂದು ವಿಶ್ವಾಸ ವ್ಯಕ್ತಪಡಿಸಿದ ಸಚಿವ ಪ್ರಧಾನ್, ಎಐ ಬಗ್ಗೆ ನಿಮ್ಮ ಜ್ಞಾನದಾಳವನ್ನು ಮತ್ತಷ್ಟು ಗಹನಗೊಳಿಸಿ ಎಂದು ದೇಶದ ಯುವಶಕ್ತಿಗೆ ಕರೆಯಿತ್ತರು. ಪರಿವರ್ತನೆಗಳಿಗೆ ಹೆದರುವ ಬದಲು ಅವನ್ನು ಧೈರ್ಯದಿಂದ ಸ್ವೀಕರಿಸಿ ಎಂದು ಸಲಹೆ ನೀಡಿದರು.

ಜನರಿಗೆ ಎಐ ತಲುಪಿಸಲು ಬೃಹತ್ ಮೂಲಸೌಕರ್ಯ

ಎಐ ಇಂಪ್ಯಾಕ್ಟ್ ಶೃಂಗದಲ್ಲಿ ಸ್ವದೇಶಿ ಎಐ ಮಾದರಿಗಳು ಲಭ್ಯವಿದ್ದು, ಅವುಗಳ ಸೇವೆಯನ್ನು ಸಾರ್ವಜನಿಕರಿಗೆ ತಲುಪಿಸಲು ಬೃಹತ್ ಮೂಲಸೌಕರ್ಯ ನಿರ್ಮಾಣಕ್ಕಾಗಿ ಕೇಂದ್ರ ಸರ್ಕಾರ ಯೋಜನೆ ರೂಪಿಸಿದೆ ಎಂದು ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಪುತ್ತೂರು ಮಾರುಕಟ್ಟೆ ಧಾರಣೆ

17-02-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	260 - 485	ಹಳೆ ಕರಿಗೋಟು	235 - 265
ಚೋಲ್ ಅಡಿಕೆ	520 - 550	ಹಸಿ ಕೊಕ್ಕೋ	80 - 110
ಡಬಲ್ ಚೋಲ್	520 - 550	ಒಣ ಕೊಕ್ಕೋ	380 - 380
ಹೊಸ ಪಟೋರ	365 - 415	**ಕಾಳುಮೆಣಸು ಧಾರಣೆ**	
ಹಳೆ ಪಟೋರ	400 - 430	ಕಾಳುಮೆಣಸು	430 - 680
ಹೊಸ ಉಳ್ಳಿ	115 - 280	**ರಬ್ಬರ್ ಧಾರಣೆ : ಗ್ರೇಡ್**	
ಹಳೆ ಉಳ್ಳಿ	105 - 290	ಆರ್‌ಎಸ್‌ಎಸ್ 1	208.00
ಹೊಸ ಕೋಕಾ	320 - 340	ಆರ್‌ಎಸ್‌ಎಸ್ 2	177.00
ಹಳೆ ಕೋಕಾ	350 - 370	ಸ್ಕ್ರಾಪ್ 1	131.00
ಹೊಸ ಕರಿಗೋಟು	235 - 265	ಸ್ಕ್ರಾಪ್ 2	113.00

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.

ಸಂ:ಕಾ.ಸಾ.ಚಿ/ಪಿ.ಬಿ–1/ಅಲ್ಪಾವಧಿ ಟೆಂಡರ್ ಪ್ರಕಟಣೆ–ಐ.ಎಫ್.ಟಿ–20/2025–26/276 ದಿನಾಂಕ: 16–02–2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರ ಮಾನ್ಯ ರಾಜ್ಯಪಾಲರ ಅಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿಸಿ ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ ಇವರು ಕೆಟಿಪಿಪಿ ಆಕ್ಟ್–2000 ನಿಯಮದಂತೆ ಹಾಗೂ ಸ್ಟಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1.2, 3 ಹಾಗೂ 4 (ಟೆಂಡರ್‌ಗಿಟ್ಟ ಮೊತ್ತ ಕನಿಷ್ಠ ರೂ.3.50 ಲಕ್ಷ ರೂಗಳು ಹಾಗೂ ಗರಿಷ್ಠ ರೂ.300.64 ಲಕ್ಷ ರೂಗಳು) ನಿಬಂಧನೆಗಳಿಗೊಳಪಟ್ಟಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ– ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್‌ಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಒಟ್ಟು 12 ಕಾಮಗಾರಿಗಳ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಸದರಿ ಟೆಂಡರ್ ಪ್ರಕ್ರಿಯೆಗಳನ್ನು ಈ ಕೆಳಗಿನಂತೆ ನಿಗದಿಪಡಿಸಿದೆ. ದಿ:16–02–2026 ರಿಂದ ಕೆಪಿಪಿ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ: 10–03–2026 ಸಾಯಂಕಾಲ 5.30 ರವರೆಗೆ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 11–03–2026 ರ ಸಾಯಂಕಾಲ 4.00 ಗಂಟೆಯವರೆಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ: 12–03–2026 ಸಾಯಂಕಾಲ 04–30 ಗಂಟೆಯ ನಂತರ (ಸಾಧ್ಯವಾದಲ್ಲಿ), ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ:13–03–2026 ಸಾಯಂಕಾಲ 04–30 ಗಂಟೆಯ ನಂತರ (ಸಾಧ್ಯವಾದಲ್ಲಿ). ಸದರಿ ಕಾಮಗಾರಿಯಲ್ಲಿ ಟೆಂಡರ್ ಮೊತ್ತ ಅಥವಾ ಇ.ಎಂ.ಡಿ.ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ ನಲ್ಲಿನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತ ಅಂತಿಮವಾಗಿರುತ್ತವೆ. ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ (08194–231811) ಹಾಗೂ ಕೆ.ಪಿ.ಪಿ.ಪಿ ಪೋರ್ಟಲ್ ಸಹಾಯಕ ದೂರವಾಣಿ ಸಂಖ್ಯೆ: +91–8046010000+91–8068948777 ರಿಂದ ಪಡೆಯಬಹುದು.

DIPR/CTA/KSMCA/679/2025-26

ಸಹಿ/–ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸ್ತ್ರೀ ಶಕ್ತಿ (ನಂ.SS-507th) ಡ್ರಾ ಫೆಬ್ರವರಿ 17ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]

SO 595985 (ERNAKULAM)

Cons Prize-Rs: 5000/-

SN 595985 SP 595985 SR 595985 SS 595985
ST 595985 SU 595985 SV 595985 SW 595985
SX 595985 SY 595985 SZ 595985

2nd Prize Rs: 30,00,000/- [30 Lakhs]

SY 451700 (KOLLAM)

3d Prize Rs: 5,00,000/- [5 Lakhs]

SP 881144 (IRINJALAKUDA)

FOR THE TICKETS ENDING WITH THE FOLLOWING NUMBERS

4th Prize Rs.5,000/-

0527 1202 1362 1579 2112 2525 2960 4105 4237 4426 5361 6674 7945 8222 8233 8706 9173 9178 9528

5th Prize Rs.2,000/-

0295 2718 5948 6462 6968 8111

6th Prize Rs.1,000/-

0414 1094 1545 1869 2343 2466 2773 2788 3901 3926 4557 5168 6310 6499 6696 6912 7076 7147 7399 7908 8245 8522 9165 9363 9453

7th Prize Rs.500/-

0033 0157 0267 0272 0314 0516 0602 0767 0795 0809 1208 1354 1397 1453 1557 1771 1830 2001 2234 2284 2397 2577 2706 2803 2932 3033 3103 3135 3136 3343 3647 3786 3846 3876 4107 4476 4808 4874 5240 5510 5769 6120 6178 6475 6531 6577 6646 6790 7135 7258 7327 7518 7582 7605 7829 7836 7927 7958 8086 8152 8266 8364 8599 8603 8709 8865 8932 9454 9466 9579 9646 9666 9690 9753 9911 9912

8th Prize Rs.200/-

0055 0080 0549 0586 0652 0707 0790 1038 1173 1182 1211 1223 1433 1438 1572 1587 1746 1750 1963 2017 2022 2147 2356 2722 2810 2929 3086 3150 3183 3205 3327 3444 3639 3665 3773 3817 3860 3979 4013 4067 4091 4187 4199 4296 4320 4338 4712 4714 4745 4752 5023 5026 5207 5243 5268 5305 5353 5381 5432 5841 5862 6027 6160 6167 6214 6226 6303 6381 6437 6469 6546 6927 7177 7242 7309 7819 8058 8367 8415 8619 8737 8757 8839 8848 8853 8945 9006 9042 9280 9577

9th Prize Rs.100/-

0202 0217 0245 0273 0326 0357 0552 0562 0594 0667 0680 0917 0934 0956 1037 1058 1263 1281 1303 1380 1381 1388 1395 1414 1494 1641 1657 1701 1912 1937 1948 1958 1992 2027 2178 2201 2228 2304 2404 2430 2507 2600 2891 2943 3162 3207 3224 3227 3337 3424 3517 3584 3780 3814 3852 3980 3988 4028 4055 4066 4210 4226 4240 4266 4305 4323 4502 4593 4625 4704 4716 4829 4893 5022 5085 5110 5152 5237 5402 5413 5456 5520 5657 5702 5738 5810 6028 6236 6301 6360 6397 6605 6627 6709 6777 6806 6940 7105 7130 7162 7467 7509 7790 7806 7837 7899 7923 7974 8042 8059 8127 8159 8165 8195 8211 8230 8238 8342 8455 8550 8636 8647 8663 8697 8742 8817 8892 8909 8915 8995 9117 9122 9181 9405 9464 9546 9578 9586 9593 9660 9683 9721 9729 9732 9746 9767 9776 9833 9933 9940

ಸಕಲೇಶಪುರದ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರು ರವರ ನ್ಯಾಯಾಲಯದಲ್ಲಿ

ಪಿ ಅಂಡ್ ಎಸ್‌ಸಿ ಸಂಖ್ಯೆ : 1/2026

ಅರ್ಜಿದಾರರು: 1. ಶ್ರೀಮತಿ ಶಾಲಿನಿ ಡಿ.ರಾವ್ ಕೋಂ ಲೇಟ್ ಕೆ.ದಿನಕರ ರಾವ್, 60 ವರ್ಷ ವಯಸ್ಸು, ದಿವಾನ ಎಸ್ಟೇಟ್, ಬಾಗೆ ಗ್ರಾಮ, ಬೆಳಗೋಡು ಹೋಬಳಿ, ಸಕಲೇಶಪುರ ತಾಲ್ಲೂಕು. ಹಾಸನ ಜಿಲ್ಲೆ. 2. ಶಿಲ್ಪ ಡಿ ರಾವ್ ಬಿನ್ ಲೇಟ್ ಕೆ.ದಿನಕರ ರಾವ್ ಕೋಂ ಅವಿನಾಶ್ ಮಾಡುಪುಳಿತ್ತಾಯ 35 ವರ್ಷ ವಯಸ್ಸು, ಮೂಚ್ಚಿರದಕ ಹೌಸ್, ಶಿಶಿಲ, ದಕ್ಷಿಣ ಕನ್ನಡ ಜಿಲ್ಲೆ. 3. ಶ್ವೇತಾ ಡಿ ರಾವ್ ಬಿನ್ ಲೇಟ್ ಕೆ.ದಿನಕರ ರಾವ್ ಕೋಂ ಅಲಂಕಾ ರಂಗರಾಜ್, 33 ವರ್ಷ ವಯಸ್ಸು, ಫ್ಲಾಟ್ ನಂ ಜಿ–501, ಶಿರಾಮದ ಸಹನಾ ಅಪಾರ್ಟ್‌ಮೆಂಟ್ಸ್, ದೊಡ್ಡಬಳ್ಳಾಪುರ ರಸ್ತೆ, ವಿಟಿಸಿ, ಯಲಹಂಕ, ಬೆಂಗಳೂರು ಉತ್ತರ.

ವಿರುದ್ಧ

ರೆಸ್ಪಾಂಡೆಂಟರು: ಇಲ್ಲ

ಸಾರ್ವಜನಿಕರಿಗೆ ನೋಟೀಸ್

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ ಅರ್ಜಿಯಲ್ಲಿ ಕಂಡಂತಹ ಅರ್ಜಿದಾರರು ಸಕಲೇಶಪುರದ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ ಲೇಟ್ ದಿನಕರ ರಾವ್.ಕೆ ರವರಿಗೆ ಸಂಬಂಧಿಸಿದಂತೆ ವಾರಸುದಾರಿಕೆ ಪ್ರಮಾಣಪತ್ರ ಕೋರಿ ಅರ್ಜಿ ಸಲ್ಲಿಸಿದ್ದು ಸದರಿ ಅರ್ಜಿಯ ಅಂಶಗಳಿಗೆ ಸಂಬಂಧಪಟ್ಟಂತೆ ಸಾರ್ವಜನಿಕರಿಂದ ಯಾವುದೇ ತಕರಾರು ವಗೈರೆಗಳು ಇದ್ದಲ್ಲಿ, ಮೇಲ್ಕಂಡ ಪ್ರಕರಣದ ವಿಚಾರಣೆಯ ದಿನಾಂಕ 24.03.2026 ರಂದು ಬೆಳಿಗ್ಗೆ 11–00 ಗಂಟೆಗೆ ನ್ಯಾಯಾಲಯದಲ್ಲಿ ಹಾಜರಿದ್ದು, ಸಾರ್ವಜನಿಕರು ಅವರ ಆಕ್ಷೇಪಣೆಯನ್ನು ಖುದ್ದಾಗಿಯಾಗಲೀ ಅಥವಾ ಅವರ ವಕೀಲರ ಮುಖಾಂತರವಾಗಲೀ ಸಲ್ಲಿಸಬಹುದಾಗಿರುತ್ತದೆ. ಒಂದು ಪಕ್ಷ ಯಾರಿಂದಲೂ ತಕರಾರು ವಗೈರೆಗಳು ಬರದೇ ಇದ್ದಲ್ಲಿ, ಮೇಲ್ಕಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವ ತಕರಾರುಗಳು ಇಲ್ಲವೆಂದು ಪರಿಗಣಿಸಿ ಈ ಪ್ರಕರಣವನ್ನು ಮುಂದುವರೆಸಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ನ್ಯಾಯಾಲಯದ ಆದೇಶ ಮತ್ತು ಅಪ್ಪಣೆಯ ಮೇರೆಗೆ ದಿನಾಂಕ 10.02.2026ರಂದು ನನ್ನ ಮೊಹರು ಮತ್ತು ಸಹಿಯೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು, ಹಿರಿಯ ಸಿವಿಲ್ ನ್ಯಾಯಾಲಯ, ಸಕಲೇಶಪುರ

ಅರ್ಜಿದಾರರ ಪರ ವಕೀಲರು: ಸಗ್ಗಾ, ವಕೀಲರು, ಸಕಲೇಶಪುರ.

ಪೋಲೀಸ್ ಇಲಾಖೆ

ಪೊಲೀಸ್ ಮಹಾನಿರ್ದೇಶಕರವರ ಕಛೇರಿ, ಪೊಲೀಸ್ ಗಣಕ ವಿಭಾಗ,
7ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ. ಬಿ.ಆರ್ ಅಂಬೇಡ್ಕರ್ ವೀಧಿ, ಬೆಂಗಳೂರು–560001, ಇ–ಮೇಲ್ :dgppcw@ksp.gov.in ದೂರವಾಣಿ : 080–22353871

ಸಂಖ್ಯೆ : 41:/ಸಂಗ್ರಹ/ಡಿಜಿಪಿ/ಪಿಸಿಡಬ್ಲ್ಯೂ/2025–26 ದಿನಾಂಕ : 16.02.2026

ಇ–ಟೆಂಡರ್ ಪ್ರಕಟಣೆ

ಪೊಲೀಸ್ ಗಣಕ ವಿಭಾಗದ ವತಿಯಿಂದ ಪೊಲೀಸ್ ಇಲಾಖೆಯ ರಾಜ್ಯ ದತ್ತಾಂಶ ಕೇಂದ್ರದ (Data Center) ವಿವಿಧ IT and Non IT Equipments ಗಳ ವಾರ್ಷಿಕ ನಿರ್ವಹಣೆಯ ಸಂಬಂಧ ನವೀಕರಿಸುವ ಕುರಿತು ಕೆ.ಟಿ.ಪಿ.ಪಿ ಕಾಯ್ದೆ 1999 ನಿಯಮ 2000 ರ ಪ್ರಕಾರ ಇ–ಟೆಂಡರ್ ಆಹ್ವಾನಿಸಲಾಗಿದೆ.

ಕ್ರ ಸಂ	ಟೆಂಡರ್ ಸಂಖ್ಯೆ	ಟೆಂಡರ್ ಸಂಕ್ಷಿಪ್ತ ವಿವರ	ಸಂಖ್ಯೆ	ಟೆಂಡರ್ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ
1	KSP/2025-26/SE0088	Annual Maintenance Services for IT/NON-IT Equipments at Data Center	131	04.03.2026 17.30 HRS

ಆಸಕ್ತ ಸಂಸ್ಥೆಗಳು ಹೆಚ್ಚಿನ ವಿವರಗಳು ಹಾಗೂ ಟೆಂಡರ್ ದಸ್ತಾವೇಜನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಲ್ಲಿ ಲಭ್ಯವಿರುತ್ತದೆ.

ಸಹಿ/–
ಪೊಲೀಸ್ ಮಹಾನಿರ್ದೇಶಕರು,
ಪೊಲೀಸ್ ಗಣಕ ವಿಭಾಗ, ಬೆಂಗಳೂರು ನಗರ

DIPR/CP/5686/NR/2025-26

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನೀಯರವರ ಕಚೇರಿ,
ಕನೀನಿನಿ, ಶಿಗ್ಗಾಂವ ಏತ ನೀರಾವರಿ ವಿಭಾಗ,
ಕೆ.ಸಿ.ಡಿ. ವೃತ್ತ, ಗಣಪತಿ ದೇವಸ್ಥಾನದ ಹಿಂದುಗಡೆ, ದಾಸನಕೊಪ್ಪ ಮುಖ್ಯ ರಸ್ತೆ, ಧಾರವಾಡ–580 001.
ಫೋನ: 0836–2955347 ಇ–ಮೇಲ್: eesliddwd@gmail.com

No.KNN/SLID/DWD/PB-1/Savanur-Additional/Tender/2025-26/966 Dt: 16.02.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (2ನೇ ಕರೆ)

(ಕೆ.ಪಿ.ಪಿ.ಪೋರ್ಟಲ್ ಮುಖಾಂತರ ಮಾತ್ರ)

ಉಲ್ಲೇಖ :KNN/SLID/DWD/PB-1/Savanur-Additional/Tender/2025-26/886, Dated: 21-01-2026

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನೀಯರ್, ಕ.ನೀ.ನಿ.ನಿ, ಶಿಗ್ಗಾಂವ ಏತ ನೀರಾವರಿ ವಿಭಾಗ ಧಾರವಾಡ ರವರು, ಅರ್ಹ ಸಿವಿಲ್ ನೋಂದಾಯಿತ ಗುತ್ತಿಗೆದಾರರಿಂದ "1) Laying of parallel pipe line from Kyalkond to Hulguru via Panigatti and Basanal, 2) Connection of T-Bleeders and Control Valve in DC-4 Rising Main near Kalasur Jack well next to the manifold and construction of open canal or providing pipe line from the bleeder to Varada river including energy dissipation system, 3) Improvements to selected/all tanks and construction of delivery pipe chamber in Savanur and Shiggaon tank filling schemes". (**ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ.400.94 ಲಕ್ಷಗಳು**) ದ್ವಿ–ಲಕೋಟೆ ಪದ್ಧತಿಯ ಮುಖಾಂತರ ಟೆಂಡರ್‌ನ್ನು ನಿರ್ವಹಿಸಲು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಆಹ್ವಾನಿಸಲಾಗಿದೆ. ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ (**http://kppp.karnataka.gov.in**) ಮುಖಾಂತರವೇ **ದಿನಾಂಕ: 23/02/2026 ಬೆಳಿಗ್ಗೆ 11.00** ರಿಂದ ಡೌನಲೋಡ್ ಮಾಡಿಕೊಂಡು **ದಿನಾಂಕ: 05/03/2026 ರ ಸಂಜೆ 4.00 ಗಂಟೆವರೆಗೆ** ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ಪೂರ್ವಭಾವಿ ಸಭೆಯನ್ನು **ದಿನಾಂಕ 02/03/2026 ರಂದು ಬೆಳಿಗ್ಗೆ 11.00 ರಿಂದ 1.00 ಗಂಟೆಯವರೆಗೆ** ಕಾರ್ಯನಿರ್ವಾಹಕ ಇಂಜನೀಯರರು , ಕನೀನಿನಿ, ಶಿಗ್ಗಾಂವ ಏತ ನೀರಾವರಿ ವಿಭಾಗ ಧಾರವಾಡ ಇವರ ಕಚೇರಿಯಲ್ಲಿ ಜರುಗಿಸಲಾಗುವುದು. ತಾಂತ್ರಿಕ ಟೆಂಡರ್‌ಗಳನ್ನು **ದಿನಾಂಕ: 06/03/2026 ರಂದು ಸಂಜೆ 4.30 ಗಂಟೆಗೆ** ಹಾಗೂ ಆರ್ಥಿಕ ಟೆಂಡರ್‌ಗಳನ್ನು **ದಿನಾಂಕ: 09/03/2026 ರಂದು ಬೆಳಿಗ್ಗೆ 11.00 ಗಂಟೆಗೆ** ಅಥವಾ ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು.

ಟೆಂಡರ್‌ನಲ್ಲಿ ಯಾವುದೇ ಬದಲಾವಣೆ/ತಿದ್ದುಪಡಿಗಳು ಇದ್ದಲ್ಲಿ ವಿದ್ಯುನ್ಮಾನ ಸಂಗ್ರಹಣೆ (**KPP portal**) ವೇದಿಕೆಯಲ್ಲಿ ಮಾತ್ರ ಪ್ರಕಟಿಸಲಾಗುವುದು. ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

ಸಹಿ/– (ಮಂಜುನಾಥ.ಬಿ.)
ಕಾರ್ಯಪಾಲಕ ಇಂಜಿನೀಯರ್,
ಕನೀನಿನಿ ಶಿಗ್ಗಾಂವ ಏತ ನೀರಾವರಿ ವಿಭಾಗ, ಧಾರವಾಡ

ವಾ.ಸಾ.ಇ/ಧಾರವಾಡ/1239/ದೇಶಪಾಂಡೆಪಬ್ಲಿಸಿಟಿ/2025–26

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ

(www.kpwd.gov.in)

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ
ದೂರವಾಣಿ ಸಂಖ್ಯೆ: 08182–222943 **Email ID:** spdivision@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ

(ದ್ವಿ–ಲಕೋಟೆ ಪದ್ಧತಿ) (ಕೆ.ಪಿ.ಪಿ–ಪೋರ್ಟಲ್ ಮೂಲಕ)

ಐಎಫ್‌ಟಿ ಸಂಖ್ಯೆ. 47/2025–26 ದಿನಾಂಕ : 17.02.2026

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ–4 ನಿಯಮದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 1ನೇ ದರ್ಜೆ ಗುತ್ತಿಗೆದಾರರಿಗೆ ಭದ್ರಾವತಿ ತಾಲ್ಲೂಕಿನಲ್ಲಿ 4059–80–051–0–60–132 ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಇತರೆ ಬಂಡವಾಳ ವೆಚ್ಚಗಳು ಲೆಕ್ಕಶೀರ್ಷಿಕೆಯಡಿಯಲ್ಲಿ ಅನುಮೋದನೆಗೊಂಡಿರುವ (ಇಂಡೆಂಟ್ ನಂ.33342 & 33363) ಕಾಮಗಾರಿಗಳಿಗೆ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ ರೂ.730.89 ಲಕ್ಷ ಮತ್ತು ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ.438.14 ಲಕ್ಷ ಹಾಗೂ ಇ.ಎಂ.ಡಿ. ಗರಿಷ್ಠ ಮೊತ್ತ ರೂ.10.965 ಲಕ್ಷ ಮತ್ತು ಇ.ಎಂ.ಡಿ. ಕನಿಷ್ಠ ಮೊತ್ತ ರೂ.6.44 ಲಕ್ಷ, ಕಾಲಾವಧಿ ಕೆ.ಪಿ.ಪಿ. ಪೋರ್ಟ್‌ಲ್‌ನಲ್ಲಿ ನಮೂದಿಸಿದಂತೆ.

ಅರ್ಹ ಗುತ್ತಿಗೆದಾರರು ಕೆ.ಪಿ.ಪಿ.ಪಿ ಪೋರ್ಟಲ್ http://kppp.karnataka.gov.in ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್ –2ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್–4ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ ದಿನಾಂಕ: 17.02.2026 ರಿಂದ 04.03.2026ರ 17.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು ದಿನಾಂಕ: 04.03.2026ರ ಸಂಜೆ 5:00 ಗಂಟೆಯೊಳಗೆ ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ಭರಿಸತಕ್ಕದ್ದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ದಿನಾಂಕ: 05.03.2026 ರಂದು ಸಂಜೆ 5.30ಕ್ಕೆ ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: 06.03.2026ರ ನಂತರ ತೆರೆಯಲಾಗುವುದು. ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.

ಸಹಿ/–
ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ./ಶಿ/ನಂ.93–02/ಝೇಂಕಾರ್/2025–26

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ಇಲಾಖೆ

ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ವಿಭಾಗ, ಬೀದರ.

ನಂ: ಇಇ/ಎಂಐಡಿ/ಬೀದರ/ತಾ.ಶಾ–1&2/ಟೆಂಡರ್/2025–26/ 307 ದಿನಾಂಕ: 16–2–2026

ಕೆಪಿಪಿ–ಪ್ರೋಕ್ಯೂರಮೆಂಟ್ಸ ಟೆಂಡರ್ ಪ್ರಕಟಣೆ

1) ಕಾಮಗಾರಿಗಳ ವಿವರ. KPP -Portalನಲ್ಲಿ ನಮೂದಿಸಿದಂತೆ. 2) ಕಾಮಗಾರಿಗಳ ಅಂದಾಜು ಮೊತ್ತ. KPP -Portalನಲ್ಲಿ ನಮೂದಿಸಿದಂತೆ. 3) ಗುತ್ತಿಗೆದಾರರ ಅರ್ಹತೆ ವಿವರ. KPP -Portalನಲ್ಲಿ ನಮೂದಿಸಿದಂತೆ, 4) ಕಾಮಗಾರಿಗಳ ಟೆಂಡರ ಮೊತ್ತದ ವಿವರ. KPP -Portalನಲ್ಲಿ ನಮೂದಿಸಿದಂತೆ, 5) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ. KPP -Portalನಲ್ಲಿ ನಮೂದಿಸಿದಂತೆ. 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ:ಕೆ.ಡಬ್ಲ್ಯೂ–1, ಕೆ.ಡಬ್ಲ್ಯೂ–2& ಕೆ.ಡಬ್ಲ್ಯೂ –3 ಮಾತ್ರ : **19–02–2026 ರಂದು 17.00 ಗಂಟೆವರೆಗೆ,** 8) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ ಕೆ.ಡಬ್ಲ್ಯೂ –1, ಕೆ.ಡಬ್ಲ್ಯೂ –2 & ಕೆ.ಡಬ್ಲ್ಯೂ –3 ಮಾತ್ರ :**23–02–2026 ರಂದು 16.00 ಗಂಟೆಗೆ ಸಾಧ್ಯವಾದಲ್ಲಿ,** 9) ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಕೆ.ಡಬ್ಲ್ಯೂ –1, ಕೆ.ಡಬ್ಲ್ಯೂ –2 & ಕೆ.ಡಬ್ಲ್ಯೂ –3 ಮಾತ್ರ :**25–02–2026 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ,** 10) ಟೆಂಡರ ಆರ್ಥಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲ್ಯೂ –1, ಕೆ.ಡಬ್ಲ್ಯೂ–2& ಕೆ.ಡಬ್ಲ್ಯೂ –3 ಮಾತ್ರ **27–02–2026 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ,** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ ವಿಳಾಸ, ದೂರವಾಣಿ ಸಂಖ್ಯೆ.ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ಇಲಾಖೆ.ವಿಭಾಗ, ಬೀದರ. ದೂರವಾಣಿ ಸಂ: 08482 232080, 12) ಅಂತರ್ಜಾಲ ತಾಣದ ವಿಳಾಸ. KPP portal https://kppp.karnataka.gov.in

ಸಹಿ/– ಕಾರ್ಯ ನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ವಿಭಾಗ, ಬೀದರ.

ವಾ.ಸಾ.ಸಂ.ಇ/ಬೀದರ/336/ಕೆ.ಎಸ್.ಎಂ.ಸಿ.&ಎ/2025–26

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು

ಅಲ್ಪಾವಧಿ ಐಟಂವಾರು ಟೆಂಡರ್ ಅಧಿಸೂಚನೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)

ಐ.ಎಫ್.ಟಿ ಸಂಖ್ಯೆ 21/2025–26 ದಿನಾಂಕ: 13.02.2026

ಟೆಂಡರ್ ಅಧಿಸೂಚನೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಹುಣಸೂರು ಲೋಕೋಪಯೋಗಿ ವಿಶೇಷ ವಿಭಾಗದ ರಸ್ತೆ ಸಂಚಾರ ಗಣತಿ ಮತ್ತು ಕಟ್ಟಡಗಳ ನಿರ್ವಹಣೆ ಕಾಮಗಾರಿಗಳಿಗೆ ಕಾರ್ಯಪಾಲಕ ಇಂಜಿನಿಯರ್ ರವರಿಂದ ಲೋಕೋಪಯೋಗಿ ಇಲಾಖೆಯಲ್ಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ನೊಂದಾಯಿತ 4ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್" ನಲ್ಲಿನ ಷರತ್ತುಗಳಿಗನು ಗುಣವಾಗಿ 07–ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ದಿ: 13.02.2026 ರಿಂದ ಟೆಂಡರು ದಾಖಲಾತಿಗಳನ್ನು https://kppp.karnataka.gov.in ವೆಬ್ ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರಿಗಿಟ್ಟ ಮೊತ್ತ ಗರಿಷ್ಠ 11.42 ಲಕ್ಷಗಳು ಮತ್ತು ಕನಿಷ್ಟ 4.68 ಲಕ್ಷಗಳು, ಗರಿಷ್ಠ ಇ.ಎಂ.ಡಿ ರೂ.21,190/– ಮತ್ತು ಕನಿಷ್ಟ ರೂ.11,700/– ಗುತ್ತಿಗೆ ಕಾಲಾವಧಿ ಗರಿಷ್ಠ 2–ತಿಂಗಳು ಮತ್ತು ಕನಿಷ್ಟ 2–ದಿನಗಳು ಆಗಿರುತ್ತದೆ. ಹಾಗೂ ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ ದಿನಾಂಕ ಟೆಂಡರ್ ಅಧಿಸೂಚನೆಯಲ್ಲಿನ ಕಾಮಗಾರಿಗಳ ಕ್ರಸಂ–1 ರಿಂದ 5 ರವರೆಗೆ ದಿ: 21.02.2026 ಮತ್ತು ಕ್ರಸಂ–6 ರಿಂದ 7 ರವರೆಗೆ ದಿ: 23.02.2026 ಎಂದು ನಿಗಧಿಪಡಿಸಲಾಗಿದೆ. ಹಾಗೂ ಟೆಂಡರು ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು. **ಟಿಪ್ಪಣಿ: 1)** ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ/ ಸಂಪೂರ್ಣವಾಗಿ ಟೆಂಡರ್ ರದ್ದಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. **2)** ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ತಾಂತ್ರಿಕ ಕಾರಣಗಳಿಂದ ಯಾವುದೇ ಬದಲಾವಣೆಗಳು/ತಿದ್ದುಪಡಿಗಳು ಉಂಟಾದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್

DIPR/DDMYS/1671/KSMCA/947/2025-26

ಆಡಳಿತ ವೈದ್ಯಾಧಿಕಾರಿಗಳ ಕಾರ್ಯಾಲಯ,

ಸಾರ್ವಜನಿಕ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಚಿಂತಾಮಣಿ ತಾಲ್ಲೂಕು, ಚಿಂತಾಮಣಿ
ಇ–ಮೇಲ್ ವಿಳಾಸ: amocmy@gmail.com, ದೂರವಾಣಿ ಸಂಖ್ಯೆ: 08154–450758

ಸಂಖ್ಯೆ:ಸಾಆಚಿಂ/ಪಥ್ಯಾಹಾರ ಟೆಂಡರ್/03/2025–26/E-42695 ದಿನಾಂಕ:10.02.2026

ಇ–ಪ್ರೊಕ್ಯೂರ್‌ಮೆಂಟ್ ಇ–ಟೆಂಡರ್ ಅಧಿಸೂಚನೆ

ಸಾರ್ವಜನಿಕ ಆಸ್ಪತ್ರೆ ಚಿಂತಾಮಣಿ ಇಲ್ಲಿ 2026–27 ನೇ ಸಾಲಿಗೆ ಒಳ ರೋಗಿಗಳಿಗೆ ಉತ್ತಮ ದರ್ಜೆಯ ಪಥ್ಯಾಹಾರ ಪದಾರ್ಥಗಳು ಹಾಗೂ ಪ್ರಥಮ ದರ್ಜೆ ಬ್ರೆಡ್ ಸರಬರಾಜು ಮಾಡಲು ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್‌ನಲ್ಲಿ ದ್ವಿ–ಲಕೋಟೆ ಪದ್ಧತಿಯಲ್ಲಿ **ಪಥ್ಯಾಹಾರ ಆಹಾರ ಸಾಮಾಗ್ರಿಗಳು ಮತ್ತು ಬ್ರೆಡ್ ಪೂರೈಕೆಗಾಗಿ kppp.karnataka.gov.in** ನಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಅವಧಿಯು ಕಾರ್ಯಾದೇಶ ನೀಡುವ ದಿನಾಂಕದಿಂದ **ದಿನಾಂಕ: 31.03.2027 ರವರೆಗೆ ಮಾತ್ರ ಇರುತ್ತದೆ.** ಒಟ್ಟು ಟೆಂಡರ್‌ನ ಅಂದಾಜು ಮೌಲ್ಯ: **ರೂ: 105 ಲಕ್ಷಗಳು.** ಟೆಂಡರ್ ವಿವರಗಳು ಈ ಕೆಳಗಿನಂತಿರುತ್ತದೆ.

1	ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ	ಸಾಆಚಿಂ/ಪಥ್ಯಾಹಾರ/ಟೆಂಡರ್/03/2025–26/E-42695 ದಿನಾಂಕ:10.02.2026			
2	ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ	ಕ್ರ ಸಂ	ವಿವರ	ಟೆಂಡರ್ ಬಿಡ್ ಮೊತ್ತ (ರೂ. ಲಕ್ಷಗಳಲ್ಲಿ)	
		1	Group A:	ರೂ.83 ಲಕ್ಷ	EMD Rs.
		2	Group B:	ರೂ.22 ಲಕ್ಷ	Rs.2,70,000

(3) E-Portal ಮೂಲಕ ಟೆಂಡರ್ ಫಾರಂ ಅಪ್‌ಲೋಡ್ ಮಾಡಲು **ಪ್ರಾರಂಭಿಸುವ ದಿನಾಂಕ: 10.02.2026** (4) **E-Portal** ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಅಂತಿಮ ದಿನಾಂಕ & ಸಮಯ: **10.03.2026ರ ಸಂಜೆ 3.00 ಗಂಟೆಗೆ.** (5) ಪ್ರಿ ಬಿಡ್‌ದಿನಾಂಕ ಮತ್ತು ಸಮಯ: **ದಿನಾಂಕ: 02.03.2026ರಂದು ಸಂಜೆ: 03.00 ಗಂಟೆಗೆ.** (6) **E-Portal**ನ ಟೆಂಡರ್ ತಾಂತ್ರಿಕ ಲಕೋಟೆಗಳನ್ನು ಪರಿಶೀಲಿಸುವ ದಿನಾಂಕ ಮತ್ತು ಸಮಯ: **ದಿನಾಂಕ: 12.03.2026ರ ಸಂಜೆ: 03.00 ಗಂಟೆಗೆ.** (7) **E-Portal** ಆರ್ಥಿಕ ಲಕೋಟೆಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **ದಿನಾಂಕ: 16.03.2026 ರಂದು ಬೆಳಿಗ್ಗೆ: 11.00 ಗಂಟೆಗೆ. ಅಥವಾ ಮೇಲಾಧಿಕಾರಿಗಳು ಸೂಚಿಸಿದ ದಿನಾಂಕದಂದು** (8) ಇ.ಎಂ.ಡಿ ಅನುಬಂಧ–1 ರ ನಮೂನೆಯಲ್ಲಿ EMD Declaration ಸಹಿಯೊಂದಿಗೆ ಸಲ್ಲಿಸುವುದು. ಪಥ್ಯಾಹಾರ ಪದಾರ್ಥಗಳು ಮತ್ತು ಬ್ರೆಡ್ ಟೆಂಡರ್‌ನ **ಅಂದಾಜು ಮೌಲ್ಯದ ಶೇ2.5% ರೂ.2,70,000/–** (9) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ. ದೂರವಾಣಿ ಸಂಖ್ಯೆ: **website:www.kppp.karnataka.gov.in.** ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಚಿಂತಾಮಣಿ. **e-mail: amocmy@gmail.com** ದೂರವಾಣಿ ಸಂಖ್ಯೆ: 08154–450758

ಸಹಿ/– ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಚಿಂತಾಮಣಿ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:423/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ

ಕಾರಾಗೃಹ ಮತ್ತು ಸುಧಾರಣಾ ಸೇವೆ

ನಂ.4,ಶೇಷಾದ್ರಿ ರಸ್ತೆ, ಬೆಂಗಳೂರು–560009
ದೂ.ಸಂ.:080–22262263, ಇ–ಮೇಲ್: phq,prisons-kar@gov.in

No: DGPCSB/AD23/MODR/45/2025-ADMN(78525) ದಿನಾಂಕ: 17.02.2026

ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯ ವಿವಿಧ ಕಾರಾಗೃಹಗಳಿಗೆ ಅಗತ್ಯವಿರುವ Body Worn Camera & Docking Station ಉಪಕರಣಗಳ ಸರಬರಾಜು, ಅಳವಡಿಕೆ ಮತ್ತು ನಿರ್ವಹಣೆಗಾಗಿ ಟೆಂಡರ್‌ಅನ್ನು ಈ ಕೆಳಕಂಡಂತೆ ಆಹ್ವಾನಿಸಲಾಗಿದೆ.

ಕ್ರ.ಸಂ	ಟೆಂಡರ್‌ಸಂಖ್ಯೆ/ದಿನಾಂಕ	ಅಂದಾಜು ಮೌಲ್ಯ
01	PCSD/2025-26/IND0266, Dt.16.02.2026	Rs.100.00 Lakhs

ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಇತರೆ ಮಾಹಿತಿಯನ್ನು **https://kppp.karnataka.gov.in** ರಲ್ಲಿ ಪಡೆಯಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಪೊಲೀಸ್ ಮಹಾ ನಿರ್ದೇಶಕರು
ಕಾರಾಗೃಹ ಮತ್ತು ಸುಧಾರಣಾ ಸೇವೆ
ಕರ್ನಾಟಕ ರಾಜ್ಯ

ವಾಸಾಸಂಇ/ವಾ.ಪ್ರ/ಶಿರಡಿ ಸಾಯಿ/5680/2025–26

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ದಾವಣಗೆರೆ.

ರಾಷ್ಟ್ರೀಯ ಅಂಧತ್ವ ಮತ್ತು ದೃಷ್ಟಿದೋಷ ನಿಯಂತ್ರಣಾಧಿಕಾರಿಗಳ ಕಛೇರಿ, ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳ ಕಛೇರಿ, ದಾವಣಗೆರೆ ಜಿಲ್ಲೆ.

ಎಸ್.ಎಸ್. ಆಸ್ಪತ್ರೆ ಹತ್ತಿರ, ಶ್ರೀರಾಮನಗರ ದಾವಣಗೆರೆ–577005
E-mail : dbcsdavangere@gmail.com

ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆ

ರಾಷ್ಟ್ರೀಯ ಜಿಲ್ಲಾ ಅಂಧತ್ವ ಹಾಗೂ ದೃಷ್ಟಿದೋಷ ನಿಯಂತ್ರಣ ಕಾರ್ಯಕ್ರಮ.ದಾವಣಗೆರೆ ವತಿಯಿಂದ ದೃಷ್ಟಿದೋಷವಿರುವ ಶಾಲಾ ಮಕ್ಕಳಿಗೆ ನೀಡುವ ಕನ್ನಡಕಗಳು ಹಾಗೂ ವಯೋವೃದ್ಧರಿಗೆ ಸಮೀಪ ದೃಷ್ಟಿ ಕನ್ನಡಕಗಳನ್ನು ಖರೀದಿಸಿ ವಿತರಿಸಲು ಇ–ಟೆಂಡರ್ ಅಧಿಸೂಚನೆ (1) ಇ–ಟೆಂಡರ್ ಪ್ರಕಟಿಸುವ ದಿನಾಂಕ 16.02.2026 (2) ಮಾದರಿ ಕನ್ನಡಕಗಳನ್ನು ಜಿಲ್ಲಾ ಕುಷ್ಠರೋಗ ನಿವಾರಣಾಧಿಕಾರಿಗಳ ಕಛೇರಿ, ದಾವಣಗೆರೆ ಜಿಲ್ಲೆ, ಸಲ್ಲಿಸಲು ಕೊನೆಯ Date Will Be Intimated (3) ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ 20.02.2026 ಸಂಜೆ 5.30 ಗಂಟೆಯೊಳಗೆ. (4) ಇ–ಟೆಂಡರ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ 24.02.2026 ಸಂಜೆ 4.00 ಗಂಟೆಯೊಳಗೆ. (5) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: 25.02.2025 ಸಂಜೆ 4.30 ಗಂಟೆಯಿಂದ (6) ಆರ್ಥಿಕ ಲಕೋಟೆ ತೆರೆಯುವ ದಿನಾಂಕ: Date Will Be Intimated (7) ಇ–ಟೆಂಡರ್‌ತೆರೆಯುವ ಸ್ಥಳ ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳ ಕಛೇರಿ, ಜಿಲ್ಲಾ ಕುಷ್ಠರೋಗ ನಿವಾರಣಾಧಿಕಾರಿಗಳ ಕಛೇರಿ, ರೂಮ್ ನಂ:16, ಎಸ್.ಎಸ್.ಆಸ್ಪತ್ರೆ ಹತ್ತಿರ, ಶ್ರೀರಾಮನಗರ ರಸ್ತೆ,ದಾವಣಗೆರೆ–577005 (8) ದೃಷ್ಟಿದೋಷವಿರುವ ಶಾಲಾ ಮಕ್ಕಳಿಗೆ ಮತ್ತು ವಯೋವೃದ್ಧರಿಗೆ ನೀಡುವ ಕನ್ನಡಕಗಳ ಇ–ಟೆಂಡರ್ ಒಟ್ಟು ಮೊತ್ತ ರೂ. 61,25,000 ಲಕ್ಷಗಳು.

ಸಹಿ/– ಜಿಲ್ಲಾ ಕುಷ್ಠರೋಗ ನಿವಾರಣಾಧಿಕಾರಿಗಳು
ಹಾಗೂ ಅಂಧತ್ವ ಮತ್ತು ದೃಷ್ಟಿದೋಷ ನಿಯಂತ್ರಣಾಧಿಕಾರಿಗಳು, ದಾವಣಗೆರೆ ಜಿಲ್ಲೆ.

ವಾಸಾಇ/ಡಿವಿಜಿ/743/ಕೆಎಸ್‌ಎಂಸಿಎ/2025–26

ಕರ್ನಾಟಕ ಸರಕಾರ (ಜಿಲ್ಲಾ ಪಂಚಾಯತ್, ಗದಗ)

ಕಾರ್ಯನಿರ್ವಾಹಕ ಇಂಜಿನೀಯರ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಗದಗ.

ನಂ:ಪಂ.ರಾಜ್.ಇಂ.ವಿ/ಗದಗ/ಪಿಬಿ.3/ಟೆಂಡರ/2025–26/3745
ದಿನಾಂಕ : 16–02–2026

ಕೆಪಿಪಿ ಪೋರ್ಟಲ್ ಅಲ್ಪಾವಧಿ ಟೆಂಡರ ಪ್ರಕಟಣೆ Standard Bid Document KW-3

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್–2000 ನಿಯಮದಂತೆ Standard Bid Document KW-3 ರ ನಿಯಮಗಳನ್ವಯ ಅರ್ಹ ಗುತ್ತೇದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ 3 ಕಾಮಗಾರಿಗಳ ಟೆಂಡರನ್ನು ಆಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ : 2023–24 ನೇ ಸಾಲಿನ 5054 ಮಾನ್ಯ ಮುಖ್ಯಮಂತಿಗಳ ವಿಶೇಷ ಯೋಜನೆ, 2024–25 ನೇ ಸಾಲಿನ ಮಳೆ ಪರಿಹಾರ ಕಾರ್ಯಕ್ರಮದ 5054 ಯೋಜನೆಯಡಿ ಟೆಂಡರನ್ನು ಆಹ್ವಾನಿಸಲಾಗಿದೆ. ಪಿ.ಡಬ್ಲು.ಡಿ. ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, (https://kppp.karnataka.gov.in) ಮುಖಾಂತರ ಭಾಗವಹಿಸಬಹುದು. ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆ ಈ ಕೆಳಗಿನಂತೆ ಇರುತ್ತವೆ.

Indent Nos : 1) WORK_INDENT : 16653/CALL-3, 16730/CALL-3, 16701/CALL-2,

ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ. **62.95** ಲಕ್ಷ ಮತ್ತು ಗರಿಷ್ಠ ಮೊತ್ತ ರೂ. **75.11** ಲಕ್ಷಗಳು ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಂ.ಡಿ ಮೊತ್ತದ ವಿವರ : ಅರ್ಜಿ ಬೆಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಇ.ಎಂ.ಡಿ. ಸಂಬಂಧಪಟ್ಟ ವರ್ಕ ಇಂಡೆಂಟ್‌ನಲ್ಲಿ ನೋಡಬಹುದಾಗಿದೆ.

ಇ–ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್–ಬಿ ಯನ್ನು ವೆಬ್‌ಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ : **17–02–2026** ರಿಂದ **04–03–2026** ರಂದು 16.00 ಗಂಟೆಯವರೆಗೆ. ಟೆಂಡರ ತೆರೆಯುವ ದಿನಾಂಕ : **05–03–2026** ರಂದು 16.30 ಗಂಟೆಗೆ ತೆರೆಯಲಾಗುವುದು. ಟೆಂಡರನ್ನು ಅನಾವರಣಗೊಳಿಸಿದ ದಿನಾಂಕದಿಂದ ಭಾಗವಹಿಸಿದ ಗುತ್ತಿಗೆದಾರರಲ್ಲಿ ಆರ್ಥಿಕ ಬಿಡ್‌ದಲ್ಲಿ ಅರ್ಹ ಗುತ್ತಿಗೆದಾರರು ಈ ಕಾರ್ಯಾಲಯಕ್ಕೆ ಹಾಜರಾಗಿ ವ್ಯತ್ಯಾಸದ ಮೊತ್ತ ಹಾಗೂ ಪಿ.ಎಸ್.ಡಿ. ಮೊತ್ತವನ್ನು ಎಫ್.ಡಿ.ಆರ್ ರೂಪದಲ್ಲಿ 20 ದಿನಗಳ ಒಳಗಾಗಿ (ಷರತ್ತು ಕ್ರ.ಸಂ :13 ರಂತೆ) ಭರಣಾ ಮಾಡಬೇಕು. ಇ–ಪದ್ಧತಿ ಇರುವುದರಿಂದ ಕಾಗದ ರಹಿತವಾಗಿದ್ದು ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಪಂ.ರಾಜ್. ಇಂಜಿನೀಯರಿಂಗ್ ವಿಭಾಗ, ಗದಗ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/652/2025–26

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಡ್ಯ.
ಇ–ಮೇಲ್: eemimandya@gmail.com

ಸಂಖ್ಯೆ:ಕಾ.ಇಂ/ಸ.ನೀ/ಮಂ/ತಾಂಶಾ/ಸ.ಇಂ/ಟೆ.ಪ್ರ–14/2025–26:556 ದಿನಾಂಕ:16–02–2026

ಅಲ್ಪಾವಧಿ ಟೆಂಡರ್ ಅಧಿಸೂಚನೆ ಸಂಖ್ಯೆ: 14/2025–26, ದಿನಾಂಕ: 16–02–2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಡ್ಯ–571401 ಇವರು ಕೆಪಿಪಿ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯು–1 & 4 ರ ಪ್ರಕಾರ "ಕೆಪಿಪಿ" – ಪ್ರಕ್ಯೂರ್‌ಮೆಂಟ್‌ನಲ್ಲಿ ಐಟಂವಾರು ಆಧಾರದ ಮೇಲೆ ಒಟ್ಟು 19 ಸಂಖ್ಯೆ ಕಾಮಗಾರಿಗಳ (6–ಕಾಮಗಾರಿಗಳು ಮತ್ತು 13–ಮೀನು ಪಾಶುವಾರು ಹಕ್ಕು ವಿಲೇವಾರಿ) ಟೆಂಡರ್ ಅನ್ನು ಟೆಂಡರಿಗಿಟ್ಟ ಅಂದಾಜು ಮೊತ್ತ ಕನಿಷ್ಠ ರೂ.3660.00 ಗಳಿಂದ ಗರಿಷ್ಠ ರೂ: 140.00 ಲಕ್ಷಗಳವರೆಗೆ ಆಹ್ವಾನಿಸಲಾಗಿದೆ. ವಿವರಗಳು ಈ ಕೆಳಕಂಡಂತೆ ಇವೆ.

ಕ್ರ ಸಂ	ಲೆಕ್ಕ ಶೀರ್ಷಿಕೆ	ಕಾಮಗಾರಿಗಳ ಸಂಖ್ಯೆ	ಬಿಡ್ ಅಪ್ಲೋಡ್ ಮಾಡಲು ಕಡೆಯ ದಿನಾಂಕ & ಸಮಯ	ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ	ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ
1	4702– ಎಸ್.ಸಿ.ಪಿ–ಚೆಕ್ ಡ್ಯಾಂ	4	ದಿ:25.02.2026 17.29 ಗಂಟೆವರೆಗೆ	ದಿ:26.02.2026 17.30 ಗಂಟೆ	ದಿ:27.02.2026 17.30 ಗಂಟೆ
2	2702– ನೀರು ಕೆರೆಗಳ ದುರಸ್ತಿ ಮತ್ತು ನಿರ್ವಹಣೆ	1			
3	4702– ಎಸ್.ಸಿ.ಪಿ–ಕೊಳವೆಭಾವಿ	1			
4	ಮಂಡ್ಯ ಜಿಲ್ಲಾ ವ್ಯಾಪ್ತಿಯ ಸಣ್ಣ ನೀರಾವರಿ ಇಲಾಖೆಯ ಕೆರೆಗಳಲ್ಲಿ ಮೀನುಗಾರಿಕೆ ಮಾಡಲು ಇ–ಟೆಂಡರ್ ಮುಖೇನ ಮೀನುಪಾಶುವಾರು ಹಕ್ಕು ವಿತರಣೆ	13	ದಿ:12.03.2026 17.29 ಗಂಟೆವರೆಗೆ	ದಿ:13.03.2026 17.30 ಗಂಟೆ	ದಿ:16.03.2026 17.30 ಗಂಟೆ

ಗುತ್ತಿಗೆದಾರರು ಟೆಂಡರ್‌ನ ನಿಗದಿತ ನಮೂನೆಗಳನ್ನು www.kppp.karnataka.gov.in ನಲ್ಲಿ ಅವಶ್ಯ ದಾಖಲೆಗಳೊಂದಿಗೆ ಹಾಗೂ ನಿಗದಿತ ಇ.ಎಂ.ಡಿ.ಯೊಂದಿಗೆ ಮೇಲ್ಕಂಡ ಕಾಲಂಗಳನ್ವಯ ಬಿಡ್ಡನ್ನು ಅಪ್ ಲೋಡ್ ಮಾಡಬಹುದಾಗಿದೆ. ಟೆಂಡರ್ ದಾಖಲಾತಿಗಳನ್ನು ವೆಬ್ ಸೈಟ್ www.kppp.karnataka.gov.in ನಲ್ಲಿ ಡೌನ್ ಲೋಡ್ ಮಾಡಿಕೊಳ್ಳಬಹುದು. ಗುತ್ತಿಗೆದಾರರು ಟೆಂಡರ್‌ಗೆ ಸಂಬಂಧಿಸಿದ ದಾಖಲೆ/ಮಾಹಿತಿಯನ್ನು ಹಾಗೂ ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು. ಮಂಡ್ಯ ಜಿಲ್ಲಾ ವ್ಯಾಪ್ತಿಯ ಸಣ್ಣ ನೀರಾವರಿ ಇಲಾಖೆಯ ಕೆರೆ/ಜಲಸಂಪನ್ಮೂಲಗಳ ವಿವರಗಳನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ 'ವೇಳೆಯಲ್ಲಿ ಪಡೆಯಬಹುದು.ಅಥವಾ ಕೆ.ಪಿ.ಪಿ.ಪಿ ಪೋರ್ಟಲ್ ನಲ್ಲಿ ಪಡೆಯಬಹುದು. (www.kppp.karnataka.gov.in) ಕೆರೆ/ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಇ–ಟೆಂಡರ್ ಮೂಲಕ ವಿಲೇವಾರಿ ಮಾಡಲು ಇ–ಟೆಂಡರ್ ದಸ್ತಾವೇಜು ಅನ್ನು ಈ ಕಚೇರಿಯಲ್ಲಿ ಅಥವಾ ಕೆ.ಪಿ.ಪಿ.ಪಿ ಪೋರ್ಟಲ್ ನಲ್ಲಿ ಪಡೆಯಬಹುದು. (www.kppp.karnataka.gov.in)

ವಿ.ಸೂ: ಸದರಿ ಟೆಂಡರ್‌ನ ಕಾಮಗಾರಿಯನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಡ್ಯ ರವರು ಕಾಯ್ದಿರಿಸಿರುತ್ತಾರೆ. ಈ ಕಾಮಗಾರಿಗೆ ಸಂಬಂಧಿಸಿದಂತೆ ಷರತ್ತು ಮತ್ತು ನಿಬಂಧನೆಗಳನ್ನು "ಕೆಪಿಪಿ" – ಪ್ರಕಟಣೆಯಲ್ಲಿಯೇ ಪ್ರಕಟಿಸಲಾಗುವುದು. ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ/ಸೇರ್ಪಡೆ/ದಿನಾಂಕಗಳನ್ನು ಮುಂದೂಡುವ ಬಗ್ಗೆ ಹಾಗೂ ಇನ್ನಿತರೆ ಯಾವುದೇ ಬದಲಾವಣೆಗಳನ್ನು ಪ್ರತಿ ಇಂಡೆಂಟ್‌ಗೆ ಪ್ರತ್ಯೇಕವಾಗಿ ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಪ್ರತ್ಯೇಕ ಪತ್ರಿಕೆ ಪ್ರಕಟಣೆ ನೀಡಲಾಗುವುದಿಲ್ಲ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಡ್ಯ

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿಎ/794/2025–26

ಗಂಟೆಗೆ 160 ಕಿಲೋ ಮೀಟರ್ ವೇಗದ ಏಳು ರೈಲು ಯೋಜನೆಗಳಿಗೆ ಗ್ರೀನ್ ಸಿಗ್ನಲ್

ಕಾಸರಗೋಡು: ಕಾಸರಗೋಡು ಜಿಲ್ಲೆಯೂ ಸೇರಿದಂತೆ ಕೇರಳಕ್ಕೆ ಇನ್ನಷ್ಟು ರೈಲುಗಾಡಿಗಳನ್ನು ಮಂಜೂರುಗೊಳಿಸಲು ಕೇಂದ್ರ ರೈಲ್ವೆ ಸಚಿವಾಲಯವು ಅನುಮತಿ ನೀಡಿದೆ. ಈ ಮಹತ್ವದ ಯೋಜನೆಯ ಪ್ರಥಮ ಹಂತದಲ್ಲಿ ರಾಜ್ಯಕ್ಕೆ ಗಂಟೆಗೆ 160 ಕಿಲೋ ಮೀಟರ್ ವೇಗದ ಏಳು ರೈಲುಗಳನ್ನು ಒದಗಿಸಲು ಒಪ್ಪಿಗೆ ಸೂಚಿಸಲಾಗಿದೆ.

ಶೋರ್ನೂರು – ಕಾಸರಗೋಡು – ಮಂಗಳೂರು (307 ಕಿಲೋ ಮೀಟರ್), ಕೊಯಂಬತ್ತೂರು–ಶೋರ್ನೂರು (99 ಕಿಲೋ ಮೀಟರ್), ಶೋರ್ನೂರು – ಎರ್ನಾಕುಳಂ (106 ಕಿಲೋ ಮೀಟರ್), ಎರ್ನಾಕುಳಂ – ಕೋಟ್ಟಾಯಂ – ಕಾಯಂಕುಳಂ (115 ಕಿಲೋ ಮೀಟರ್), ಕಾಯಂಕುಳಂ – ತಿರುವನಂತಪುರ (105 ಕಿಲೋ ಮೀಟರ್), ತಿರುವನಂತಪುರ – ನಾಗರ್‌ಕೋವಿಲ್ (76 ಕಿಲೋ ಮೀಟರ್),



ಪೊದಾವೂರ್ – ಅಂಬಲಪುಳ (96 ಕಿಲೋ ಮೀಟರ್) ಹಳಿಗಳಲ್ಲಿ ಈ ನೂತನ ರೈಲುಗಳ ಓಡಾಟಕ್ಕೆ ಸಮಗ್ರ ಯೋಜನೆ ರೂಪಿಸಲಾಗಿದೆ.

ಕೇರಳಕ್ಕೆ ಮಂಜೂರುಗೊಂಡಿರುವ ಈ ಏಳು ರೈಲುಗಾಡಿ ಯೋಜನೆಗಾಗಿ ಮಂಗಳೂರಿನಿಂದ ಕಾಸರಗೋಡು ಮೂಲಕ ತಿರುವನಂತಪುರಕ್ಕೆ ಮೂರು ಮತ್ತು ನಾಲ್ಕನೇ ರೈಲುಹಳಿಗಳನ್ನು ನಿರ್ಮಿಸಲು ನಿರ್ಧರಿಸಲಾಗಿದೆ. ಈ ನಿಟ್ಟಿನಲ್ಲಿ ಅಗತ್ಯದ ಸರ್ವೇ ನಡೆಸಲು ಅನುಮತಿ ನೀಡಲಾಗಿದೆ. ಅಲ್ಲದೆ ಕೂಡಲೇ ಸ2ರ್ವೇ ಕಾರ್ಯಗಳನ್ನು ಪೂರ್ತಿಗೊಳಿಸಲು ಕೂಡಾ ಕೇಂದ್ರ ರೈಲ್ವೆ ಇಲಾಖೆಯು ನಿರ್ದೇಶಿಸಿದೆ.

ಹಳಿಗಳ ಅಳವಡಿಕೆ ಕಾಮಗಾರಿ ಪೂರ್ಣಗೊಂಡ ಬಳಿಕ ಈ ರೂಟ್‌ಗಳಲ್ಲಿ ಉದ್ದೇಶಿತ 160 ಕಿಲೋ ಮೀಟರ್ ವೇಗದ ರೈಲುಗಳ ಸಂಚಾರ ಯೋಜನೆ ಕಾರ್ಯರೂಪಕ್ಕೆ ಬರಲಿದೆ. ಪಾಲಕ್ಕಾಡು ಮತ್ತು ಇನ್ನಿತರ ರೈಲ್ವೆ ಡಿವಿಷನ್‌ಗಳು ಈ ಯೋಜನೆಯ ಜಾರಿಗಾಗಿ ಶ್ರಮಿಸಲಿವೆ.

ರೈಲು ನಿಲ್ದಾಣಗಳ ಸಮಗ್ರ ಅಭಿವೃದ್ಧಿ

ಇದೇ ವೇಳೆ ಕಾಸರಗೋಡು ಜಿಲ್ಲೆಯೂ ಸಹಿತ ಕೇರಳದ ವಿವಿಧ ರೈಲು ನಿಲ್ದಾಣಗಳನ್ನು ಅಭಿವೃದ್ಧಿಪಡಿಸುವ ಯೋಜನೆಯನ್ನು ರೂಪಿಸಲಾಗಿದೆ. ಅಮೃತ್ ಭಾರತ್ ಯೋಜನೆ ಮಾತ್ರವಲ್ಲದೆ ಇತರ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಿ ರೈಲು ನಿಲ್ದಾಣ ಪ್ರಗತಿ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು. ಈ ಮಧ್ಯೆ ಕಾಸರಗೋಡು ನಗರ ಹಾಗೂ ಇತರ ರೈಲು ನಿಲ್ದಾಣಗಳನ್ನು ಅಮೃತ್ ಭಾರತ್ ಯೋಜನೆಯಡಿ ಸಮಗ್ರವಾಗಿ ಪುನರುದ್ಧಾರಗೊಳಿಸಲಾಗುತ್ತಿದೆ. ಜೊತೆಗೆ ಸಂಬಂಧಿತ ರಸ್ತೆಗಳನ್ನೂ ಅಭಿವೃದ್ಧಿಪಡಿಸಲಾಗುತ್ತಿದೆ. ಮಂಜೇಶ್ವರ, ಉಪ್ಪಳ, ಕುಂಬಳೆ, ಕಾಞಂಗಾಡು ಮೊದಲಾದ ರೈಲು ನಿಲ್ದಾಣಗಳನ್ನು ಅಭಿವೃದ್ಧಿಪಡಿಸುವ ಗುರಿ ಹೊಂದಲಾಗಿದೆ.

ಶಬರಿಮಲೆ ಯಾತ್ರೆಯ ಸಂದರ್ಭ ಹೃದಯಾಘಾತ
ಹಿಂದು ಮುಖಂಡ ಸುಧೀರ್ ಇನ್ನಿಲ್ಲ

ಉಪ್ಪಿನಂಗಡಿ: ವಿಶ್ವ ಹಿಂದೂ ಪರಿಷತ್–ಬಜರಂಗ ದಳದ ಉಪ್ಪಿನಂಗಡಿ ಪ್ರಖಂಡ ಸುರಕ್ಷಾ ಪ್ರಮುಖ್ ಆಗಿದ್ದ ಬೆಳ್ತಂಗಡಿ ತಾಲೂಕು ತೆಕ್ಕಾರು ಗ್ರಾಮದ ನಿವಾಸಿ ಸುಧೀರ್ ತೆಕ್ಕಾರ್ (26) ಶಬರಿಮಲೆ ಯಾತ್ರೆಯ ಸಂದರ್ಭ ಹೃದಯಾಘಾತಕ್ಕಿಡಾಗಿ ಮೃತಪಟ್ಟ ಘಟನೆ ನಡೆದಿದೆ.



ಭಾನುವಾರ ರಾತ್ರಿ ಶಬರಿಮಲೆಯಲ್ಲಿ ಹೃದಯಾಘಾತ ಸಂಭವಿಸಿದ್ದು, ಮೃತದೇಹವನ್ನು ಇಲಾಖಾ ನಿಯಮಾವಳಿಗೆ ಒಳಪಡಿಸಿ ಕುಟುಂಬಕ್ಕೆ ಹಸ್ತಾಂತರಿಸಲಾಗಿದ್ದು, ಮಂಗಳವಾರ ಮುಂಜಾನೆ ಮೃತದೇಹವನ್ನು ತೆಕ್ಕಾರಿನ ಮನೆಗೆ ತಂದು ಅಲ್ಲಿಂದ ಮೆರವಣಿಗೆಯಲ್ಲಿ ಉಪ್ಪಿನಂಗಡಿಯ ಸ್ಮಶಾನಕ್ಕೆ ಕೊಂಡೊಯ್ದು ಅಂತ್ಯಕ್ರಿಯೆ ನಡೆಯಿತು.

ಅಂತಿಮ ಯಾತ್ರೆಯಲ್ಲಿ ಶಾಸಕರಾದ ಹರೀಶ್ ಪೂಂಜ, ಮಾಜಿ ಶಾಸಕ ಸಂಜೀವ ಮಠಂದೂರು, ಪ್ರಮುಖರಾದ ನವೀನ್ ನೆರಿಯಾ, ಸಂತೋಷ್ ಸರಪ್ಪಾಡಿ, ಮಹೇಂದ್ರ ಬಜತ್ತೂರು, ಸಂತೋಷ್ ಕುಮಾರ್ ಕರ್ಲಾಪು, ಸುದರ್ಶನ್, ರವೀಂದ್ರ ಆಚಾರ್ಯ, ರವಿನಂದನ್ ಹೆಗ್ಡೆ, ಯು. ರಾಮ, ಯು.ಜಿ. ರಾಧಾ, ಸಂತೋಷ್ ಅಡೆಕ್ಕಲ್ ಮತ್ತಿತರ ಪ್ರಮುಖರು ಭಾಗವಹಿಸಿದ್ದರು.

ತನಿಖಾ ಸಂಸ್ಥೆಗಳು ನಿಗಾವಿರಿಸಲಿ

26ರ ಹರೆಯದ ಯುವಕನಾಗಿರುವ ಸುಧಿರ್ ತೆಕ್ಕಾರ್ ಅವರ ಹೃದಯಾಘಾತದ ಮರಣ ನಮಗೆಲ್ಲರಿಗೂ ಕಳವಳವನ್ನು ಮೂಡಿಸಿದೆ. ಈ ಬಾರಿ ಶಬರಿಮಲೆ ಯಾತ್ರೆಯ ಸಂದರ್ಭ ದೊಡ್ಡ ಸಂಖ್ಯೆಯಲ್ಲಿ ಹೃದಯಾಘಾತದ ಸಾವು ಸಂಭವಿಸಿರುವ ಮಾಹಿತಿಗಳಿದ್ದು, ಇದರ ಹಿಂದೆ ಯಾವುದಾದರೂ ದುಷ್ಕೃತ್ಯದ ತಂಡ ಕಾರ್ಯೋನ್ಮುಖವಾಗಿರುವ ಶಂಖೆ ಮೂಡುತ್ತಿದೆ. ಈ ಕಾರಣ ಕೇಂದ್ರ ಸರಕಾರದ ತನಿಖಾ ತಂಡಗಳು ಈ ಬಗ್ಗೆ ನಿಗಾವಿರಿಸುವ ಅನಿವಾರ್ಯತೆ ಇದೆ. ಈಗಾಗಲೇ ದೇಶದ ವಿವಿಧೆಡೆ ಸಮುದಾಯದ ಸಮೂಹ ನಾಶಕ್ಕೆ ಸಂಬಂಧಿಸಿ ಹಲವು ದುಷ್ಕೃತ್ಯ ಯೋಜನೆಗಳನ್ನು ತನಿಖಾ ಸಂಸ್ಥೆಗಳು ಪತ್ತೆ ಹಚ್ಚಿದ್ದು, ಅದರ ಭಾಗವಾಗಿಯೇ ಯಾತ್ರಾರ್ಥಿಗಳ ತಿನ್ನುವ ಆಹಾರವನ್ನು ಕೇಂದ್ರೀಕರಿಸಿ ದುಷ್ಕೃತ್ಯವೆಸಗಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಈ ಕಾರಣಕ್ಕೆ ಈ ಬಾರಿ ಶಬರಿಮಲೆಯಲ್ಲಿ ಸಂಭವಿಸಿರುವ ಯಾತ್ರಾರ್ಥಿಗಳ ಹೃದಯಸ್ತಂಭನ ಸಾವು ಪ್ರಕರಣಗಳನ್ನು ವಿಶೇಷವಾಗಿ ಪರಿಗಣಿಸಿ ತನಿಖೆ ನಡೆಸಬೇಕಾಗಿದೆ ಎಂದು ವಿಹಿಂಪ ಬಜರಂಗ ದಳದ ಜಿಲ್ಲಾ ಗೋ ರಕ್ಷಾ ಪ್ರಮುಖ್ ಮಹೇಶ್ ಬಜತ್ತೂರು ಆಗ್ರಹಿಸಿದ್ದಾರೆ.

ಎಸ್‌ಡಿಎಂನಲ್ಲಿ ಫೆ.22– ಮಾ.1ರವರೆಗೆ ಶ್ರೀಮದ್ಭಗವದ್ಗೀತಾ ಪ್ರವಚನ ಮಾಲೆ

ಮಂಗಳೂರು: ಶ್ರೀ ಶಾರದಾ ಸೇವಾ ಟ್ರಸ್ಟ್, ಸಾರ್ವಜನಿಕ ಶ್ರೀ ಶಾರದಾ ಮಹೋತ್ಸವ ಸಮಿತಿ, ಶ್ರೀ ಶಾರದಾ ಮಾತೃ ಮಂಡಳಿ ಸುರತ್ಕಲ್ ವತಿಯಿಂದ ವಿವಿಧ ಸಂಘ–ಸಂಸ್ಥೆಗಳ ಸಹಯೋಗದಲ್ಲಿ ಡಾ. ಪಾವಗಡ ಪ್ರಕಾಶ ರಾವ್ ಅವರಿಂದ ಶ್ರೀಮದ್ಭಗವದ್ಗೀತಾ ಪ್ರವಚನ ಮಾಲೆ –10 ಮಂಗಳೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ಸಭಾಂಗಣದಲ್ಲಿ ಫೆ.22 ರಿಂದ ಮಾ.1ರವರೆಗೆ ಪ್ರತಿದಿನ ಸಂಜೆ 6 ಗಂಟೆಯಿಂದ 7.30ರವರೆಗೆ ನಡೆಯಲಿದೆ.

ಫೆ.22 ರಂದು ಸಂಜೆ 5 ಗಂಟೆಗೆ ಉದ್ಘಾಟನೆ ನಡೆಯಲಿದ್ದು, ಕಲ್ಕೂರ ಪ್ರತಿಷ್ಠಾನದ ಅಧ್ಯಕ್ಷ ಪ್ರದೀಪ ಕುಮಾರ ಕಲ್ಕೂರ ಅಧ್ಯಕ್ಷತೆ ವಹಿಸಲಿದ್ದಾರೆ. ಪ್ರವಚನ ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ಣಾಟಕ ಬ್ಯಾಂಕ್ ಲಿ. ಆಡಳಿತ ನಿರ್ದೇಶಕ ರಾಘವೇಂದ್ರ ಎಸ್. ಭಟ್ ನೆರವೇರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಡಾ. ಹರಿಕೃಷ್ಣ ಪುನರೂರು, ಪ್ರಶಾಂತ್ ಶೇಟ್, ಕೆ.ಶ್ರೀಪತಿ ಭಟ್, ಸುಧಾಕರ ರಾವ್ ಪೇಜಾವರ ಭಾಗವಹಿಸಲಿದ್ದಾರೆ ಎಂದು ಟ್ರಸ್ಟ್ ಅಧ್ಯಕ್ಷ ವೈ. ರಾಘವೇಂದ್ರ ರಾವ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರದೀಪ ಕುಮಾರ ಕಲ್ಕೂರ ಮಾತನಾಡಿ, ಫೆ.23 ರಿಂದ 28ರವರೆಗೆ ಪ್ರತಿದಿನ ಸಂಜೆ 5.45ಕ್ಕೆ ಗಣ್ಯವ್ಯಕ್ತಿಗಳು ಮುಖ್ಯ ಅತಿಥಿಗಳಾಗಿ ಆಗಮಿಸಿ, ದೀಪ ಬೆಳಗಿಸಿ ಶುಭ ಹಾರೈಸಲಿದ್ದಾರೆ. ಮಾ.1 ರಂದು ಸಮಾರೋಪ ಸಮಾರಂಭ ಜರಗಲಿದ್ದು, ಸಾಹಿತ್ಯ ಕೇಂದ್ರ ಮಂಗಳೂರಿನ ರತ್ನಾಕರ ಕುಳಾಯಿ ಅಧ್ಯಕ್ಷತೆ ವಹಿಸಲಿದ್ದಾರೆ. ಸುಗುಣ ಎಂ. ರಾಘವೇಂದ್ರ ಭಟ್ ಹಾಗೂ ಎಂ. ಎಂ. ಪ್ರಭು ಇವರು ಮುಖ್ಯ ಅತಿಥಿಗಳಾಗಿರುತ್ತಾರೆ. ಪ್ರತೀ ದಿನ ಸಂಜೆ 5 ರಿಂದ 6 ರವರೆಗೆ ವಿವಿಧ ಮಹಿಳಾ ಭಜನಾ ತಂಡಗಳಿಂದ ಭಜನಾ ಕಾರ್ಯಕ್ರಮವು ಇದೆ ಎಂದರು.

ಹರಿಕೃಷ್ಣ ಪುನರೂರು, ಕೃಷ್ಣ ಶೆಟ್ಟಿ ಉಪಸ್ಥಿತರಿದ್ದರು.

ಆಳ್ವಾಸ್ ಇಂಜಿನಿಯರಿಂಗ್ ಕಾಲೇಜು
ಅಟಲ್ ಪ್ರಾಯೋಜಿತ ಎಫ್‌ಡಿಪಿ ಕಾರ್ಯಕ್ರಮ

ಮೂಡುಬಿದಿರೆ: ಆಳ್ವಾಸ್ ತಾಂತ್ರಿಕ ಕಾಲೇಜಿನ ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್ ವಿಭಾಗದ ವತಿಯಿಂದ ಅಟಲ್ ಪ್ರಾಯೋಜಿತ 'ಡಿಜಿಟಲ್ ಫಾರೆನ್ಸಿಕ್ಸ್ ಇನ್ ಸೈಬರ್ ಸೆಕ್ಯುರಿಟಿ' ವಿಷಯದಡಿ ಆರು ದಿನಗಳ ಆನ್‌ಲೈನ್ ಬೋಧಕ ವರ್ಗದ ಕೌಶಲ್ಯಾಭಿವೃದ್ಧಿ ಶಿಬಿರ ನಡೆಯಿತು.

ಡೆಲ್ಟಾ ಎಕ್ಸಚೇಂಜ್ ಸಂಸ್ಥೆಯ ವೆಂಕಟೇಶ್ ಎಲ್. ಶರ್ಮಾ ಮುಖ್ಯ ಅತಿಥಿಯಾಗಿ ಭಾಗವಹಿಸಿದರು. ಸೈಬರ್ ಭದ್ರತಾ ತಜ್ಞ ಡಾ. ಮನೋಜ್ ವಿ.ಎನ್, ಅಗಮ್ಯ ಸೈಬರ್ ಟೆಕ್‌ನ ಮಹೇಶ್ ವಸ್ತ್ರಾದ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಡಿಜಿಟಲ್ ಫಾರೆನ್ಸಿಕ್ಸ್, ಸೈಬರ್ ಅಪರಾಧ ತನಿಖೆ, ಡೇಟಾ ಮರುಪಡೆಯುವ ತಂತ್ರಜ್ಞಾನ, ಸೈಬರ್ ಕಾನೂನು,



ಎಥಿಕಲ್ ಹ್ಯಾಕಿಂಗ್ ಮತ್ತು ಸೈಬರ್ ಭದ್ರತಾ ವಿಧಾನಗಳ ಕುರಿತು ತಾಂತ್ರಿಕ ಅಧಿವೇಶನಗಳು ನಡೆದವು.

ರಿ ಇನ್ಫೋಸೆಕ್‌ನ ಸಮರ್ಥ್ ಬಿ. ಭಟ್, ಭಾರತ್ ಕುಮಾರ್ ಎನ್., ವೆಂಕಟೇಶ್ ಎಲ್. ಶರ್ಮಾ, ಸೈಸೆಕ್‌ನ ಶಿವಲಿಂಗಸಾಲಕ್ಕಿ, ಮಹೇಶ್ ವಸ್ತ್ರಾದ್, ಬೆಂಗಳೂರಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಕೌಶಿಕ್ ಜಿ.ಎನ್, ಕಾಲೇಜಿನ ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ಡಾ. ಮಂಜುನಾಥ್ ಕೊಠಾರಿ ಹಾಗೂ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಅಸ್ಲಂ ಬಿ. ನಂದ್ಯಾಲ್ ಸೆಷನ್‌ಗಳನ್ನು ನಡೆಸಿಕೊಟ್ಟರು. ಸಮಾರೋಪ ಸಮಾರಂಭದಲ್ಲಿ ನಿಟ್ಟೆಯ ಪ್ರೊಫೆಸರ್ ಡಾ. ವಾಸುದೇವ ಆಚಾರ್ ಹಾಗೂ ಗೌರವ ಅತಿಥಿಯಾಗಿ ಸಮರ್ಥ್ ಭಟ್ ಭಾಗವಹಿಸಿದರು. ದೇಶದ ವಿವಿಧ ಎಂಜಿನಿಯರಿಂಗ್ ಕಾಲೇಜುಗಳಿಂದ ಒಟ್ಟು 246 ಉಪನ್ಯಾಸಕರು ಪಾಲ್ಗೊಂಡರು.

ಕುಂಬಳೆ ಮೊಗ್ರಾಲ್ ಶ್ರೀ ಕೋಡ್ದಬ್ಬು ದೈವಸ್ಥಾನ ಫೆ.19–21: ವರ್ಷಾವಧಿ ನೇಮೋತ್ಸವ

ಕುಂಬಳೆ: ಕಾಸರಗೋಡು ಗಡಿಯಲ್ಲಿರುವ ಕೊನೆಯ ಬಬ್ಬುಸ್ವಾಮಿ ಕ್ಷೇತ್ರವೆಂಬ ಖ್ಯಾತಿಗೆ ಪಾತ್ರವಾಗಿರುವ ಕುಂಬಳೆ ಮೊಗ್ರಾಲ್ ಶ್ರೀ ಕೋಡ್ದಬ್ಬು ದೈವಸ್ಥಾನದಲ್ಲಿ ವರ್ಷಾವಧಿ ನೇಮೋತ್ಸವವು ಫೆ. 19ರಿಂದ 21ರವರೆಗೆ ವಿಜೃಂಭಣೆಯಿಂದ ನಡೆಯಲಿದೆ.

ಫೆ. 19ರಂದು ಬೆಳಿಗ್ಗೆ ಭಂಡಾರ ಏರುವುದರೊಂದಿಗೆ ನೇಮೋತ್ಸವಕ್ಕೆ ಚಾಲನೆ ದೊರೆಯಲಿದೆ. ಅದೇ ದಿನ ಬೆಳಿಗ್ಗೆ 11 ಗಂಟೆಗೆ ಜಾಗದ ಗುಳಿಗ ನೇಮ ಹಾಗೂ ರಾತ್ರಿ 9 ಗಂಟೆಗೆ ಮೈಸಂದಾಯ ದೈವದ ನೇಮ ನಡೆಯಲಿದೆ.

ಫೆ. 20ರಂದು ಬೆಳಿಗ್ಗೆ 7 ಗಂಟೆಗೆ ಕೋಮರಾಯ ದೈವದ ನೇಮ, ಬೆಳಿಗ್ಗೆ 11 ಗಂಟೆಗೆ ಧರ್ಮದೈವದ ನೇಮ, ಮಧ್ಯಾಹ್ನ 2 ಗಂಟೆಗೆ ಸಂಕಲೆ ಗುಳಿಗ ನೇಮ ಹಾಗೂ ರಾತ್ರಿ 10 ಗಂಟೆಗೆ ಪಂಜುರ್ಲಿ ದೈವದ ನೇಮ ನೆರವೇರಲಿದೆ.

ಫೆ. 21ರಂದು ಬೆಳಿಗ್ಗೆ 9.30 ಗಂಟೆಗೆ ಪಿಲಿಚಾಮುಂಡಿ ದೈವದ ನೇಮ ನಡೆಯಲಿದ್ದು, ಅದೇ ದಿನ ರಾತ್ರಿ 9.30 ಗಂಟೆಗೆ ಭಗವಾನ್ ಶ್ರೀ ಬಬ್ಬುಸ್ವಾಮಿ ಹಾಗೂ ತನ್ನಿಮಾನಿಗ ನೇಮೋತ್ಸವ ನಡೆಯಲಿದೆ. ಫೆ. 22ರಂದು ಭಂಡಾರ ಇಳಿಯುವುದರೊಂದಿಗೆ ನೇಮೋತ್ಸವ ಸಂಪನ್ನಗೊಳ್ಳಲಿದೆ.

ನೇಮೋತ್ಸವದ ಪ್ರತಿದಿನ ಮಧ್ಯಾಹ್ನ ಹಾಗೂ ರಾತ್ರಿ ಮಹಾ ಅನ್ನಸಂತರ್ಪಣೆ ನಡೆಯಲಿದೆ ಎಂದು ದೈವಸ್ಥಾನದ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ಛಲವಾದಿ ಟಿ.ನಾರಾಯಣ ಸ್ವಾಮಿ ನಾಯಕರ ಕುರಿತು ಕೆಟ್ಟ ಪದ ಬಳಕೆಯ ಆರೋಪ
ಶಾಸಕರ ವಿರುದ್ಧ ಕ್ರಮಕ್ಕೆ ಬಿಜೆಪಿ ಎಸ್ಸಿ ಮೋರ್ಚಾ ಆಗ್ರಹ



ಪುತ್ತೂರು: ಕರ್ನಾಟಕ ಸರಕಾರದ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ಟಿ. ನಾರಾಯಣ ಸ್ವಾಮಿ ಅವರ ಕುರಿತು ಶಾಸಕ ಅಶೋಕ್ ಕುಮಾರ್ ರೈ ಅವರು ಅವಹೇಳನ ಪದ ಬಳಕೆ ಮಾಡುವ ಮೂಲಕ ಪರಿಶಿಷ್ಟ ಜಾತಿಯ ಸಮುದಾಯಕ್ಕೆ ಅವಮಾನ ಮಾಡಿದ್ದು.. ಈ ಕುರಿತು ಶಾಸಕರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ಪರಿಶಿಷ್ಟ ಜಾತಿ ಸಮುದಾಯವನ್ನು ಸೇರಿಸಿ ಪ್ರತಿಭಟನೆ ಮಾಡುವ ಸ್ಥಿತಿ ತಲುಪಬಹುದು ಎಂದು ಬಿಜೆಪಿ ಜಿಲ್ಲಾ ಕಾರ್ಯದರ್ಶಿ ದಿನೇಶ್ ಅಮ್ಟೂರು ಹೇಳಿದ್ದಾರೆ.

ಅವರು ಮಂಗಳವಾರ ಸುದ್ದಿಗೋಷ್ಟಿಯಲ್ಲಿ ಮಾತನಾಡಿ, ಎಸ್‌ಸಿ ಸಮುದಾಯದ ನಾಯಕರನ್ನು ನಿಂದಿಸುವ ಮೂಲಕ ಶಾಸಕರು ತಮ್ಮ ದಲಿತ ವಿರೋಧಿ ನೀತಿ ಪ್ರದರ್ಶನ ಮಾಡಿದ್ದಾರೆ. ಇದರ ವಿರುದ್ಧ ಎಸ್‌ಸಿ ಸಮುದಾಯವನ್ನು ಸೇರಿಸಿಕೊಂಡು ದೊಡ್ಡ ಮಟ್ಟದ ಪ್ರತಿಭಟನೆ ಮಾಡಲು ಸಿದ್ಧತೆ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ಛಲವಾದಿ ನಾರಾಯಣ ಸ್ವಾಮಿ ಅವರು ಪರಿಶಿಷ್ಟ ಜಾತಿಗೆ ಸೇರಿದ ನಾಯಕರಾಗಿದ್ದು, ಬಿಜೆಪಿ ಎಸ್.ಸಿ. ಮೋರ್ಚಾದ ನಿಕಟಪೂರ್ವ ರಾಜ್ಯಾಧ್ಯಕ್ಷರಾಗಿದ್ದಾರೆ. ರಾಜ್ಯದ ಪರಿಶಿಷ್ಟ ಜಾತಿಯ ಮುಂಚೂಣಿಯ ನಾಯಕರೂ ಆಗಿದ್ದಾರೆ. ವಿಬಿ ಜಿ ರಾಮ್ ಜಿ ಯೋಜನೆ ಕುರಿತು ಜನಜಾಗೃತಿ ಸಭೆಯ ಮೂಲಕ ಪಾದಯಾತ್ರೆಯಲ್ಲಿ ಪಕ್ಷದ ರಾಜ್ಯದ ಸೂಚನೆಯಂತೆ ಛಲವಾದಿಯವರು ಭಾಗವಹಿಸಿ ಮಾತನಾಡಿದ್ದಾರೆ. ಕಾಂಗ್ರೆಸ್‌ನ ಸುಳ್ಳಿನ ಬಟ್ಟೆಯನ್ನು ಬಿಚ್ಚುತ್ತೇನೆ ಎಂದು ಹೇಳಿರುವುದನ್ನು ಶಾಸಕರು ತನಗಾದ ಅವಮಾನವೆಂದುಕೊಂಡಿದ್ದಾರೆ ಎಂದು ಅವರು ಹೇಳಿದರು.

ಈ ನಿಟ್ಟಿನಲ್ಲಿ ಶಾಸಕ ಅಶೋಕ್ ಕುಮಾರ್ ರೈ ಅವರು ಛಲವಾದಿ ಸಮುದಾಯಕ್ಕೆ ಅವಮಾನ ಮಾಡುವ ಭಾವನೆಯನ್ನು ಇಟ್ಟುಕೊಕಂಡು ಏಕವಚನದಲ್ಲಿ ಮಾತನಾಡಿದ್ದಾರೆ. ಅಶೋಕ್ ಕುಮಾರ್ ರೈ ಅವರಿಗೆ ಅಧಿಕಾರದ ಮದ ಏರಿರುವುದು ಕಂಡು ಬಂದಿದೆ. ನಾನು ನನ್ನಿಂದಲೇ ಎಂಬ ಅಹಂ ಭಾವವನ್ನು ಶಾಸಕರು ಬೆಳೆಸಿಕೊಂಡಿದ್ದಾರೆ. ತಮ್ಮನ್ನು ರಾಜಕೀಯವಾಗಿ ವಿರೋಧಿಸಿದವರನ್ನು ವೈಯಕ್ತಿಕವಾಗಿ ಮಾನ ಹಾನಿ ಮಾಡುವುದು ಶಾಸಕರ ಒಂದು ಚಾಳಿಯಾಗಿದೆ. ದೇವಸ್ಥಾನ, ದೈವಸ್ಥಾನಕ್ಕೆ ಬರುವಾಗ ಚಪ್ಪಲಿ ಹೇಗೆ ಹೊರಗಿಟ್ಟು ಬರುತ್ತಾರೋ ಹಾಗೆ ರಾಜಕೀಯ ಬಿಟ್ಟು ಬರಬೇಕೆಂದು ಹೇಳಿದ ಅವರೇ ಇವತ್ತು ದೇವಸ್ಥಾನದಲ್ಲಿ ರಾಜಕೀಯ ಮಾತನಾಡುತ್ತಾರೆ. ಹಾಗಾಗಿ ಶಾಸಕರು ತಮ್ಮ ಹೇಳಿಕೆಗೆ ಸಾರ್ವಜನಿಕವಾಗಿ ಕ್ಷಮೆ ಯಾಚಿಸಬೇಕು. ಅಧಿಕಾರಿಗಳು ಈ ವಿಷಯನ್ನು ಗಂಭೀರವಾಗಿ ಪರಿಗಣಿಸಿ ಶಾಸಕರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು.

ಸುದ್ದಿಗೋಷ್ಟಿಯಲ್ಲಿ ಬಿಜೆಪಿ ಎಸ್ಸಿ ಮೋರ್ಚಾದ ನಗರ ಮಂಡಲದ ಅಧ್ಯಕ್ಷ ಅಣ್ಣಪ್ಪ ಕಾರೆಕ್ಕಾಡು, ಬಿಜೆಪಿ ಎಸ್ಸಿ ಮೋಚಾ ಗ್ರಾಮಾಂತರ ಮಂಡಲದ ಅಧ್ಯಕ್ಷ ರೋಹಿತ್ ಅಮ್ಮಿನಡ್ಕ, ಬಿಜೆಪಿ ನಗರ ಮಂಡಲದ ಅಧ್ಯಕ್ಷ ಶಿವಕುಮಾರ್ ಪಿ.ಬಿ., ಗ್ರಾಮಾಂತರ ಮಂಡಲದ ಪ್ರಧಾನ ಕಾರ್ಯದರ್ಶಿಗಳಾದ ಲೋಕೇಶ್ ಚಾಕೋಟೆ, ಸುನಿಲ್ ದಡ್ಡು, ಮಂಡಲದ ಅಧ್ಯಕ್ಷ ದಯಾನಂದ ಶೆಟ್ಟಿ ಉಜಿರೆಮಾರು, ಯುವರಾಜ್ ಪೆರಿಯತ್ತೋಡಿ, ವಿರೂಪಾಕ್ಷ ಭಟ್, ನಾಗೇಶ್ ಟಿ.ಎಸ್., ಮಹಿಳಾ ಮೋರ್ಚಾದ ಪ್ರಧಾನ ಕಾರ್ಯದರ್ಶಿ ಜಯಲಕ್ಷ್ಮೀ, ಶಶಿಧರ್ ನಾಯಕ್, ನಾಗೇಂದ್ರ ಬಾಳಿಗ ಉಪಸ್ಥಿತರಿದ್ದರು.

ಕಿರುಸುದ್ದಿ

ಶ್ರೀ ಸಿದ್ಧಿ ವಿನಾಯಕ ವಸತಿ ಶಾಲೆಯಲ್ಲಿ ಶಾರದಾ ಪೂಜೆ

ಕುಂದಾಪುರ : ಹಟ್ಟಿಅಂಗಡಿಯ ಶ್ರೀ ಸಿದ್ಧಿ ವಿನಾಯಕ ವಸತಿ ಶಾಲೆಯಲ್ಲಿ ಶಾರದಾ ಪೂಜೆಯನ್ನು ಶ್ರದ್ಧಾ – ಭಕ್ತಿಯಿಂದ ಶುಕ್ರವಾರ ಆಚರಿಸಲಾಯಿತು. ಶಾಲೆಯ ಸಹ ಶಿಕ್ಷಕ ರಾಮಕೃಷ್ಣ ಉಡುಪ ಅವರು ಶಾಸ್ತ್ರೋಕ್ತವಾಗಿ ಮಂತ್ರಗಳನ್ನು ಪಠಿಸಿ, ತಾಯಿ ಶಾರದೆಯ ಪೂಜೆಯನ್ನು ನೆರವೇರಿಸಿ, ಶಾಲೆಯಲ್ಲಿ ಈ ರೀತಿಯ ಆಚರಣೆಯು ವಿದ್ಯಾರ್ಥಿಗಳಲ್ಲಿ ಹುಮ್ಮಸ್ಸು ತುಂಬಿ, ಸಾಂಸ್ಕೃತಿಕ ಮೌಲ್ಯಗಳ ಪರಿಚಯವನ್ನು ಮಾಡಿಸಿ, ಶಿಸ್ತನ್ನು ಬೆಳೆಸಲು ಸಹಾಯ ಮಾಡುತ್ತದೆ ಎಂದು ಹೇಳುತ್ತಾ, ಮಕ್ಕಳಿಗೆ ತಾಯಿ ಸರಸ್ವತಿಯ ಮಹಿಮೆ ಮತ್ತು ವಿದ್ಯೆಯ ಮಹತ್ವವನ್ನು ತಿಳಿಸಿದರು. ಈ ಸಂದರ್ಭದಲ್ಲಿ ಅವರು ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿ ಹಾಗೂ ಸರ್ವಾಂಗೀಣ ಪ್ರಗತಿಗಾಗಿ ಪ್ರಾರ್ಥನೆಯನ್ನು ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಶ್ರೀ ಸಿದ್ಧಿ ಶೈಕ್ಷಣಿಕ ಪ್ರತಿಷ್ಠಾನದ ಕಾರ್ಯದರ್ಶಿ ಹಾಗೂ ಶಾಲಾ ಪ್ರಾಂಶುಪಾಲ ಶರಣ ಕುಮಾರ, ಶಾಲಾ ಆಡಳಿತಾಧಿಕಾರಿ ವೀಣಾರಶ್ಮಿ ಎಂ., ಉಪಪ್ರಾಂಶುಪಾಲ ರಾಮ ದೇವಾಡಿಗ, ಮುಖ್ಯೋಪಾಧ್ಯಾಯಿನಿ ಸುಜಾತಾ ಸದಾರಾಮ್, ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪ್ರತಿ ವರ್ಷದಂತೆ ಈ ವರ್ಷವೂ ವಿದ್ಯಾರ್ಥಿಗಳು ಅವರವರ ಮನೆಯ ಕೈತೋಟಗಳಲ್ಲಿ ಬೆಳೆದ ಬಣ್ಣ ಬಣ್ಣದ ವಿವಿಧ ಹೂವುಗಳನ್ನು ತಂದು ವಿದ್ಯಾ ದೇವತೆಯಾದ ತಾಯಿ ಶಾರದೆಯನ್ನು ಹೂವುಗಳಿಂದ ಅಲಂಕರಿಸಿದರು. ಕಾರ್ಯಕ್ರಮದ ಉದ್ದಕ್ಕೂ ವಿದ್ಯಾರ್ಥಿಗಳು ಶ್ರೀ ಸಿದ್ಧಿ ವಿನಾಯಕ ಹಾಗೂ ದೇವಿ ಶಾರದೆಯ ಕುರಿತಾಗಿ ಭಕ್ತಿ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿ, ದೈವಿಕ ವಾತಾವರಣವನ್ನು ಮೂಡಿಸಿದರು. ತಾಯಿ ಶಾರದೆಯನ್ನು ಪೂಜಿಸಿ ವಿದ್ಯೆ ಹಾಗೂ ಬುದ್ಧಿಯನ್ನು ದಯಪಾಲಿಸುವಂತೆ ಮಾಡಲಾದ ಮಕ್ಕಳ ಮುಗ್ಧ ಮನಸ್ಸಿನ ಪ್ರಾರ್ಥನೆಯು ಕಾರ್ಯಕ್ರಮವನ್ನು ಅರ್ಥಪೂರ್ಣಗೊಳಿಸಿತು.

ಪ್ರಸಾದ್ ನೇತ್ರಾಲಯದಿಂದ 62 ಮಂದಿಗೆ ಉಚಿತ ಕನ್ನಡಕ ವಿತರಣೆ

ಕುಂದಾಪುರ : ಆಲೂರಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಈ ಹಿಂದೆ ನಡೆದ ನೇತ್ರ ತಪಾಸಣೆ ಶಿಬಿರದಲ್ಲಿ ಆಯ್ಕೆಯಾದ ಅರ್ಹ 62 ಮಂದಿಗೆ ಉಚಿತ ಕನ್ನಡಕ ವಿತರಿಸುವ ಕಾರ್ಯಕ್ರಮವು ಉಡುಪಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಆಲೂರು ಪ್ರಾಥಮಿಕ ಆರೋಗ್ಯ ಕೇಂದ್ರದ ಆಶ್ರಯದಲ್ಲಿ ಆಲೂರಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನಡೆಯಿತು. ಆಲೂರಿನ ದಿ. ವೆಂಕಮ್ಮ ನಾರಾಯಾಣ ದೇವಾಡಿಗರ ಚತುರ್ಥ ಪುಣ್ಯತಿಥಿಯ ಅಂಗವಾಗಿ ರೆಡ್ ಕ್ರಾಸ್ ಕುಂದಾಪುರ, ಎ.ಜೆ. ಆಸ್ಪತ್ರೆ ಮಂಗಳೂರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪ್ರಸಾದ್ ನೇತ್ರಾಲಯ ಸಹಯೋಗದಲ್ಲಿ ಈ ಹಿಂದೆ ಆಲೂರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆರೋಗ್ಯ ಹಾಗೂ ನೇತ್ರ ತಪಾಸಣಾ ಶಿಬಿರ ನಡೆದಿತ್ತು. ನಿವೃತ್ತ ಮುಖ್ಯೋಪಾಧ್ಯಾಯ ಎ.ಎಸ್. ಮಹಾಬಲ ಜೋಯಿಸ್, ಆಲೂರು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಕೆ.ಎ. ಗೋಪಾಲ, ಉದ್ಯಮಿ ತುಂಗಾ ದೇವಾಡಿಗ, ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಸದಸ್ಯ ರಘುರಾಮ ದೇವಾಡಿಗ ಆಲೂರು, ಪ್ರಮುಖರಾದ ಸಂಜೀವ ಪೂಜಾರಿ ಆಲೂರು, ತೇಜ ಪೂಜಾರಿ ಆಲೂರು ಮತ್ತಿತರರು ಉಪಸ್ಥಿತರಿದ್ದರು.

ಬೈಕ್ ಡಿಕ್ಕಿಯಾಗಿ ಪಾದಚಾರಿಗೆ ಗಾಯ

ಕುಂದಾಪುರ: ಬೈಕೊಂದು ಪಾದಚಾರಿಗೆ ಡಿಕ್ಕಿ ಹೊಡೆದು ಸಂಭವಿಸಿದ ಅಪಘಾತದಲ್ಲಿ ಪಾದಚಾರಿ ಮತ್ತು ಬೈಕ್ ಸವಾರ ಗಾಯಗೊಂಡ ಘಟನೆ ನಡೆದಿದೆ. ಪಾದಚಾರಿ ಚಂದ್ರ ಆಚಾರ್ಯ ಬಿ. ಮತ್ತು ಬೈಕ್ ಸವಾರ ಸುರೇಶ ಬಿಲ್ಲವ ಗಾಯಗೊಂಡವರು. ಕಟ್‌ಬೇಲ್ತೂರು ಗ್ರಾಮದ ಗಣಪತಿ ಕಟ್ಟೆ ಸಮೀಪ ಹೆಮ್ಮಾಡಿ–ಕೊಲ್ಲೂರು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಚಂದ್ರ ಆಚಾರ್ಯ ಬಿ. ಅವರಿಗೆ ಹಿಂದಿನಿಂದ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಚಂದ್ರ ಆಚಾರ್ಯ ಗಂಭೀರವಾಗಿ ಗಾಯಗೊಂಡು ಅವರನ್ನು ಚಿಕಿತ್ಸೆಗೆ ಕುಂದಾಪುರ ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ, ವೈದ್ಯರ ಸಲಹೆಯಂತೆ ಹೆಚ್ಚಿನ ಚಿಕಿತ್ಸೆಗೆ ಕೆ.ಎಂ.ಸಿ. ಮಣಿಪಾಲ ಆಸ್ಪತ್ರೆಗೆ ದಾಖಲಿಸಲಾಗಿದೆ. ಬೈಕ್ ಸವಾರ ಸುರೇಶ ಬಿಲ್ಲವ ಕೂಡಾ ಗಾಯಗೊಂಡು ಕುಂದಾಪುರ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಕುಂದಾಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಫೆ.20: ಜಿಲ್ಲಾ ಪಂಚಾಯತ್ ಅಭಿವೃದ್ಧಿ ವಿಚಾರ ಸಂಕಿರಣ

ಕಾಸರಗೋಡು: ಜಿಲ್ಲಾ ಪಂಚಾಯತ್‌ನ 2026–27ನೇ ವಾರ್ಷಿಕ ಯೋಜನೆ ರಚನೆಗೆ ಸಂಬಂಧಿಸಿದ ಅಭಿವೃದ್ಧಿ ವಿಚಾರ ಸಂಕಿರಣವನ್ನು ಫೆ.20ರಂದು ಬೆಳಗ್ಗೆ 10 ಗಂಟೆಗೆ ಕಾಸರಗೋಡಿನ ಕೇರಳ ಬ್ಯಾಂಕ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಶಿವಶಂಕರ ಭಟ್, 'ವನಶ್ರೀ', ಕೊಕ್ರಾಡಿ, ಬೆಳ್ತಂಗಡಿ (ತಾ).
2. ರಾಮಣ್ಣ ಶೆಟ್ಟಿ, ಕುರುಂಬಿಲ್‌ಗುತ್ತು, ಐಕಳ.
3. ಮೋನಪ್ಪ ಕರ್ಕೇರ, ಶಿಬ್ರಿಕೆರೆ, ಪದುರೆಂಗಿ – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
4. ಆದಿತ್ಯ ಶೆಟ್ಟಿ, 'ಸಾಧು ಕೃಪಾ', ಮುರ ಹೊಸಮನೆ, ಬಡಗ ಎಕ್ಕಾರು.
5. ಶ್ರೀ ದುರ್ಗಾಪರಮೇಶ್ವರೀ ಯಕ್ಷಗಾನ ಬಯಲಾಟ ಸೇವಾ ಸಮಿತಿ (ರಿ) ಜಯನಗರ, ಸುಳ್ಯ (ತಾ).
6. ಮೋಹನ್ ಶೆಟ್ಟಿ, 'ಪುಣ್ಯಶ್ರೀ ನಿಲಯ', ಕುಡುಂಬೂರು, ಬೈಕಂಪಾಡಿ, ಮಂಗಳೂರು (ತಾ).
7. ದಿ। ಬಿರ್ಮಣ ಪೂಜಾರಿ ಸ್ಮರಣಾರ್ಥ ಪತ್ನಿ ಮತ್ತು ಮಕ್ಕಳು, 'ಧರಣ', ಬೊಂಡಂತಿಲ.

ಶ್ರೀ ಧರ್ಮಸ್ಥಳ ಮೇಳ
ಶಿವಮೊಗ್ಗದಲ್ಲಿ
ಶ್ರೀ ಅನಂತ ಪದ್ಮನಾಭ ಭಾಗವತ್,
ಶ್ರೀ ಕುಮಾರಕೃಪಾ, ಜ್ಯೋತಿರಾವ್ ಬೀದಿ

ಶ್ರೀ ಸಾಲಿಗ್ರಾಮ ಮೇಳ
ವಂಡ್ಸೆ-ಹರವರಿಯಲ್ಲಿ-ಷಣ್ಮುಖಪ್ರಿಯ

ಶ್ರೀ ಪೆರ್ಡೂರು ಮೇಳ
ಯಲ್ಲಾಪುರದಲ್ಲಿ-
ಭೂ ಕೈಲಾಸ, ವಾಲಿ ವಧೆ, ಗದಾಯುದ್ಧ, ಮಾಯಾ ಮೃಗಾವತಿ

ಶ್ರೀ ಹನುಮಗಿರಿ ಮೇಳ
ಮೂಡುಬಿದಿರೆಯ ಆಲಂಗಾರಿನಲ್ಲಿ

ಶ್ರೀ ಪಾವಂಜೆ ಮೇಳ
ಅಸೈಗೋಳಿ ಕೇಂದ್ರ ಮೈದಾನದಲ್ಲಿ-ಗರುಡೋದ್ಭವ



ವೀರಕಂಬ ಗಣೇಶ್ ಕೋಡಿ ಎಂಬಲ್ಲಿ ಬೆಂಕಿ ಅನಾಹುತದಿಂದ ಬಡಕುಟುಂಬವಾದ ರಾಜೇಶ್ವರಿ ಮತ್ತು ಮಕ್ಕಳು ಸಂಕಷ್ಟಕ್ಕೊಳಗಾಗಿದ್ದು, ಅವರಿಗೆ ವಿಟ್ಲ ಠಾಣೆಯ ಅಧಿಕಾರಿಗಳು, ಸಿಬ್ಬಂದಿಗಳು ಸೇರಿಕೊಂಡು ಸಹಾಯ ಹಸ್ತ ವಿತರಣೆ ಮಾಡಿದರು. ಪೊಲೀಸ್ ನಿರೀಕ್ಷಕ ಪ್ರಕಾಶ್ ದೇವಾಡಿಗ, ಉಪನಿರೀಕ್ಷಕ ರಾಮಕೃಷ್ಣ ಹಾಗೂ ಸಿಬ್ಬಂದಿಗಳಿದ್ದರು.

ಮಾ.1: ಮಂಗಳಗಂಗೋತ್ರಿ ಕ್ರೀಡಾಂಗಣದಲ್ಲಿ ಆಯೋಜನೆ
'ಸ್ಮೃತಿ ಸಂಗಮ 2026' ಅಲ್ಯೂಮ್ನಿ ಮಹಾಸಂಗಮ

ಮಂಗಳೂರು: ಕೊಣಾಜೆಯ ಮಂಗಳೂರು ವಿಶ್ವವಿದ್ಯಾಲಯದ ಮಂಗಳ ಅಲ್ಯೂಮ್ನಿ ಅಸೋಸಿಯೇಶನ್ (ಮಾ) ವತಿಯಿಂದ 'ಸ್ಮೃತಿ ಸಂಗಮ 2026' ಅಲ್ಯೂಮ್ನಿ ಮಹಾಸಂಗಮ ಮಾ. 1ರಂದು ಬೆಳಗ್ಗೆ 8.30ರಿಂದ ಮಂಗಳಗಂಗೋತ್ರಿ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ.

ಬೆಳಗ್ಗೆ 8.30ರಿಂದ 10.30ರವರೆಗೆ ವಿವಿಧ ಕ್ರೀಡಾಸ್ಪರ್ಧೆಗಳು ನಡೆಯಲಿವೆ. ಬೆಳಗ್ಗೆ 10.30ಕ್ಕೆ ಕಾರ್ಯಕ್ರಮವನ್ನು ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್ ಉದ್ಘಾಟಿಸುವರು. ಮಂಗಳೂರು ವಿಶ್ವವಿದ್ಯಾಲಯ ಕುಲಪತಿ ಪ್ರೊ.ಪಿ.ಎಲ್. ಧರ್ಮ ಅಧ್ಯಕ್ಷತೆ ವಹಿಸುವರು. ಕರ್ನಾಟಕ ವಿಶ್ವವಿದ್ಯಾಲಯ ಕುಲಪತಿ ಪ್ರೊ.ಎ.ಎಂ. ಖಾನ್, ಕಣಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಅಧ್ಯಕ್ಷ ಯು.ಕೆ. ಮೋನು, ಕಾಲೇಜು ಶಿಕ್ಷಣ ಇಲಾಖೆ ಮಂಗಳೂರು ಜಂಟಿ ನಿರ್ದೇಶಕಿ ಕವಿತಾ ಕೆ.ಆರ್. ಮುಖ್ಯ ಅತಿಥಿಯಾಗಿ ಭಾಗವಹಿಸುವರು ಎಂದು ಮಾ ಅಧ್ಯಕ್ಷ ರಾಮಕೃಷ್ಣ ರಾವ್ ಕೆ.ಎನ್. ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಲಗೋರಿ, ಹಗ್ಗಜಗ್ಗಾಟ, ಪುರುಷರಿಗೆ ಕ್ರಿಕೆಟ್, ಮಹಿಳೆಯರಿಗೆ ತ್ರೋಬಾಲ್ ಪಂದ್ಯಾಟ

ಬೆಳಗ್ಗೆ 11.45ರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಮಧ್ಯಾಹ್ನ 3ಕ್ಕೆ ಬಹುಮಾನ ವಿತರಣೆ ಮತ್ತು ಸಮಾರೋಪ, ಮಧ್ಯಾಹ್ನ 3.30ರಿಂದ ಸಂಜೆ 4.30ರವರೆಗೆ ಹಳೆವಿದ್ಯಾರ್ಥಿಗಳ ವಿಭಾಗವಾರು ಸಂವಾದ ನಡೆಯಲಿದೆ. ಬೆಳಗ್ಗೆ 8.30ರಿಂದ ಲಗೋರಿ, ಹಗ್ಗಜಗ್ಗಾಟ, ಪುರುಷರಿಗೆ ಕ್ರಿಕೆಟ್, ಮಹಿಳೆಯರಿಗೆ ತ್ರೋಬಾಲ್ ಪಂದ್ಯಾಟ ಏರ್ಪಡಿಸಲಾಗಿದೆ. ಮಂಗಳ ಅಲ್ಯೂಮ್ನಿ ಅಸೋಸಿಯೇಶನ್‌ನಲ್ಲಿ 25000ಕ್ಕೂ ಅಧಿಕ ಮಂದಿ ಸದಸ್ಯರಿದ್ದು, ಹಳೆ ವಿದ್ಯಾರ್ಥಿಗಳ ಬೆಂಬಲದೊಂದಿಗೆ ಹಲವು ಕಾರ್ಯಕ್ರಮಗಳನ್ನು ಆಯೋಜಿಸುವ ದೃಷ್ಟಿಯಿಂದ ಸ್ಮೃತಿ ಸಂಗಮ ಹಮ್ಮಿಕೊಳ್ಳಲಾಗಿದೆ. ಮಾ ಹಳೆ ವಿದ್ಯಾರ್ಥಿಗಳು ಭಾಗವಹಿಸಬೇಕು ಎಂದರು.

ಮಾ ಕಾರ್ಯಕಾರಿ ಸಮಿತಿ ಸದಸ್ಯರಾದ ರಾಜಾರಾಮ್ ರಾವ್, ಪ್ರದೀಪ್ ಡಿಸೋಜ, ನಾಗೇಶ್ ಹಿರೇಗೌಡರ್ ಉಪಸ್ಥಿತರಿದ್ದರು.

ಕೇರಳ ಲಾಬಿ ಬಗ್ಗೆ ಕುಂದಾಪುರ ರೈಲ್ವೆ ಪ್ರಯಾಣಿಕರ ಆಕ್ಷೇಪ
ರೈಲುಗಳ ಬಗ್ಗೆ ಸುಳ್ಳು ಮಾಹಿತಿ

ಕುಂದಾಪುರ : ರೈಲುಗಳು ಮಂಗಳೂರಿಗೆ ಬರುವುದಿಲ್ಲ ಎಂಬ ಕೇರಳ ಲಾಬಿಯ ಸುಳ್ಳುಗಳಿಂದ ಸುರತ್ಕಲ್, ಮೂಲ್ಕಿ, ಉಡುಪಿ, ಕಾರವಾರ ಜನರಿಗೆ ಭಾರೀ ಅನ್ಯಾಯವಾಗುತ್ತಿದೆ ಎಂದು ಕುಂದಾಪುರ ರೈಲ್ವೆ ಪ್ರಯಾಣಿಕರ ಸಮಿತಿ ಹೇಳಿದೆ.

ಬೆಂಗಳೂರು ಉಡುಪಿ ರೈಲುಗಳು ಮಂಗಳೂರಿಗೆ ಬರುತ್ತಿಲ್ಲ ಎಂಬ ಸುಳ್ಳನ್ನು ವ್ಯವಸ್ಥಿತವಾಗಿ ಹರಡಲಾಗುತಿದ್ದು, ಬೆಂಗಳೂರಿನಿಂದ ಉಡುಪಿ, ಕಾರವಾರ ಕಡೆ ಹೋಗುವ ರೈಲುಗಳು ನಗರಕ್ಕೆ ಹೆದ್ದಾರಿ ಸಂಪರ್ಕ ಕೊಡುವ ಫರಂಗೀಪೇಟೆಗೆ ಬಂದು ಅಲ್ಲಿಂದ ಜಿಲ್ಲಾಧಿಕಾರಿ ಕಚೇರಿ ಇರುವ ಪಡೀಲ್ ಮೂಲಕ ಕುಲಶೇಖರಕ್ಕೆ ಬಂದು, ಜೋಕಟ್ಟೆ ಮೂಲಕ ಕೊಂಕಣ ರೈಲ್ವೇ ಟರ್ಮಿನಲ್ ಮಂಗಳೂರು ನಾರ್ತ್ ಸುರತ್ಕಲ್ ತಲುಪಿ ಉಡುಪಿ ಕಾರವಾರ ಕಡೆ ಓಡುತ್ತವೆ. ಮಂಗಳೂರಿನ ಇಷ್ಟೆಲ್ಲಾ ಪ್ರಮುಖ ಜಾಗಗಳ ಮೂಲಕ ರೈಲು ಓಡಿದರೂ ಮಂಗಳೂರು ಜಂಕ್ಷನ್ ಮೂಲಕವೇ ಓಡಬೇಕು ಎಂಬ ಕೇರಳ ಲಾಬಿಗಳ ಹುನ್ನಾರದಿಂದ, ರೈಲುಗಳು ಮಂಗಳೂರಿನೊಳಗೆ ಬರುವುದಿಲ್ಲ ಎಂಬ ಸುಳ್ಳಿನಿಂದಾಗಿ ರೈಲುಗಳು ಕೇರಳದ



ಕಡೆ ಮುಖ ಮಾಡಿ ನಗರದೊಳಗೆ ಬಂದು ಸಿಗ್ನಲ್ ಪ್ಲಾಟ್‌ಫಾರಂ ಸಿಗದೇ ಮಂಗಳೂರು ಜಂಕ್ಷನ್ ತಲುಪಿ ಇಂಜಿನ್ ಬದಲಾಯಿಸಿ ಮತ್ತೆ ಪುನ ಅದೇ ಜೋಕಟ್ಟೆ ಮಂಗಳೂರು ನಾರ್ತ್‌ಗೆ ಪುನ: ಬಂದು ಸೇರುವಾಗ ಸುರತ್ಕಲ್, ಉಡುಪಿ, ಕಾರವಾರ ಭಾಗದವರ 2 –3 ಗಂಟೆ ವ್ಯರ್ಥವಾಗುತ್ತಿದೆ ಎಂದು ತುಳುನಾಡು ಕರಾವಳಿ ರೈಲ್ವೇ ಬಳಕೆದಾರರು ದೂರಿದ್ದಾರೆ.

ಇತ್ತೀಚೆಗೆ ಪಡೀಲ್ ಜೋಕಟ್ಟೆ ಮಂಗಳೂರು ನಾರ್ತ್ ನೇರ ಮಾರ್ಗದ ಶಿವರಾತ್ರಿ ವಿಶೇಷ ಬೆಂಗಳೂರು ಮಂಗಳೂರು ಕಾರಾವಾರ ರೈಲನ್ನು ಪ್ರಭಾವ ಬಳಸಿ ಮಂಗಳೂರು ಜಂಕ್ಷನ್ ಮೂಲಕ ಓಡಿಸಿದ ಈ ಕೇರಳ ಲಾಬಿಯಿಂದಾಗಿ 11.30 ಕ್ಕೆ ಮಂಗಳೂರು ನಾರ್ತ್ ಸುರತ್ಕಲ್ ತಲುಪಬೇಕಾದ ರೈಲು ರಾತ್ರಿ 12.50ಕ್ಕೆ, 12.30ಕ್ಕೆ ರಾತ್ರಿ ಉಡುಪಿಗೆ ಬರಬೇಕಾದ ರೈಲು 2.20ಕ್ಕೆ, 1 ಗಂಟೆಗೆ ಕುಂದಾಪುರ ಬರಬೇಕಾದ ರೈಲು 2.50ಕ್ಕೆ ಕುಂದಾಪುರ ತಲುಪಿ ಪ್ರಯಾಣಿಕರಿಗೆ ರೈಲು ಪ್ರಯಾಣದ ಉದ್ದೇಶವೇ ಹಾಳು ಮಾಡಿತ್ತು. ಪಡೀಲ್, ಜೋಕಟ್ಟೆ, ಮಂಗಳೂರು ನಾರ್ಥ್ ಸುರತ್ಕಲ್, ಫರಂಗೀಪೇಟೆ ಇಲ್ಲೆಲ್ಲಾ ನಿಲುಗಡೆ ಪಡೆದು ಬೇಗನೆ ಮಂಗಳೂರಿನ ವಿವಿಧೆಡೆ ತಲುಪಲು ಸಾಧ್ಯವಿದ್ದೂ, ಪ್ರತಿ ರೈಲೂ ಮತ್ತೆ ಮಂಗಳೂರು ನಗರದೊಳಗೆ ಬರಲೇ ಬೇಕೆಂಬ ಕಾರಣದಿಂದ ಕರಾವಳಿ ಕರ್ನಾಟಕದ ಜನ ರೈಲಿನಿಂದ ದೂರಾಗುವಂತಾಗಿದೆ. ಈ ರೈಲುಗಳನ್ನು ಕೇರಳದ ಕಡೆ ಓಡಿಸುವ ಯೋಜನೆಯಂತೆ ಇದು ಭಾಸವಾಗುತ್ತಿದೆ ಎಂಬುದು ಉಡುಪಿ ಭಾಗದವರ ಆರೋಪ.

ಬೆಂಗಳೂರು–ಮಂಗಳೂರು–ಉಡುಪಿ ರೈಲುಗಳಲ್ಲಿ ಈಗ ಪಂಚಗಂಗಾ ರೈಲು ಪಡೀಲ್ ಮೂಲಕ 9 ಗಂಟೆ ತೆಗೆದುಕೊಂಡರೆ, ಹಗಲು ರೈಲು ಮಂಗಳೂರು ಜಂಕ್ಷನ್ ಮೂಲಕ 11.30 ಗಂಟೆ ಹಾಗೂ ಮೈಸೂರು ಮಾರ್ಗದ ರೈಲು ಮಂಗಳೂರು ಸೆಂಟ್ರಲ್ ಮೂಲಕ ಸುಮಾರು 14.50 ಗಂಟೆ ಪ್ರಯಾಣದ ಅವಧಿ ಹೊಂದಿದೆ. ಮಂಗಳೂರಿಂದ ಆರಂಭವಾಗುವ ರೈಲುಗಳು ಜಂಕ್ಷನ್‌ನಿಂದಲೇ ಆರಂಭವಾಗಲೀ ಆದರೆ ಉಡುಪಿ, ಕಾರವಾರ ಕಡೆ ರೈಲುಗಳು ಮಂಗಳೂರಿನದ್ದೇ ಪ್ರಮುಖ ಭಾಗಗಳಾದ ಪಡೀಲ್, ಜೋಕಟ್ಟೆ, ಮಂಗಳೂರು ನಾರ್ತ್ ಸುರತ್ಕಲ್ ಮೂಲಕವೇ ಓಡಾಟ ನಡೆಸಬೇಕು. ಇದರಿಂದ ಎಲ್ಲರಿಗೂ ಸಮಯ ಉಳಿತಾಯ ಎಂಬುದು ಉಡುಪಿ ಕಡೆಯವರ ಬೇಡಿಕೆ ಎಂದು ಕುಂದಾಪುರ ರೈಲ್ವೆ ಪ್ರಯಾಣಿಕರ ಸಮಿತಿ ಅಧ್ಯಕ್ಷ ಗಣೇಶ ಪುತ್ರನ್ ತಿಳಿಸಿದ್ದಾರೆ.

ಭಾಗವತಿಕೆ ರಂಗ ಪ್ರವೇಶ, ತಾಳಮದ್ದಳೆ ಕಾರ್ಯಕ್ರಮ



ಮಂಗಳೂರು: ಕಾಸರಗೋಡು ದೇಲಂಪಾಡಿಯ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಸಂಘದ ಕೀರಿಕ್ಕಾಡು ಸ್ಮಾರಕ ಸಭಾಭವನದಲ್ಲಿ ಯಕ್ಷಗಾನ ಭಾಗವತಿಕೆಯ ಪ್ರಥಮ ರಂಗ ಪ್ರವೇಶ ಮತ್ತು ಪಾರ್ತಿಸುಬ್ಬ ವಿರಚಿತ ಪಂಚವಟಿ ಪ್ರಸಂಗದ ಯಕ್ಷಗಾನ ತಾಳಮದ್ದಳೆ ಶನಿವಾರ ನಡೆಯಿತು.

ಮೊದಲಿಗೆ ಶ್ರೀರಾಮ ಗೀತಾ ಭ್ಯಾಸ ತಂಡ ದೇಲಂಪಾಡಿ ಅವರಿಂದ ಭಗವದ್ಗೀತೆ ಪಾರಾಯಣವು ಸ್ಥಳಸಾನ್ನಿಧ್ಯ ಗೋಪಾಲಕೃಷ್ಣದೇವರ ವಿಶೇಷ ಪೂಜಾರ್ಚನೆಯೊಂದಿಗೆ ನೆರವೇರಿತು.

ಗುರು ವಿಶ್ವವಿನೋದ ಬನಾರಿ ಅವರ ಶಿಷ್ಯೆ ಹಸ್ತ ಬೆಳ್ಳಿಪ್ಪಾಡಿ ತನ್ನ ಯಕ್ಷಗಾನ ಭಾಗವತಿಕೆಯ ಪ್ರಥಮ ರಂಗಪ್ರವೇಶವನ್ನು ವಿಘ್ನ ನಿವಾರಕ ಶ್ರೀಗಣೇಶನ ಸ್ತುತಿ ಪದ್ಯ ಹಾಡುವುದರ ಮೂಲಕ ನಡೆಸಿದರು. ತಾಳಮದ್ದಳೆಯಲ್ಲಿ ಭಾಗವತರಾಗಿ ಮೋಹನ ಮೆಣಸಿನಕಾನ, ಚೆಂಡೆ ಮದ್ದಳೆ ವಾದನದಲ್ಲಿ ಅಪ್ಪಯ್ಯ ಮಣಿಯಾಣಿ, ಕಲ್ಲಡ್ಕ ಶಿವರಾಮ ಕಲ್ಲೂರಾಯ, ವಿಷ್ಣು ಶರಣ ಬನಾರಿ, ಸದಾನಂದ ಮಯ್ಯಾಳ, ಕೃಷ್ಣಪ್ರಸಾದ್ ಬೆಳ್ಳಿಪ್ಪಾಡಿ ಮತ್ತು ಚಕ್ರತಾಳದಲ್ಲಿ ಬಿ.ಎಚ್. ಆಶ್ಲೇಷ್ ಕಾಣಿಸಿಕೊಂಡರು.

ಅರ್ಥಧಾರಿಗಳಾಗಿ ವಿಕೇಶ್ ರೈ ಶೇಣಿ, ಶಾಂತಾಕುಮಾರಿ ದೇಲಂಪಾಡಿ, ಪೂಜಾ ಸಿ.ಎಚ್, ಬಿ.ಎಚ್. ವೆಂಕಪ್ಪ ಗೌಡ, ಗೋಪಾಲಕೃಷ್ಣ ರೈ ಮುದಿಯಾರು ಭಾಗವಹಿಸಿದರು.

ಬನಾರಿಯ 'ಬನಸಿರಿ' ಮನೆಯವರಿಂದ ಸೇವಾರೂಪವಾಗಿ ಆಯೋಜಿಸಲ್ಪಟ್ಟ ಕಲಾರಾಧನೆಯಲ್ಲಿ ನಂದಕಿಶೋರ ಬನಾರಿ ಸ್ವಾಗತಿಸಿದರು. ಸರೋಜಿನಿ ಬನಾರಿ ವಂದಿಸಿದರು.

ಆರೋಗ್ಯ ರಕ್ಷಣೆಗೆ ಕೇಂದ್ರದಿಂದ ಮಹತ್ವದ ಯೋಜನೆ: ಕ್ಯಾ.ಚೌಟ



ಕೈಕಂಬ: ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರಕಾರ ಜನರ ಆರೋಗ್ಯ ರಕ್ಷಣೆ ವಿಚಾರ ಮಹತ್ವದ ಯೋಜನೆಗಳನ್ನು ಜಾರಿಗೆ ತಂದಿದೆ. ಅದರ ಅಂಗವಾಗಿ ಜಿಲ್ಲೆಯಲ್ಲಿ ತಲಾ 65ಲಕ್ಷ ರೂಪಾಯಿ ವೆಚ್ಚದಲ್ಲಿ 125 ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳ ಸ್ಥಾಪನೆಯಾಗಲಿದೆ. ಬಹುತೇಕ ಕೇಂದ್ರಗಳ ಗುದ್ದಲಿ ಪೂಜೆ ನಡೆದಿದೆ ಇನ್ನು ಕೆಲವೇ ಬಾಕಿ ಇವೆ ಅವುಗಳ ಕಾಮಗಾರಿಯೂ ಶೀಘ್ರ ಆರಂಭವಾಗಲಿದೆ. ಈ ಕೇಂದ್ರಗಳಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಪರಿಣತಿ ಪಡೆದಿರುವ ಸ್ಥಳೀಯರಿಗೆ ಉದ್ಯೋಗವಕಾಶ ನೀಡುವ ಉದ್ದೇಶವಿದೆ. ಸಾರ್ವಜನಿಕರು ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದು ದಕ್ಷಿಣ ಕನ್ನಡ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಹೇಳಿದ್ದಾರೆ.

ಕಂದಾವರ ಗ್ರಾ.ಪಂ. ವ್ಯಾಪ್ತಿಯ ಕಂದಾವರ ಗ್ರಾಮದ ಬಿಲ್ಲವ ಸಂಘದ ಬಳಿ ಕೇಂದ್ರ ಸರಕಾರದ 65 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾಗಲಿರುವ ಆರೋಗ್ಯ ಮತ್ತು ಕ್ಷೇಮ ಕೇಂದ್ರಕ್ಕೆ ಮಂಗಳವಾರ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಮಂಗಳೂರು ನಗರ ಉತ್ತರ ಶಾಸಕ ಭರತ್ ಶೆಟ್ಟಿ ಮಾತನಾಡಿ, ಕೇಂದ್ರ ಸರಕಾರ ದೇಶದ ಅಭಿವೃದ್ಧಿಯ ಜತೆಗೆ ದೇಶದ ಜನರ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ ಹಲವಾರು ಆರೋಗ್ಯ ಯೋಜನೆಗಳನ್ನು ಹಮ್ಮಿಕೊಂಡಿದ್ದು, ಗ್ರಾಮೀಣ ಜನರು ಇದರ ಉಪಯೋಗ ಮಾಡಿಕೊಳ್ಳಬೇಕು ಎಂದರು.

ಗ್ರಾ.ಪಂ. ನಿಕಟ ಪೂರ್ವ ಅಧ್ಯಕ್ಷೆ ಶಾಲಿನಿ, ನಿಕಟಪೂರ್ವ ಉಪಾಧ್ಯಕ್ಷರು, ಸದಸ್ಯರು, ಸ್ಥಳೀಯ ಮುಖಂಡರು ಇದ್ದರು.

ಪಂಚವರ್ಣದಿಂದ 'ಬಹುಮಾನ ಗೆಲ್ಲಿ' ಯೋಜನೆ
ಯುವ ಜನಾಂಗ ಸ್ವಚ್ಛತೆಯಲ್ಲಿ ಭಾಗಿಯಾಗಿ



ಕೋಟ: ಯುವ ಜನಾಂಗದಲ್ಲಿ ಹೆಚ್ಚು ಹೆಚ್ಚು ಪರಿಸರ ಜಾಗೃತಿ ಪ್ರಜ್ಞೆ ಬೆಳೆಯಬೇಕು, ಪರಿಸರವನ್ನು ಸ್ವಚ್ಛವಾಗಿರಿಸಿಕೊಳ್ಳಲು ಪಣ ತೊಡಬೇಕು ಎಂದು ಕೋಟ ಸಹಕಾರಿ ವ್ಯವಸಾಯಕ ಸಂಘದ ಅಧ್ಯಕ್ಷ ಡಾ. ಕೃಷ್ಣ ಕಾಂಚನ್ ಯುವ ಜನಾಂಗಕ್ಕೆ ಕಿವಿಮಾತು ಹೇಳಿದರು.

ಭಾನುವಾರ ಇಲ್ಲಿನ ಸಾಲಿಗ್ರಾಮ ಪಟ್ಟಣಪಂಚಾಯತ್ ವ್ಯಾಪ್ತಿಯ ಪಾರಂಪಳ್ಳಿ ಪಡುಕರೆ ಬೀಚ್ ನಲ್ಲಿ ಪಂಚವರ್ಣ ಯುವಕ ಮಂಡಲ ಕೋಟ ಪ್ರವರ್ತಿತ ಸಂಸ್ಥೆ ಪಂಚವರ್ಣ ಮಹಿಳಾ ಮಂಡಲದ ನೇತೃತ್ವದಲ್ಲಿ ಹಂದಟ್ಟು ಮಹಿಳಾ ಬಳಗ ಕೋಟ, ಮಣೂರು ಫ್ರೆಂಡ್ಸ್, ಗೀತಾನಂದ ಫೌಂಡೇಶನ್ ಮಣೂರು, ಸಮುದ್ಯತಾ ಗ್ರೂಪ್ಸ್ ಕೋಟ, ಜೆಸಿಐ ಕೋಟ ಸೀನಿಯರ್ ಲಿಜನ್ ಇವರ ಸಹಯೋಗದೊಂದಿಗೆ ವಿನ್ ಲೈಟ್ ಸ್ಪೋರ್ಟ್ಸ್ ಕ್ಲಬ್ ಪಾರಂಪಳ್ಳಿ, ಸಾಲಿಗ್ರಾಮ ಪಟ್ಟಣಪಂಚಾಯತ್ ಇವರ ಸಂಯೋಜನೆಯೊಂದಿಗೆ ಕ್ಯಾಪ್ಸ್ ಫೌಂಡೇಶನ್ ಬೆಂಗಳೂರು ಇವರ ಬಹುಮಾನ ಪ್ರಾಯೋಜಕತ್ವದಲ್ಲಿ 291ನೇ ಭಾನುವಾರದ ಪರಿಸರಸ್ನೇಹಿ ಅಭಿಯಾನ ಸ್ವಚ್ಛತೆಯಲ್ಲಿ ಭಾಗಿಯಾಗಿ ಬಹುಮಾನ ಗೆಲ್ಲಿ ಎಂಬ ವಿನೂತನ 2ನೇ ಪ್ರಯೋಗ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಪ್ರಸ್ತುತ ದಿನಗಳಲ್ಲಿ ಸುತ್ತಮುತ್ತಲಿನ ಪರಿಸರದಲ್ಲಿ ತ್ಯಾಜ್ಯಗಳನ್ನು ಕಾಣುವುದಲ್ಲದೆ ಸಮುದ್ರ ತಟದಲ್ಲಿ ವಿಪರೀತ ಪ್ಲಾಸ್ಟಿಕ್ ತ್ಯಾಜ್ಯ ಪ್ರಕೃತಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದ್ದು ತ್ಯಾಜ್ಯ ಎಸೆಯುವ ಹೀನ ಮನಸ್ಥಿಯ ಬಗ್ಗೆ ಖೇಧ ವ್ಯಕ್ತಪಡಿಸಿ ಪಂಚವರ್ಣ ಸಂಘಟನೆ ನಿರಂತರ ಸಾಮಾಜಿಕ ಹಾಗೂ ಪ್ರಕೃತಿಯ ಮೇಲಿನ ಅವರು ಹಮ್ಮಿಕೊಳ್ಳುವ ಕಾರ್ಯಕ್ರಮ ಅತ್ಯಂತ ಪ್ರಶಂಸನೀಯ ಎಂದರಲ್ಲದೆ ಒಂದಿಷ್ಟು ಆಸಕ್ತ ಯುವ ಸ್ವಚ್ಛಾಗ್ರಹಿ ಮನಸ್ಸುಗಳು ಈ ಕಾರ್ಯದಲ್ಲಿ ಕೈಜೋಡಿಸಿ ಅಭಿಯಾನವನ್ನು ಯಶಸ್ವಿಗೊಳಿಸಿದ್ದು ಶ್ಲಾಘನೀಯ ಎಂದರು.

ಕಾರ್ಯಕ್ರಮದಲ್ಲಿ ಪಂಚವರ್ಣ ಸಂಘಟನೆ ಗೌರವ ಸಲಹೆಗಾರ ರಘು ಮಧ್ಯಸ್ಥ, ಕೋಡಿ ಪಂಚಾಯತ್ ಸದಸ್ಯ ಕೃಷ್ಣ ಪೂಜಾರಿ. ಪಿ.ವಿನ್ ಲೈಟ್ ಸ್ಪೋರ್ಟ್ಸ್ ಕ್ಲಬ್ ಮಾಜಿ ಅಧ್ಯಕ್ಷ ಗಿರೀಶ್ ಪೂಜಾರಿ, ಕಾರ್ಯದರ್ಶಿ ಸುಧಾಕರ್ ಪೂಜಾರಿ, ಪಂಚವರ್ಣ ಯುವಕ ಮಂಡಲದ ಅಧ್ಯಕ್ಷ ಮನೋಹರ್ ಪೂಜಾರಿ, ಮಹಿಳಾ ಮಂಡಲದ ಅಧ್ಯಕ್ಷೆ ಲಲಿತಾ ಪೂಜಾರಿ, ಹಂದಟ್ಟು ಮಹಿಳಾ ಬಳಗದ ಸ್ಥಾಪಕಾಧ್ಯಕ್ಷೆ ಪುಷ್ಪಾ ಹಂದಟ್ಟು, ಮಣೂರು ಫ್ರೆಂಡ್ಸ್ ಮಾಜಿ ಅಧ್ಯಕ್ಷ ದಿನೇಶ್ ಆಚಾರ್, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸುಮಾರು 24 ಯುವಕರು ಈ ಕಾರ್ಯದಲ್ಲಿ ಭಾಗವಹಿಸಿ ಬಹುಮಾನವನ್ನು ಪಡೆದುಕೊಂಡರು. ರವೀಂದ್ರ ಕೋಟ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಮಹಿಳಾ ಮಂಡಲದ ಸಂಚಾಲಕಿ ಸುಜಾತ ಬಾಯರಿ ನಿರೂಪಿಸಿ, ಮಹಿಳಾ ಮಂಡಲದ ವಸಂತಿ ಹಂದಟ್ಟು ವಂದಿಸಿದರು.

ಕುಂಭಾಶಿ ವಿಶ್ವಕರ್ಮ ಕರಕುಶಲ ಕೇಂದ್ರಕ್ಕೆ ಸುಬ್ರಹ್ಮಣ್ಯ ಶ್ರೀ ಭೇಟಿ



ಕೋಟ: ಕುಂಭಾಶಿ ವಿಶ್ವಕರ್ಮ ಕರಕುಶಲ ಕೇಂದ್ರಕ್ಕೆ ಬುಧವಾರ ಶ್ರೀ ಸುಬ್ರಹ್ಮಣ್ಯ ಮಠದ ಮಠಾಧೀಶರಾದ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ ಭೇಟಿ ನೀಡಿದರು. ಶ್ರೀಪಾದರನ್ನು ರಾಷ್ಟ್ರಪ್ರಶಸ್ತಿ ಪುರಸ್ಕೃತ ರಥಶಿಲ್ಪಿ ಲಕ್ಷ್ಮೀನಾರಾಯಣ ಆಚಾರ್ಯ ಮತ್ತು ಪುತ್ರ ಖ್ಯಾತರಥ ಶಿಲ್ಪಿ ರಾಜಗೋಪಾಲ ಆಚಾರ್ಯ ಕೋಟೇಶ್ವರ ಇವರು ಸ್ವಾಗತಿಸಿಕೊಂಡು ಕೇಂದ್ರದ ವತಿಯಿಂದ ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭ ಶ್ರೀ ವಿದ್ಯಾಪ್ರಸನ್ನತೀರ್ಥ ಸ್ವಾಮೀಜಿ ಅವರು ಕೇಂದ್ರದ ರಥ ತಯಾರಿಕೆಯ ಚಟುವಟಿಕೆಯನ್ನು ಗಮನಿಸಿ ರಥ ತಯಾರಿಸುವ ವಿಧಾನ ಮತ್ತು ರಥಗಳ ಮಾಹಿತಿಯನ್ನು ಪಡೆದುಕೊಂಡರು.

ರಥಶಿಲ್ಪಿ ಗಣಪತಿ ಆಚಾರ್ಯ, ಸತೀಶ ಆಚಾರ್, ಕರಕುಶಲ ಕೇಂದ್ರದ ಸಿಬ್ಬಂದಿ ಗಳು ಮತ್ತಿತರರು ಉಪಸ್ಥಿತರಿದ್ದರು.

ಕುಂಭಾಶಿ ವಿಶ್ವಕರ್ಮ ಕರಕುಶಲ ಕೇಂದ್ರದ ವತಿಯಿಂದ ಶ್ರೀ ಕುಕ್ಕೆ ಸುಬ್ರಹ್ಮಣ್ಯ ಮಠದ ಮಠಾಧೀಶರಾದ ಶ್ರೀ ವಿದ್ಯಾ ಪ್ರಸನ್ನ ತೀರ್ಥ ಸ್ವಾಮೀಜಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ನೌಕರರಿಗೆ ಅಂತರ್ಜಾಲ ಸುರಕ್ಷತೆಯ ಕುರಿತು ಏರ್ಪಡಿಸಲಾಗಿದ್ದ ಜಾಗೃತಿ ಕಾರ್ಯಾಗಾರದಲ್ಲಿ ಕೊಡಗು ಅಪರ ಜಿಲ್ಲಾಧಿಕಾರಿ ಆರ್. ಐಶ್ವರ್ಯ
ಅಂತರ್ಜಾಲ ಬಳಕೆ-ಸುರಕ್ಷತೆ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಅಗತ್ಯ

ಮಡಿಕೇರಿ: ಮಾಹಿತಿ ತಂತ್ರಜ್ಞಾನದ ಬಳಕೆಯಿಂದ ಸರಕಾರಿ ಸೇವೆಗಳು ಹಾಗೂ ಕೆಲಸಗಳನ್ನು ಸುಲಭವಾಗಿ ಹಾಗೂ ಶೀಘ್ರವಾಗಿ ಜನಸಾಮಾನ್ಯರಿಗೆ ಒದಗಿಸಲು ಪೂರಕವಾಗಿದೆ. ಆದರೆ ಅವುಗಳ ಮಾಹಿತಿಗಳು ಅಂತರ್ಜಾಲದಲ್ಲಿ ಸೋರಿಕೆಯಾಗದಂತೆ ಸುರಕ್ಷಿತ ಕ್ರಮ ಅನುಸರಿಸುವುದು ಅತ್ಯಗತ್ಯ ಎಂದು ಅಪರ ಜಿಲ್ಲಾಧಿಕಾರಿ ಆರ್. ಐಶ್ವರ್ಯ ಅವರು ತಿಳಿಸಿದ್ದಾರೆ.

ಸುರಕ್ಷಿತ ಅಂತರ್ಜಾಲ ದಿನಾಚರಣೆ ಅಂಗವಾಗಿ ಜಿಲ್ಲಾಡಳಿತ ವತಿಯಿಂದ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸರ್ಕಾರಿ ಅಧಿಕಾರಿಗಳು ಹಾಗೂ ನೌಕರರಿಗೆ ಅಂತರ್ಜಾಲ ಸುರಕ್ಷತೆಯ ಕುರಿತು ಏರ್ಪಡಿಸಲಾಗಿದ್ದ ಜಾಗೃತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಅಧಿಕಾರಿಗಳು ಕಚೇರಿಯ ಕಂಪ್ಯೂಟರ್, ಮೊಬೈಲ್‌ಗಳಲ್ಲಿ ಅಂತರ್ಜಾಲ ಬಳಕೆಯ ಉಪಯೋಗ ಪಡೆದುಕೊಳ್ಳಬೇಕು. ಜೊತೆಗೆ ಅದರ ಅನಾನುಕೂಲತೆಗಳ ಬಗ್ಗೆ ಜಾಗೃತಿ ವಹಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಅವರು ಸಲಹೆ ಮಾಡಿದರು.



ಆನ್‌ಲೈನ್ ವ್ಯವಹಾರ, ಬ್ಯಾಂಕಿಂಗ್ ಉಪಯೋಗಿಸುವಾಗ ಎಚ್ಚರ ವಹಿಸಬೇಕು. ಕೆಲವೊಮ್ಮೆ ಅಪರಿಚಿತ ಮೊಬೈಲ್ ನಂಬರ್‌ಗಳ ಬಗ್ಗೆಯೂ ಅಧಿಕಾರಿಗಳು ಗಮನವಹಿಸಬೇಕು. ಯಾವುದೇ ಮಾಹಿತಿ ನೀಡುವಾಗ ಎಚ್ಚರ ವಹಿಸಬೇಕು ಎಂದರು.

ಎನ್‌ಐಸಿ ಅಧಿಕಾರಿ ಸಂಗೀತಾ ಮಾತನಾಡಿ, ಸುರಕ್ಷಿತ ಅಂತರ್ಜಾಲ ದಿನ ಪ್ರಯುಕ್ತ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಪ್ರತಿಯೊಬ್ಬರೂ ಸಾಮಾಜಿಕ ಜಾಲತಾಣಗಳಾದ ವಾಟ್ಸಾಪ್, ಫೇಸ್ ಬುಕ್, ಇನ್ಸ್ಟಾಗ್ರಾಮ್ ಬಳಸುತ್ತಿದ್ದಾರೆ. ಕ್ರೆಡಿಟ್ ಕಾರ್ಡ್ ಮತ್ತು ಡೆಬಿಟ್ ಕಾರ್ಡ್ ಪಾಸ್ವರ್ಡ್‌ಗಳನ್ನು ಯಾರ ಬಳಿಯೂ ಹಂಚಿಕೊಳ್ಳಬಾರದು. ಇದರಿಂದ ವಂಚಕರು ಮಾಹಿತಿ ಕದಿಯುವ ಸಂದರ್ಭಗಳು ಬರುತ್ತವೆ ಎಂದರು.

> **ಸಾಮಾಜಿಕ ಜಾಲತಾಣಗಳ ಮೂಲಕ ಸಾರ್ವಜನಿಕರೊಂದಿಗೆ ಸಂವಹನ ಅತ್ಯಂತ ಸುಲಭವಾಗಿದೆ. ಸರಕಾರಿ ವೆಬ್‌ಸೈಟ್‌ಗಳನ್ನು ಹ್ಯಾಕರ್‌ಗಳು ಸುಲಭವಾಗಿ ದುರುಪಯೋಗ ಪಡಿಸಿಕೊಳ್ಳುವ ಸಾಧ್ಯತೆ ಇದೆ. ಆದ್ದರಿಂದ ಸೈಬರ್ ಅಪರಾಧಗಳ ಬಗ್ಗೆ ಅರಿವು ಹೊಂದಿದಾಗ ತಮಗಾದ ಮೋಸದ ಬಗ್ಗೆ ದೂರು ನೀಡಿ ನ್ಯಾಯ ಪಡೆಯಲು ಅನುಕೂಲವಾಗುತ್ತದೆ**
> ■ ಆರ್. ಐಶ್ವರ್ಯ, ಅಪರ ಜಿಲ್ಲಾಧಿಕಾರಿ

ಸಾರ್ವಜನಿಕ ಸ್ಥಳಗಳಲ್ಲಿ ಲಭ್ಯವಾಗುವ ಡಿವೈಸ್‌ಗಳನ್ನು ಬಳಸಬೇಡಿ, ಇತರರ ಮೊಬೈಲ್ ಯುಎಸ್‌ಬಿ ಕೇಬಲ್‌ಗಳನ್ನು ಉಪಯೋಗಿಸುವಾಗ ಎಚ್ಚರ ವಹಿಸಿ ಎಂದು ಎನ್‌ಐಸಿ ಅಧಿಕಾರಿ ಹೇಳಿದರು.

ನಮ್ಮ ದಿನನಿತ್ಯದ ಜೀವನದಲ್ಲಿ ಇಂಟರ್ನೆಟ್ ಬಳಕೆ, ಅಂತರ್ಜಾಲದ ಸುರಕ್ಷಿತ ಬಳಕೆ, ಸಾಮಾನ್ಯ ಸೈಬರ್ ಬೆದರಿಕೆಗಳು, ಸೈಬರ್ ನೈರ್ಮಲ್ಯ ಅಭ್ಯಾಸಗಳು, ಸೈಬರ್ ಅಪರಾಧಗಳನ್ನು ವರದಿ ಮಾಡುವ ಕಾರ್ಯವಿಧಾನ, ಆನ್‌ಲೈನ್‌ನಲ್ಲಿ ಸುರಕ್ಷಿತವಾಗಿರಲು ಜಾಗೃತಿ ಸಂಪನ್ಮೂಲಗಳ ಕುರಿತು ಅವರು ವಿವರಿಸಿದರು.

ಕಾರ್ಯಾಗಾರದಲ್ಲಿ ಡಿವೈಎಸ್ಪಿ ಲಕ್ಷ್ಮೀಕಾಂತ ತಳವಾರ್, ಡಿವೈಒ ಸಿಂಧೂರ್ ರಾಮಯ್ಯ ತಳವಾರ್, ಇಂಜಿನಿಯರ್ ತೇಜಸ್ ಎಸ್., ನೆಟ್‌ವರ್ಕ್ ಎಂಜಿನಿಯರ್ ಆಕಾಶ್ ಕೆ.ಆರ್., ಸುಯೋಗ್ ಸ್ಪಿನ್ಸನ್, ಇ–ಆಫೀಸ್ ಇಲಾಖಾಧಿಕಾರಿ ಅಜಯ್ ಹಾಗೂ ವಿವಿಧ ಇಲಾಖಾ ಅಧಿಕಾರಿಗಳು, ಸಿಬ್ಬಂದಿಗಳು ಇದ್ದರು.

ಕಿರುಸುದ್ದಿ

ಕನ್ನಡವನ್ನು ನಿರ್ಲಕ್ಷಿಸುತ್ತಿರುವ ನಗರಸಭೆ: ಬಿಜೆಪಿ ಆರೋಪ

ಕಾಸರಗೋಡು: ಕಾಸರಗೋಡು ನಗರಸಭೆ ಆಡಳಿತ ಸಮಿತಿಯು ಕನ್ನಡವನ್ನು ನಿರ್ಲಕ್ಷಿಸುತ್ತಿದೆ ಎಂದು ಬಿಜೆಪಿ ಆರೋಪಿಸಿದೆ. ಆದರಂತೆ ನಗರಸಭೆಯ ಅಭಿವೃದ್ಧಿ ಸೆಮಿನಾರ್‌ನಲ್ಲಿ 2026-27ನೇ ಸಾಲಿನ ಕರಡು ಪುಸ್ತಕವನ್ನು ಕನ್ನಡದಲ್ಲಿಯೂ ನೀಡಬೇಕೆಂದು ಬಿಜೆಪಿ ಕೌನ್ಸಿಲರ್‌ಗಳು ಎದ್ದುನಿಂತು ಒತ್ತಾಯಿಸಿದಾಗ ನಗರಸಭೆಯಲ್ಲಿ ಕನ್ನಡ ತಿಳಿದವರು ಯಾರೂ ಇಲ್ಲ ಹಾಗೂ ಮುಂದಿನ ಬಾರಿ ಸರಿಪಡಿಸೋಣ ಅಲ್ಲದೆ ಈಗ ಏನೂ ಮಾಡಲು ಆಗುವುದಿಲ್ಲ ಎಂದು ನಗರಸಭೆ ಅಧ್ಯಕ್ಷರು ಉತ್ತರಿಸಿದರು. ಆದರೆ ಬಿಜೆಪಿ ಆರಂಭದಿಂದಲೂ ಕನ್ನಡವನ್ನು ಪೋಷಿಸಿ ಬೆಳೆಸುತ್ತಿದೆ. ಆದರೆ ನಗರಸಭೆಯ ಮುಸ್ಲಿಂಲೀಗ್ ಆಡಳಿತವು ಯಾವಾಗಲೂ ಸಮಸ್ಯೆಯನ್ನು ಪರಿಹರಿಸುತ್ತೇವೆ ಎಂದು ಹೇಳುತ್ತಾರೆ ಮತ್ತು ತಪ್ಪಿಸಿಕೊಳ್ಳುತ್ತಾರೆ. ಈ ನಿರ್ಲಕ್ಷ್ಯವನ್ನು ಇನ್ನು ಮುಂದೆ ಸಹಿಸಲು ಸಾಧ್ಯವಿಲ್ಲ. ಕನ್ನಡ ವಿರೋಧಿ ಧೋರಣೆಯನ್ನು ಬಿಜೆಪಿ ಪ್ರಬಲವಾಗಿ ಪ್ರತಿಭಟಿಸುತ್ತದೆ ಎಂದು ತಿಳಿಸಲಾಗಿದೆ.

ಫೆ.19: ವಿದ್ಯುತ್ ನಿಲುಗಡೆ

ಮಂಗಳೂರು: ವಾಮಂಜೂರು ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ, ಪಚ್ಚನಾಡಿ, ದೇವಿನಗರ, ವಾಮಂಜೂರು, ಮಂಗಳಾನಗರ, ಅಮೃತನಗರ, ಆರ್.ಟಿ.ಓ ಟೆಸ್ಟ್ ಯಾರ್ಡ್, ಸಂತೋಷ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಫೆ.19ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಕದ್ರಿ ಟೋಲ್‌ಗೇಟ್ ಫೀಡರ್

ಕದ್ರಿ ಟೋಲ್‌ಗೇಟ್ ಫೀಡರ್‌ನಲ್ಲಿ ತುರ್ತು ನಿರ್ವಹಣಾ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ, ಅಭಿನಂದನ್, ಟೋಲ್‌ಗೇಟ್, ತಾರೆತೋಟ, ನಂತೂರು ಬಸ್‌ಸ್ಟ್ಯಾಂಡ್, ಕರಾವಳಿ ಲೇನ್, ಕೊಟ್ಟಾರ ಚೌಕಿ, ಜೋಗಿಮಠ, ಸರ್ಕ್ಯೂಟ್ ಹೌಸ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಫೆ.19ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಫೆ.22ರಂದು ಪಿಎಸ್‌ಸಿ ಜಿಲ್ಲಾ ಕಚೇರಿಗೆ ಶಿಲಾನ್ಯಾಸ

ಕಾಸರಗೋಡು: ಜಿಲ್ಲಾ ಪಿಎಸ್‌ಸಿ ಕಚೇರಿ ಮತ್ತು ಆನ್‌ಲೈನ್ ಪರೀಕ್ಷಾ ಕೇಂದ್ರಕ್ಕೆ ಅರಣ್ಯ ಮತ್ತು ವನ್ಯಜೀವಿ ಇಲಾಖೆ ಸಚಿವ ಎ.ಕೆ.ಶಶೀಂದ್ರನ್ ಅವರು ಫೆ.22ರಂದು ಬೆಳಗ್ಗೆ 10 ಗಂಟೆಗೆ ಅಣಂಗೂರು ಆಯುರ್ವೇದ ಆಸ್ಪತ್ರೆಯ ಬಳಿ ಶಿಲಾನ್ಯಾಸ ನೆರವೇರಿಸಲಿದ್ದಾರೆ. ಸಮಾರಂಭದ ಅಧ್ಯಕ್ಷತೆಯನ್ನು ಪಿಎಸ್‌ಸಿ ಅಧ್ಯಕ್ಷ ಡಾ.ಎಂ.ಆರ್.ಬೈಜು ವಹಿಸಲಿದ್ದಾರೆ. ಸಂಸದ ರಾಜ್ ಮೋಹನ್ ಉಣ್ಣಿತ್ತಾನ್, ಶಾಸಕ ಎನ್.ಎ.ನೆಲ್ಲಿಕುನ್ನು, ಜಿಲ್ಲಾ ಪಂಚಾಯತ್ ಅಧ್ಯಕ್ಷೆ ಸಾಬು ಅಬ್ರಹಾಂ, ನಗರಸಭೆ ಅಧ್ಯಕ್ಷೆ ಶಾಹಿನಾ ಸಲೀಂ, ಜಿಲ್ಲಾಧಿಕಾರಿ ಕೆ.ಇನ್ಬಶೇಖರ್ ಮತ್ತು ಪಿಎಸ್‌ಸಿ ಸದಸ್ಯರು ಭಾಗವಹಿಸುವರು.

ಅರ್ಜಿ ಆಹ್ವಾನ

ಮಂಗಳೂರು: ಮಾ. 27 ಮತ್ತು 28 ರಂದು ನಡೆಯಲಿರುವ ದ.ಕ ಜಿಲ್ಲಾ 28 ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕೃತಿ ಬಿಡುಗಡೆಗೆ ಅವಕಾಶ ಕಲ್ಪಿಸಲಿದ್ದು ಆಸಕ್ತ ಲೇಖಕರು / ಪ್ರಕಾಶಕರಿಂದ ಅರ್ಜಿ ಆಹ್ವಾನಿಸಲಾಗಿದೆ. ಸಮ್ಮೇಳನವು ಬಂಟ್ವಾಳದ ಸ್ಪರ್ಶ ಕಲಾಮಂದಿರದಲ್ಲಿ ನಡೆಯಲಿದ್ದು ಯಾವುದೇ ಪ್ರಕಾರದ ಕನ್ನಡ ಪುಸ್ತಕಗಳ ಬಿಡುಗಡೆಗೆ ಅವಕಾಶವಿದೆ. ಆಸಕ್ತರು ವಿವರಗಳಿಗೆ ಗೀತಾ ಎಸ್. ಕೊಂಕೋಡಿ 9480367856 ಅಥವಾ ರಚನ ಚಿಟ್ಟೆಯ ಮಠ 7022183946 ಇವರನ್ನು ಫೆ.25 ರ ಮುಂಚಿತವಾಗಿ ಸಂಪರ್ಕಿಸಬಹುದು ಎಂದು ದ.ಕ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಎಂ.ಪಿ ಶ್ರೀನಾಥ್ ತಿಳಿಸಿದ್ದಾರೆ.

ಫೆ. 21ರಂದು ಕೊಲಕಾಡಿ ಶಾಲೆ ಶತ ಸಂಭ್ರಮ

ಮುಲ್ಕಿ: ಕೊಲಕಾಡಿ ಶಾಲಾ ಹಳೆ ವಿದ್ಯಾರ್ಥಿ ಸಂಘದ ನೇತೃತ್ವದಲ್ಲಿ ಶತ ಸಂಭ್ರಮದಲ್ಲಿರುವ ಕೊಲಕಾಡಿ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ ಪುನಶ್ಚೇತನ ನವೀಕೃತ ಕಟ್ಟಡದ ಉದ್ಘಾಟನೆ, ಸಂಘದ 41ನೇ ವಾರ್ಷಿಕೋತ್ಸವ ಸಮಾರಂಭವು ಫೆ. 21 ರಂದು ನಡೆಯಲಿದೆ. ಫೆ.21 ರ ಶನಿವಾರ ಬೆಳಗ್ಗೆ ನಡೆಯಲಿರುವ ಕೊಲಕಾಡಿ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯ ನವೀಕೃತ ಕಟ್ಟಡದ ಉದ್ಘಾಟನೆ ಮತ್ತು ಹಳೆ ವಿದ್ಯಾರ್ಥಿ ಸಂಘದ 41ನೇ ವಾರ್ಷಿಕೋತ್ಸವ ಸಮಾರಂಭದ ಅಧ್ಯಕ್ಷತೆಯನ್ನು ನಿವೃತ್ತ ಹಿರಿಯ ಅಭಿಯಂತರರು, ಬಿಎಸ್ಎನ್ಎಲ್ ನ ಶ್ರೀನಿವಾಸ ಭಟ್ ಪೆಂಚಿಲ ವಹಿಸಲಿದ್ದಾರೆ. ಕಾರ್ಯಕ್ರಮವನ್ನು ಮುಲ್ಕಿ ಕೆನರಾ ಲೈಟಿಂಗ್ ಇಂಡಸ್ಟ್ರೀಸ್ ನ ಮಾಜಿ ವ್ಯವಸ್ಥಾಪಕ ನಿರ್ದೇಶಕ ಆರ್. ಜಿ ಶೆಣೈ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕೆನರಾ ಬ್ಯಾಂಕಿನ ನಿವೃತ್ತ ಉಪ ಪ್ರಧಾನ ವ್ಯವಸ್ಥಾಪಕ ಕೆ. ದಯಾಕರ ಕಾಮತ್, ಶಿಪ್ಪಿಂಗ್ ಕಾರ್ಪೊರೇಶನ್ ನಿವೃತ್ತ ಕಾರ್ಯ ನಿರ್ವಾಹಕ ಲಕ್ಷ್ಮಣ್ ಎನ್. ಕೋಟ್ಯಾನ್, ಎನ್.ಬಿ. ಕೋಟ್ಯಾನ್ ಕೊಲಕಾಡಿ, ಘನಶ್ಯಾಮ ಎನ್ ಕಾಮತ್, ಕೆರುಬರಿ, ಉದ್ಯಮಿ ಶೇಖರ್ ಶೆಟ್ಟಿ, ನ್ಯಾಯವಾದಿ ಬಿ. ನಾರಾಯಣ ಶೆಟ್ಟಿ, ಟಿ. ಸುರೇಶ್ ಚಂದ್ರ ಅಜಿಲ, ನಿವೃತ್ತ ಶಿಕ್ಷಕಿ ಐರಿನ್ ಫೆರ್ನಾಂಡಿಸ್ ಪಡುಕೋಣೆ ಭಾಗವಹಿಸಲಿದ್ದಾರೆ.



ದೇಶದ 77ನೇ ಗಣರಾಜ್ಯೋತ್ಸವದ ಸಂದರ್ಭದಲ್ಲಿ ದೆಹಲಿಯ ಕರ್ತವ್ಯ ಪಥನಲ್ಲಿ ನಡೆದ ಪಥಸಂಚಲನದಲ್ಲಿ ಕರ್ನಾಟಕ ಮತ್ತು ಗೋವಾ ಡೈರೆಕ್ಟರೇಟ್ ಅನ್ನು ಪ್ರತಿನಿಧಿಸಿದ ಕಾಲೇಜಿನ ಸೀನಿಯರ್ ಅಂಡರ್ ಆಫೀಸರ್ ಜೀವನ್ ಕುಮಾರ್ ಎಸ್. ಪೂಜಾರಿ ಅವರನ್ನು ಶಿರ್ವ ಸಂತ ಮೇರಿ ಕಾಲೇಜಿನ ಆಡಿಟೋರಿಯಂನಲ್ಲಿ ಸನ್ಮಾನಿಸಲಾಯಿತು. ಪ್ರಾಂಶುಪಾಲರಾದ ರೆ. ಫಾದರ್ ರೊಲ್ವಿನ್ ಜೋಯ್ ಅರಾನ್ಹಾ, ಡಾ. ಹೆರಾಲ್ಡ್ ಐವನ್ ಮೋನಿಸ್ ಮೊದಲಾದವರಿದ್ದರು.

ಫೆ:24: ಅರೆಭಾಷೆ ರಾಷ್ಟ್ರೀಯ ವಿಚಾರ ಸಂಕಿರಣ

ಸಾಪ್ರೋಕ್ಲು: ಅರೆಭಾಷೆ ರಾಷ್ಟ್ರೀಯ ವಿಚಾರ ಸಂಕಿರಣವು ಫೆ.24. ಮಂಗಳವಾರ ಕೆ.ವಿ.ಜಿ ಸಾಹಿತ್ಯ ಭವನ ರಂಗ ಮಂದಿರ ನೆಹರು ಮೆಮೋರಿಯಲ್ ಕಾಲೇಜು ಸುಳ್ಯ ಇಲ್ಲಿ ಜರುಗಲಿದೆ. ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಇವರ ಆಶ್ರಯದಲ್ಲಿ ನೆಹರು ಮೆಮೋರಿಯಲ್ ಕಾಲೇಜು ಸುಳ್ಯ ಇದರ ಸಹಯೋಗದಲ್ಲಿ ಕಾಲೇಜಿನ ಸುವರ್ಣ ಸಂಭ್ರಮಾಚರಣೆಯ ಪ್ರಯುಕ್ತ ಅರೆಭಾಷೆ ರಾಷ್ಟ್ರೀಯ ವಿಚಾರ ಸಂಕಿರಣವು ಫೆ,24 ರಂದು ಕೆ.ವಿ.ಜಿ ಸಾಹಿತ್ಯ ಭವನ ರಂಗ ಮಂದಿರ ನೆಹರು ಮೆಮೋರಿ ಯಲ್ ಕಾಲೇಜು ಸುಳ್ಯದಲ್ಲಿ ನಡೆಯಲಿದೆ.

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ ಅಧ್ಯಕ್ಷತೆಯಲ್ಲಿ ಜರುಗಲಿರುವ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಸುಳ್ಯದ ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಶನ್ ಅಧ್ಯಕ್ಷ ಡಾ. ಕೆ.ವಿ. ಚಿದಾನಂದ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಎ.ಓಎಲ್.ಇ. ಸುಳ್ಯ ಇದರ ಪ್ರಧಾನ ಕಾರ್ಯದರ್ಶಿ ಅಕ್ಷಯ್ ಕೆ.ಸಿ. ಭಾಗವಹಿಸಲಿದ್ದಾರೆ. ನೆಹರೂ ಕಾಲೇಜಿನ ಪ್ರಾಂಶುಪಾಲರಾದ ಡಾ. ರುದ್ರಕುಮಾರ್ ಎಂ ಎಂ, ಮಿಥಾಲಿ ರೈ ಪಿ. ಹಾಗೂ ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಕೆ.ಟಿ. ವಿಶ್ವನಾಥ ಉಪಸ್ಥಿತರಿರುತ್ತಾರೆ.

ಪ್ರಥಮ ಅಧಿವೇಶನದ ಭಾಷಾ ವಿಚಾರ ಸಂಕಿರಣದಲ್ಲಿ 'ಪ್ರಾದೇಶಿಕ ಭಾಷೆಗಳು ಎದುರಿಸುತ್ತಿರುವ ಸವಾಲುಗಳು' ಎಂಬ ವಿಷಯದ ಬಗ್ಗೆ ಡಾ. ಧನಂಜಯ ಕುಂಬ್ಳೆ ಹಾಗೂ 'ಜಾಗತೀಕರಣ ಮತ್ತು ಸಾಂಸ್ಕೃತಿಕ ಪಲ್ಲಟಗಳು' ಎಂಬ ವಿಷಯದ ಬಗ್ಗೆ ಡಾ. ನರೇಂದ್ರ ರೈ ದೇರ್ಲ ಪ್ರಬಂಧ ಮಂಡಿಸಲಿದ್ದಾರೆ. ಗೋಷ್ಠಿಯ ಅಧ್ಯಕ್ಷತೆಯನ್ನು ಹಿರಿಯ ವಿದ್ವಾಂಸ ಹಾಗೂ ವಿಶ್ರಾಂತ ಕುಲಪತಿ ಡಾ. ಕೆ. ಚಿನ್ನಪ್ಪ ಗೌಡ ವಹಿಸಲಿದ್ದಾರೆ. ಮಧ್ಯಾಹ್ನ ಭೋಜನದ ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದೆ. ಭೋಜನ ನಂತರದ ಅವಧಿಯಲ್ಲಿ ಅರೆಭಾಷೆ ಸಂಸ್ಕೃತಿ ವಿಚಾರ ಸಂಕಿರಣ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಎಲ್ಲರೂ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಸದಾನಂದ ಮಾವಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಸರಗೋಡು ಜಿಲ್ಲೆಯ ನಾರ್ಲ ಬ್ಲಾಕ್‌ನಲ್ಲಿ 365 ಕೋ.ರೂ. ಮೌಲ್ಯದ ಅದಿರು ನಿಕ್ಷೇಪ

ಬಾಕ್ಸೈಟ್ ಗಣಿಗಾರಿಕೆಗೆ ಗ್ರೀನ್ ಸಿಗ್ನಲ್

ಕಾಸರಗೋಡು: ಕೇರಳದಲ್ಲಿ ಪ್ರಥಮ ಬಾರಿಗೆ ವಾಣಿಜ್ಯಾಧಾರಿತವಾಗಿ ಗಣಿಗಾರಿಕೆಗೆ ಹರಾಜು ಪ್ರಕ್ರಿಯೆ ನಡೆಸಲು ರಾಜ್ಯ ಸರಕಾರವು ಅನುಮತಿ ನೀಡಿದ್ದು, ಅದರಂತೆ ಮೊದಲ ಹಂತದಲ್ಲಿ ಕಾಸರಗೋಡು ಜಿಲ್ಲೆಯ ನಾರ್ಲ ಬ್ಲಾಕ್‌ನಲ್ಲಿ ಬಾಕ್ಸೈಟ್ ಗಣಿಗಾರಿಕೆ ಆರಂಭಿಸಲು ಹರಾಜು ವ್ಯವಸ್ಥೆಯು ವಿಧ್ಯುಕ್ತವಾಗಿ ಜಾರಿಗೆ ಬರಲಿದೆ.

82.16 ಹೆಕ್ಟೇರ್ ವಿಸ್ತೀರ್ಣವಿರುವ ನಾರ್ಲ ಬ್ಲಾಕ್ ಪ್ರದೇಶದಲ್ಲಿ 4.88 ದಶ ಲಕ್ಷ ಟನ್ ಸಿಮೆಂಟ್ ಗ್ರೇಡ್ ಬಾಕ್ಸೈಟ್ ಮತ್ತು ಅಲುಮಿನಸ್ ಲ್ಯಾಟರೇಟ್ ಇರುವುದಾಗಿ ಪತ್ತೆಹಚ್ಚಲಾಗಿದೆ. ಈ ಅದಿರು ನಿಕ್ಷೇಪದ ಮೌಲ್ಯ 365 ಕೋಟಿ ರೂಪಾಯಿ ಎಂಬುದಾಗಿ ಅಂದಾಜಿಸಲಾಗಿದೆ. ಹರಾಜಿನಿಂದ ಕೇರಳ ಸರಕಾರಕ್ಕೆ ಸಾಕಷ್ಟು ಆದಾಯ ದೊರಕಲಿದೆ.

ಜಿಯೋಲಜಿಕಲ್ ಸರ್ವೆ ಆಫ್ ಇಂಡಿಯಾ ನಡೆಸಿದ ಈ ಮಹತ್ವದ ಸಮೀಕ್ಷೆಯಲ್ಲಿ ಕಾಸರಗೋಡು ಜಿಲ್ಲೆಯಲ್ಲಿ ವಾಣಿಜ್ಯಾಧಾರಿತವಾಗಿ ಗಣಿಗಾರಿಕೆ ಮಾಡಬಹುದಾದ ಪ್ರಮಾಣದಲ್ಲಿ ಬಾಕ್ಸೈಟ್ ಹಾಗೂ ಅಲುಮಿನಸ್ ಲ್ಯಾಟರೇಟ್ ನಿಕ್ಷೇಪ ಕಂಡುಬಂದಿದೆ.

ಖನಿಜ ನಿಕ್ಷೇಪ ಪತ್ತೆಯಾದ ನಾರ್ಲ ಮಾತ್ರವಲ್ಲದೆ ಉಕ್ಕಿನಡ್ಕ, ಕರಿಯತ್, ಪೆರ್ಲ, ಮಣಿಯಂಪಾರೆ ಬ್ಲಾಕ್ ವ್ಯಾಪ್ತಿಯ ಗಣಿಗಾರಿಕೆಗೆ ಕೂಡಾ ಅನುಮತಿ ನೀಡಲು ಹರಾಜು ಪ್ರಕ್ರಿಯೆ ಮೂಲಕ ಅರ್ಹರಾದವರನ್ನು ಗುರುತಿಸಿ ಹಸ್ತಾಂತರಿಸಲು ಕೇಂದ್ರ ಗಣಿ ಸಚಿವಾಲಯವು ರಾಜ್ಯ ಖನಿಜ ಇಲಾಖೆಗೆ ನಿರ್ದೇಶನ ನೀಡಿತ್ತು.





ಪ್ರಧಾನ ಧಾತುಗಳಿರುವ ಕುರಿತು ಗುರುತಿಸಿ ನಿರ್ದಿಷ್ಟ ಸಮಯದೊಳಗೆ ಗಣಿಗಾರಿಕೆಗೆ ಹರಾಜು ನಡೆಸಿ ರಾಜ್ಯ ಅನುಮತಿ ನೀಡದಿದ್ದರೆ ಮೈನ್ಸ್ ಆ್ಯಂಡ್ ಮಿನರಲ್ಸ್ ನಿಯಮದ ಪ್ರಕಾರ ಕೇಂದ್ರ ಸರಕಾರಕ್ಕೆ ನೇರವಾಗಿ ಮಧ್ಯಪ್ರವೇಶಿಸಿ ಹರಾಜು ನಡೆಸಿ ಗಣಿಗಾರಿಕೆಗೆ ಒಪ್ಪಿಗೆ ಸೂಚಿಸಲು ಸಾಧ್ಯವಿದೆ.

ಈ ವಿಷಯವನ್ನು ಗಣನೆಗೆ ತೆಗೆದುಕೊಂಡು ಧಾತು ಬ್ಲಾಕ್‌ನ ಗಣಿಗಾರಿಕೆಗೆ ಹರಾಜು ನಡೆಸಿ ನೀಡಲು ರಾಜ್ಯ ಸರಕಾರವು ಮುಖ್ಯ ಕಾರ್ಯದರ್ಶಿ ಅಧ್ಯಕ್ಷರಾಗಿರುವ ಉನ್ನತ ಮಟ್ಟದ ನಿರೀಕ್ಷಣಾ ಸಮಿತಿಗೆ ಸೂಚಿಸಿತ್ತು. ಈ ಸಮಿತಿಯು ಕೈಗಾರಿಕಾ ಇಲಾಖೆಯ ಪ್ರಿನ್ಸಿಪಲ್ ಕಾರ್ಯದರ್ಶಿ ಅಧ್ಯಕ್ಷರಾಗಿರುವ ತಾಂತ್ರಿಕ ಮೌಲ್ಯಮಾಪನ ಸಮಿತಿಯನ್ನು ರೂಪಿಸಿದೆ. ಹರಾಜು ಪ್ರಕ್ರಿಯೆ ಟ್ರಾನ್ಸಾಕ್ಷನ್ ಸಲಹೆಗಾರರಾಗಿ ವಿವಿಧ ಉನ್ನತ ಮಟ್ಟದ ಅಧಿಕಾರಿಗಳನ್ನು ನಿಯೋಜಿಸಿ ಆದೇಶ ಹೊರಡಿಸಲಾಗಿದೆ.

ಸಾರ್ವಜನಿಕ ವಲಯದ ಸಂಸ್ಥೆಯಾದ ಮೆಟಲ್ ಸ್ಕ್ರಾಪ್ ಟ್ರೇಡ್ ಕಾರ್ಪೋರೇಶನ್ ಲಿಮಿಟೆಡ್ ಏಲಂ ಪೋರ್ಟಲ್‌ನ ಸೇವೆ ಲಭ್ಯಗೊಳಿಸಲಿದೆ. ಈ ಮಧ್ಯೆ ಮೊದಲಿಗೆ ನಾರ್ಲದಲ್ಲಿ ಹರಾಜು ಪ್ರಕ್ರಿಯೆ ಪೂರ್ತಿಗೊಳಿಸಿ ಬಳಿಕ ಇನ್ನಿತರ ಕಡೆಗಳ ಗಣಿಗಾರಿಕೆಗೆ ವ್ಯವಸ್ಥೆ ಕಲ್ಪಿಸಲು ರಾಜ್ಯ ಸರಕಾರವು ಮಹತ್ತರ ಯೋಜನೆ ತಯಾರಿಸಿದೆ.

- ಖನಿಜ ನಿಕ್ಷೇಪ ಪತ್ತೆಯಾದ ನಾರ್ಲ ಮಾತ್ರವಲ್ಲದೆ ಉಕ್ಕಿನಡ್ಕ, ಕರಿಯತ್, ಪೆರ್ಲ, ಮಣಿಯಂಪಾರೆ ಬ್ಲಾಕ್ ವ್ಯಾಪ್ತಿಯ ಗಣಿಗಾರಿಕೆಗೆ ಕೂಡಾ ಅನುಮತಿ
- ಹರಾಜು ಪ್ರಕ್ರಿಯೆ ಮೂಲಕ ಅರ್ಹರಾದವರನ್ನು ಗುರುತಿಸಿ ಹಸ್ತಾಂತರಿಸಲು ಕೇಂದ್ರ ಗಣಿ ಸಚಿವಾಲಯವು ರಾಜ್ಯ ಖನಿಜ ಇಲಾಖೆಗೆ ನಿರ್ದೇಶನ

ಅರಣ್ಯ ಇಲಾಖೆಗೆ ಸೇರಿದ ಭೂ ಪ್ರದೇಶ

ಕಾಸರಗೋಡು ಜಿಲ್ಲೆಯ ನಾರ್ಲ ಬ್ಲಾಕ್ ಏರಿಯಾದ 82.16 ಹೆಕ್ಟೇರ್ ಪ್ರದೇಶದಲ್ಲಿ 74.17 ಹೆಕ್ಟೇರ್ ಅರಣ್ಯ ಇಲಾಖೆಗೆ ಸೇರಿದ ಭೂಮಿಯಾಗಿದೆ. 7.99 ಹೆಕ್ಟೇರ್ ಖಾಸಗಿ ಭೂಮಿ ಒಳಗೊಂಡಿದೆ. ವಾಣಿಜ್ಯಾಧಾರಿತವಾಗಿ ಗಣಿಗಾರಿಕೆ ನಡೆಸಲಿರುವ ಪ್ರಮಾಣದಲ್ಲಿ ಜಿಲ್ಲೆಯ ಎಲ್ಲಾ ಬ್ಲಾಕ್‌ಗಳಲ್ಲಿ ಖನಿಜ ಸಂಪತ್ತು ಪತ್ತೆಯಾಗಿದ್ದರೂ ಬಹುತೇಕ ಸ್ಥಳವು ಕಾರಡ್ಕ ಅರಣ್ಯ ವಲಯದಲ್ಲಿ ಇರುವುದರಿಂದ ನಾರ್ಲ ಬ್ಲಾಕ್ ಏರಿಯಾವನ್ನು ಮೊದಲ ಹರಾಜು ಕೈಗೊಳ್ಳಲು ಗುರುತಿಸಲಾಯಿತು. ಇತರ ವಲಯಗಳಲ್ಲಿ ಜನವಾಸ ಪ್ರದೇಶ ಹೆಚ್ಚಿದೆ. ಇನ್ನೊಂದೆಡೆ ನಾರ್ಲ ಧಾತು ಬ್ಲಾಕ್‌ನ ಗಡಿಭಾಗಗಳಲ್ಲಿ ಮೈನಿಂಗ್ ಆ್ಯಂಡ್ ಜಿಯೋಲಜಿ ಇಲಾಖೆಯ ನೇತೃತ್ವದಲ್ಲಿ ಈಗಾಗಲೇ ಕಾಂಕ್ರೀಟ್ ಮಾರ್ಕಿಂಗ್ ನಡೆಸಲಾಗಿದೆ.

ಶ್ರಮಯೋಗಿ ಮಾನ್ ಧನ್ ಯೋಜನೆ ಪ್ರಗತಿ ಪರಿಶೀಲನೆ

ನೋಂದಣಿ ಹೆಚ್ಚಿಸಲು ಕೋಟ ಸೂಚನೆ

ಉಡುಪಿ: ಅಸಂಘಟಿತ ವಲಯದ ಕಾರ್ಮಿಕರಿಗೆ ವೃದ್ಧಾಪ್ಯದಲ್ಲಿ ಸಾಮಾಜಿಕ ಭದ್ರತೆ ಕಲ್ಪಿಸಲು ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಪ್ರಧಾನಮಂತ್ರಿ ಶ್ರಮಯೋಗಿ ಮಾನ್ ಧನ್ ಯೋಜನೆಯಡಿ ಹೆಚ್ಚಿನ ಸಂಖ್ಯೆಯ ಅಸಂಘಟಿತ ಕಾರ್ಮಿಕರುಗಳನ್ನು ನೋಂದಣಿ ಮಾಡಿಸುವುದರೊಂದಿಗೆ ಯೋಜನೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಬೇಕು ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಸೂಚನೆ ನೀಡಿದರು.

ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಶ್ರಮಯೋಗಿ ಮಾನ್ ಧನ್ ಯೋಜನೆಯ ಪ್ರಗತಿ ಪರಿಶೀಲನೆ ನಡೆಸಿ ಮಾತನಾಡಿದರು.

ಅಸಂಘಟಿತ ಕಾರ್ಮಿಕರಿಗೆ ಅವರ ವಯೋವೃದ್ಧ ವೇಳೆಯಲ್ಲಿ ಸಾಮಾಜಿಕ ಭದ್ರತೆ ಕಲ್ಪಿಸಲು ಕೇಂದ್ರ ಸರ್ಕಾರವು ಪ್ರಧಾನಮಂತ್ರಿ ಶ್ರಮಯೋಗಿ ಮಾನ್-ಧನ್ ಎಂಬ ಮಹತ್ವಾಕಾಂಕ್ಷಿ ವಂತಿಕೆ ಆಧಾರಿತ ಪಿಂಚಣಿ ಯೋಜನೆಯನ್ನು ಜಾರಿಗೆ ತಂದಿದ್ದು, ಯೋಜನೆಯಡಿ ಹೆಚ್ಚಿನ ಸಂಖ್ಯೆಯಲ್ಲಿ ಅಸಂಘಟಿತ ಕಾರ್ಮಿಕರುಗಳು ನೋಂದಾಯಿಸುವುದರೊಂದಿಗೆ ಯೋಜನೆಯ ಲಾಭವನ್ನು ಪಡೆದುಕೊಳ್ಳಬೇಕು ಎಂದರು.

ಅಸಂಘಟಿತವಲಯದಕಾರ್ಮಿಕರನ್ನು ಯೋಜನೆಯಡಿ ನೋಂದಾಯಿಸಲು ಜಿಲ್ಲೆಯಲ್ಲಿಈಗಾಗಲೇವಿಶೇಷನೋಂದಣಿ ಅಭಿಯಾನವನ್ನು ಹಮ್ಮಿಕೊಂಡಿದ್ದು, ಇದು ಮಾರ್ಚ್ 15 ರ ವರೆಗೆ ನಡೆಯಲಿದೆ. 18 ರಿಂದ 40 ವರ್ಷದೊಳಗಿನ ಅಸಂಘಟಿತ ಕಾರ್ಮಿಕರು ತಮ್ಮ ಆಧಾರ್ ಕಾರ್ಡ್, ಆಧಾರ್‌ಗೆ ಲಿಂಕ್ ಆಗಿರುವ ಮೊಬೈಲ್ ಸಂಖ್ಯೆ, ಬ್ಯಾಂಕ್ ಪಾಸ್ ಪುಸ್ತಕ ಪ್ರತಿ ಹಾಗೂ ಮೊದಲನೇ ತಿಂಗಳ ವಂತಿಕೆಯೊಂದಿಗೆ ಸಮೀಪದ ಸಾಮಾನ್ಯ ಸೇವಾ ಕೇಂದ್ರಗಳಲ್ಲಿ ನೋಂದಣಿಯಾಗಿ ಯೋಜನೆಯ ಪ್ರಯೋಜನ ಪಡೆಯಬಹುದಾಗಿದೆ ಎಂದ ಅವರು, ಆದಾಯ ತೆರಿಗೆ ಪಾವತಿದಾರರು, ಸಂಘಟಿತ ವಲಯದ ಕಾರ್ಮಿಕರು, ಇ.ಎಸ್.ಐ/ ಪಿ.ಎಫ್ ಯೋಜನೆಗೆ ಒಳಪಟ್ಟವರು ಈ ಯೋಜನೆಗೆ ಅರ್ಹರಿರುವುದಿಲ್ಲ ಎಂದರು.



7275 ಶ್ರಮ ಯೋಗಿ ಮಾನ್‌ಧನ್ ಯೋಜನೆ

ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ ಮಾತನಾಡಿ, ಪ್ರಧಾನಮಂತ್ರಿ ಶ್ರಮಯೋಗಿ ಮಾನ್ ಧನ್ ಯೋಜನೆಯ ವಿಶೇಷ ನೋಂದಣಿ ಅಭಿಯಾನದಡಿ ಜಿಲ್ಲೆಗೆ 7275 ಕಾರ್ಮಿಕರನ್ನು ನೋಂದಾಯಿಸಲು ಗುರಿ ನಿಗಧಿಪಡಿಸಲಾಗಿದ್ದು, ಯೋಜನೆ ಪ್ರಾರಂಭದಿಂದ ಈವರೆಗೆ 7225 ಜನ ಅಸಂಘಟಿತ ಕಾರ್ಮಿಕರು ಯೋಜನೆಯಡಿ ನೋಂದಣಿ ಮಾಡಿಕೊಂಡಿದ್ದಾರೆ ಎಂದರು.

ಉಡುಪಿ ಜಿಲ್ಲೆಯಲ್ಲಿ ಗೊಂದಲ ರಹಿತ ಪಿಯು ಪರೀಕ್ಷೆ: ಜಿಲ್ಲಾಧಿಕಾರಿ ಸೂಚನೆ

ಉಡುಪಿ: ದ್ವಿತೀಯ ಪಿ.ಯು.ಸಿ ಪರೀಕ್ಷೆಯು ಫೆಬ್ರವರಿ 28 ರಿಂದ ಮಾರ್ಚ್ 17 ರವರೆಗೆ ನಡೆಯಲಿದ್ದು, ಗೊಂದಲಗಳಿಗೆ ಆಸ್ಪದ ನೀಡದೇ ವಿದ್ಯಾರ್ಥಿಗಳು ಸುಗಮವಾಗಿ ಪರೀಕ್ಷೆ ಬರೆಯಲು ಅನುವು ಮಾಡಿಕೊಡಬೇಕು ಎಂದು ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ ಸೂಚನೆ ನೀಡಿದರು.

ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣದ ಕೆಸ್ವಾನ್ ವಿಡಿಯೋ ಕಾನ್ಫರೆನ್ಸ್ ಸಭಾಂಗಣದಲ್ಲಿ ಪ್ರಸಕ್ತ ಸಾಲಿನ ದ್ವಿತೀಯ ಪಿ.ಯು.ಸಿ ಪರೀಕ್ಷೆ-01 ನ್ನು ನಡೆಸುವ ಕುರಿತು ಆಯೋಜಿಸಲಾದ ಸಭೆಯಲ್ಲಿ ಮಾತನಾಡಿದರು.

ಪ್ರಸಕ್ತ ಸಾಲಿಗೆ ಜಿಲ್ಲೆಯಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯು ಫೆಬ್ರವರಿ 28 ರಿಂದ ಮಾರ್ಚ್ 17 ರವರೆಗೆ ಜಿಲ್ಲೆಯ ಒಟ್ಟು 29 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು, ಕಲಾ, ವಿಜ್ಞಾನ ಹಾಗೂ ವಾಣಿಜ್ಯ ವಿಭಾಗಗಳಲ್ಲಿ ಒಟ್ಟು 17,181 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದಾರೆ., ಇದರಲ್ಲಿ 16,657 ಹೊಸ ವಿದ್ಯಾರ್ಥಿಗಳು, 383 ಖಾಸಗಿ ಅಭ್ಯರ್ಥಿಗಳು, 135 ಪುನರಾವರ್ತಿತ ಅಭ್ಯರ್ಥಿಗಳು, 6 ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಇಚ್ಚಿಸುವ ಅಭ್ಯರ್ಥಿಗಳು ಇದ್ದು, ಪರೀಕ್ಷೆಯು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ನಿಗದಿತ ದಿನಾಂಕಗಳಲ್ಲಿ ನಡೆಯಲಿದೆ ಎಂದರು.

ಪ್ರತೀ ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆ ಪತ್ರಿಕೆ ಸಾಗಾಟ ಮಾಡಲು ಮೂರು ಜನ ಸದಸ್ಯರ ಸಮಿತಿಯನ್ನು ಮಾಡಲಾಗಿದ್ದು, ಇವರ ವಾಹನಕ್ಕೆ ಪೊಲೀಸ್ ಸಿಬ್ಬಂದಿ ನೇಮಿಸಬೇಕು. ಪ್ರಶ್ನೆ ಪತ್ರಿಕೆ ಸಾಗಾಣಿಕೆ ಮಾಡುವ ವಾಹನಕ್ಕೆ ಜಿ.ಪಿ. ಎಸ್ .ಅಳವಡಿಸಿ ಮಾನಿಟರ್ ಮಾಡಲು ವ್ಯವಸ್ಥೆ ಮಾಡಲಾಗಿದೆ. 24X7 ಸಿ.ಸಿ.ಟಿ.ವಿ ಕಣ್ಗಾವಲಿನಲ್ಲಿಯೇ ಖಜಾನೆಯಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಠೇವಣೀಕರಿಸಿರುವ ಮತ್ತು ವಿತರಿಸುವ ಬಗ್ಗೆ ವ್ಯವಸ್ಥೆ ಮಾಡಲಾಗಿದೆ ಎಂದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಧಾಕರ್ ನಾಯಕ್, ಸಹಾಯಕ ಕಮೀಷನರ್ ರಶ್ಮಿ,, ಡಿಡಿಪಿಯು ಮಾರುತಿ ಸಭೆಯಲ್ಲಿದ್ದರು.



ನಿರಂತರ ವಿದ್ಯುತ್ ಪೂರೈಕೆಗೆ ಸೂಚನೆ

ಪ್ರತಿ ಪರೀಕ್ಷಾ ಕೇಂದ್ರಗಳಲ್ಲಿ ಕಡ್ಡಾಯವಾಗಿ ಸಿಸಿಟಿವಿ ಅಳವಡಿಸಬೇಕು. ಸೂಕ್ತ ಆಸನ, ಬೆಳಕು, ಫ್ಯಾನ್, ಕುಡಿಯುವ ನೀರು ಸೇರಿದಂತೆ ಮತ್ತಿತರ ವ್ಯವಸ್ಥೆಗಳನ್ನು ಕಲ್ಪಿಸಬೇಕು. ವೆಬ್‌ಕಾಸ್ಟಿಂಗ್ ವ್ಯವಸ್ಥೆಯನ್ನು ಮಾಡಲಾಗಿದ್ದು, ಪರೀಕ್ಷಾ ಸಮಯದಲ್ಲಿ ನಿರಂತರ ವಿದ್ಯುತ್ ವ್ಯವಸ್ಥೆಯನ್ನು ಕಲ್ಪಿಸಬೇಕು ಎಂದು ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ ಮೆಸ್ಕಾಂ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಾಳೆಯಿಂದ ಮುನಿಯಾಲು ಸಂಜೀವಿನಿ ಗೋಧಾಮದಲ್ಲಿ ಏಕಪವಿತ್ರ ಶ್ರೀಮನ್ನಾಗಮಂಡಲ

ಕಾರ್ಕಳ: ಪುರಾತನ ಶೈಲಿಯಲ್ಲಿ ಆಧುನಿಕತೆ ಟಚ್ ನೀಡಿ ವಿಶಿಷ್ಟ ಯೋಚನೆ ಯೋಜನೆಯ ಮೂಲಕ ಅಪರೂಪವಾಗಿ ನಿರ್ಮಿಸಿರುವ ಕೃಷಿ ಸಂಸ್ಕೃತಿ ಮತ್ತು ಭಾರತೀಯ ಗೋತಳಿಗಳ ಸಂರಕ್ಷಣೆಯ ಕೇಂದ್ರವಾಗಿ ಮುನಿಯಾಲಿನ ಸಂಜೀವಿನಿ ಗೋಧಾಮ ಮೈತಳೆದು ನಿಂತಿದೆ. ಕೃಷಿ ಆಸಕ್ತರು ಸೇರಿ ಸರ್ವರನ್ನು ಆಕರ್ಷಿಸುತ್ತಿದೆ. ಜಾಗತಿಕ ಮಟ್ಟದಲ್ಲೂ ವಿಶೇಷ ಮನ್ನಣೆಯನ್ನು ಗೋಧಾಮ ಪಡೆಯುತ್ತಿದೆ. ಸಮುದಾಯಕ್ಕೆ ಕೃಷಿ ಸಂಸ್ಕೃತಿಯನ್ನು ಸಮಗ್ರವಾಗಿ ನೀಡುವ 'ಜ್ಞಾನದ ಪೀಠ' ವಾಗಿ ಗೋಧಾಮ ಮಾರ್ಪಟ್ಟಿದೆ. ಮುನಿಯಾಲಿನ ಗೋಧಾಮ ಎಂಬ ಕೃಷಿಲೋಕವನ್ನು ಕಂಡು ಯುವಕರು ಕೃಷಿಯಲ್ಲಿ ತೊಡಗಿ ಸುಂದರ ಬದುಕು ಕಟ್ಟಿಕೊಳ್ಳಬೇಕು ಎಂದು ಪ್ರಕೃತಿಯಿಂದ ಪ್ರಕೃತಿಗೆ ಎಂಬ ವಿನೂತನ ಪರಿಕಲ್ಪನೆಯಲ್ಲಿ ಹೆಬ್ರಿ ತಾಲೂಕಿನ ಮುನಿಯಾಲು ಸಂಜೀವಿನಿ ಗೋಧಾಮದಲ್ಲಿ ಫೆ. 19ರಿಂದ 21 ರ ತನಕ ಪಾರಂಪರಿಕ ಸಂಪ್ರದಾಯದಂತೆ ದೊಂದಿ ಬೆಳಕಿನಲ್ಲಿ ನಡೆಯುವ ಭಕ್ತಿಭಾವಪೂರ್ಣ ಏಕಪವಿತ್ರ ಶ್ರೀಮನ್ನಾಗಮಂಡಲವು ನಡೆಯಲಿದೆ.



ಬಿ.ಕೆ.ದೇವರಾಯ

240ಕ್ಕೂ ಹೆಚ್ಚು ಭಾರತೀಯ ಭತ್ತದ ತಳಿಗಳನ್ನು ಸಂರಕ್ಷಣೆ ಮಾಡಿದ ಅಪರೂಪದ ಕೃಷಿಕ ಋಷಿ ಬಿ.ಕೆ.ದೇವರಾಯ ಮಿತ್ತಬಾಗಿಲು ಅವರು ಮೂಡಬಿದರೆ ಎಸ್‌ಕೆಎಫ್ ಸಂಸ್ಥೆ ನೀಡುವ ನೂತನ ಪ್ರಥಮ ರೈತಪೀಠ ಪ್ರಶಸ್ತಿ ಸ್ವೀಕರಿಸುವರು. ತಮ್ಮ ಬದುಕನ್ನೇ ಕೃಷಿ ಕಾಯಕಕ್ಕೆ ಅರ್ಪಿಸಿರುವ ರೈತರ ತ್ಯಾಗ, ಪರಿಶ್ರಮ ಮತ್ತು ರೈತರ ಮಹತ್ವವನ್ನು ಗುರುತಿಸುವ ಮಹತ್ವದ ಉದ್ದೇಶದಿಂದ 'ರೈತಪೀಠ' ಎಂಬ ಗೌರವ ಪ್ರಶಸ್ತಿಯನ್ನು ಸ್ಥಾಪಿಸಿ ರೈತರನ್ನು ಗೌರವಿಸುವುದು ನಮ್ಮ ಮುಖ್ಯ ಉದ್ದೇಶ. ನಮ್ಮ ಯುವ ಸಮುದಾಯ ಕೃಷಿಯತ್ತ ಆಕರ್ಷಿತರಾಗ ಬೇಕು ಎಂದು ಮುನಿಯಾಲು ಗೋಧಾಮ ಮತ್ತು ಮೂಡಬಿದರೆ ಎಸ್‌ಕೆಎಫ್ ಸಮೂಹ ಸಂಸ್ಥೆಯ ಸಂಸ್ಥಾಪಕ ಡಾ.ಜಿ.ರಾಮಕೃಷ್ಣ ಆಚಾರ್ ತಮ್ಮ ವಿನೂತನ ಯೋಜನೆ ಯೋಚನೆಯ ಮಾಹಿತಿ ನೀಡಿದರು.

ಸನಾತನ ಸಂಸ್ಕೃತಿಯ ಕೇಂದ್ರ ಬಿಂದು ಪ್ರಕೃತಿ. ಮಣ್ಣು, ನೀರು, ಅಗ್ನಿ, ವಾಯು ಮತ್ತು ಆಕಾಶ ಪಂಚಭೂತಗಳಿಂದಲೇ ಪ್ರಪಂಚ ನಿರ್ಮಿತವಾಗಿರುವುದರಿಂದ, ಈ ಪಂಚಭೂತಗಳನ್ನು ಕಾಪಾಡುವ ಉದ್ದೇಶದಿಂದಲೇ ಪಾರಂಪರಿಕವಾಗಿ ದೊಂದಿ(ದೀವಟಿಗೆ) ದೀಪಗಳಿಂದಲೇ ಮಂಟಪವನ್ನು ಅಲಂಕರಿಸಿಕೊಂಡು, ಪ್ರಕೃತಿಯಿಂದಲೇ ಸಿಗುವ ಹಣ್ಣು ಪತ್ರಾದಿಗಳಿಂದ ಸುಂದರ ಮಂಟಪ ನಿರ್ಮಾಣ, ಪ್ರಸಾದವಾಗಿ ಬೀಜದುಂಡೆ ಒಳಗೊಂಡ ಮಣ್ಣಿನ ಸೀಡ್ ಬಾಲ್ ನೀಡಲಾಗುತ್ತದೆ.

ಗೋಧಾಮದಲ್ಲಿ ವಿಶಿಷ್ಟ ಶ್ರೀಮನ್ನಾಗಮಂಡಲ : ಶುದ್ಧ ಭೂಮಿ ಸೃಷ್ಟಿ: ಉಳುಮೆ ಮಾಡಿ, ಮಣ್ಣು ಹದಮಾಡಿ, ಬೀಜ ಬಿತ್ತನೆ ಮಾಡಿ ಹಾಗೂ ಹಸುಗಳು ಮೇಯುವ ಮೂಲಕ ಭೂಮಿಯನ್ನು ಪವಿತ್ರೀಕರಿಸಲಾಗಿದೆ.

ಬೀಜದುಂಡೆ ಮಹಾಪ್ರಸಾದ: ಸುಬ್ರಹ್ಮಣ್ಯ ದೇವರ ಮೃತ್ತಿಕೆಯು ಸೇರಿದ ಮಣ್ಣಿನಿಂದ ತಯಾರಿಸಿದ ಬೀಜದುಂಡೆಯನ್ನು ಪ್ರಕೃತಿಯನ್ನು ಉಳಿಸುವ ಪವಿತ್ರ ಪ್ರಸಾದ ರೂಪದಲ್ಲಿ ವಿತರಿಸಲಾಗುತ್ತದೆ. 5 ಸಾವಿರ ಬೀಜದುಂಡೆಗಳ ವಿತರಣೆಯ ಸಂಕಲ್ಪ ಮಾಡಲಾಗಿದೆ.




ಯುವಸಮುದಾಯವನ್ನು ಕೃಷಿಯತ್ತ ಆಕರ್ಷಿಸಲು ವಿಶೇಷ ಯೋಚನೆ ಯೋಜನೆಯ ಮೂಲಕ ಗ್ರಾಮೀಣ ಪ್ರದೇಶ ಮುನಿಯಾಲಿನಲ್ಲಿ ಸಂಜೀವಿನಿ ಗೋಧಾಮವನ್ನು ಕೃಷಿ ಸಂಶೋಧನಾ ಕೇಂದ್ರದಂತೆ ನಿರ್ಮಿಸಿದ್ದಾರೆ. ಆ ಮೂಲಕ ಕೈಗಾರಿಕೋದ್ಯಮಿಯೊಬ್ಬರು ಕೃಷಿಗೆ ಆದ್ಯತೆ ನೀಡುತ್ತಿರುವುದು ಮಹಾನ್ ಕಾರ್ಯ. ಗೋಧಾಮದ ಮೂಲಕ ಮುನಿಯಾಲಿನ ಹೆಸರು ಜಾಗತಿಕಮಟ್ಟದಲ್ಲಿ ರಾರಾಜಿಸುವಂತೆ ಆಗಿದೆ. ರೈತರು, ಕೃಷಿ ಮತ್ತು ಯುವಸಮುದಾಯವನ್ನು ಕೃಷಿಯತ್ತ ಮರಳಿ ತಂದು ಬದುಕು ಕಟ್ಟಲು ಪ್ರೇರಣೆ ನೀಡುವ ಮಹಾಸಂಕಲ್ಪದಿಂದ ನಡೆಯುವ ಪಾರಂಪರಿಕ ಶ್ರೀಮನ್ನಾಗಮಂಡಲವನ್ನು ನಾವೆಲ್ಲರೂ ಸೇರಿ ಯಶಸ್ವಿಗೊಳಿಸೋಣ.

- ಮುನಿಯಾಲು ಉದಯಕುಮಾರ್ ಶೆಟ್ಟಿ, ಅಧ್ಯಕ್ಷರು ಉದಯಕೃಷ್ಣಯ್ಯ ಶೆಟ್ಟಿ ಚಾರಿಟೇಬಲ್ ಟ್ರಸ್ಟ್



ಇದೊಂದು ಐತಿಹಾಸಿಕ ಕಾರ್ಯಕ್ರಮ. ಡಾ. ಜಿ. ರಾಮಕೃಷ್ಣಆಚಾರ್ಯರು ರೈತರ ಪರಿಶ್ರಮವನ್ನು ಅರಿತು ಮನ್ನಣೆ ನೀಡಲು ನಾಗಮಂಡಲದ ಮೂಲಕ ರೈತ ಪೀಠ ಪ್ರಶಸ್ತಿ ನೀಡಲು ಹೊರಟಿರುವುದು ಈ ನೆಲಕ್ಕೆ ನೀಡಿದ ದೊಡ್ಡ ಗೌರವ. ಕೃಷಿ ಮತ್ತು ಸಂಸ್ಕೃತಿಯನ್ನು ಒಟ್ಟಾಗಿ ತೆಗೆದುಕೊಂಡು ಶ್ರೀಮನ್ನಾಗಮಂಡಲದಲ್ಲಿ ನಾವೆಲ್ಲ ಒಟ್ಟಾಗಿ ನಿಂತು ಬೆಂಬಲಿಸೋಣ.

- ಸುನಿಲ್ ಕುಮಾರ್, ಶಾಸಕರು. ಗೌರವಾಧ್ಯಕ್ಷರು, ಮುನಿಯಾಲು ಏಕಪವಿತ್ರ ಶ್ರೀಮನ್ನಾಗಮಂಡಲ.



ಸಮಾಜದಲ್ಲಿ ರೈತರ ಶ್ರಮ ತ್ಯಾಗವನ್ನು ಗುರುತಿಸುವಲ್ಲಿ ನಾವೆಲ್ಲರೂ ಸೋತಿದ್ದೇವೆ. ರೈತರು ಕಾರ್ಪೊರೇಟ್ ವ್ಯವಸ್ಥೆಯ ಹಂತಕ್ಕೆ ಬಂದು ನಿಲ್ಲಬೇಕೆಂಬ ಮಹದಾಸೆ ನನ್ನದಾಗಿದೆ. ರೈತರಿಗೆ ಸಮಾಜದಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುವ ನಿಟ್ಟಿನಲ್ಲಿ ರೈತಪೀಠ ಪ್ರಶಸ್ತಿಯನ್ನು ಸ್ಥಾಪಿಸಿ ಆ ಪುಣ್ಯದ ಕೆಲಸ ನಾಗಮಂಡಲದ ಮೂಲಕ ಸಹಕಾರಗೊಳಿಸುತ್ತಿದ್ದೇವೆ. ರೈತ ಬೆಳೆದರೆ ಮಾತ್ರ ನಮಗೆಲ್ಲ ಉಳಿಗಾಲ.

- ಡಾ. ಜಿ. ರಾಮಕೃಷ್ಣ ಆಚಾರ್. ಮುನಿಯಾಲು ಸಂಜೀವಿನಿ ಗೋಧಾಮದ ಪ್ರವರ್ತಕರು.

'ರೈತಪೀಠ ಇದು ಈ ನೆಲದ ಜ್ಞಾನಪೀಠ' ಕೃತಿ ಬಿಡುಗಡೆ

ಗೋಧಾಮದ ಪ್ರವರ್ತಕ ಡಾ. ಜಿ ರಾಮಕೃಷ್ಣ ಆಚಾರ್ಯ ಅವರ ಸಾಧನೆ ಯಶೋಗಾಥೆಯನ್ನು ದಾಖಲಿಸಿದ ಡಾ. ನರೇಂದ್ರ ರೈ ದೇರ್ಲ ರಚಿಸಿರುವ 'ರೈತಪೀಠ ಇದು ಈ ನೆಲದ ಜ್ಞಾನಪೀಠ' ಕೃತಿಯ ಬಿಡುಗಡೆ ನಡೆಯಲಿದೆ.

ಶೈಕ್ಷಣಿಕ ಸಾಧಕರಿಗಿದೋ ಅಭಿನಂದನೆ

ಕಿರುಸುದ್ದಿ

ನಿಲ್ಲಿಸಿದ್ದ ಲಾರಿಯ ಬ್ಯಾಟರಿ ಕಳವು

ವಿಟ್ಲ : ವಿಟ್ಲ–ಪುತ್ತೂರು ರಸ್ತೆಯ ಬದನಾಜೆ ಎಂಬಲ್ಲಿ ಗ್ಯಾರೇಜ್ ಮುಂಭಾಗ ನಿಲ್ಲಿಸಿದ್ದ ಲಾರಿಯಿಂದ ರಾತ್ರಿ ಬ್ಯಾಟರಿ ಕಳ್ಳತನ ನಡೆದಿದೆ. ಅದೇ ರಾತ್ರಿ ಕಾಶಿಮಠ ರಸ್ತೆ ಬದಿ ಮತ್ತು ಉಕ್ಕುಡ ಸರ್ವಿಸ್ ಸ್ಟೇಷನ್‌ನಲ್ಲಿ ನಿಲ್ಲಿಸಿದ್ದ ಒಟ್ಟು ಮೂರು ಲಾರಿಗಳ ಬ್ಯಾಟರಿಗಳು ಕಳ್ಳರ ಪಾಲಾಗಿವೆ. ಈ ಬಗ್ಗೆ ಲಾರಿ ಚಾಲಕರು ವಿಟ್ಲ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಅಲ್ಲದೇ ಬಿಳಿ ಆಲ್ಟೋ ಕಾರಿನಲ್ಲಿ ಬಂದು ಬ್ಯಾಟರಿ ಕಳ್ಳತನ ನಡೆಸಿ ಪರಾರಿಯಾದ ದೃಶ್ಯಗಳು ಸಿಸಿ ಕ್ಯಾಮೆರಾದಲ್ಲಿ ದಾಖಲಾಗಿವೆ.

ಬ್ಯಾಟರಿ ಕಳ್ಳತನ ಬೈರಿಕಟ್ಟೆ, ಕನ್ಯಾನದಲ್ಲಿಯೂ ನಡೆದಿದೆಯೆನ್ನಲಾಗಿದೆ.

ಮುಲ್ಕಿ ತಾಲೂಕಿನ ಮೆಸ್ಕಾಂ ಉಪ ವಿಭಾಗದ ಗ್ರಾಹಕರ ಸಲಹಾ ಸಮಿತಿಗೆ ನೇಮಕ

ಮುಲ್ಕಿ: ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿಯ (ಮೆಸ್ಕಾಂ) ಮುಲ್ಕಿ ತಾಲೂಕಿನ ಮುಲ್ಕಿ ಉಪ ವಿಭಾಗಕ್ಕೆ ಗ್ರಾಹಕರ ಸಲಹಾ ಸಮಿತಿಗೆ ಅಧ್ಯಕ್ಷರಾಗಿ ಶಾಸಕ ಉಮಾನಾಥ ಕೋಟ್ಯಾನ್, ಸದಸ್ಯರುಗಳಾಗಿ ಧರ್ಮಾನಂದ ಶೆಟ್ಟಿಗಾರ್, ಹರಿಣಾಕ್ಷಿ ಶಿಮಂತೂರು, ಪದ್ಮಿನಿ ವಿ ಸಾಲ್ಯಾನ್, ಚಂದ್ರಶೇಖರ ಕಾರ್ನಾಡ್, ಕಿನ್ನಿಗೋಳಿ ಶಾಖೆಗೆ ಟಿ ಕೆ ಅಬ್ದುಲ್ ಖಾದರ್, ಮಹಾಬಲ ಮೂಲ್ಯ, ಹರೀಶ್, ಝೀಟ ಸುನೀತಾ ರೊಡ್ರಿಗಸ್, ಉಮಾವತಿ, ಬಾಲಕೃಷ್ಣ ಎ ಪೂಜಾರಿ, ರವಿರಾಜ್ ಎಳತ್ತೂರು, ಹಳೆಯಂಗಡಿ ಶಾಖೆಗೆ ಇಸುಬು ಯಾನೇ ಅಹಮ್ಮದ್, ನಾಗೇಶ್ ಬೆಳ್ಳಾಯರು, ಸೀತಾರಾಮ ತೋಕೂರು, ಲತಾ ಚೇಳಾಯರು, ಹುಸೇನಬ್ಬ ಬೊಳ್ಳೂರು, ಶರತ್ ಕುಮಾರ್ ಹಾಗೂ ಮೂಲ್ಕಿ ಶಾಖೆಗೆ ವೀರಯ್ಯ ಹೀರೆಮಠ, ಅಬ್ದುಲ್ ಖಾದರ್ ಅಂಗರಗುಡ್ಡೆ, ಪದ್ಮಲತಾ ಕೆ. ಕೆರೆಕಾಡು, ಹರಿಣಿ ಕೆ ಎಸ್ ರಾವ್ ನಗರ, ಶರತ್ ಕುಮಾರ್ ಕಾರ್ನಾಡು ಮತ್ತು ಕಿಶೋರ್ ಕುಮಾರ್‌ರನ್ನು ನೇಮಕ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ನಿಧನ ಸುದ್ದಿ

ಆನಂದ ಶೆಟ್ಟಿ



ಉಪ್ಪಳ: ಆರ್‌ಎಸ್‌ಎಸ್‌ನ ಹಿರಿಯ ಸ್ವಯಂಸೇವಕ, ಶಿರಿಯ ವಾನಂದೆ ನಿವಾಸಿ ಆನಂದ ಶೆಟ್ಟಿ (81) ಸೋಮವಾರ ರಾತ್ರಿ ನಿಧನ ಹೊಂದಿದರು. ವೃದ್ಧಾಪ್ಯ ಸಹಜ ಅಸೌಖ್ಯ ನಿಮಿತ್ತ ಅವರನ್ನು ಕುಂಬಳೆ ಜಿಲ್ಲಾ ಸಹಕಾರಿ ಆಸ್ಪತ್ರೆಯಲ್ಲಿ ದಾಖಲಿಸಲಾಗಿತ್ತು. ಆರ್‌ಎಸ್‌ಎಸ್‌ನ ಶಿರಿಯ ಶಾಖೆಯ ಮುಖ್ಯ ಶಿಕ್ಷಕ್ ಆಗಿ ಅವರು ಕಾರ್ಯಚರಿಸುತ್ತಿದ್ದರು. ಶಿರಿಯ ಸೀರೆ ಶ್ರೀ ಶಂಕರನಾರಾಯಣ ಕ್ಷೇತ್ರ ಸೇವಾ ಸಮಿತಿ ಮಾಜಿ ಅಧ್ಯಕ್ಷರೂ ಆಗಿದ್ದಾರೆ. ಉತ್ತಮ ಕೃಷಿಕರು ಆಗಿದ್ದ ಅವರಿಗೆ ಮಂಗಲ್ಪಾಡಿ ಗ್ರಾಮ ಪಂಚಾಯತ್ ಹಾಗೂ ಕೃಷಿಭವನ ಜಂಟಿಯಾಗಿ ಮಾದರಿ ಕೃಷಿಕ ಪುರಸ್ಕಾರ ನೀಡಿ ಗೌರವಿಸಿತ್ತು. ಶಿರಿಯ ಶಾಲೆಯನ್ನು ಹೈಸ್ಕೂಲ್ ಆಗಿ ಭಡ್ತಿಗೊಳಿಸಬೇಕೆಂದು ಒತ್ತಾಯಿಸಿ ಹೋರಾಟ ನಡೆಸಿ ಯಶಸ್ವಿಯಾಗಿದ್ದರು. ಕುಂಬಳೆ ಅಕ್ಷತಾ ಫೈನಾನ್ಸ್‌ನ ಮಾಲಕರೂ ಆಗಿದ್ದರು. 1960ರಿಂದ 1980ರ ತನಕ ಶಿರಿಯ ರೈಲು ನಿಲ್ದಾಣದಲ್ಲಿ ಟಿಕೆಟ್ ವಿತರಕರಾಗಿಯೂ ಸೇವೆ ಸಲ್ಲಿಸಿದ್ದರು. ಮೃತರು ಪತ್ನಿ ಗುಲಾಬಿ, ಪುತ್ರ ಮನೋಜ್‌ಕುಮಾರ್ ಶೆಟ್ಟಿ, ಸೊಸೆ ಭವ್ಯಾ, ಸಹೋದರ ಬಿಜೆಪಿ ಹಿರಿಯ ನೇತಾರ ಬಾಲಕೃಷ್ಣ ಶೆಟ್ಟಿ, ಸಹೋದರಿಯರಾದ ಲೀಲಾವತಿ ಶೆಟ್ಟಿ, ಪುಷ್ಪಾವತಿ ಶೆಟ್ಟಿ, ರತ್ನಾವತಿ ಶೆಟ್ಟಿ, ಹೇಮಲತಾ ಶೆಟ್ಟಿ, ಯಶೋಧಾ ಶೆಟ್ಟಿ ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.

ಕೊಡ್ಯಡ್ಕ ನರಸಿಂಹ ಹೆಗ್ಡೆ



ಮೂಡುಬಿದಿರೆ: ಇಲ್ಲಿನ ಪುತ್ತಿಗೆ ಗ್ರಾಮದ ಕೊಡ್ಯಡ್ಕ ಮನೆತನದ ಹಿರಿಯ ಸದಸ್ಯ ಕೆ.ನರಸಿಂಹ ಹೆಗ್ಡೆ (87) ಅಲ್ಪಕಾಲದ ಅನಾರೋಗ್ಯದಿಂದ ಫೆ.15 ರಂದು ನಿಧನರಾದರು. ಕೇಂದ್ರ ಸರ್ಕಾರದ ಅಧೀನಕ್ಕೊಳಪಟ್ಟ ಹೈದರಾಬಾದ್‌ನ ಬಿ.ಹೆಚ್.ಇ.ಎಲ್. ಸಾರ್ವಜನಿಕ ಉದ್ಯಮದಲ್ಲಿ ಹಲವು ವರ್ಷ ಎಕ್ಸಿಕ್ಯೂಟಿವ್ ಇಂಜಿನಿಯರಾಗಿ ಸೇವೆ ಸಲ್ಲಿ ಸ್ವಯಂ ನಿವೃತ್ತಿ ಪಡೆದಿದ್ದರು. ಬಳಿಕ ಮಸ್ಕತ್‌ಗೆ ತೆರಳಿ ಅಲ್ಲಿ ಕೆಲವು ವರ್ಷ ಸ್ವಂತ ಉದ್ಯೋಗದಲ್ಲಿ ತೊಡಗಿಸಿಕೊಂಡಿದ್ದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಓರ್ವ ಪುತ್ರಿ ಇದ್ದಾರೆ.

ಕೆ.ಶಂಕರಿ ಟೀಚರ್



ಶಿರ್ವ: ಇನ್ನಂಜೆ ಶ್ರೀವಿಷ್ಣುಮೂರ್ತಿ ಸ್ವಾಮಿ ಹಿ.ಪ್ರಾ. ಶಾಲೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿ ವಯೋನಿವೃತ್ತಿ ಹೊಂದಿದ ಶಂಕರಿ ಟೀಚರ್ ಎಂದೇ ಖ್ಯಾತರಾದ ಕೆ.ಶಂಕರಿ (95) ವಯೋಸಹಜ ಅಸೌಖ್ಯದಿಂದ ಸೋಮವಾರ ಸಂಜೆ ಸ್ವಗೃಹದಲ್ಲಿ ನಿಧನರಾದರು. ಇವರು ಇಬ್ಬರು ಪುತ್ರರು, ಮೂವರು ಪುತ್ರಿಯರು, ಮೊಮ್ಮಕ್ಕಳು, ಮರಿಮಕ್ಕಳನ್ನು ಅಗಲಿದ್ದಾರೆ.

ಜಗನ್ನಾಥ ಕೆ.



ಕುಂದಾಪುರ : ನಿವೃತ್ತ ಸಹಾಯಕ ತೋಟಗಾರಿಕಾ ಅಧಿಕಾರಿ ಜಗನ್ನಾಥ ಕೆ. (88) ವಯೋ ಸಹಜ ಕಾಯಿಲೆಯಿಂದ ಸೋಮವಾರ ನಿಧನ ಹೊಂದಿದರು. ಸುಳ್ಯ, ಕಾರ್ಕಳ ಮತ್ತು ಕುಂದಾಪುರದಲ್ಲಿ ಸೇವೆ ಸಲ್ಲಿಸಿ ಜನಾನುರಾಗಿದ್ದರು. ಮೃತರು ಪತ್ನಿ, ಮತ್ರ ಹಾಗೂ ಮತ್ರಿಯನ್ನು ಅಗಲಿದ್ದಾರೆ.

ಶೀನಪ್ಪ ಪೂಜಾರಿ ಬೊಳ್ಳಿಂಬಳ



ನಿಡ್ಪಳ್ಳಿ: ಪಾಣಾಜೆ ಗ್ರಾಮದ ಬೊಳ್ಳಿಂಬಳ ನಿವಾಸಿ ಕೃಷಿಕ ಶೀನಪ್ಪ ಪೂಜಾರಿ (68) ಅವರು ಅಲ್ಪಕಾಲದ ಅಸೌಖ್ಯದಿಂದ ಫೆ.15ರಂದು ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ಮಂಗಳೂರಿನ ತನ್ನ ಮಗಳ ಮನೆಗೆ ಹೋಗಿದ್ದ ಅವರು ಹಠಾತ್ತನೆ ಅನಾರೋಗ್ಯಕ್ಕೀಡಾಗಿದ್ದು ತಕ್ಷಣ ಖಾಸಗಿ ಆಸ್ಪತ್ರೆಗೆ ಸೇರಿಸಿದರೂ ಚಿಕಿತ್ಸೆ ಫಲಕಾರಿಯಾಗದೆ ಅಲ್ಲಿ ಅವರು ನಿಧನ ಹೊಂದಿದರು. ಮೃತರು ಪತ್ನಿ ಸೀತಾ, ಪುತ್ರ ಕುಲದೀಪ್ ಸಾಲ್ಯಾನ್, ಪುತ್ರಿಯರಾದ ದಿವ್ಯಶ್ರೀ, ದೀಕ್ಷಾ ಅವರನ್ನು ಅಗಲಿದ್ದಾರೆ.

ಮೂಡುಬಿದಿರೆ ಆಳ್ವಾಸ್ ಕಾಲೇಜ್ ವಿದ್ಯಾರ್ಥಿಗಳ ಸಾಧನೆ



ಮೂಡುಬಿದಿರೆ: ರಾಷ್ಟ್ರಮಟ್ಟದಲ್ಲಿ ಇಂಜಿನಿಯರಿಂಗ್ ಪ್ರವೇಶಕ್ಕಾಗಿ ಎನ್.ಟಿ.ಎ. ನಡೆಸಿದ ಜೆಇಇ ಮೈನ್ಸ್ ಪರೀಕ್ಷೆಯ ಪ್ರಥಮ ಹಂತದ ಫಲಿತಾಂಶ ಪ್ರಕಟಗೊಂಡಿದ್ದು, ಆಳ್ವಾಸ್ ಪದವಿಪೂರ್ವ ಕಾಲೇಜಿನ ಪಿಯುಷ್ ಎಚ್. 99.4585176 ಪರ್ಸಂಟೈಲ್ ಗಳಿಸಿ ಸಾಧನೆ ಮೆರೆದಿದ್ದಾರೆ.

8 ವಿದ್ಯಾರ್ಥಿಗಳು 98.5 ಪರ್ಸಂಟೈಲ್ ಗಳಿಗಿಂತ ಅಧಿಕ ಅಂಕ ಪಡೆದು ತೇರ್ಗಡೆ ಹೊಂದಿದ್ದಾರೆ. ಶಶಾಂಕ್ ಬೋರ್ಕರ್ (98.9610456), ಸೃಜನ್ ವಿ. (98.7320359), ಮೆಲ್ರೋಯ್ ಕಾಸ್ಟೆಲಿನೋ (98.648776), ಪ್ರಣವ್ ಎನ್. ಪಂಡಿತ್ (98.5677958), ಹರ್ಷವರ್ಧನ ಕೆ. ಪಿ. (98.5552656), ಕ್ಷಮ ಆಶೋಕ್ ಹಕಟಿ (98.5177603), ಕ್ಲಾರೆನ್ಸ್ ಡಿಸೋಜ (98.4810184) ಸೇರಿದಂತೆ ಈ ಎಲ್ಲಾ ವಿದ್ಯಾರ್ಥಿಗಳು ಉತ್ತಮ ಸಾಧನೆ ಮೆರೆದಿದ್ದಾರೆ.

97 ಪರ್ಸಂಟೈಲ್‌ಗಿಂತ ಅಧಿಕ 22 ವಿದ್ಯಾರ್ಥಿಗಳು, 96 ಪರ್ಸಂಟೈಲ್ ಗಿಂತ ಅಧಿಕ 38 ವಿದ್ಯಾರ್ಥಿಗಳು ಮತ್ತು 95 ಪರ್ಸಂಟೈಲ್‌ಗಿಂತ ಅಧಿಕ 58 ವಿದ್ಯಾರ್ಥಿಗಳು ಅಂಕ ಪಡೆದಿದ್ದಾರೆ.

ಭೌತಶಾಸ್ತ್ರ ವಿಷಯದಲ್ಲಿ 5 ವಿದ್ಯಾರ್ಥಿಗಳು, ರಸಾಯನಶಾಸ್ತ್ರ ವಿಷಯದಲ್ಲಿ 11 ವಿದ್ಯಾರ್ಥಿಗಳು ಮತ್ತು ಗಣಿತದಲ್ಲಿ 3 ವಿದ್ಯಾರ್ಥಿಗಳು 99 ಪರ್ಸಂಟೈಲ್‌ಗಳಿಗಿಂತ ಅಧಿಕ ಅಂಕ ಪಡೆದಿದ್ದಾರೆ.

ಸಾಧನೆ ಮೆರೆದ ಈ ಎಲ್ಲಾ ವಿದ್ಯಾರ್ಥಿಗಳು ಒಂದೇ ಕ್ಯಾಂಪಸ್ಸಿನ ಎರಡು ವರ್ಷದ ಕ್ಲಾಸ್ರೂಮ್ ವ್ಯವಸ್ಥೆಯಲ್ಲಿ ಪಿಯುಸಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಾಗಿರುತ್ತಾರೆ. ಈ ವಿದ್ಯಾರ್ಥಿಗಳನ್ನು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ ಅಭಿನಂದಿಸಿದ್ದಾರೆ.

ಶಾರದಾ ಕಾಲೇಜ್ ವಿದ್ಯಾರ್ಥಿಗಳ ಗಮನಾರ್ಹ ಸಾಧನೆ



ಮಂಗಳೂರು : ಇತ್ತೀಚೆಗೆ ನಡೆದ ಜೆಇಇ ಮೈನ್ಸ್ ಪ್ರಥಮ ಹಂತದ ಪರೀಕ್ಷೆಯಲ್ಲಿ ನಗರದ ಶಾರದಾ ಪ.ಪೂ. ಕಾಲೇಜಿನ ವಿದ್ಯಾರ್ಥಿಗಳಾದ ಶ್ರೇಯಾ ಬಳ್ಳಾಲ್–98.46, ರಚನಾ ಆರ್. –98.17, ವಿಜಯ್–96.95, ಶ್ರಿಜಲ್ ಮೋಹನ್‌ದಾಸ್–96.84, ಅಜಯ್ –96.62, ಸ್ಕಂದಾ ರಾವ್–95.87 ಪರ್ಸಂಟೈಲ್ ಅಂಕಗಳನ್ನು ಗಳಿಸಿದ್ದಾರೆ. ಇತರ ಹತ್ತಕ್ಕಿಂತ ಹೆಚ್ಚು ವಿದ್ಯಾರ್ಥಿಗಳು 90 ಪರ್ಸಂಟೈಲ್‌ಗಿಂತ ಹೆಚ್ಚು ಅಂಕಗಳನ್ನು ಪಡೆದಿರುತ್ತಾರೆ. ವಿದ್ಯಾರ್ಥಿಗಳ ಸಾಧನೆಗೆ ಶಾರದಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ. ಎಂ. ಬಿ. ಪೂರಾಣಿಕ್ ಹಾಗೂ ಶಾರದಾ ಪ.ಪೂ. ಕಾಲೇಜಿನ ಪ್ರಾಂಶುಪಾಲ ಪ್ರಕಾಶ್ ನಾಯ್ಕ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಎಕ್ಸಲೆಂಟ್ ಮೂಡುಬಿದಿರೆ: 23 ವಿದ್ಯಾರ್ಥಿಗಳಿಂದ ಅಭೂತಪೂರ್ವಸಾಧನೆ





ಮೂಡಬಿದಿರೆ: ಜೆಇಇ ಮೈನ್–1 ಇದರ ಫಲಿತಾಂಶ ಪ್ರಕಟವಾಗಿದ್ದು ಮೂಡುಬಿದಿರೆ ಕಲ್ಲಬೆಟ್ಟುವಿನ ಎಕ್ಸಲೆಂಟ್ ವಿಜ್ಞಾನ ಮತ್ತು ವಾಣಿಜ್ಯ ಪದವಿ ಪೂರ್ವಕಾಲೇಜಿನ ವಿದ್ಯಾರ್ಥಿಗಳು ಅಭೂತಪೂರ್ವ ಸಾಧನೆ ಮಾಡಿದ್ದಾರೆ.

ಈ ಬಾರಿಯ ಫಲಿತಾಂಶದಲ್ಲಿ ವಿದ್ಯಾರ್ಥಿಗಳಾದ ತನ್ಮಯಿ ಎ. ಕೋಟಿ ಭೌತಶಾಸ್ತ್ರದಲ್ಲಿ 99.935079 ಪರ್ಸಂಟೈಲ್ (ಒಟ್ಟಾರೆ 98.81287 ಪರ್ಸಂಟೈಲ್), ರಾಹುಲ್ ಪಿ. ಗೌಡ ಭೌತಶಾಸ್ತ್ರದಲ್ಲಿ 99.69311 ಪರ್ಸಂಟೈಲ್ (ಒಟ್ಟಾರೆ 98.61339 ಪರ್ಸಂಟೈಲ್), ತನುಷ್ ಪಾಟೀಲ್ ರಸಾಯನ ಶಾಸ್ತ್ರದಲ್ಲಿ 99.19293 ಪರ್ಸಂಟೈಲ್ (ಒಟ್ಟಾರೆ 99.59924 ಪರ್ಸಂಟೈಲ್) ಪಡೆದು ಕಾಲೇಜಿನ ಮೊದಲ ಮೂರು ಸ್ಥಾನವನ್ನು ಪಡೆದಿದ್ದಾರೆ. ಭರತ್‌ಆನಂದ್ 99.72912, ಹರ್ಷ ಆರ್. 99.16404, ಸಾತ್ವಿಕದತ್ತ ಬೋಯ 99.40384, ರಚನ ಎಸ್.ಎಮ್. 99.55428, ಶ್ಲೋಕ್ ರಾಘವೇಂದ್ರರಾವ್ 99.08979, ಹೇಮ ಯು. 99.58073, ಈಶ್ವರ್ ಪಿ. ಕೊಪ್ಪಳ್ 99.91653, ನಿಖಿಲ್ ಎಸ್.ಎಸ್. 99.82356, ಚಿನ್ಮಯ್ ಜಿ. ಬೆಲ್ಲೂರು 99.77329, ಯಶ್ವಂತ್ ಕೆ 99.91971, ಗುರುಚರಣ್‌ಎಮ್. ಶೆಟ್ಟಿ 99.87536, ಧ್ರುವಂತ್ ಕೆ. 99.68378, ಪಾರ್ವತ್‌ಗೌಡ ಪಾಟೀಲ್ 99.68531, ಎಸ್. ಜಿ. ಸುಮನ್ 99.13222, ಧೀರಜ್ 99.22020, ಆರುಷ್ 99.34371, ಆರುಷ್ ಪಾರೆ ಸುರೇಶ್ 99.34446 ಅಂಕಗಳನ್ನು ಪಡೆದು ವಿಶೇಷಸಾಧನೆಗಳನ್ನು ಮಾಡಿದ್ದಾರೆ.

ಪರೀಕ್ಷೆಗೆ ಹಾಜರಾದ 146 ವಿದ್ಯಾರ್ಥಿಗಳಲ್ಲಿ 4 ವಿದ್ಯಾರ್ಥಿಗಳು 98 ಪರ್ಸಂಟೈಲ್ ಗಿಂತ ಹೆಚ್ಚು, 14 ವಿದ್ಯಾರ್ಥಿಗಳು 97 ಪರ್ಸಂಟೈಲ್ ಗಿಂತ ಹೆಚ್ಚು, 30 ವಿದ್ಯಾರ್ಥಿಗಳು 95 ಪರ್ಸಂಟೈಲ್‌ಗಿಂತ ಹೆಚ್ಚು, ಮತ್ತು 73 ವಿದ್ಯಾರ್ಥಿಗಳು 90 ಪರ್ಸಂಟೈಲ್ ಗಿಂತ ಅಧಿಕ ಅಂಕಗಳನ್ನು ಪಡೆದಿದ್ದಾರೆ. ವಿಷಯವಾರು 15 ವಿದ್ಯಾರ್ಥಿಗಳು ಭೌತಶಾಸ್ತ್ರದಲ್ಲಿ, 4 ವಿದ್ಯಾರ್ಥಿಗಳು ರಸಾಯನ ಶಾಸ್ತ್ರದಲ್ಲಿ, 4 ವಿದ್ಯಾರ್ಥಿಗಳು ಗಣಿತಶಾಸ್ತ್ರದಲ್ಲಿ 99 ಪರ್ಸಂಟೈಲ್‌ಗಿಂತ ಅಧಿಕ ಅಂಕವನ್ನು ಪಡೆದಿದ್ದಾರೆ.

ಸಂಸ್ಥೆಯ ಅಧ್ಯಕ್ಷ ಯುವರಾಜ ಜೈನ್, ಕಾರ್ಯದರ್ಶಿ ರಶ್ಮಿತಾ ಜೈನ್, ನಿರ್ದೇಶಕ ಡಾ. ಪ್ರಶಾಂತ್ ಹೆಗ್ಡೆ, ಜೆಇಇ ವಿಭಾಗ ಮುಖ್ಯಸ್ಥ ವಿ. ಅರುಣ್, ಪ್ರಾಂಶುಪಾಲ ಪ್ರದೀಪ್‌ಕುಮಾರ್ ಶೆಟ್ಟಿ, ಸಾಧಕ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

ಕ್ರಿಯೇಟಿವ್ ಕಾಲೇಜಿನ ವಿದ್ಯಾರ್ಥಿಗಳ ಅಮೋಘ ಸಾಧನೆ





ಕಾರ್ಕಳ: ಜೆಇಇ ಮೈನ್ಸ್ (ಸೆಷನ್–1) 2026 ನೇ ಸಾಲಿನ ಅರ್ಹತಾ ಪರೀಕ್ಷೆಯಲ್ಲಿ ಕಾರ್ಕಳದ ಕ್ರಿಯೇಟಿವ್ ಶಿಕ್ಷಣ ಸಂಸ್ಥೆಯ 102 ಮಂದಿ ವಿದ್ಯಾರ್ಥಿಗಳು 90 ಪರ್ಸಂಟೈಲ್‌ಗಿಂತ ಅಧಿಕ ಅಂಕವನ್ನು ಪಡೆದು ವಿಶಿಷ್ಟ ಸಾಧನೆಗೈದು ಮುಂದಿನ ಹಂತದ ಜೆಇಇ ಅಡ್ವಾನ್ಸ್ ಪರೀಕ್ಷೆಗೆ ತೇರ್ಗಡೆಯನ್ನು ಹೊಂದಿದ್ದಾರೆ.

ವಿದ್ಯಾರ್ಥಿಗಳಾದ ನಮಿತ್ ಕೃಷ್ಣಮೂರ್ತಿ ಹೆಗಡೆ–99.4981217 ಪರ್ಸಂಟೈಲ್, ನಾಗದೇವ್ ಎಂ.ಜಿ. – 99.3310617 ಪರ್ಸಂಟೈಲ್, ಪ್ರಥಮ್ ತಮ್ಮಣ್ಣ ಗೌಡರ್ – 99.1416986 ಪರ್ಸಂಟೈಲ್ ಪಡೆದುಕೊಳ್ಳುವ ಮೂಲಕ ವಿಶಿಷ್ಟ ಶ್ರೇಣಿಗಳಿಸಿದ್ದಾರೆ.

ತೇಜಸ್ ಆರ್. ಬಿ.– 98.9615457 ನಿನಾದ್ ರಾಜೇಶ್ ನಾಯ್ಕ್– 98.9463580 ಧನುಷ್ ಹೆಚ್. ಎ.– 98.5706065 ಸಂವಿತ್ ಅಮಿತ್ ಗೋಕರ್ಣ– 98.5706065, ದೃಶ್ಯ– 98.4130581 ಸುಕ್ಷಿತ್ ಗಿರೀಶ್ ಗೌಡ– 98.3503880 ತೇಜಸ್ ಎನ್. ಇ. – 98.3227894 ತೇಜಸ್ ಹೆಗಡೆ ಎಚ್. ಡಿ.– 98.1925416 ಅಕ್ಷತಾ ಮೋಹನ್ ಹೆಗಡೆ – 98.1682710 ಪ್ರಜ್ವಲ್ ಭಟ್– 98.0498968 ವಿಶ್ವೇಶ್ ಎನ್. ಎಚ್.– 98.0348799 ಪರ್ಸಂಟೈಲ್‌ಗಳನ್ನು ಪಡೆದುಕೊಂಡಿದ್ದಾರೆ.

99 ಪರ್ಸಂಟೈಲ್‌ಗಿಂತ ಅಧಿಕ 3 ಮಂದಿ ವಿದ್ಯಾರ್ಥಿಗಳು, 98 ಪರ್ಸಂಟೈಲ್ ಗಿಂತ ಅಧಿಕ 14 ವಿದ್ಯಾರ್ಥಿಗಳು, 95 ಪರ್ಸಂಟೈಲ್‌ಗಿಂತ ಅಧಿಕ 45 ವಿದ್ಯಾರ್ಥಿಗಳು, 90 ಪರ್ಸಂಟೈಲ್‌ಗಿಂತ ಅಧಿಕ 102 ವಿದ್ಯಾರ್ಥಿಗಳು ಅಂಕಗಳನ್ನು ಪಡೆದುಕೊಂಡು ಮುಂದಿನ ಹಂತದ ಜೆಇಇ ಅಡ್ವಾನ್ಸ್ ಪರೀಕ್ಷೆಗೆ ಅರ್ಹತೆಯನ್ನು ಗಳಿಸಿಕೊಂಡಿದ್ದಾರೆ. ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಪ್ರಾಂಶುಪಾಲರು, ಆಡಳಿತ ಮಂಡಳಿ, ಉಪನ್ಯಾಸಕ ವರ್ಗ ಹಾಗೂ ಬೋಧಕೇತರ ಸಿಬ್ಬಂದಿಗಳು ಮತ್ತು ಸಂಸ್ಥೆಯ ಜೆಇಇ ಪರೀಕ್ಷೆಯ ಸಂಯೋಜಕರಾದ ನಂದೀಶ್ ಅಭಿನಂದಿಸಿ ಮುಂದಿನ ಹಂತದ ಪರೀಕ್ಷೆಗೆ ಶುಭ ಹಾರೈಸಿದ್ದಾರೆ.

ಎಕ್ಸ್‌ಪರ್ಟ್ ಕಾಲೇಜಿನ 15 ವಿದ್ಯಾರ್ಥಿಗಳಿಗೆ 99 ಪರ್ಸಂಟೈಲ್‌ಗಿಂತ ಅಧಿಕ ಅಂಕ



ಮಂಗಳೂರು: ಇಂಜಿನಿಯರಿಂಗ್ ವಿಭಾಗದಲ್ಲಿ ರಾಷ್ಟ್ರಮಟ್ಟದಲ್ಲಿ ನಡೆಸುವ ಜೆಇಇ ಮೈನ್ಸ್ ಪರೀಕ್ಷೆಯ ಮಂಗಳೂರಿನ ಎಕ್ಸ್‌ಪರ್ಟ್ ಪದವಿ ಪೂರ್ವ ಕಾಲೇಜಿನ ಒಟ್ಟು 15 ವಿದ್ಯಾರ್ಥಿಗಳು 99 ಪರ್ಸಂಟೈಲ್‌ಗಿಂತ ಅಧಿಕ ಅಂಕ ಪಡೆದಿದ್ದಾರೆ.

2026ರ ಜನವರಿಯಲ್ಲಿ ನಡೆದ ಜೆಇಇ ಪರೀಕ್ಷೆಯಲ್ಲಿ ನಗರದ ಎಕ್ಸ್‌ಪರ್ಟ್ ಪದವಿ ಪೂರ್ವ ಕಾಲೇಜಿನ ಮತ್ತು ಕೊಡಿಯಾಲ್‌ಬೈಲ್ ಎಕ್ಸ್‌ಪರ್ಟ್ ಪದವಿ ಪೂರ್ವ ಕಾಲೇಜಿನ 36 ವಿದ್ಯಾರ್ಥಿಗಳು 98 ಪರ್ಸಂಟೈಲ್ ಗಿಂತ ಅಧಿಕ, 72 ವಿದ್ಯಾರ್ಥಿಗಳು 97 ಪರ್ಸಂಟೈಲ್‌ಗಿಂತ ಅಧಿಕ, 104 ವಿದ್ಯಾರ್ಥಿಗಳು 96 ಪರ್ಸಂಟೈಲ್ ಗಿಂತ ಅಧಿಕ, 135 ವಿದ್ಯಾರ್ಥಿಗಳು 95 ಪರ್ಸಂಟೈಲ್‌ಗಿಂತ ಅಧಿಕ ಹಾಗೂ 342 ವಿದ್ಯಾರ್ಥಿಗಳು 90 ಪರ್ಸಂಟೈಲ್‌ಗಿಂತ ಅಧಿಕ ಫಲಿತಾಂಶವನ್ನು ಗಳಿಸಿದ್ದಾರೆ.

ಕೃತಿಕಾ ಮಲ್ಲಿಕಾರ್ಜುನ್ ಪಾಟೀಲ್ (99.6272345), ಉದ್ದಂಡಿ ಲಕ್ಷ್ಮೀ ಮೇಘನಾ (99.5991624), ಸುಹಾಸ್ ಬಸನಗೌಡ ಬಾಳನಗೌಡರ್ (99.5885872), ಅಂಕಿತ್ ಅಶೋಕ್ ದೊಡವಾಡ (99.5854733), ಸಮಯ್ ಎ.ಎಸ್. (99.5031775), ಉಜ್ವಲ್ ಶಿವಾನಂದ್ ಬೂದಿಹಾಲ್ (99.4178338), ಸಾಯಿ ಶೋಬಿತ್ ಎಸ್. (99.4130510), ಅಭಿಷೇಕ್ ಆರ್. ಹಣಮಂತಗೌಡರ್ (99.4130510), ಅರಳೆ ವಿರೂಪಾಕ್ಷಿ (99.3650938), ನರೇನ್ ವಿ. (99.3416964), ನಿತೀಶ್ ಗೋಪಾಲ್ (99.3347760), ಯಶಸ್ ಎನ್.ಎಂ. (99.3303251), ಸಮರ್ಥ್ ಗೌಡ ಆರ್. (99.2905252), ಚಂದನ್ ಎಚ್.ಆರ್. (99.1793285), ನಂದನ್ ನಾಯಕ್ (99.1756042), ಅಂಕ ಪಡೆದಿದ್ದಾರೆ.

ಎರಡನೇ ಹಂತದ ಜೆಇಇ ಪರೀಕ್ಷೆ ಏಪ್ರಿಲ್ ತಿಂಗಳಿನಲ್ಲಿ ನಡೆಯಲಿದ್ದು, ಎರಡೂ ಪರೀಕ್ಷೆಯಲ್ಲಿ ಪಡೆದ ಅಂಕವನ್ನು ಪರಿಗಣಿಸಿ, ಅಂತಿಮವಾಗಿ ರ‍್ಯಾಂಕ್ ಘೋಷಿಸಲಾಗುತ್ತದೆ. ಐಐಟಿ, ಎನ್‌ಐಟಿ ಸೇರಿದಂತೆ ಪ್ರಮುಖ ಎಂಜಿನಿಯರಿಂಗ್ ಕಾಲೇಜುಗಳ ಪ್ರವೇಶಕ್ಕೆ ಈ ಪರೀಕ್ಷೆಯನ್ನು ಅಖಿಲ ಭಾರತ ಮಟ್ಟದಲ್ಲಿ ನಡೆಸಲಾಗುತ್ತದೆ. ಈ ಎಲ್ಲಾ ವಿದ್ಯಾರ್ಥಿಗಳ ಶ್ರಮದ ಸಾಧನೆಯನ್ನು ಕಾಲೇಜಿನ ಹಾಗೂ ಆಡಳಿತ ಮಂಡಳಿಯ ಪರವಾಗಿ ಎಕ್ಸ್‌ಪರ್ಟ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಪ್ರೊ. ನರೇಂದ್ರ ಎಲ್. ನಾಯಕ್ ಅಭಿನಂದಿಸಿದ್ದಾರೆ.

ಜ್ಞಾನಸುಧಾದ 8 ವಿದ್ಯಾರ್ಥಿಗಳಿಗೆ 99ಕ್ಕಿಂತ ಅಧಿಕ ಪರ್ಸಂಟೈಲ್





ಸಾಧಕ ವಿದ್ಯಾರ್ಥಿಗಳಿಗೆ 3.42ಲಕ್ಷ ಟ್ರಸ್ಟಿನಿಂದ ಘೋಷಣೆ

ಕಾರ್ಕಳ : ರಾಷ್ಟ್ರಮಟ್ಟದಲ್ಲಿ ಇಂಜಿನಿಯರಿಂಗ್ ಪ್ರವೇಶಕ್ಕಾಗಿಎನ್.ಟಿ..ಎ ನಡೆಸಿದ ಜೆಇಇ ಮೈನ್ (ಬಿ.ಟೆಕ್)–2026ರ ಪ್ರಥಮ ಹಂತದ ಫಲಿತಾಂಶದಲ್ಲಿ ಜ್ಞಾನಸುಧಾ ಪಿ.ಯು ಕಾಲೇಜಿನ 8 ವಿದ್ಯಾರ್ಥಿಗಳು 99ಕ್ಕಿಂತ ಅಧಿಕ ಪರ್ಸಂಟೈಲ್ ಗಳಿಸಿ ಉತ್ತಮ ಸಾಧನೆ ಮಾಡಿರುತ್ತಾರೆ. ಟಾಪರ್ ಆಗಿ 99.9055199 ಪರ್ಸಂಟೈಲ್ ನೊಂದಿಗೆ ಕನಿಷ್ಕ ಅಮೀನ್ ಹೊರಹೊಮ್ಮಿದ್ದಾರೆ.

22 ವಿದ್ಯಾರ್ಥಿಗಳು 98 ಪರ್ಸಂಟೈಲ್ ಗಿಂತ ಅಧಿಕ, 48 ವಿದ್ಯಾರ್ಥಿಗಳು 97 ಪರ್ಸಂಟೈಲ್‌ಗಿಂತ ಅಧಿಕ, 74 ವಿದ್ಯಾರ್ಥಿಗಳು 96 ಪರ್ಸಂಟೈಲ್ ಗಿಂತ ಅಧಿಕ, 94 ವಿದ್ಯಾರ್ಥಿಗಳು 95 ಪರ್ಸಂಟೈಲ್‌ಗಿಂತ ಅಧಿಕ ಹಾಗೂ 220 ವಿದ್ಯಾರ್ಥಿಗಳು 90 ಪರ್ಸಂಟೈಲ್‌ಗಿಂತ ಅಧಿಕ ಫಲಿತಾಂಶ ತಮ್ಮದಾಗಿಸಿಕೊಂಡಿದ್ದಾರೆ.

ಸಾಧಕ ವಿದ್ಯಾರ್ಥಿಗಳಿಗೆ 3.42ಲಕ್ಷ ರೂಪಾಯಿ ಟ್ರಸ್ಟಿನಿಂದ ಘೋಷಣೆ

ಅಜೆಕಾರ್ ಪದ್ಮಗೋಪಾಲ್‌ಎಜ್ಯುಕೇಶನ್ ಟ್ರಸ್ಟಿನ ಅಧ್ಯಕ್ಷ ಡಾ.ಸುಧಾಕರ್ ಶೆಟ್ಟಿ 97ಕ್ಕಿಂತ ಅಧಿಕ ಪರ್ಸಂಟೈಲ್ ಗಳಿಸಿದ ಸಾಧಕ ವಿದ್ಯಾರ್ಥಿಗಳಿಗೆ 3.42 ಲಕ್ಷ ರೂಪಾಯಿಗಳ ಪ್ರೋತ್ಸಾಹಧನವನ್ನು ಘೋಷಿಸಿದ್ದಾರೆ.

ಜೆ.ಇ.ಇ ಮೈನ್ ಪ್ರಥಮ ಹಂತದ ಫಲಿತಾಂಶದಲ್ಲಿ 99.9055199 ಪರ್ಸಂಟೈಲ್ ಪಡೆದ ಕನಿಷ್ಕ ಅಮೀನ್ ರವರಿಗೆ 1 ಲಕ್ಷ ರೂಪಾಯಿಯನ್ನು, 99.8254499 ಪರ್ಸಂಟೈಲ್ ಪಡೆದ ಸೋಹನ್ ಗಿರಿ ರಡ್ಡಿಯವರಿಗೆ ರೂ. 75 ಸಾವಿರವನ್ನು, 99.6543996 ಪರ್ಸಂಟೈಲ್ ಪಡೆದ ಮೇಧಾನ್ಶ್ ಎನ್.ಬಿ. ಹಾಗೂ 99.6130095 ಪರ್ಸಂಟೈಲ್ ಪಡೆದ ಅನಿರುದ್ಧ್ ಆರ್. ಉಡುಪಗೆ ತಲಾ ರೂ.35 ಸಾವಿರವನ್ನು, 99.5087645 ಪರ್ಸಂಟೈಲ್ ಪಡೆದ ತುಷಾರ್ ಎ. ಶೆಟ್ಟಿಯವರಿಗೆ ರೂ.25 ಸಾವಿರವನ್ನು, 99.4253270 ಪರ್ಸಂಟೈಲ್ ಪಡೆದ ನಿಶಾನ್ ಎನ್. ಸಾಲ್ಯಾನ್, 99.2313099 ಪರ್ಸಂಟೈಲ್ ಪಡೆದ ತೇಜಸ್ ನಾಯಕ್ ಹಾಗೂ 99.0090928 ಪರ್ಸಂಟೈಲ್ ಪಡೆದ ಅನಿಕೇತ್ ಆರ್. ಉಡುಪಗೆ ತಲಾ ರೂ. 15 ಸಾವಿರವನ್ನು ಘೋಷಿಸಿದ್ದಾರೆ.

ಜೊತೆಗೆ ಮನೋಜ್ ಎಂ 98.9239678 ಪರ್ಸಂಟೈಲ್, ವೈಷ್ಣವಿ ಕುಲಕರ್ಣಿ 98.8384918 ಪರ್ಸಂಟೈಲ್, ಸಂಜನಾ ಬಿ.ಎ. 98.7722886 ಪರ್ಸಂಟೈಲ್, ಸಾಯಿರಾಘವೇಂದ್ರ ಬಿ. 98.6885295 ಪರ್ಸಂಟೈಲ್, ಮಯೂರ್ ವಿ ಗೌಡ 98.5943336 ಪರ್ಸಂಟೈಲ್, ವರುಣ್ ಜೆ 98.5707051 ಪರ್ಸಂಟೈಲ್, ಅನಾಮಯ ಯೋಗೇಶ್ ದಿವಾಕರ್ 98.4810184 ಪರ್ಸಂಟೈಲ್, ವಿದ್ವತ್ ವಿ. ಕಾಮತ್ 98.4287569 ಪರ್ಸಂಟೈಲ್, ಪ್ರಭಂಜನ್ ಭಟ್ 98.4281519 ಪರ್ಸಂಟೈಲ್, ಆಸ್ತಿಕಾ ಆರ್. ಭಾಗವತ್ 98.413806 ಪರ್ಸಂಟೈಲ್, ಜೀವನ್ ಎನ್. ಬಿ. 98.3173191 ಪರ್ಸಂಟೈಲ್, ದಿಗಂತ್ ಎಸ್. 98.2292253 ಪರ್ಸಂಟೈಲ್, ಎನ್.ಎಸ್.ವಿವೇಕ್ 98.1685978 ಪರ್ಸಂಟೈಲ್, ವಿಶಾಖ್ ಕೃಷ್ಣರಾಜ್ 98.132748 ಪರ್ಸಂಟೈಲ್ ಪಡೆದಿದ್ದು, ಇವರಿಗೆ ತಲಾ ರೂ. ಒಂದು ಸಾವಿರ ಹಾಗೂ 97ಕ್ಕಿಂತ ಅಧಿಕ ಪರ್ಸಂಟೈಲ್ ಪಡೆದ ವಿದ್ಯಾರ್ಥಿಗಳಿಗೆ ತಲಾ ರೂ.500 ನಗದು ಪುರಸ್ಕಾರ ಘೋಷಿಸಿದ್ದಾರೆ.

ಸಾಧಕ ವಿದ್ಯಾರ್ಥಿಗಳನ್ನು ಹಾಗೂ ಸಾಧನೆಗೆ ಬೆನ್ನೆಲುಬಾದ ಜ್ಞಾನಸುಧಾ ಎಂಟ್ರೆನ್ಸ್ ಅಕಾಡೆಮಿಯಾ ಪರಿಶ್ರಮವನ್ನು ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟಿನ ಅಧ್ಯಕ್ಷ ಡಾ.ಸುಧಾಕರ್ ಶೆಟ್ಟಿಯವರು ಅಭಿನಂದಿಸಿದ್ದಾರೆ.

ಪುತ್ತೂರು ವಿವೇಕಾನಂದದ ವಿಶಾಲ್ ಪಿ. ಪುತ್ತೂರು ತಾಲೂಕಿಗೆ ಪ್ರಥಮ



ಪುತ್ತೂರು: ಕೇಂದ್ರ ಸರಕಾರದ ಎನ್‌ಟಿಎ ಪ್ರಾಧಿಕಾರವು ನಡೆಸುವ ರಾಷ್ಟ್ರ ಮಟ್ಟದ ಜೆಇಇ ಮೈನ್ಸ್–2026 ರ ಪ್ರಥಮ ಹಂತದ ಪರೀಕ್ಷೆಯಲ್ಲಿ ವಿವೇಕಾನಂದ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಅನೇಕ ವಿದ್ಯಾರ್ಥಿಗಳು 90 ಪರ್ಸಂಟೈಲ್ ಗಳಿಗಿಂತಲೂ ಅಧಿಕ ಅಂಕಗಳನ್ನು ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ. ವಿಶಾಲ್ ಪಿ. 98.23 ಪರ್ಸಂಟೈಲ್ ಗಳಿಸುವುದರ ಮೂಲಕ ಪುತ್ತೂರು ತಾಲೂಕಿಗೆ ಪ್ರಥಮ ಸ್ಥಾನಿಯಾಗಿದ್ದಾರೆ.

ಅತ್ಯುತ್ತಮ ಅಂಕಗಳನ್ನು (ಪರ್ಸಂಟೈಲ್) ಪಡೆದ ವಿದ್ಯಾರ್ಥಿಗಳ ವಿವರ:

ವಿಶಾಲ್ ಪಿ. 98.23 ಪರ್ಸಂಟೈಲ್, ಧ್ವನಿ ಆರ್.ಬಿ. 95.93, ಅದಿತಿ ಯು. 94.70, ಚೇತನ್ ಕೆ.ವಿ. 94.08, ಮೋಕ್ಷಿತ್ ಪಿ.ಎಸ್. 93.1, ಅಮೋಘ ಕೃಷ್ಣ ಕೆ. 92.52, ಮಂಗಳಾಮೃತ ಕೆ.ಆರ್. 91.98, ಪ್ರತ್ಯೂಷ್ ಆರ್.ವೈ. 90.2, ಹೇಮಂತ್ ಕುಮಾರ್ ಕೆ.ವೈ. 89.74, ಅಭಿರಾಮ್ ಭಟ್ 87.88, ಸಪ್ತಮಿ ವೈ.ಪಿ. 87.61, ಅಜೇಯ ರಾಮ್ 86.84, ಡಿ.ಬಿ. ನಾಗ ಅಚ್ಯುತ್ 86.82, ಪ್ರಾಪ್ತಿ ಆಳ್ವ 86.48, ತೀರ್ಥಾ ಶೆಟ್ಟಿ 85.92 ಪರ್ಸಂಟೈಲ್ ಪಡೆದಿದ್ದಾರೆ.

ಕನ್ಯಾನ ಡಾ. ಸದಾಶಿವ ಶೆಟ್ಟಿ ವಿರುದ್ಧದ ಅಪಪ್ರಚಾರ, ಮಾನಹಾನಿ | ಉದ್ಯಮಿ, ದಾನಿಗೆ ಬೆಂಬಲವಾಗಿ ನಿಂತ ಕಾಸರಗೋಡು ಬಂಟರ ಸಂಘ

ಶೆಟ್ಟರ ನೋವಿನಲ್ಲಿ ನಾವೂ ಪೂರ್ಣ ಪ್ರಮಾಣ ಭಾಗಿ: ಸುಬ್ಬಯ್ಯ ರೈ



ಮಂಗಳೂರು: ಉದ್ಯಮಿ ಹಾಗೂ ದಾನಿ ಕೂಳೂರು ಕನ್ಯಾನ ಡಾ. ಸದಾಶಿವ ಶೆಟ್ಟಿ ಅವರ ವಿರುದ್ಧ ನಡೆಯುತ್ತಿರುವ ಅಪಪ್ರಚಾರ, ಮಾನಹಾನಿ, ಆರೋಪಗಳು ಸಾರ್ವಜನಿಕವಾಗಿ ಚರ್ಚೆಯಾಗಿರುವುದು ಬೇಸರ ಸಂಗತಿ. ಕಾಸರಗೋಡು ಜಿಲ್ಲಾ ಬಂಟರ ಸಂಘ ಕನ್ಯಾನ ಡಾ. ಸದಾಶಿವ ಶೆಟ್ಟಿ ಅವರಿಗೆ ಪೂರ್ಣ ಬೆಂಬಲ ನೀಡುತ್ತೇವೆ ಎಂದು ಕಾಸರಗೋಡು ಜಿಲ್ಲಾ ಬಂಟರ ಸಂಘದ ಅಧ್ಯಕ್ಷ ಬಿ. ಸುಬ್ಬಯ ರೈ ಹೇಳಿದರು.

ಕೆಲವು ದಿನಗಳಿಂದ ನಡೆಯುತ್ತಿರುವ ಘಟನೆಗಳಿಂದ ಮನನೊಂದು ಡಾ. ಸದಾಶಿವ ಶೆಟ್ಟಿ ಅವರು ಪತ್ರಿಕಾ ಪ್ರಕಟಣೆ ನೀಡಿರುವುದು ಕಾಸರಗೋಡು ಜಿಲ್ಲೆಯ ಸಮಸ್ತ ಬಂಟ ಬಾಂಧವರಿಗೆ ಆಘಾತ ಉಂಟುಮಾಡಿದೆ. 'ಇನ್ನು ಮುಂದೆ ಯಾವುದೇ ಸಂಘ ಸಂಸ್ಥೆಗಳಿಗೆ ನೆರವು ನೀಡುವುದಿಲ್ಲ' ಎಂದು ಸದಾಶಿವ ಶೆಟ್ಟಿ ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಕಾಸರಗೋಡಿನ ಎಲ್ಲ ಬಂಟರು ಒಗ್ಗಟ್ಟಿನಿಂದ ಕನ್ಯಾನ ಸದಾಶಿವ ಶೆಟ್ಟಿ ಅವರಿಗೆ ಆಗಿರುವ ನೋವಿನಲ್ಲಿ ಪೂರ್ಣ ಪ್ರಮಾಣದಲ್ಲಿ ಭಾಗಿಯಾಗಿರುತ್ತೇವೆ ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.

ಇದು ಬಂಟರ ಸಂಘದ ಒಳಗಿನ ವಿಚಾರ. ಈ ವಿಚಾರವನ್ನು ನಾವು ನಮ್ಮೊಳಗೆ ಪರಿಹಾರ ಮಾಡಿಕೊಳ್ಳುತ್ತೇವೆ. ಇಂದಿನವರೆಗೆ ನಾವೆಲ್ಲರೂ ಒಗ್ಗಟ್ಟಿನಿಂದ ಸಾಮರಸ್ಯದಿಂದ ಹಾಗೂ ಸೌಹಾರ್ದತೆಯಿಂದ ನಡೆದುಕೊಂಡು ಬಂದಿದ್ದೇವೆ. ಇನ್ನು ಮುಂದೆಯೂ ಇದೇ ರೀತಿಯಲ್ಲಿ ನಡೆದುಕೊಳ್ಳಬೇಕಾಗಿ ಎಲ್ಲ ಸಮಾಜ ಬಾಂಧವರಲ್ಲಿ ವಿನಂತಿಸುತ್ತೇನೆ ಎಂದರು.

ದರ್ಬಾರು ಕಟ್ಟೆ ಶ್ರೀ ರಾಜರಾಜೇಶ್ವರಿ ದೇವಸ್ಥಾನ ಆಡಳಿತ ಮೊಕ್ತೇಸರ ಕೆ.ಕೆ. ಶೆಟ್ಟಿ ಕುತ್ತಿಕ್ಕಾರು ಮಾತನಾಡಿ, ಡಾ. ಸದಾಶಿವ ಶೆಟ್ಟಿ ಅವರ ಬಗ್ಗೆ ಇಲ್ಲಸಲ್ಲದ ವಿಚಾರಗಳನ್ನು ಬಹಿರಂಗಪಡಿಸಿ ಅವರ ಮನಸ್ಸಿಗೆ ನೋವು ಉಂಟುಮಾಡಲಾಗಿದೆ. ಇದರಿಂದಾಗಿ ಯಾವುದೇ ಸಂಘ ಸಂಸ್ಥೆಗಳಿಗೆ, ದೇವಸ್ಥಾನ, ಭಜನಾ ಮಂದಿರಗಳಿಗೆ ದಾನ ನೀಡುವುದಿಲ್ಲ ಎಂದು ಅವರು ಹೇಳಿದ್ದಾರೆ. ಕಾಸರಗೋಡು ಬಂಟ ಸಂಘ ಸದಾಶಿವ ಶೆಟ್ಟಿ ಅವರ ಜತೆಗಿದೆ. ಈ ಬಗ್ಗೆ ಸಂಘದಲ್ಲಿ ನಿರ್ಣಯ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಕಾಸರಗೋಡು ಬಂಟ ಸಂಘ ಜತೆ ಕಾರ್ಯದರ್ಶಿ ಗೋಪಾಲಕೃಷ್ಣ ಶೆಟ್ಟಿ ಕುತ್ತಿಕ್ಕಾರು, ಮಾತೃ ಸಂಘ ಕಾರ್ಯಕಾರಿ ಸಮಿತಿ ಸದಸ್ಯ ಕಾರ್ತಿಕ್ ಶೆಟ್ಟಿ ಮಜಿಬೈಲು, ಸುರೇಶ್ ಶೆಟ್ಟಿ ಕುಂಜತ್ತೂರು ಉಪಸ್ಥಿತರಿದ್ದರು.

ಇಂದಿನ ಪಂದ್ಯಗಳು

ದ.ಆಫ್ರಿಕಾ VS ಯುಎಇ
ಬೆಳಗ್ಗೆ 11 (ದಿಲ್ಲಿ)

ಪಾಕಿಸ್ತಾನ VS ನಮೀಬಿಯಾ
ಮಧ್ಯಾಹ್ನ 3 (ಕೊಲಂಬೋ)

ಭಾರತ VS ನೆದರ್ಲೆಂಡ್ಸ್
ಸಂಜೆ 7 (ಅಹಮದಾಬಾದ್)

ಕಿರುಸುದ್ದಿ

ಕೋಚ್ ಹುದ್ದೆಗೆ ಶ್ರೀಜೇಶ್ ಮರು ಅರ್ಜಿ

ಹೊಸದಿಲ್ಲಿ: ಹಾಕಿ ಅಂಗಳದಲ್ಲಿ ತಡೆಗೋಡೆಯಂತೆ ಭಾರತದ ಗೋಲು ಪೆಟ್ಟಿಗೆ ಕಾಯ್ದು ಒಲಿಂಪಿಕ್ಸ್ ಪದಕ ಸೇರಿದಂತೆ ವಿವಿಧ ಟೂರ್ನಿಗಳಲ್ಲಿ ಭಾರತ ತಂಡವನ್ನು ಗೆಲ್ಲುವಂತೆ ಮಾಡಿರುವ ದಿಗ್ಗಜ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಅವರು ತಮ್ಮ ಜೂನಿಯರ್ ತಂಡದ ಪ್ರಧಾನ ಕೋಚ್ ಹುದ್ದೆಗೆ ಮರು ಅರ್ಜಿ ಸಲ್ಲಿಸಿದ್ದಾರೆ.

ಗರಿಷ್ಠ ಕ್ರೀಡಾಕೂಟ ಎನಿಸುವ ಒಲಿಂಪಿಕ್ಸ್‌ನಲ್ಲಿ 2 ಬಾರಿ ಪದಕಕ್ಕೆ ಕೊರಳೊಡ್ಡಿರುವ ಶ್ರೀಜೇಶ್ ಗೆಲುವಿನ ರೂವಾರಿಯೂ, ಭಾರತದ ಪ್ರಮುಖ ಆಟಗಾರರೂ ಆಗಿದ್ದರು. ಹಾಕಿ ಕ್ಷೇತ್ರದಲ್ಲಿ ವಿಶೇಷ ಇತಿಹಾಸ ಹೊಂದಿರುವ ಅವರು, ತಮ್ಮ ಲೆಗೆಸಿಯನ್ನು ಕೋಚ್ ಆಗಿ ಮುಂದುವರಿಸುವುದಕ್ಕೆ ನಿವೃತ್ತಿಯಾದ ನಂತರದ ದಿನವೇ ಯೋಚಿಸಿದ್ದ ಅವರು, ಈಗಾಗಲೇ ಒಂದು ಅವಧಿ ಮಟ್ಟಕ್ಕೆ ಕೋಚ್ ಆಗಿ ಜೂನಿಯರ್ ತಂಡಕ್ಕೆ ಗೆಲುವಿನ ಮಾರ್ಗ ತೋರಿಸಿದ್ದಾರೆ. ಚೆನ್ನೈನಲ್ಲಿ ನಡೆದಿದ್ದ ಜೂನಿಯರ್ ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾರತ 9 ವರ್ಷಗಳ ನಂತರ ಮೊದಲ ಸ್ಥಾನ ಗೆದ್ದುಕೊಂಡಿತ್ತು. ಹೇಗೆ ಗೋಲ್‌ಕೀಪರ್ ಆಗಿ ಗೆಲುವಿನ ಮಾರ್ಗ ತೋರಿಸುತ್ತಿದ್ದರೋ ಹಾಗೆ ಇಲ್ಲಿಯೂ ಕೂಡ ಕೋಚ ಆಗಿ ಗೆಲುವಿನಲ್ಲಿ ಮಿಂಚಿದ್ದರು ಶ್ರೀಜೇಶ್. ಮೂರು ವರ್ಷದ ಕೋಚ್ ಅವಧಿಯಲ್ಲಿ ಸಾಧನೆಗಳ ಸಾಲನ್ನು ಹೊಂದಿರುವ ಶ್ರೀಜೇಶ್, 6 ಮಂದಿಯೊಂದಿಗೆ ಸ್ಪರ್ಧಿಸಲಿದ್ದಾರೆ. ಈ ಆರು ಜನರಲ್ಲಿ ಒಬ್ಬರನ್ನು ಆಯ್ಕೆ ಮಾಡಲಾಗುತ್ತದೆ.

ರುತುಜಾ-ಪ್ಲಿಪ್ರುಯೆಚ್ ಜೋಡಿ ಶುಭಾರಂಭ

ದುಬೈ: ಭಾರತದ ನಂ.1 ಆಟಗಾರ್ತಿ ರುತುಜಾ ಭೋಸಲೆ-ಪ್ಲಿಪುಯೆಚ್ ದುಬೈ ಚಾಂಪಿಯನ್‌ಶಿಪ್ ಟೆನಿಸ್ ಟೂರ್ನಿಯ ಡಬಲ್ಸ್ ವಿಭಾಗದಲ್ಲಿ ಗೆಲುವಿನೊಂದಿಗೆ ತಮ್ಮ ಅಭಿಯಾನ ಆರಂಭಿಸಿದರು. ಡಬ್ಲ್ಯುಟಿಎ 1000 ಮಟ್ಟದ ಟೂರ್ನಿಯಲ್ಲಿ ಮೊದಲ ಬಾರಿ ಕಣಕ್ಕಿಳಿದ ಭೋಸಲೆ, ಥೈಲ್ಯಾಂಡ್‌ನ ಪಿಯಾಂಗ್‌ಟಾರ್ನ್ ಪ್ಲಿಪುಏಚ್ ಜೊತೆಗೆ ಜಪಾನ್‌ನ ಎರಿ ಹೋಜುಮಿ ಮತ್ತು ಚೈನೀಸ್ ತೈಪೆಯ ಫಾಂಗ್-ಶಿಯನ್ ವು ಜೋಡಿಯನ್ನು 7-5, 6-2 ಅಂತರದಿಂದ ಸೋಲಿಸಿದರು. ಮೊದಲ ಸೆಟ್‌ನಲ್ಲಿ ಸಮಬಲದ ಹೋರಾಟ ಕಂಡುಬಂದರೂ, ನಿರ್ಣಾಯಕ ಕ್ಷಣಗಳಲ್ಲಿ ಭೋಸಲೆ-ಪ್ಲಿಪುಯೆಚ್ ಜೋಡಿ ಮುನ್ನಡೆ ಸಾಧಿಸಿ 7-5ರಿಂದ ಸೆಟ್ ತಮ್ಮದಾಗಿಸಿಕೊಂಡಿತು. ಎರಡನೇ ಸೆಟ್‌ನಲ್ಲಿ ಆರಂಭದಿಂದಲೇ ಆಕ್ರಮಣಕಾರಿ ಆಟ ಪ್ರದರ್ಶಿಸಿದ ಜೋಡಿ ಎದುರಾಳಿಗಳಿಗೆ ಅವಕಾಶ ನೀಡದೇ 6-2ರಿಂದ ಸುಲಭ ಜಯ ಸಾಧಿಸಿತು. ಮುಂದಿನ ಸುತ್ತಿನಲ್ಲಿ ಡಾನಿಲಿನಾ-ಅಲೆಕ್ಸಾಂಡ್ರಾ ಜೋಡಿಯನ್ನು ಎದುರಿಸಲಿದ್ದಾರೆ.

ಪಾಕ್‌ಗೆ ನಮೀಬಿಯಾ ವಿರುದ್ಧ ಮಾಡು ಇಲ್ಲವೆ ಮಡಿ ಪಂದ್ಯ

ಭಾರತ-ನೆದರ್ಲೆಂಡ್ಸ್ ಫೈಟ್

ಅಹಮದಾಬಾದ್: ಬಂದ ಎದುರಾಳಿಗಳಿಗೆ ಸೋಲುಣಿಸುತ್ತಾ ವಿಶ್ವಕಪ್ ಕಣದಲ್ಲಿ ಘರ್ಜಿಸುತ್ತಿರುವ ಭಾರತ ತಂಡವು, ಸೂಪರ್-8 ಪಂದ್ಯಗಳಿಗೂ ಮುನ್ನ ಅಭ್ಯಾಸಕ್ಕೆ ಆಸರೆಯಾಗುವಂತೆ ತನ್ನ ಕೊನೆಯ ಲೀಗ್ ಹಂತದ ಪಂದ್ಯದಲ್ಲಿ ನೆದರ್ಲೆಂಡ್ಸ್ ತಂಡವನ್ನು ಎದುರಿಸಲಿದೆ.

ಅಮೆರಿಕ, ನಮೀಬಿಯಾ, ಪಾಕ್ ಹೀಗೆ ಬಂದ ತಂಡಗಳಿಗೆ ಸೋಲಿನ ರುಚಿ ತೋರಿಸುತ್ತಾ, ಗೆಲುವುಗಳನ್ನು ಸಂಭ್ರಮಿಸುತ್ತಾ ಟ್ರೋಫಿ ಉಳಿಸುವತ್ತ ಕಡೆ ಸಾಗುತ್ತಿದೆ ಸೂರ್ಯಕುಮಾರ್ ಯಾದವ್ ಬಳಗ. ಸೂಪರ್ ಎಂಟಕ್ಕಿನ್ನು ಗುಂಪು 1ರಲ್ಲಿ ಪೈಪೋಟಿ ಹಾಗೇ ಸಾಗುತ್ತ ರೋಚಕ ಘಟ್ಟಕ್ಕೆ ತಲುಪಿದೆ. ಅತ್ತ ಭಾರತ ಮೊದಲ ಸ್ಥಾನದಲ್ಲಿದ್ದರೆ, ನೆದರ್ಲೆಂಡ್ಸ್, ಪಾಕಿಸ್ತಾನ ಮತ್ತು ಅಮೆರಿಕ ತಂಡಗಳು ಎರಡನೇ ಸ್ಥಾನಕ್ಕಾಗಿ ಪೈಪೋಟಿಯಲ್ಲಿವೆ. ನೆದರ್ಲೆಂಡ್ಸ್ ಭಾರತ ವಿರುದ್ಧ ದೊಡ್ಡ ರನ್‌ರೇಟ್‌ನಿಂದ ಗೆದ್ದರೆ ಕ್ವಾಲಿಫೈ ಆಗುವ ಅವಕಾಶ ಹೊಂದಿದೆ. ಮಹತ್ವದ ಪಂದ್ಯ ಎಂದುಕೊಂಡು ಆಡಲಿದೆ. ಆದರೆ ಭಾರತ ಅಭ್ಯಾಸವಾಗಿ ಪರಿಗಣಿಸುತ್ತದೆ.

ಸೂರ್ಯ ಪಡೆಗೆ ವಿಶ್ವಾಸ: ಆಡಿರುವ 3 ಪಂದ್ಯಗಳಲ್ಲಿ ಮೊದಲಿಗೆ ಅಮೆರಿಕ ತಂಡವನ್ನು ಮಣಿಸಿದರೆ, ಎರಡನೇ ಪಂದ್ಯದಲ್ಲಿ ನಮೀಬಿಯಾ, ಮೂರನೇ ಪಂದ್ಯದಲ್ಲಿ ಪಾಕಿಸ್ತಾನ ತಂಡವನ್ನು ದೊಡ್ಡ ಅಂತರದಿಂದ ಸೋಲಿಸಿದೆ. ಅಭಿಷೇಕ್ ಶರ್ಮ ಅವರ ಬ್ಯಾಟಿಂಗ್‌ಗೆ ಬೆಚ್ಚಿಬಿದ್ದಂತೆ ಅವರಿಗಾಗೇ ಹೆಚ್ಚಿನ ಪ್ರಿಪರೇಶನ್ ಮಾಡಿಕೊಂಡು ಬರುತ್ತಿದ್ದ ಎದುರಾಳಿ ತಂಡಗಳಿಗೆ ಈಗ ಇಶಾನ್ ಕಿಶನ್ ಇನ್ನಷ್ಟು ಆತಂಕಗೊಳಿಸಿದ್ದಾರೆ. ಔಟ್ ಆಫ್ ದಿ ಸಿಲ್ಯಾಬಸ್ ಎಂಬಂತೆ ಕಾಡುತ್ತಿದ್ದಾರೆ. ಹಿಂದಿನ



ಪಂದ್ಯಗಳಲ್ಲಿ ಸೂರ್ಯಕುಮಾರ್ ಯಾದವ್, ತಿಲಕ್ ವರ್ಮಾ ಹಾಗೂ ಮುಖ್ಯವಾಗಿ ದೊಡ್ಡ ಪರಿಣಾಮ ಬೀಳಿಸುವ ಚಿಕ್ಕ ಇನ್ನಿಂಗ್ಸ್‌ನೊಂದಿಗೆ ಶಿವಂ ದುಬೆ ಸಜ್ಜಾಗಿದ್ದಾರೆ. ಮುಂದೆ ರಿಂಕು ಸಿಂಗ್, ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್... ಎಷ್ಟೇ ವಿಕೆಟ್ ಬಿದ್ದರೂ ನಿಲ್ಲಲ್ಲ ಭಾರತೀಯರ ಆರ್ಭಟ. ಬೌಲಿಂಗ್ ವಿಚಾರದಲ್ಲೂ ಅದೇ. ಬೂಮ್ರಾ ಲಯಕ್ಕೆ ಮರಳಿದ್ದಾರೆ. ಹಾರ್ದಿಕ್ ಪಾಂಡ್ಯ ತಮ್ಮ ಆಕ್ರಮಣಕಾರಿ ಬೌಲಿಂಗ್‌ನೊಂದಿಗೆ ಭರವಸೆಯನ್ನಿಟ್ಟಿದ್ದಾರೆ. ಇನ್ನು ಲಯದಲ್ಲಿರುವ ವರುಣ್ ಚಕ್ರವರ್ತಿ ಮ್ಯಾಜಿಕ್ ಮಾಡುವುದಕ್ಕೆ ಸಿದ್ಧವಾಗಿದ್ದಾರೆ.. ಇನ್ನು ಅಕ್ಷರ್ ಪಟೇಲ್ ಕೂಡ ಇದ್ದಾರಲ್ಲ. ಅವರ ಬೌಲಿಂಗ್ ಕೂಡ ವಿಶ್ವಾಸ ಹೆಚ್ಚಿಸಿದೆ.

ಪಾಕ್‌ಗಿಂದು ಅಗ್ನಿ ಪರೀಕ್ಷೆ: ಇನ್ನು ಮೊದಲನೇ ಗುಂಪಿನಲ್ಲಿ ಎರಡನೇ ಸ್ಥಾನಕ್ಕಾಗಿ ತೀವ್ರ ಹೊಡೆದಾಟ ನಡೆಯುತ್ತಿದೆ. ಪಾಕಿಸ್ತಾನ ಹಾಗೂ ನಮೀಬಿಯಾ ತಂಡಗಳು ಬುಧವಾರದ ಪಂದ್ಯದಲ್ಲಿ ಮುಖಾಮುಖಿಯಾಗಲಿದ್ದು, ಸೋತರೆ ಪಾಕಿಸ್ತಾನ ಹೊರಬೀಳಲಿದೆ. ಸದ್ಯ ಭಾರತದ ನಂತರ ಅಮೆರಿಕ ಎರಡನೇ ಸ್ಥಾನದಲ್ಲಿದ್ದು, ಪಾಕ್‌ಗಿಂತ ಹೆಚ್ಚಿನ ರನ್ ರೇಟ್ ಹೊಂದಿದೆ. ಈ ಬೆನ್ನಲ್ಲೇ ಪಾಕ್‌ಗೆ ಮಾಡು ಇಲ್ಲವೆ ಮಡಿ ಪಂದ್ಯ ಇದಾಗಿದೆ. ಪಾಕ್ ಗೆದ್ದರೆ ಸಾಲದು. ಹೆಚ್ಚಿನ ರನ್‌ರೇಟ್ ಇಟ್ಟುಕೊಂಡು ಗೆದ್ದರೆ ಮಾತ್ರ ಅವಕಾಶ ಪಡೆಯಲಿದೆ.

ಭಾರತಕ್ಕೆ ಜಿಂಬಾಬ್ವೆ ಎದುರಾಳಿ

ಸೂಪರ್-8ರ ಮೊದಲ ಪಂದ್ಯದಲ್ಲಿ ಭಾರತ ಜಿಂಬಾಬ್ವೆ ತಂಡವನ್ನು ಎದುರಿಸಿಲಿದೆ. ಆಸ್ಟ್ರೇಲಿಯಾ ತಂಡವನ್ನು ಪಂದ್ಯಾವಳಿ ಯಿಂದ ಹೊರನೂಕಿದ ನಂತರ ಸೂಪರ್-ಕ್ಕೆ ಲಗ್ಗೆ ಹಾಕಿರುವ ಜಿಂಬಾಬ್ವೆ, ಫೆಬ್ರವರಿ 22ರಂದು ಸೂಪರ್-8ರ ಮೊದಲ ಪಂದ್ಯವಾಡಲಿದೆ.

ತಂಡಗಳು

ಭಾರತ: ಇಶಾನ್ ಕಿಶನ್, ಅಭಿಷೇಕ್ ಶರ್ಮ, ತಿಲಕ್ ವರ್ಮಾ, ಸೂರ್ಯಕುಮಾರ್ ಯಾದವ್ (ನಾಯಕ), ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ರಿಂಕು ಸಿಂಗ್, ಅಕ್ಷರ್ ಪಟೇಲ್, ಕುಲ್ದೀಪ್ ಯಾದವ್, ವರುಣ್ ಚಕ್ರವರ್ತಿ, ಜಸ್ಪ್ರೀತ್ ಬುಮ್ರಾ, ಸಂಜು ಸ್ಯಾಮ್ಸನ್, ಮೊಹಮ್ಮದ್ ಸಿರಾಜ್, ವಾಷಿಂಗ್ಟನ್ ಸುಂದರ್, ಅರ್ಷದೀಪ್. ವಾಷಿಂಗ್ಟನ್ ಸುಂದರ್.

ನೆದಲ್ಯಾಂಡ್ಸ್: ಮೈಕೆಲ್ ಲೆವಿಟ್, ಮ್ಯಾಕ್ಸ್ ಒ'ಡೌಡ್, ಬಾಸ್ ಡಿ ಲೀಡ್, ಕಾಲಿನ್ ಅಕರ್ಮನ್, ಸ್ಕಾಟ್ ಎಡ್ವರ್ಡ್ಸ್, ಝೂಕ್ ಲಯನ್, ರೋಲೋಫ್, ವ್ಯಾನ್ ಬೀಕ್, ಆರ್ಯನ್ ದತ್, ಕೈಲ್ ಕ್ಲೈನ್, ಫ್ರೆಡ್ ಕ್ಲಾಸೆನ್, ಸಾಕಿಬ್ ಝುಲ್ಫಿನ್, ಸಾಕ್ವಿಬ್ ಕ್ರೋಸ್ಸೆನ್, ಸಾಕ್ವಿಬ್ ಕ್ರೋಸ್ಸೆನ್ ಟಿಮ್ ವ್ಯಾನ್ ಡೆರ್ ಗುಗ್ಟನ್

ಜಿಂಬಾಬ್ವೆ-ಐರ್ಲೆಂಡ್ ಪಂದ್ಯ ರದ್ದು

ವಿಶ್ವಕಪ್: ಆಸ್ಟ್ರೇಲಿಯಾ ಹೊರಕ್ಕೆ

ಕೊಲಂಬೋ: 17 ವರ್ಷಗಳ ಬಳಿಕ ಆಸ್ಟ್ರೇಲಿಯಾ ಗರ್ವಭಂಗ ಎದುರಿಸಿದ್ದು, ಪ್ರತಿಷ್ಠಿತ ಟಿ20 ವಿಶ್ವಕಪ್ ಪಂದ್ಯಾವಳಿಯಿಂದ ಮೊದಲ ಬಾರಿಗೆ ಲೀಗ್ ಹಂತದಲ್ಲೇ ಹೊರಬಿದ್ದಿತು. ಆಸೀಸ್ ಅಂತಹ ದೊಡ್ಡ ತಂಡದ ವಿರುದ್ಧ ಗೆದ್ದು ಬೀಗಿದ್ದ ಜಿಂಬಾಬ್ವೆಗೆ ವರುಣನ ಆಸರೆ ಸಿಕ್ಕ ನಂತರ ಪಂದ್ಯಾವಳಿಯ ಸೂಪರ್-8ರ ಘಟ್ಟಕ್ಕೆ ಹೆಜ್ಜೆ ಹಾಕಿತು.

ಜಿಂಬಾಬ್ವೆ ತಂಡದೊಂದಿಗೆ ಸೋತ ನಂತರ ಶ್ರೀಲಂಕಾ ವಿರುದ್ಧವೂ ತಿಣುಕಾಡಿದ ಆಸ್ಟ್ರೇಲಿಯಾ, ಮಳೆಯಿಂದಾಗಿ ಜಿಂಬಾಬ್ವೆ-ಐರ್ಲೆಂಡ್ ಪಂದ್ಯ ರದ್ದಾದ ನಂತರ ಹೊರನಡೆಯಿತು.

ಸೂಪರ್-8ಕ್ಕೆ ಕಿವೀಸ್: ಇತ್ತ ಇನ್ನೊಂದು ಪಂದ್ಯದಲ್ಲಿ ನ್ಯೂಜಿಲೆಂಡ್ ಸೂಪರ್-8ಕ್ಕೆ ಲಗ್ಗೆ ಹಾಕಿದೆ. ರಚಿನ್ ರವೀಂದ್ರ ಮತ್ತು ಗ್ಲೆನ್ ಫಿಲಿಪ್ಸ್ ಅವರ ಉತ್ತಮ ಬ್ಯಾಟಿಂಗ್‌ನೊಂದಿಗೆ ಮಿಂಚಿದ ಕಿವೀಸ್, ಕೆನಡಾದ ಯುವರಾಜ್ ಸಾಮ್ರಾ ಅವರ ಶತಕವನ್ನು ವ್ಯರ್ಥಗೊಳಿಸಿತು. ಸೂಪರ್-8ಕ್ಕೆ ಲಗ್ಗೆ ಹಾಕಿತು. ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕೆನಡಾ 20 ಓವರ್‌ಗಳಲ್ಲಿ 4 ವಿಕೆಟ್‌ನೊಂದಿಗೆ 173 ರನ್ ಗಳಿಸಿತು. ಯುವರಾಜ್ ಒಬ್ಬರೆ 110 ರನ್ ಗಳಿಸಿ ದಾಖಲೆಯ ಶತಕ ಬಾರಿಸಿದರು. ಗುರಿ ಬೆನ್ನತ್ತಿದ ನ್ಯೂಜಿಲೆಂಡ್ 15.1 ಓವರ್‌ಗಳಲ್ಲಿ 176 ರನ್ ಗಳಿಸಿತು. ಕಿವೀಸ್ ಪರ ರವೀಂದ್ರ 59★, ಫಿಲಿಪ್ಸ್ 76★ ರನ್ ಬಾರಿಸಿದರು.

ಗುಂಪು ಹಂತಲ್ಲೇ ಹೊರಬಿದ್ದ ಆಸೀಸ್: ಆಸ್ಟ್ರೇಲಿಯಾ 17 ವರ್ಷಗಳ ನಂತರ ಟೂರ್ನಿಯ ಗುಂಪು ಹಂತದಿಂದಲೇ ಹೊರಬಿದ್ದಿದೆ. ಇದಕ್ಕೂ ಮೊದಲು, 2009ರ ಟಿ20 ವಿಶ್ವಕಪ್‌ನ ಗುಂಪು ಹಂತದಿಂದ ಮನೆಗೆ ಹೋಗಿತ್ತು. 2021ರ ಟಿ20 ವಿಶ್ವಕಪ್ ವಿಜೇತ ಆಸ್ಟ್ರೇಲಿಯಾ, ಮುಂದಿನ ಹಂತಕ್ಕೆ ಮುನ್ನಡೆಯುವ ಭರವಸೆಯನ್ನು ಐರ್ಲೆಂಡ್ ವಿರುದ್ಧದ ಗೆಲುವಿನ ಮೇಲೆ ಅವಲಂಬಿಸಿತ್ತು. ಅಲ್ಲದೆ, ಜಿಂಬಾಬ್ವೆ ಎರಡೂ ಪಂದ್ಯಗಳನ್ನು ಸೋಲಬೇಕಿತ್ತು. ಆದರೆ ಅದೃಷ್ಟ ಅವರನ್ನು ಸಂಕಷ್ಟಕ್ಕೆ ಕೆಡವಿದ್ದ ಜಿಂಬಾಬ್ವೆ ಕಡೆ ಇತ್ತು. ಐರ್ಲೆಂಡ್ ಜತೆಗಿನ ಪಂದ್ಯ ರದ್ದಾಗಿದೆ. ಆಸೀಸ್ ಹೊರಬಿದ್ದಿದೆ.



ನೇಪಾಳ ಜಯಭೇರಿ

ಸ್ಕಾಟ್ಲೆಂಡ್ ಬಾಯಿಯಿಂದ ಪಂದ್ಯ ಕಸಿದುಕೊಂಡ ನೇಪಾಳ ತಂಡದ ದಿಪೇಂದ್ರ ಸಿಂಗ್ ತಮ್ಮ ತಂಡಕ್ಕೆ ಈ ಬಾರಿಯ ವಿಶ್ವಕಪ್‌ನಲ್ಲಿ ಮೊದಲ ಗೆಲುವು ತಂದುಕೊಟ್ಟರು. ಸ್ಕಾಟ್ಲೆಂಡ್ ನೀಡಿದ್ದ 171 ರನ್ ಗುರಿ ಪೇರಿಸುವಾಗ ಕೊನೆಯ 40 ಬಾಲ್‌ಗಳಲ್ಲಿ 73 ರನ್ ಬಾರಿಸಬೇಕಿದ್ದ ನೇಪಾಳ 7 ವಿಕೆಟ್‌ಗಳ ಭರ್ಜರಿ ಗೆಲುವು ಸಾಧಿಸಿದೆ. ಇದರೊಂದಿಗೆ ಬಾಂಗ್ಲಾದೇಶದ ಬದಲಿ ತಂಡವಾಗಿ ಆಯ್ಕೆಯಾಗಿದ್ದ ಸ್ಕಾಟ್ಲೆಂಡ್ ಸೋಲಿನೊಂದಿಗೆ ಹೊರ ನಡೆದಿದೆ. ದಿಪೇಂದ್ರ ಸಿಂಗ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ 23 ಬಾಲ್‌ಗಳಲ್ಲಿ ಅಜೇಯ 50 ರನ್ ಬಾರಿಸಿ ಗೆಲುವಿನ ರೂವಾರಿ ಎನಿಸಿದರು.

ಸ್ಲಾಲೋಮ್‌ನಲ್ಲಿ ಆರೀಫ್ ದಾಖಲೆ

ಹೊಸದಲ್ಲಿ: ಕೆಲವೇ ಜನರು ಮಾಡಬಲ್ಲ ಸಾಧನೆಯೊಂದನ್ನು ಮಾಡಿರುವ ಭಾರತದ ಅಗ್ರ ಆಲ್ಪೈನ್ ಸ್ಕೀಯರ್ ಆರೀಫ್ ಮೊಹಮ್ಮದ್ ಖಾನ್ ಅವರು ಇಟಲಿಯಲ್ಲಿ ನಡೆಯುತ್ತಿರುವ ವಿಂಟರ್ ಗೇಮ್ಸ್ ಕ್ರೀಡಾಕೂಟದಲ್ಲಿ ಪುರುಷರ ಸ್ಲಾಲೋಮ್ ಸ್ಪರ್ಧೆಯಲ್ಲಿ 39ನೇ ಸ್ಥಾನ ಪಡೆದು ಇತಿಹಾಸ ನಿರ್ಮಿಸಿದ್ದಾರೆ.

ಓಟ ಶುರುವಾಗುವಾಗ ನೂರಾರು ಪಟುಗಳಿರುತ್ತಾರೆ. ಗುರಿ ಮುಟ್ಟುವುದು ಆಯ್ದ ಪಟುಗಳು ಮಾತ್ರ. ಗೆಲುವಿಗಾಗಿ ಮೂರು ಸ್ಥಾನ ಪಡೆಯಬೇಕಾದದ್ದು ಸತ್ಯ ಆದರೆ ಆ ಮಹಾ ಚಳಿಯಲ್ಲಿ ಓಟ ಮುಗಿಸುವುದೇ ದೊಡ್ಡ ಗೆಲುವು. ಅಂತಹ ವಿಶೇಷ ಕ್ರೀಡೆಯಾಗಿದ ಸ್ಲಾಲಂ ಓಟ.

ವಿಶೇಷ ಸಾಧನೆ ಮಾಡಿದ ಖಾನ್: ಸೋಮವಾರ ನಡೆದ ಸ್ಪರ್ಧೆಯ ಎರಡನೇ ಸುತ್ತಿನ ಓಟದಲ್ಲಿ ಖಾನ್ 1:19.48 ಕ್ರಮಿಸಿದರು. ಇದಕ್ಕೂ ಮುನ್ನ ಸ್ಟೆಲ್ವಿಯೋ ಸ್ಕೀ ಸೆಂಟರ್‌ನಲ್ಲಿ ನಡೆದ ಮೊದಲ ಸುತ್ತಿನ ರನ್‌ನಲ್ಲಿ ಖಾನ್ 1:22.12 ಸಮಯದೊಂದಿಗೆ 96 ಸ್ಪರ್ಧಿಗಳಲ್ಲಿ 44ನೇ ಸ್ಥಾನ ಪಡೆದಿದ್ದರು. ಒಟ್ಟು ಸಮಯದಲ್ಲಿ 2 ಗಂಟೆ 41ನಿಮಿಷ ಮತ್ತು 60 ಸೆಕೆಂಡುಗಳಲ್ಲಿ ಗುರಿ ಕ್ರಮಿಸಿರುವ ಅವರು, ಎರಡೂ ರನ್‌ಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಅಪರೂಪ ಸಾಧನೆ ಮಾಡಿಬಿಟ್ಟರು ಆರೀಫ್. ಓಟದ ಸ್ಪರ್ಧಿಗಳ ಪೈಕಿ ಕೊನೆಯ ಸ್ಥಾನದಲ್ಲಿದ್ದರೂ, ಇದು ಚಳಿಗಾಲಿನ ಒಲಿಂಪಿಕ್ಸ್‌ನಲ್ಲಿ ಭಾರತೀಯ ಪುರುಷರ ಸ್ಲಾಲೋಮ್ ವಿಭಾಗದ ಅತ್ಯುತ್ತಮ ಸಾಧನೆ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು.

ಆರೀಫ್ ಖಾನ್ ದಾಖಲೆ: ಎರಡನೇ ರನ್‌ನಲ್ಲಿ ಉತ್ತಮ ಪ್ರದರ್ಶನ ನೀಡಿ 1:19.48 ಸಮಯದಲ್ಲಿ 39ನೇ ಸ್ಥಾನಕ್ಕೆ




ಏರಿದರು. ಎರಡೂ ರನ್‌ಗಳ ಒಟ್ಟು ಸಮಯ 2:41.60 ಆಗಿದೆ. ಈ ಹಿಂದೆ 1988ರ ಕ್ಯಾಲ್ಗರಿ ಶೀತಕಾಲಿನ ಒಲಿಂಪಿಕ್‌ನಲ್ಲಿ ಕಿಶೋರ್ ರತ್ನ ರೈ 2:52.21 ಸಮಯದೊಂದಿಗೆ 49ನೇ ಸ್ಥಾನ ಪಡೆದಿದ್ದು, ಅದುವರೆಗೂ ಭಾರತೀಯ ಪುರುಷರ ಅತ್ಯುತ್ತಮ ಸಾಧನೆಯಾಗಿತ್ತು. ಮಹಿಳಾ ವಿಭಾಗದಲ್ಲಿ ಶೈಲಜಾ ಕುಮಾರ್ 1988ರ ಕ್ಯಾಲ್ಗರಿಯಲ್ಲಿ 28ನೇ ಸ್ಥಾನ ಪಡೆದಿದ್ದು ಭಾರತದ ಅತ್ಯುತ್ತಮ ಸ್ಲಾಲೋಮ್ ಫಲಿತಾಂಶವಾಗಿದೆ. ಸ್ಪರ್ಧೆಯಲ್ಲಿ ಸ್ವಿಟ್ಜರ್‌ಲ್ಯಾಂಡ್‌ನ ಲೋಕ್ ಮಿಲ್ಲಾರ್ಡ್ 1:53.61 ಸಮಯದೊಂದಿಗೆ ಚಿನ್ನ ಗೆದ್ದರು. ಆಸ್ಟ್ರಿಯಾದ ಫ್ಯಾಬಿಯೋ ಸ್ಟ್ರೈನ್ ಬೆಳ್ಳಿ, ನಾರ್ವೆಯ ಹೆನ್ರಿಕ್ ಕ್ರಿಸ್ಟೋಫರ್‌ಸೆನ್ ಕಂಚು ಪಡೆದರು. ಸ್ಲಾಲಂ ಆಲ್ಪೈನ್ ಸ್ಕೀಯಿಂಗ್‌ನ ವೇಗ ಮತ್ತು ತಾಂತ್ರಿಕತೆಯ ಸಂಯೋಜನೆಯ ಸ್ಪರ್ಧೆಯಾಗಿದ್ದು, ಎರಡು ರನ್‌ಗಳ ಒಟ್ಟು ಸಮಯವೇ ಅಂತಿಮ ಫಲಿತಾಂಶ ನಿರ್ಧರಿಸುತ್ತದೆ. ಕಡಿಮೆ ಸಮಯ ದಾಖಲಿಸಿದವರೇ ವಿಜೇತರಾಗುತ್ತಾರೆ.

ಟೆನಿಸ್: ಸಹಜಾ ಮುನ್ನಡೆ

ಬೆಂಗಳೂರು: ಕೆಪಿಬಿ ಟ್ರಸ್ಟ್ ಐಟಿಎಫ್ ವುಮೆನ್ಸ್ ಓಪನ್ ಡಬ್ಲ್ಯು100 ಬೆಂಗಳೂರು 2026 ಟೂರ್ನಿಯಲ್ಲಿ ಭಾರತದ ಸಹಜಾ ಯಮಲಪಲ್ಲಿ ಮೂರನೇ ಸೆಟ್‌ನಲ್ಲಿ ದಿಟ್ಟ ಹೋರಾಟದೊಂದಿಗೆ ಸಿಂಗಲ್ಸ್ 16 ರ ಸುತ್ತಿಗೇರಿದರು.

ಕೊರಿಯಾದ ದಯೆಯೋನ್ ಬ್ಯಾಕ್ ವಿರುದ್ಧ ಮೊದಲ ಸೆಟ್‌ನಲ್ಲಿ ಆತ್ಮವಿಶ್ವಾಸದಿಂದ ಆಟ ಆರಂಭಿಸಿದ ಸಹಜಾ, ಬಲಿಷ್ಠ ಬೇಸ್‌ಲೈನ್ ಶಾಟ್‌ಗಳು ಮತ್ತು ನೆಟ್ ಬಳಿಯ ಚುರುಕು ಚಲನೆಯಿಂದ ಪಂದ್ಯವನ್ನು ನಿಯಂತ್ರಿಸಿದರು. ಮೊದಲ ಸೆಟ್ ಅನ್ನು 6-2ರಿಂದ ಸುಲಭವಾಗಿ ಗೆದ್ದರು. ಆದರೆ ಎರಡನೇ ಸೆಟ್‌ನಲ್ಲಿ ಅನಾವಶ್ಯಕ ದೋಷಗಳು ಹೆಚ್ಚಾಗಿ, ಲಯ ತಪ್ಪಿದ ಸಹಜಾ 1-6ರಿಂದ ಸೆಟ್ ಕಳೆದುಕೊಂಡರು. ತೀರ್ಮಾನಾತ್ಮಕ ಮೂರನೇ ಸೆಟ್‌ನಲ್ಲಿ 2-2 ಸಮಬಲದ ನಂತರ ಗೇಮ್‌ಗಳ ಸರಣಿಯನ್ನು ಗೆದ್ದು 6-2, 1-6, 6-2 ಅಂತರದಿಂದ ಜಯ ಸಾಧಿಸಿ ಮುಂದಿನ ಸುತ್ತಿಗೆ ಮುನ್ನಡೆದರು.

ಡಬಲ್ಸ್ ವಿಭಾಗದಲ್ಲಿ ಮೂರನೇ ಸೀಡ್ ಅಂಕಿತಾ ರೈನಾ ಮತ್ತು ಇಂಡೋನೇಷ್ಯಾದ ಪ್ರಿಸ್ಕಾ ಮಡೇಲಿನ್ ನುಗ್ರೊಹೋ ಜೋಡಿ 6-4, 6-1 ಅಂತರದಿಂದ ಪೌಲ್ಯಾಂಡ್‌ನ ಜುಜಾನಾ ಪಾವ್ಲಿಕೋವ್ ಹಾಗೂ ಭಾರತದ ವಸಂತಿ ಶಿಂಡೆ ವಿರುದ್ಧ ಭರ್ಜರಿ ಜಯ ದಾಖಲಿಸಿತು. ಮೊದಲ ಸೆಟ್‌ನಲ್ಲಿ 5-4 ಮುನ್ನಡೆಯಲ್ಲಿದ್ದಾಗ ರೈನಾ ತೀವ್ರ ರಿಟರ್ನ್‌ಗಳ ಮೂಲಕ ಸರ್ವ್ ಬ್ರೇಕ್ ಮಾಡಿ ಸೆಟ್ ತಮ್ಮದಾಗಿಸಿಕೊಂಡರು. ಎರಡನೇ ಸೆಟ್‌ನಲ್ಲಿ ಆರಂಭದಲ್ಲೇ ಬ್ರೇಕ್ ಸಾಧಿಸಿದ ಜೋಡಿ



ಆತ್ಮವಿಶ್ವಾಸದಿಂದ ಆಟ ಮುಂದುವರಿಸಿ ಸುಲಭ ಜಯ ಸಾಧಿಸಿತು.

ಇತರೆ ಸಿಂಗಲ್ಸ್ ಪಂದ್ಯಗಳಲ್ಲಿ ವೈಷ್ಣವಿ ಅಡ್ಕರ್ 6-1, 7-6 ಅಂತರದಿಂದ ಶ್ರುತಿ ಅಹ್ಲಾವತ್ ಅವರನ್ನು ಸೋಲಿಸಿದರು. ಎಂಟನೇ ಸೀಡ್ ಮೈ ಹೋಂಟಾಮಾ 6-2, 6-1ರಿಂದ ಡಿಲೆಟ್ಟಾ ಚೆರುಬಿನಿ ವಿರುದ್ಧ ಜಯ ಸಾಧಿಸಿದರು. ಎರಿಕಾ ಆಂಡ್ರೀವಾ 7-6(12), 1-0 ಮುನ್ನಡೆಯಲ್ಲಿದ್ದಾಗ ನಿಕೋಲ್ ಫೊಸ್ಸಾ ಹುವೆರ್ಗೋ ನಿವೃತ್ತಿಯಾಗಿದ್ದರಿಂದ ಮುಂದಿನ ಸುತ್ತಿಗೆ ಪ್ರವೇಶಿಸಿದರು.

ರಣಜಿ: ಕರ್ನಾಟಕ ಬೃಹತ್ ಮುನ್ನಡೆ

ಲಖನೌ: ಪೇರಿಸಲಾದ ಮೊತ್ತವನ್ನು ದಾಖಲಿಸಿದ ನಂತರ ಫೈನಲ್‌ನತ್ತ ನಡೆದು ಹೋಗುತ್ತಿರುವ ಕರ್ನಾಟಕ ತಂಡವು ಮೂರನೇ ದಿನವೂ ಉತ್ತರಾಖಂಡ ತಂಡವನ್ನು ಪರೀಕ್ಷಿಸಿತು.

ಎರಡು ದಿನಕ್ಕೂ ಹೆಚ್ಚು ಬರೀ ಫೀಲ್ಡಿಂಗ್ ಮಾಡಿ ಸುಸ್ತಾಗಿರುವ ಉತ್ತರಾಖಂಡ ತಂಡದ ಆಟಗಾರರು ಬ್ಯಾಟಿಂಗ್‌ನಲ್ಲಿ ರನ್ ಗಳಿಸಲು ಪರದಾಟ ನಡೆಸಿದಂತೆ ಭಾಸವಾಗಿತ್ತು. ಬರೋಬ್ಬರಿ 736 ರನ್ ಗಳಿಸಿ ಮೈದಾನದಲ್ಲಿ ಮೆರೆದಿರುವ ಪಡಿಕ್ಕಲ್ ಪಡೆ ಎದುರಾಳಿಗಳು 149 ರನ್ ಗಳಿಸುವಷ್ಟರಲ್ಲಿ 5 ವಿಕೆಟ್ ಪಡೆದು ದೊಡ್ಡ ಮುನ್ನಡೆ ಸಾಧಿಸುವತ್ತ ಹೊರಟಿದೆ. ಮೊದಲ ಇನ್ನಿಂಗ್ಸ್ ಮುನ್ನಡೆಗಾಗಿ ಕರ್ನಾಟಕ ಐದು ವಿಕೆಟ್ ಪಡೆಯಬೇಕಿದೆ. 587 ರನ್‌ಗಳ ದೊಡ್ಡ ಮುನ್ನಡೆ ಸಾಧಿಸಿದೆ.

ಉತ್ತರಾಖಂಡ್ ಬಳಿ ಉತ್ತರವಿಲ್ಲ: ಪಡಿಕ್ಕಲ್ ದ್ವಿಶತಕ, ರಾಹುಲ್ ಮತ್ತು ಸ್ಮರಣ್ ರವಿಚಂದ್ರನ್ ಅವರ ಶತಕದ ನೆರವಿನಿಂದ 194.4 ಓವರ್‌ಗಳವರೆಗೆ ಬ್ಯಾಟಿಂಗ್ ಮಾಡಿರುವ ಕರ್ನಾಟಕ




ತಂಡವು 736 ಗಳಿಸಿತು. ಅಬ್ಬಾ! ಕೊನೆಗೂ ಪತನಗೊಂಡಿತು. ಈಗ ಬ್ಯಾಟಿಂಗ್ ಮಾಡಬಹುದೆಂಬ ಆಲೋಚನೆಯೊಂದಿಗೆ ಬಂದ ಉತ್ತರಾಖಂಡಕ್ಕೆ ಆರಂಭದಲ್ಲೇ ಆಘಾತ ಎದುರಾಯಿತು. ಭರವಸೆಯ ಬ್ಯಾಟಿಗರೆಲ್ಲರೂ ಕೈಕೊಟ್ಟರು. ಮಧ್ಯಮ ಕ್ರಮಾಂಕದಲ್ಲಿ ರಾಜೇಶ್ 52 ರನ್ ಗಳಿಸಿದ್ದು 150ರ ಆಸುಪಾಸಿನ ಸ್ಕೋರ್‌ನತ್ತ ಸಾಗಿದೆ ಉತ್ತರಾಖಂಡ. ಕರ್ನಾಟಕ ಪರ ವಿದ್ಯಾಧರ ಪಾಟೀಲ್ 2 ವಿಕೆಟ್, ಕೃಷ್ಣ ವೈಶಾಖ್, ಗೋಪಾಲ್ ತಲಾ ಒಂದು ವಿಕೆಟ್ ಪಡೆದುಕೊಂಡರು.

ಗೆಲುವಿನ ಹಾದಿಯಲ್ಲಿ ಜಮ್ಮು-ಕಾಶ್ಮೀರ: ಶಮ್ಮಿ ಅವರ ಕರಾರುವಾಕ್ ಬೌಲಿಂಗ್ ದಾಳಿಯ ನೆರವಿನಿಂದ ಮೊದಲ ಇನ್ನಿಂಗ್ಸ್‌ನಲ್ಲಿ ಬಂಗಾಳ ತಂಡ ಮುನ್ನಡೆ ಸಾಧಿಸಿದ್ದರೂ ಬ್ಯಾಟಿಂಗ್‌ನಲ್ಲಿ ಭಾರೀ ಹಿನ್ನಡೆಯೊಂದಿಗೆ ತತ್ತರಿಸಿದ್ದು, ಜಮ್ಮು-ಕಾಶ್ಮೀರ ಗೆಲುವಿನತ್ತ ಸಾಗಿದೆ. ಎರಡನೇ ಇನ್ನಿಂಗ್ಸ್‌ನಲ್ಲಿ 99ಕ್ಕೆ ಬಂಗಾಳ ತಂಡವನ್ನು ಆಲೌಟ್ ಮಾಡಿರುವ ಕಾಶ್ಮೀರ, 126 ರನ್ ಗುರಿ ಬೆನ್ನತ್ತುತ್ತಿದೆ. ಈಗಾಗಲೇ 43 ರನ್ ಗಳಿಸಿದೆ. ಇನ್ನೂ 83 ರನ್ ಮಾತ್ರ ಗಳಿಸಬೇಕಿದೆ. ಬಂಗಾಳ 9 ವಿಕೆಟ್ ಕಿತ್ತಬೇಕಿದೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5899

ಎಡದಿಂದ ಬಲಕ್ಕೆ
2.ಸೂಕ್ಷ್ಮವಾಗಿ ಅವಲೋಕಿಸುವ ವಿವೇಕಶಾಲಿ (5)
4.ಇದು ಶಬ್ದ ಜೋಡಣೆಯ ಆಟ (4)
6.ನಮಸ್ಕರಿಸಲು ಯೋಗ್ಯನಾದವನು (2)
7.ಔಷಧ ಸೇವಿಸುವ ಕ್ರಮವಿದು (4)
8.ಮೂವತ್ತು ದಿನಗಳ ಒಂದು ಘಟಕ (2)
11.ಸಂಕಟದಿಂದ ಈ ಸೇತುವೆಯನ್ನು ಉಲ್ಟಾ ದಾಟುತ್ತಿದ್ದೇವೆ (2)
13.ಗ್ರಂಥಗಳಲ್ಲಿನ ಅಶುದ್ಧ ಬರವಣಿಗೆ (4)
14.ಮುಂದಿಗೆ ಕಂಡ ಚುರುಕಾಗಿಲ್ಲದುದು (2)
15. ಸರಕಾರ ತೋರುತ್ತಿರುವ ಸಹಾಯ (4)
17. ಕಲ-ನಾಕ ಒಳಗೊಂಡ ಸುವರ್ಣಗಿರಿ (5)

ಮೇಲಿನಿಂದ ಕೆಳಕ್ಕೆ
1.ಚೆಲುವು-ಸೊಬಗಿನಿಂದ ಕೂಡಿದ್ದು (2)
2.ಒಂದು ನಿರ್ದಿಷ್ಟ ರೀತಿಯ ವಸ್ತು-ಕೃತ್ಯ (2)
3.ಗೌರವಾನ್ವಿತ ವ್ಯಕ್ತಿ ತಲೆಕೆಳಗಾಗಿದ್ದಾನೆ (4)
4.ಪರ್ಯಟನ ಮಾಡುವ ಸನ್ಯಾಸಿ (5)
5.ದಂಗೆ ಏಳುವ ಸ್ವಭಾವದವನು (4)
9. ಸರದ ನಡುವೆ ಅಡಗಿದ ಯುದ್ಧಭೂಮಿ (5)
10.ಇದು ಬಳ್ಳಿಗಳಿಂದಾದ ಮಂಟಪ (4)
12.ಪತ್ರಿಕೆಯ ಮುಖ್ಯ ಸುದ್ದಿವರಿಷ್ಕಾರಕ (4)
15.ಎಷ್ಟನೇ ಪಾಳಿ (2)
16.ದುರ್ಗೆ-ಪಾರ್ವತಿಯ ಹೆಸರು (2)

5898 ಉತ್ತರ

ಎಡದಿಂದ ಬಲಕ್ಕೆ:
2.ಸರಸಿಜ 5.ಚಕಾರ
6.ಲಗೋರಿ 7.ಪಡಿಕಟ್ಟು
9.ಕಚ್ಚು 11.ಶುಭ
12.ಸಹಜಾತ 16.ರುದಿತ
17.ಕೋಕಿಲ 18.ಗಿರಿಸುತೆ

ಮೇಲಿನಿಂದ ಕೆಳಕ್ಕೆ :
1.ಸುಚರಿತ 2.ಸರ 3.ಸಿಗಡಿ
4.ಬಾಲಬಿಚ್ಚು 8.ಶುನಕ
10.ಕಲಹ 12.ಭರತಜ್ಞ
13.ಬಾರುಕೋಲು
15.ಜಾಲರಿ 17.ಲತೆ

ಫ್ರಾಂಚೈಸಿ ಮಾದರಿಯ ಕೂಟದ ಬಿಡ್ಡಿಂಗ್ ಸಂಪನ್ನ | ಕೃಥಾರ್ಥ್ ದುಬಾರಿ ಶೂಟರ್

ಕರ್ನಾಟಕ ಶೂಟಿಂಗ್ ಲೀಗ್‌ಗೆ ಕಣ ಸಿದ್ಧ

ಬೆಂಗಳೂರು: ಗುರಿ ಬೇಧಿಸಲೆಂದು ಗನ್ನಿನ ಟ್ರಿಗರ್ ಹಿಡಿದು ಅವಕಾಶಕ್ಕಾಗಿ ಕಾದು ಕೂತಿರುವ ರಾಜ್ಯದ ವೃತ್ತಿಪರ ಶೂಟರ್‌ಗಳಿಗೆ ಕರ್ನಾಟಕ ಶೂಟಿಂಗ್ ಸಂಸ್ಥೆಯು ಸಾಧನೆಗೆ ಅಡಿಪಾಯ ಹಾಕಿಕೊಳ್ಳುವಂತಹ ಕೂಟವೊಂದನ್ನು ನಡೆಸಲು ಸಜ್ಜಾಗಿದೆ.



ಕೃಥಾರ್ಥ ದೇವಾಂಗ್ ಸವ್ಯಸಾಚಿ

ಶೂಟಿಂಗ್ ಪ್ರಿಯರನ್ನು ರಂಜಿಸುವುದಕ್ಕೆ ಮತ್ತು ಶೂಟರ್‌ಗಳಿಗೊಂದು ಮಹತ್ವದ ಅವಕಾಶ ಕಲ್ಪಿಸುವಂತೆ ಶೂಟಿಂಗ್ ಲೀಗ್ ಆಫ್ ಕರ್ನಾಟಕ ಹೆಸರನಲ್ಲಿ ಫ್ರಾಂಚೈಸಿ ಮಾದರಿಯ ಕೂಟವೊಂದನ್ನು ಆಯೋಜಿಸಲಿದೆ.

ಫೆಬ್ರವರಿ ತಿಂಗಳ ಕೊನೆಯ ದಿನ ಮತ್ತು ಮಾರ್ಚ್ ತಿಂಗಳ ಮೊದಲನೇ ದಿನ ಈ ಕೂಟ ನಡೆಯಲಿದ್ದು, ಮಂಗಳವಾದಂದು ನಗರದ ಖಾಸಗಿ ಹೋಟೆಲ್ ಒಂದರಲ್ಲಿ ಎಂಟು ತಂಡಗಳ ಮಧ್ಯೆ ಹರಾಜು ಪ್ರಕ್ರಿಯೆ ನಡೆಯಿತು. ತುಂಬ ವಿಸ್ತಾರವಾಗಿ ನಡೆದ ಈ ಹರಾಜಿನಲ್ಲಿ 8 ಫ್ರಾಂಚೈಸಿಗಳು ತಲಾ 11ರಂತೆ ಒಟ್ಟು 88 ಶೂಟರ್‌ಗಳನ್ನು ಖರೀದಿಸಿ ಸಮರಕ್ಕೆ ಸಜ್ಜಾದವು. ಕನ್ನಡ ನಾಡಿನ ಚಿರಪರಿಚಿತ ಶೂಟರ್‌ಗಳಲ್ಲಿ ಒಬ್ಬರಾದ ಕೃಥಾರ್ಥ ದೇವಾಂಗ್ ಸವ್ಯಾಸಾಚಿ, ಫ್ರಾಂಚೈಸಿಗಳ ನಡುವೆ ತೀವ್ರ



ಪೈಪೋಟಿ ಹುಟ್ಟಿಸಿ 44 ಲಕ್ಷ ರೂ.ಗೆ ಬಿಕರಿಯಾಗಿ ದುಬಾರಿ ಶೂಟರ್ ಎನಿಸಿಕೊಂಡರು. ಅನುಷ್ಕಾ ತೋಕುರ್, ಮಮಿತ್ ಗೌಡ್ ಕೂಡ ಬಿಡ್ಡಿಂಗ್‌ನಲ್ಲಿ ಆಕರ್ಷಣೆಯ ಕೇಂದ್ರ ಬಿಂದುವಾಗಿದ್ದರು.

ಏನಿದು ಲೀಗ್?: ಶೂಟಿಂಗ್ ಲೀಗ್ ಆಫ್ ಕರ್ನಾಟಕ ಒಂದು ಫ್ರಾಂಚೈಸಿ ಮಾದರಿಯ ಶೂಟಿಂಗ್ ಕೂಟ. ಬೆಂಗಳೂರು, ಹುಬ್ಬಳ್ಳಿ, ಮಂಗಳೂರು ಸೇರಿದಂತೆ ಒಟ್ಟು 8 ಫ್ರಾಂಚೈಸಿಗಳ ನಡುವೆ ನಡೆಯುವ ಆಟ. ಒಂದು ತಂಡದಲ್ಲಿ 11 ಶೂಟರ್‌ಗಳು. ಕೂಟದಲ್ಲಿ ಒಟ್ಟು 11 ಇವೆಂಟ್‌ಗಳು. ಸದ್ಯಕ್ಕೆ 4ಲಕ್ಷ ಬಹುಮಾನ. ಶೂಟರ್‌ಗಳ ವೈಯಕ್ತಿಕ ಗೆಲುವುಗಳಿಗೆ ಪದಕ ಸಮೇತ ಬಹುಮಾನವೂ ಸಿಗಲಿದೆ.



ವಿಜೇತರು ಯಾರು?: ಹನ್ನೊಂದಕ್ಕೆ ಹನ್ನೊಂದೂ ಸಿಂಗಲ್ಸ್ ಸ್ಪರ್ಧೆಯಾಗಿವೆ. ಎಲ್ಲಾ ಸ್ಪಧೆಗಳಲ್ಲಿ ಅರ್ಹತಾ ಸುತ್ತು ಮತ್ತು ಫೈನಲ್‌ಗಳು ನಡೆಯುತ್ತವೆ. 28ಕ್ಕೆ ನಡೆಯುವ ಅರ್ಹತಾ ಸುತ್ತಿನಲ್ಲಿ ತಂಡದ ಒಬ್ಬರಂತೆ ನಿರ್ದಿಷ್ಟ ವಿಭಾಗಕ್ಕೆ ಆಯ್ಕೆಯಾದವರು ಅಥವಾ ಫ್ರಾಂಚೈಸಿ ಬಯಸಿದರೆ ಬದಲಾಯಿಸಿದ ಶೂಟರ್‌ಗಳು 15 ಬಾರಿ ಶೂಟ್ ಮಾಡುತ್ತಾರೆ. ಹೆಚ್ಚು ಅಂಕ ಗಳಿಸಿದ ಶೂಟರ್‌ಗಳು ಫೈನಲ್‌ಗೆ ಮುನ್ನಡೆಯುತ್ತಾರೆ. ಅಲ್ಲಿ ಕೂಡ 15 ಶಾಟ್‌ಗಳು ಸಿಗುತ್ತವೆ. ಗೆದ್ದವರಿ ಒಂದು ಅಂಕಿ ತಮ್ಮ ತಂಡಕ್ಕೆ ನೀಡುತ್ತಾರೆ. ಹೀಗೆ 11 ಸ್ಪರ್ಧೆಗಳನ್ನು ಲೆಕ್ಕಿಸಿದಾಗ ಹೆಚ್ಚು ಅಂಕ ಬಾರಿಸಿದ ತಂಡವೇ ಲೀಗ್‌ನ ಚಾಂಪಿಯನ್.

ಟಾಪ್ 5 ದುಬಾರಿ ಶೂಟರ್‌ಗಳು

ಶೂಟರ್	ತಂಡ	ಮೊತ್ತ	ವಿಭಾಗ
ಕೃಥಾರ್ಥ ದೇವಾಂಗ್ ಸವ್ಯಸಾಚಿ	ಬೆಂಗಳೂರು ಬ್ರಿಗೇಡ್	44 ಲಕ್ಷ ರೂ.	ಸ್ಕೀಟ್
ಅನುಷ್ಕಾ ಎಚ್ ತೋಕುರ್	ಬೆಂಗಳೂರು ಬ್ರಿಗೇಡ್	43 ಲಕ್ಷ ರೂ.	50 ಮೀ. ರೈಫಲ್ ಪ್ರೋನ್
ಮಮಿತ್ ಗೌಡ	ಮಂಗಳೂರು ರಾಪ್ಟರ್ಸ್	42 ಲಕ್ಷ ರೂ.	25 ಮೀ. ಏರ್ ಪಿಸ್ತೂಲ್
ನವಾಬ್ಜಾದಾ ಎಂ.ಡಿ.	ಹುಬ್ಬಳ್ಳಿ ಸ್ಟಾರ್ಸ್	41 ಲಕ್ಷ ರೂ.	ಸ್ಕೀಟ್
ಶ್ರವಣ್ ಎಂ ಶಶಿಧರ್	ಟಾಪ್ ಗನ್ಸ್	35 ಲಕ್ಷ ರೂ.	25 ಮೀ. ಏರ್ ಪಿಸ್ತೂಲ್

ಸ್ಪರ್ಧೆಗಾಳ್ಯಾವವು?

- 10 ಮೀಟರ್ ಏರ್ ಪಿಸ್ತೂಲ್ (ಪುರುಷ ಮತ್ತು ಮಹಿಳೆಯರ ವಿಭಾಗಗಳಲ್ಲಿ)
- 10 ಮೀಟರ್ ಏರ್ ರೈಫಲ್ (ಉಭಯ ವಿಭಾಗಗಳಲ್ಲಿ)
- 25 ಮೀಟರ್ ಸ್ಪೋರ್ಟ್ಸ್ ಪಿಸ್ತೂಲ್ (ಉಭಯ ವಿಭಾಗಗಳಲ್ಲಿ)
- 50 ಮೀಟರ್ ರೈಫಲ್ ಪ್ರೋನ್ (ಒಬ್ಬರೆ)
- ಟ್ರ್ಯಾಪ್(ಕೆಟಗೆರಿಯಲ್ಲಿ ಒಟ್ಟು 2 ಸ್ಪರ್ಧೆ)

ಫ್ರಾಂಚೈಸಿಗಳಾವವು?

ಕ್ಯಾಲಿಬರ್ ಕ್ಯಾಪಿಟಲ್ಸ್, ಟ್ರಿಗರ್ ಟ್ಯಾಕ್ಷನ್, ಬೆಂಗಳೂರು ಬ್ರಿಗೇಡ್, ರೆಡ್‌ರಮ್, ಮಂಗಳೂರು ರಾಪ್ಟರ್ಸ್, ಟಾಪ್ ಗನ್ಸ್, ಸ್ನೈಪರ್ ಸ್ಕ್ವಾಡ್ ಹಾಗೂ ಹುಬ್ಬಳ್ಳಿ ಶೂಟಿಂಗ್ ಸ್ಟಾರ್.

ಬಿಡ್ಡಿಂಗ್ ನಡೆದಿದ್ದು ಹೇಗೆ?

ಸ್ಪರ್ಧೆಗಾಗಿ ಒಟ್ಟು 136 ಶೂಟರ್‌ಗಳು ನೋಂದಾಯಿಸಿಕೊಂಡಿದ್ದರು. ಇದರಲ್ಲಿ 88 ಶೂಟರ್‌ಗಳು ಫ್ರಾಂಚೈಸಿ ಸೇರಿಕೊಂಡರು. ಫ್ರಾಂಚೈಸಿಗಳಿಗೆ ತಮ್ಮ ತಂಡ ಕಟ್ಟಿಕೊಳ್ಳಲು 1.75 ಕೋಟಿ ರೂ. ದಾಟದಂತೆ ಮಿತಿ ನೀಡಲಾಗಿತ್ತು. ಈ ಮಿತಿ ದಾಟಿದರೆ, ಲಕ್ಷ ರೂ.ಗೊಂದು ಅಂಕ ಕಡಿತಗೊಳಿಸುವ ನಿಯಮ ಈ ಕೂಟಕ್ಕಿದೆ. ಟಾಪ್ ಗನ್ಸ್ ಎಂಬುವ ಫ್ರಾಂಚೈಸಿ ಬಿಡ್ಡಿಂಗ್‌ನಲ್ಲಿ 1.84 ಕೋಟಿ ರೂ. ಖರ್ಚು ಮಾಡಿದೆ. ಈ ತಂಡ ಈಗ 9 ಅಂಕದ ಹಿನ್ನಡೆ ಹೊಂದಿದೆ.

ಕಿರುಸುದ್ದಿ

ಬಾಲಕಿಗೆ ಲೈಂಗಿಕ ಕಿರುಕುಳ: ಆರೋಪಿಯ ಬಂಧನ

ಕಾಸರಗೋಡು: ಸೈಕಲ್‌ನಲ್ಲಿ ತೆರಳುತ್ತಿದ್ದ ಹತ್ತರ ಹರೆಯದ ಬಾಲಕಿಗೆ ಲೈಂಗಿಕ ಕಿರುಕುಳ ನೀಡಲೆತ್ನಿಸಿದ ಪ್ರಕರಣದ ಆರೋಪಿಯನ್ನು ಕಾಸರಗೋಡು ಮಹಿಳಾ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಕೆ.ಅಜಿತ್ ಮತ್ತು ಜಿಲ್ಲಾ ಕ್ರೈ ಸ್ಕ್ವಾಡ್ ನೇತೃತ್ವದ ತಂಡ ಬಂಧಿಸಿದೆ. ಪಯ್ಯನ್ನೂರು ವೆಳ್ಳೂರು ಮೂಪನ್ನಡಗತ್ ವೀಟಿಲ್‌ನ ಫಿರ್ದೋಸ್ (39) ಬಂಧಿತ ಆರೋಪಿ. ಬಂಧಿತ ಆರೋಪಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲಾಗಿದ್ದು, ನ್ಯಾಯಾಂಗ ಬಂಧನದಲ್ಲಿರಿಸಲಾಗಿದೆ. ಬಾಲಕಿಗೆ ಕಿರುಕುಳ ನೀಡಲೆತ್ನಿಸಿದ ವ್ಯಕ್ತಿ ಯಾರೆಂದು ಗುರುತು ಪತ್ತೆಹಚ್ಚಲು ಪೊಲೀಸರಿಗೆ ಸಾಧ್ಯವಾಗಿರಲಿಲ್ಲ. ಬಳಿಕ ಘಟನೆ ನಡೆದ ಪರಿಸರದ ಸಿಸಿಟಿವಿ ದೃಶ್ಯಗಳನ್ನು ಪೊಲೀಸರು ಪರಿಶೀಲಿಸಿದಾಗ ಆರೋಪಿಯ ಗುರುತು ಹಚ್ಚಲು ಸಾಧ್ಯವಾಯಿತು. ಬಂಧಿತ ಆರೋಪಿಯ ವಿರುದ್ಧ ಇದೇ ರೀತಿಯ ಪ್ರಕರಣಗಳು ಹೊಸದುರ್ಗ ಮತ್ತು ಪೆರಿಂಜಿಯೋ ಪೊಲೀಸ್ ಠಾಣೆಗಳಲ್ಲಿ ಇವೆಯೆಂದು ಪೊಲೀಸರು ತಿಳಿಸಿದ್ದಾರೆ. ಕಾಸರಗೋಡು ಎಎಸ್‌ಐ ಅಚ್ಯುತ್ ಅಶೋಕ್‌ರ ಮೇಲ್ನೋಟದಲ್ಲಿ ಈ ಪ್ರಕರಣದ ತನಿಖೆ ನಡೆಸಲಾಗಿದೆ.

ಆಹಾರ ನೀಡಲು ತಡವಾಯಿತೆಂದು ಆರೋಪಿಸಿ ನೌಕರನಿಗೆ ಹಲ್ಲೆ: ಮೂವರ ವಿರುದ್ಧ ಕೇಸು

ಕಾಸರಗೋಡು: ಆಹಾರ ನೀಡಲು ತಡವಾಯಿತು ಹಾಗೂ ಆಹಾರ ಕಡಿಮೆಯಾಯಿತೆಂದು ಆರೋಪಿಸಿ ಹೊಟೇಲ್ ನೌಕರನಿಗೆ ಹಲ್ಲೆಗೈದು ಹೊಟೇಲ್‌ನ ಗಾಜು ಪುಡಿಗೈದ ಘಟನೆಗೆ ಸಂಬಂಧಿಸಿ ಮೂವರ ವಿರುದ್ಧ ಪೊಲೀಸರು ಕೇಸು ದಾಖಲಿಸಿಕೊಂಡಿದ್ದಾರೆ. ನಾಯನ್ಮಾರಮೂಲೆ ಪಡಿಞಾರೆಮೂಲೆಯ ಪಿ.ಉಮ್ಮರ್ (42)ರವರು ನೀಡಿದ ದೂರಿನಂತೆ ಮುಹಮ್ಮದಾಲಿ, ಅಬ್ದುಲ್ ಫಿರೋಜ್, ನೌಶಾದ್ ಎಂಬವರ ವಿರುದ್ಧ ಕಾಸರಗೋಡು ನಗರ ಠಾಣೆ ಪೊಲೀಸರು ಕೇಸು ದಾಖಲಿಸಿಕೊಂಡಿದ್ದಾರೆ. ಕಾಸರಗೋಡು ಕೆಪಿಆರ್ ರಾವ್ ರಸ್ತೆಯ ಮಲಬಾರ್ ಫಿಶ್ ಪಾಯಿಂಟ್ ಎಂಬ ಹೊಟೇಲ್‌ನಲ್ಲಿ ಭಾನುವಾರ ಘಟನೆ ನಡೆದಿದೆ. ಆಹಾರ ನೀಡಲು ತಡವಾಯಿತು ಎಂದು ಆರೋಪಿಸಿ ನೌಕರರಾದ ಉಮ್ಮರ್‌ರನ್ನು ತಡೆದು ನಿಲ್ಲಿಸಿ ನೀರು ತುಂಬಿಸಿಟ್ಟಿದ್ದ ಸ್ಟೀಲ್‌ನ ಜಗ್‌ನಿಂದ ಮುಖಕ್ಕೆ ಹೊಡೆದಿರುವುದಾಗಿ ದೂರಲಾಗಿದೆ. ತಲೆಗೆ ಹೊಡೆಯಲು ಯತ್ನಿಸಿದಾಗ ಆದರಿಂದ ತಪ್ಪಿಸಿಕೊಂಡರು. ಮತ್ತಿಬ್ಬರು ಮುಖಕ್ಕೆ ಹಾಗೂ ಬೆನ್ನಿಗೆ ಹೊಡೆದಿರುವುದಾಗಿಯೂ ದೂರಿನಲ್ಲಿ ತಿಳಿಸಲಾಗಿದೆ. ಈ ಮಧ್ಯೆ ಆರೋಪಿಗಳ ಪೈಕಿ ಓರ್ವ ಹೊಟೇಲ್‌ನ ಮುಂಭಾಗದ ಗಾಜನ್ನು ಪುಡಿಗೈದಿರುವುದಾಗಿಯೂ ಈ ವೇಳೆ ಸಮೀಪದಲ್ಲಿ ನಡೆದುಕೊಂಡು ಹೋಗುತ್ತಿದ್ದ ಬಾಲಕಿ ಗಾಯಗೊಂಡಿರುವುದಾಗಿಯೂ ದೂರಿನಲ್ಲಿ ತಿಳಿಸಲಾಗಿದೆ.

ಬೈಕ್, ಕಾರಿಗೆ ಬಸ್ ಡಿಕ್ಕಿ

ಬೆಳ್ತಂಗಡಿ: ಧರ್ಮಸ್ಥಳ ಪಾಂಗಳ ತಿರುವಿನಲ್ಲಿ ಬೈಕ್ ಹಾಗೂ ಕಾರಿಗೆ ಬಸ್ ಡಿಕ್ಕಿ ಹೊಡೆದು ಬೈಕ್ ಸವಾರ ಗಂಭೀರವಾಗಿ ಗಾಯಗೊಂಡ ಘಟನೆ ಮಂಗಳವಾರ ಸಂಜೆ ಸಂಭವಿಸಿದೆ. ಗಾಯಾಳು ಧರ್ಮಸ್ಥಳ ಗ್ರಾಮದ ಪಾಂಗಳ ನಿವಾಸಿ ನಾಟಿವೈದ್ಯರಾಗಿರುವ ಕರಿಯ ಗೌಡ ಎಂಬವರಾಗಿದ್ದಾರೆ. ಬೈಕ್ ಸವಾರ ಉಜಿರೆಯಿಂದ ಧರ್ಮಸ್ಥಳ ಕಡೆಗೆ ಬರುತ್ತಿದ್ದು ಪಾಂಗಳ ತಿರುವಿನಲ್ಲಿ ಬೈಕ್ ಅನ್ನು ರಸ್ತೆಯ ಬಲಬದಿಗೆ ತೆಗೆದುಕೊಳ್ಳುವ ವೇಳೆ ವೇಗವಾಗಿ ಬಂದ ಬಸ್ ಬೈಕ್‌ಗೆ ಡಿಕ್ಕಿಹೊಡೆದು ಅದನ್ನು ಎಳೆಯುತ್ತಾ ರಸ್ತೆಯ ಪೂರ್ಣ ಬಲಬದಿಗೆ ಮುಂದೆ ಬಂದಿದೆ ಇದೇ ವೇಳೆ ಧರ್ಮಸ್ಥಳದಿಂದ ಉಜಿರೆ ಕಡೆಗೆ ಬರುತ್ತಿದ್ದ ಕಾರಿಗೆ ಬಸ್ ಡಿಕ್ಕಿ ಹೊಡೆದಿದೆ. ಕಾರು ಹಾಗೂ ಬಸ್ ನಡುವೆ ಸಿಲುಕಿದ ಬೈಕ್ ನುಜ್ಜು ಗುಜ್ಜಾಗಿದ್ದು ಬೈಕ್ ಪ್ರಯಾಣಿಕ ಗಂಭೀರವಾಗಿ ಗಾಯಗೊಂಡಿದ್ದಾರೆ ಗಾಯಾಳುವನ್ನು ಕೂಡಲೇ ಮಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಸ್ಥಳಕ್ಕೆ ಬೆಳ್ತಂಗಡಿ ಸಂಚಾರಿ ಠಾಣೆಯ ಪೊಲೀಸರು ಆಗಮಿಸಿ ಪರಿಶೀಲನೆ ನಡೆಸಿದ್ದಾರೆ.

ಅಕ್ರಮ ಮರಳು ಸಾಗಾಟ ಪತ್ತೆ

ಬಂಟ್ವಾಳ: ಇಲ್ಲಿಗೆ ಸಮೀಪದ ಮಚ್ಚಿನ ಗ್ರಾಮದ ಪುಂಚಪಾದೆ ಬಳಿಯ ಪೆರೂರುನಿಂದ ಕುಪ್ಪೆಟ್ಟಿ ಕಡೆಗೆ ಹರಿಯುವ ನೀರಿನ ತೋಡಿನಿಂದ ಪಿಕಪ್ ನಲ್ಲಿ ಅಕ್ರಮವಾಗಿ ಮರಳು ಸಾಗಾಟ ಮಾಡುವುದನ್ನು ಪುಂಜಾಲಕಟ್ಟೆ ಪೊಲೀಸರು ಪತ್ತೆ ಹಚ್ಚಿದ್ದಾರೆ. ಸೋಮವಾರ ರಾತ್ರಿ ಕಾರಿಂಜೇಶ್ವರ ದೇವಳದ ಬಂದೋಬಸ್ತಿನಲ್ಲಿದ್ದ ಪುಂಜಾಲಕಟ್ಟೆ ಠಾಣೆಯ ಎಸ್ ಐ ರಾಜೇಶ್ ಕೆ.ವಿ.ಅವರಿಗೆ ಬಂದ ಮಾಹಿತಿಯನ್ನಾಧರಿಸಿ ಕಾರ್ಯಾಚರಣೆ ನಡೆಸಿ ಪೆರೂರು ಎಂಬಲ್ಲಿ ಮರಳನ್ನು ಕಳವುಗೈದು ಪಿಕ್ ಆಪ್ ವಾಹನದಲ್ಲಿ ಅಕ್ರಮವಾಗಿ ಸಾಗಾಟ ಮಾಡುತ್ತಿರುವುದನ್ನು ಪತ್ತೆ ಹಚ್ಚಿದ್ದಾರೆ, ಪಿಕಪ್ ಚಾಲಕ ಪ್ರವೀಣ್ (38) ಹಾಗೂ ವಾಹನದಲ್ಲಿದ್ದ ವಸಂತ (42), ದಿನೇಶ(48) ಎಂಬವರನ್ನು ವಶಪಡಿಸಿ ವಿಚಾರಿಸಿದಾಗ ತೋಡಿನಿಂದ ಮರಳನ್ನು ಕಳವುಗೈದು ಅಕ್ರಮವಾಗಿ ಸಾಗಾಟ ಮಾಡುತ್ತಿರುವುದರಿಂದ ಮರಳು ತುಂಬಿದ್ದ ಪಿಕ್ ಆಪ್ ವಾಹನ ಸಹಿತ ಸೊತ್ತುಗಳನ್ನು ವಶಪಡಿಸಿರುವ ಪುಂಜಾಲಕಟ್ಟೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ನೂತನ ವಸತಿ ಗೃಹಗಳಿಗೆ ಶಂಕುಸ್ಥಾಪನೆ ನೆರವೇರಿಸಿ ಗೃಹಸಚಿವ ಡಾ. ಜಿ. ಪರಮೇಶ್ವರ್ ಭರವಸೆ

ಪೊಲೀಸ್ ಇಲಾಖೆಗೆ 'ಗೃಹ' ಸೌಲಭ್ಯ



ಮಂಗಳೂರು: ಮಂಗಳೂರಿನಲ್ಲಿ ಎರಡು ಹೊಸ ಪೊಲೀಸ್ ಠಾಣೆಗೆ ಈಗಾಗಲೇ ಪ್ರಸ್ತಾವನೆ ಸಲ್ಲಿಕೆಯಾಗಿದೆ. ಕೇಂದ್ರ ಸರಕಾರದ ಕೆಲವೊಂದು ನಿಯಮಗಳನ್ನು ಅನುಸರಿಸಿ ಹೊಸ ಠಾಣೆಗಳಿಗೆ ಮಂಜೂರಾತಿ ದೊರೆಯಬೇಕಿದೆ. ಮುಂದಿನ ವರ್ಷದೊಳಗೆ ಮಂಗಳೂರು ನಗರಕ್ಕೆ ಸೀಮಿತವಾಗಿ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗೆ ಮತ್ತೆ 100 ಮನೆಗಳನ್ನು ಒದಗಿಸಲಾಗುವುದು ಎಂದು ರಾಜ್ಯ ಗೃಹ ಸಚಿವ ಡಾ. ಜಿ. ಪರಮೇಶ್ವರ್ ತಿಳಿಸಿರು.

ನಗರದ ಪೊಲೀಸ್‌ಲೇನ್‌ನಲ್ಲಿ ಮಂಗಳವಾರ ಮೂಡಬಿದ್ರೆ ಪೊಲೀಸ್ ಠಾಣಾ ಸಿಬ್ಬಂದಿ ನೂತನ ವಸತಿ ಗೃಹಗಳ ಉದ್ಘಾಟನೆ ಹಾಗೂ ಮಂಗಳೂರು ನಗರ ಮತ್ತು ದ.ಕ. ಜಿಲ್ಲಾ ಪೊಲೀಸ್ ಅಧಿಕಾರಿ–ಸಿಬ್ಬಂದಿಯ ನೂತನ ವಸತಿ ಗೃಹಗಳ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ 1.10 ಲಕ್ಷ ಪೊಲೀಸ್ ಅಧಿಕಾರಿ ಸಿಬ್ಬಂದಿ ಇದ್ದು, ಈವರೆಗೆ ಶೇ. 40ರಷ್ಟು ಮಂದಿಗೆ ನೂತನ ವಸತಿ ಗೃಹಗಳ ವ್ಯವಸ್ಥೆ ಮಾಡಲಾಗಿದೆ. ಈ ಮೂಲಕ ಪೊಲೀಸರಲ್ಲಿ ಆತ್ಮಸ್ಥೈರ್ಯ, ನಂಬಿಕೆ, ವಿಶ್ವಾಸ ತುಂಬಿಸುವ ಕೆಲಸವಾಗುತ್ತಿದೆ. 2030ರೊಳಗೆ ಎಲ್ಲರಿಗೂ ವಸತಿಗೃಹಗಳನ್ನು ಒದಗಿಸುವ ನಿಟ್ಟಿನಲ್ಲಿ ಕ್ರಮ ವಹಿಸಲಾಗುವುದು. 2015ರಲ್ಲಿ ಈ ವಸತಿ ಯೋಜನೆಯನ್ನು ಆರಂಭಿಸಲಾಗಿದ್ದು, ಆರಂಭದಲ್ಲಿ ಒಂದು ವಸತಿ ವೆಚ್ಚ 18 ಲಕ್ಷ ರೂ.ಗಳಿದ್ದು ಆದೀಗ 33 ಲಕ್ಷ ರೂ.ಗಳಿಗೆ ಏರಿಕೆಯಾಗಿದೆ ಎಂದರು.

ಡ್ರಗ್ಸ್ ಮುಕ್ತ ಕರ್ನಾಟಕ ಮಾಡುವ ದಿಸೆಯಲ್ಲಿ ಸಾಕಷ್ಟು ಬಿಗ್ರಿ ಕ್ರಮಗಳನ್ನು ಕೈಗೊಳ್ಳಲಾಗಿದೆ. ಮಂಗಳೂರಿನಲ್ಲಿಯೂ ಈ ನಿಟ್ಟಿನಲ್ಲಿ ಸಾಕಷ್ಟು ಕ್ರಮಗಳು ನಡೆಯುತ್ತಿದ್ದು, ಪೊಲೀಸ್ ಅಧಿಕಾರಿಗಳ ಜತೆ ನಡೆಸಲಾದ ಪರಿಶೀಲನೆಯ ಸಂದರ್ಭ ಡ್ರಗ್ಸ್ ಪ್ರಕರಣ, ಪೂರೈಕೆ ಪ್ರಮಾಣ ಸಾಕಷ್ಟು ಕಡಿಮೆಯಾಗಿರುವುದು ಕಂಡುಬಂದಿದೆ. ಈಗಾಗಲೇ ಪೊಲೀಸ್ ಅಧಿಕಾರಿಗಳು ಕಾಲೇಜು ಆಡಳಿತ ಮಂಡಳಿಗಳ ಸಹಕಾರದ ಜತೆಗೆ ಡ್ರಗ್ಸ್ ಸೇವನೆ ಬಗ್ಗೆ ವಿದ್ಯಾರ್ಥಿಗಳ ತಪಾಸಣೆ ಕಾರ್ಯದ ಮೂಲಕ ಜಾಗೃತಿ ಮೂಡಿಸುತ್ತಿದ್ದಾರೆ. ಡ್ರಗ್ಸ್ ನಿಯಂತ್ರಣದಲ್ಲಿ ಪೋಷಕರು ಕೂಡಾ ಮನಸ್ಸು ಮಾಡಿದರೆ ಮಕ್ಕಳನ್ನು ನಿಯಂತ್ರಣದಲ್ಲಿರಿಸಿಕೊಂಡು ಈ ಪಿಡುಗಿನಿಂದ ಸಮಾಜವನ್ನು ಮುಕ್ತಗೊಳಿಸಲು ಸಾಧ್ಯವಾಗಲಿದೆ ಎಂದರು.

ಹಳೆ ಕಟ್ಟಡಗಳ ಬದಲಿಗೆ ಹೊಸ ಪೊಲೀಸ್ ಠಾಣೆ ಕಟ್ಟಡ ನಿರ್ಮಾಣಕ್ಕೆ ಅಗತ್ಯ ಕ್ರಮ ವಹಿಸಲಾಗುವುದು. ಕರಾವಳಿ ಭದ್ರತಾ ಪಡೆಯ 15 ಬೋಟ್‌ಗಳಲ್ಲಿ ಮೂರ್‍ನಾಲ್ಕು ಮಾತ್ರವೇ ಕಾರ್ಯ ನಿರ್ವಹಿಸುತ್ತಿದ್ದು, ಈ ಬಗ್ಗೆಯೂ ಮುಖ್ಯಮಂತ್ರಿ ಗಮನಕ್ಕೆ ತರಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ವೇದವ್ಯಾಸ ಕಾಮತ್, ನಗರದ ಎರಡು ಪೊಲೀಸ್ ಠಾಣೆಗಳು ಬಾಡಿಗೆ ಕಟ್ಟಡದಲ್ಲಿವೆ. ಬಂದರು ಪೊಲೀಸ್ ಠಾಣೆ ಸ್ವಾತಂತ್ರ ಪೂರ್ವದಲ್ಲಿ ನಿರ್ಮಾಣವಾಗಿದ್ದು, ಅದನ್ನು ಹೊಸತಾಗಿ ನಿರ್ಮಾಣ ಮಾಡಬೇಕಾಗಿದೆ. ನಗರ ಭಾಗದ ಜೈಲನ್ನು ಶೀಘ್ರ ಸ್ಥಳಾಂತರಿಸುವ ಮೂಲಕ ಸಮಸ್ಯೆಯನ್ನು ನಿವಾರಿಸಬೇಕು. ಮಂಗಳೂರಿನಲ್ಲಿ ಹೈಕೋರ್ಟ್ ಪೀಠ ನಿರ್ಮಾಣಕ್ಕೆ ಕ್ರಮ ವಹಿಸಬೇಕು ಎಂದರು. ಕರಾವಳಿ ಕಾವಲು ಪಡೆಯನ್ನು ಬಲಗೊಳಿಸುವ ನಿಟ್ಟಿನಲ್ಲಿ ತಾನು ವರದಿಯೊಂದನ್ನು ತಯಾರಿಸಿದ್ದು, ಅದನ್ನು ಶೀಘ್ರವೇ ನೀಡುವುದಾಗಿ ಹೇಳಿದರು.

ವಿವಿಧ ನಿಗಮ, ಮಂಡಳಿಗಳ ಅಧ್ಯಕ್ಷರಾದ ಮಮತಾ ಗಟ್ಟಿ, ಶಾಲೆಟ್ ಪಿಂಟೋ, ಸ್ಟ್ಯಾನಿ ಅಲ್ವಾರಿಸ್, ಎಂ.ಎ. ಗಫೂರ್, ಟಿಎಂ ಶಾಹೀದ್ ತೆಕ್ಕಿಲ್, ಪಶ್ಚಿಮ ವಲಯ ಐಜಿಪಿ ಅಮಿತ್ ಸಿಂಗ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಕುಮಾರ್, ವಿಶೇಷ ಕಾರ್ಯಪಡೆಯ ಐಜಿಪಿ ಪ್ರಕಾಶ್ ಗೌಡ, ಗೃಹ ಇಲಾಖೆಯ ಇಂಜಿನಿಯರ್ ವೀರಭದ್ರಪ್ಪ, ಡಿಸಿಪಿ ರವಿಶಂಕರ್ ಉಪಸ್ಥಿತರಿದ್ದರು.

ಮಂಗಳೂರು ನಗರ ಪೊಲೀಸ್ ಆಯುಕ್ತ ಸುಧೀರ್‌ಕುಮಾರ್ ರೆಡ್ಡಿ ಸ್ವಾಗತಿಸಿದರು. ಡಿಸಿಪಿ ಮಿಥುನ್ ವಂದಿಸಿದರು.

ಜೈಲು ಸ್ಥಳಾಂತರಕ್ಕೆ ಆದ್ಯತೆ

ಮಂಗಳೂರು ನಗರ ಮಧ್ಯ ಭಾಗದಲ್ಲಿರುವ ಜೈಲಿನಿಂದ ಸಾಕಷ್ಟು ಸಮಸ್ಯೆ ಆಗುತ್ತಿರುವ ಬಗ್ಗೆ ಗಮನದಲ್ಲಿದೆ. ಬಜೆಟ್ ಚರ್ಚೆ ವೇಳೆ ಮುಖ್ಯಮಂತ್ರಿಗೆ ನನ್ನ ಪ್ರಥಮ ಬೇಡಿಕೆಯೇ ಮಂಗಳೂರು ಜೈಲು ಸ್ಥಳಾಂತರದ ಬಗ್ಗೆ ಆಗಿತ್ತು. ಮುಡಿಪುವಿನ ನಿರ್ಮಾಣ ಹಂತದಲ್ಲಿರುವ ಜೈಲು ಆವರಣದಲ್ಲಿ ಬ್ಯಾರಕ್‌ಗಳ ನಿರ್ಮಾಣವಾಗಿದ್ದು, ಸುತ್ತಲೂ ಸುಭದ್ರ ಆವರಣ ಗೋಡೆ, ಗೇಟ್ ಹಾಗೂ ಇತರ ಭದ್ರತಾ ವ್ಯವಸ್ಥೆಗಳಿಗೆ ಸುಮಾರು 120 ಕೋಟಿ ರೂ.ಗಳ ಅಗತ್ಯವಿದೆ. ತುರ್ತು ಕಾಮಗಾರಿಗಳನ್ನು ಕೈಗೊಂಡು ನಗರದಿಂದ ಹೊರವಲಯಕ್ಕೆ ಜೈಲು ಸ್ಥಳಾಂತಕ್ಕೆ ಆದ್ಯತೆ ನೀಡಲಾಗುವುದು. ಈ ಬಗ್ಗೆ ಮುಖ್ಯಮಂತ್ರಿಗೆ ಮನವರಿಕೆ ಮಾಡಲಾಗಿದ್ದು, ಹಣ ಒದಗಿಸುವ ವಿಶ್ವಾಸ ಇದೆ ಎಂದು ಗೃಹ ಸಚಿವ ಡಾ. ಪರಮೇಶ್ವರ್ ತಿಳಿಸಿದರು.

20 ಕೋ. ರೂ. ವೆಚ್ಚದಲ್ಲಿ ನಿರ್ಮಾಣ

ಗೃಹ ಸಚಿವ ಡಾ. ಪರಮೇಶ್ವರ್ ಅವರಿಂದ ಉದ್ಘಾಟನೆಗೊಂಡ ಮೂಡಬಿದ್ರೆ ಪೊಲೀಸ್ ಠಾಣಾ ಸಿಬ್ಬಂದಿ ವಸತಿ ಗೃಹ 12 ವಸತಿಗೃಹಗಳನ್ನು ಹೊಂದಿದೆ. ಶಂಕುಸ್ಥಾಪನೆ ಮಾಡಲಾದ ಮಂಗಳೂರು ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿ ವಸತಿ ಗೃಹ ಕಟ್ಟಡವು 54 ವಸತಿ ಗೃಹಗಳನ್ನು ಹೊಂದಲಿದ್ದು, 20 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಆಗಲಿದೆ.

ನನ್ನಲ್ಲೂ ಕೋಳಿ ಅಂಕ ಪರವಾನಿಗೆ ಕೊಡಲು ಕೇಳಿದ್ದಾರೆ...

ಮಂಗಳೂರು: ಬೆಳ್ತಂಗಡಿ ಸುಮಂತ್ ಎಂಬ ಬಾಲಕನ ಅನುಮಾನಾಸ್ಪದ ಸಾವು ಪ್ರಕರಣದ ಬಗ್ಗೆ ಪ್ರತಿಕ್ರಿಯಿಸಿದ ಗೃಹಸಚಿವರು, ಪ್ರಕರಣ ತನಿಖೆಯ ಹಂತದಲ್ಲಿದೆ. ಆದ್ದರಿಂದ ಪೊಲೀಸರು ಕೆಲವೊಂದು ಮಾಹಿತಿಗಳನ್ನು ಬಹಿರಂಗ ಪಡಿಸುತ್ತಿಲ್ಲ. ತನಿಖೆಯ ಹಂತದಲ್ಲಿ ಮಾಹಿತಿಗಳು ಬಹಿರಂಗ ಮಾಡಿದಲ್ಲಿ ಅಪರಾಧ ಮಾಡಿದವರು ತಪ್ಪಿಸಿಕೊಳ್ಳುವ ಸಾಧ್ಯತೆಯಿದೆ. ಆದ್ದರಿಂದ ತನಿಖೆಯ ಹಂತದಲ್ಲಿ ಪೊಲೀಸರು ಏನನ್ನೂ ಹೇಳುವುದಿಲ್ಲ. ನನಗೆ ಹೇಳಿದರೂ ನಾನೂ ಅದನ್ನು ಸಾರ್ವಜನಿಕವಾಗಿ ಹೇಳುವಂತಿಲ್ಲ ಎಂದರು.



ಸಚಿವ ಪ್ರಿಯಾಂಕ್ ಖರ್ಗೆಯವರು ಕರಾವಳಿಯಲ್ಲಿ ಕೋಮುಸಂಘರ್ಷಕ್ಕೆ ಕಡಿವಾಣ ಬಿದ್ದಿಲ್ಲ ಎಂಬ ಮಾತು ನಿಮ್ಮ ಅಭಿಪ್ರಾಯಕ್ಕೆ ವ್ಯತಿರಿಕ್ತ ಹೇಳಿಕೆಯಂತಿಲ್ಲವೇ ಎಂಬ ಪ್ರಶ್ನೆಗೆ ಗೃಹಸಚಿವರು ಪ್ರತಿಕ್ರಿಯಿಸಿ, ಅವರೇನೋ ಹೇಳಲಿ ನಾನು ಪೊಲೀಸರಿಂದ ಅಧಿಕೃತ ಮಾಹಿತಿ ಪಡೆದು ಹೇಳಿಕೆ ನೀಡುತ್ತಿದ್ದೇನೆ. ಆದರೆ ಹಿಂದೆ ಆ ರೀತಿಯ ಅಶಾಂತಿಯ ವಾತಾವರಣ ಇದ್ದದಂತೂ ಸತ್ಯ. ಆದರೆ ಅದು ಬದಲಾವಣೆ ಆಗಿದೆ. ಇದನ್ನು ಓರ್ವ ಗೃಹಸಚಿವನಾಗಿ ಪೊಲೀಸ್ ದೃಷ್ಟಿಯಿಂದ ಹೇಳುತ್ತಿದ್ದೇನೆ. ಅವರು ಯಾವ ದೃಷ್ಟಿಕೋನದಿಂದ ಹೇಳಿದರೋ ನನಗೆ ಗೊತ್ತಿಲ್ಲ ಎಂದರು.

ಕರಾವಳಿಯಲ್ಲಿ ಸಾಂಪ್ರದಾಯಿಕ ಕೋಳಿ ಅಂಕವನ್ನೂ ಪೊಲೀಸರು ನಿಲ್ಲಿಸುತ್ತಿದ್ದಾರೆ ಎಂಬ ಆರೋಪದ ಪ್ರಶ್ನೆಗೆ ಡಾ.ಜಿ.ಪರಮೇಶ್ವರ್ ಮಾತನಾಡಿ, ಕಾನೂನು ಮಾಡಿದ ಬಳಿಕ ಸಂಪ್ರದಾಯದ ವಿಚಾರ ಬರುವುದಿಲ್ಲ. ಸಂಪ್ರದಾಯ ಎಂದು ಕಾನೂನು ಬಿಟ್ಟುಬಿಡಲು ಆಗುತ್ತದೆಯೇ? ನನ್ನಲ್ಲೂ ಕೋಳಿ ಅಂಕ ಪರವಾನಿಗೆ ಕೊಡಲು ಕೇಳಿದ್ದಾರೆ. ಕಾನೂನಿನಲ್ಲಿ ಬೆಟ್ಟಿಂಗ್ ಮಾಡಲು ಅವಕಾಶವಿಲ್ಲ. ಕಾನೂನು ಬಾಹಿರ ವಿಚಾರವನ್ನು ಅನುಮತಿಸಲಾಗುವುದಿಲ್ಲ. ಯಾವುದೇ ಬೆಟ್ಟಿಂಗ್ ಇಲ್ಲ, ಬರಿಯ ಸಂಪ್ರದಾಯಕ್ಕಾಗಿ ಕೋಳಿ ಅಂಕ ನಡೆಸಲಾಗುತ್ತದೆ ಎಂದು ಮನವರಿಕೆ ಆದಲ್ಲಿ ಆದರೆ ಸ್ಥಳೀಯ ಪೊಲೀಸರು ಪರವಾನಿಗೆ ನೀಡಬಹುದು ಎಂದರು.

> ದಕ್ಷಿಣ ಕನ್ನಡ ಸೇರಿದಂತೆ ಕರಾವಳಿಯಲ್ಲಿ ಈಗ ಶಾಂತಿ ನೆಲೆಸಿದೆ. ಇಲ್ಲಿಗೆ ತಮ್ಮ ಮಕ್ಕಳನ್ನು ಮಂಗಳೂರಿಗೆ ಶಿಕ್ಷಣಕ್ಕೆ ಕಳುಹಿಸುವುದಿಲ್ಲ, ಮೈಸೂರು ಇನ್ನಿತರೆಡೆಗೆ ಕಳುಹಿಸುತ್ತೇವೆ ಎಂದು ಹೇಳುತ್ತಿದ್ದರು. ಆದರೆ ಈಗ ಅಂತಹ ವಾತಾವರಣವಿಲ್ಲ. ಈಗ ಅನೈತಿಕ ಪೊಲೀಸ್‌ಗಿರಿ ಇಲ್ಲವೆಂದು ಪೊಲೀಸರೇ ಹೇಳುತ್ತಿದ್ದಾರೆ. ಆದ್ದರಿಂದ ಇಲ್ಲಿ ಶಾಂತಿ ಮರುಕಳಿಸುತ್ತಿದೆ ಎಂದು ಹೇಳಲೇಬೇಕಾಗುತ್ತದೆ.
>
> ■ ಡಾ. ಜಿ. ಪರಮೇಶ್ವರ್, ರಾಜ್ಯ ಗೃಹ ಸಚಿವ

ಪೊಲೀಸ್ ವಸತಿ ಗೃಹವೊಂದಕ್ಕೆ ಭೇಟಿ

ಮಂಗಳೂರು: ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು ಮಂಗಳವಾರ ನಗರದಲ್ಲಿ ಕಳೆದ ವರ್ಷ ಉದ್ಘಾಟನೆಗೊಂಡಿದ್ದ ಪೊಲೀಸ್ ವಸತಿ ಗೃಹವೊಂದಕ್ಕೆ ದಿಢೀರ್ ಭೇಟಿ ನೀಡಿದರು. ಪೊಲೀಸ್ ಲೇನ್‌ನಲ್ಲಿ ಪೊಲೀಸ್ ಅಧಿಕಾರಿ ಸಿಬ್ಬಂದಿಯ ವಸತಿ ಗೃಹಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ಕಾರ್ಯಕ್ರಮದ ಬಳಿಕ ಈ ಭೇಟಿ ನಡೆಯಿತು. ಗೃಹ ಸಚಿವರು ಭೇಟಿ ನೀಡಿದ ಮನೆ ನಗರ ಸಶಸ್ತ್ರ ಮೀಸಲು ಪಡೆ(ಸಿಎಆರ್)ಯ ಹೆಡ್ ಕಾನ್‌ಸ್ಟೆಬಲ್ ಭೀಮಪ್ಪ ಅವರ ಮನೆಯಾಗಿತ್ತು. ಭೀಮಪ್ಪ ಅವರ ಪತ್ನಿ ಶ್ರುತಿ ಅವರು ಗೃಹ ಸಚಿವರಿಗೆ ಬಿಸಿ ಹಾಲು ಹಾಗೂ ಮನೆಯಲ್ಲಿ ತಯಾರಿಸಿದ ಶೇಂಗಾ ಲಾಡು ನೀಡಿದರು. ಭೀಮಪ್ಪ ಅವರ ಹುದ್ದೆ, ಕುಟುಂಬದ ಬಗ್ಗೆ ವಿಚಾರಿಸಿ, ಮನೆಯನ್ನು ಶುಚಿಯಾಗಿ ಇಟ್ಟುಕೊಂಡ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಸಚಿವರು, ಭೀಮಪ್ಪ ಅವರ ಹೆಣ್ಣು ಮಕ್ಕಳಿಬ್ಬರನ್ನು ಚೆನ್ನಾಗಿ ಓದಿಸುವಂತೆ ಸಲಹೆ ನೀಡಿದರು. ಭೀಮಪ್ಪ ಸಿಎಆರ್‌ನಲ್ಲಿ ಕಳೆದ 9 ವರ್ಷಗಳಿಂದ ಕರ್ತವ್ಯದಲ್ಲಿದ್ದಾರೆ. ಮೂಲತ ಬೆಳಗಾವಿಯವರಾದ ಭೀಮಪ್ಪ ಐದು ವರ್ಷಗಳ ಹಿಂದೆ ವಿವಾಹವಾಗಿ ಪತ್ನಿ ಹಾಗೂ ಇಬ್ಬರು ಪುಟಾಣಿ ಮಕ್ಕಳ ಜತೆ ಕಳೆದ ಒಂದು ವರ್ಷದಿಂದೀಚೆಗೆ ನೂತನ ಪೊಲೀಸ್ ವಸತಿ ಗೃಹದಲ್ಲಿ ನೆಲೆಸಿದ್ದಾರೆ. ಗೃಹ ಸಚಿವರು ನಮ್ಮ ಮನೆಗೆ ದಿಢೀರ್ ಭೇಟಿ ನೀಡಿರುವುದು ಖುಷಿಯ ಜತೆಗೆ ಆತಂಕವನ್ನೂ ಸೃಷ್ಟಿಸಿತ್ತು. ನಾನು ಏನು ಮಾಡಬೇಕೆಂದೂ ತೋಚಲಿಲ್ಲ. ಅವರು ಭೇಟಿ ನೀಡುವ ಯಾವುದೇ ಸುಳಿವು ಇಲ್ಲದ ಕಾರಣ ಸ್ವಲ್ಪ ಗಾಬರಿಯಾಗಿತ್ತು. ಆದರೆ ಅವರು ಏನಾದರೂ ಮನೆಯಲ್ಲಿರುವುದು ಕುಡಿಯಲು ಕೊಡಿ ಎಂದಾಗ ಹಾಲು ನೀಡಿದೆ. ಜತೆಗೆ ಮನೆಯಲ್ಲಿ ಮಾಡಿದ್ದ ಶೇಂಗಾ ಲಾಡು ನೀಡಿದೆ. ಅವರು ಖುಷಿಯಿಂದ ಸ್ವೀಕರಿಸಿದರು ಎಂದು ಭೀಮಪ್ಪ ಅವರ ಪತ್ನಿ ಶ್ರುತಿ ಹೇಳಿದರು.

ನೆಲ್ಲಿಕಟ್ಟೆಯ ಪಾರ್ಕ್‌ನಲ್ಲಿ ಹಾರಾಡಿದೆ ರಾಜ್ಯದ 3ನೇ ಅತೀ ಎತ್ತರದ ತಿರಂಗ!



ಪುತ್ತೂರು: ಪುತ್ತೂರಿನಲ್ಲಿ ಸದಾ ಕಾಲ ನೆನಪಿಟ್ಟುಕೊಳ್ಳುವಂಥ ಬೆಂಚ್ ಮಾರ್ಕ್ ಸ್ಥಾಪಿಸಬೇಕೆಂಬುದು ನನ್ನ ಇರಾದೆ. ಇದರ ಒಂದು ಭಾಗವಾಗಿ 78 ಮೀಟರ್ ಎತ್ತರದ ರಾಷ್ಟ್ರಧ್ವಜ ನಿರ್ಮಾಣಗೊಂಡಿದೆ ಎಂದು ಶಾಸಕ ಅಶೋಕ್ ರೈ ಹೇಳಿದರು.

ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಮೂಡಣ ದಿಕ್ಕಿನಲ್ಲಿ ನೆಲ್ಲಿಕಟ್ಟೆ ಪಾರ್ಕ್‌ನಲ್ಲಿ ಸ್ಥಾಪನೆಯಾದ 78 ಮೀಟರ್ ಎತ್ತರದ ರಾಷ್ಟ್ರಧ್ವಜವನ್ನು ಅವರು ಮಂಗಳವಾರ ಅನಾವರಣ ಮಾಡಿ ಮಾತನಾಡಿದರು.

ಇಡೀ ರಾಜ್ಯದಲ್ಲಿ ಇದು ಮೂರನೇ ಅತಿ ಎತ್ತರದ ತ್ರಿವರ್ಣ ಧ್ವಜವಾಗಿದೆ. ತಾಲೂಕುಕೇಂದ್ರಗಳನ್ನುಪರಿಗಣಿಸಿದರೆ ರಾಜ್ಯದಲ್ಲೇ ಪ್ರಥಮ ಸ್ಥಾನದಲ್ಲಿ ನಿಲ್ಲುತ್ತದೆ. ಇಲ್ಲಿ ಅರಳುತ್ತಿರುವ ರಾಷ್ಟ್ರಧ್ವಜವು 2400 ಚದರ ಅಡಿ ವಿಸ್ತೀರ್ಣ ಹೊಂದಿದೆ. ಸುಮಾರು 40 ವರ್ಷಗಳ ಕಾಲ ಬಾಳಿಕೆ ಬರುವಂಥ ಸ್ಥಂಭ ಎದ್ದು ನಿಲ್ಲಿಸಲಾಗಿದೆ. ವರ್ಷಕ್ಕೆ 3 ಬಾರಿ ರಾಷ್ಟ್ರಧ್ವಜ ಬದಲಾಯಿಸಬೇಕಾಗುತ್ತದೆ ಎಂದರು.

ದೇಶವನ್ನು ಯಾರು ವಿರೋಧಿಸುತ್ತಾರೋ ಅವರೆಲ್ಲ ನಮ್ಮ ವಿರೋಧಿಗಳು. ದೇಶವನ್ನು ಪ್ರೀತಿಸುವ ಎಲ್ಲ ಜಾತಿ, ಮತ, ಧರ್ಮಗಳ ಜನ ನಮ್ಮವರು ಎಂದರು.

ಪುತ್ತೂರು ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಅಮಳ ರಾಮಚಂದ್ರ, ನಗರ ಯೋಜನಾ ಪ್ರಾಧಿಕಾರದ ಸದಸ್ಯರಾದ ಅನ್ವರ್ ಖಾಸಿಂ, ಲ್ಯಾನ್ಸಿ ಮಸ್ಕರೇನಸ್, ನಿಹಾಲ್ ಶೆಟ್ಟಿ ಉಪಸ್ಥಿತರಿದ್ದರು. ಶಿಕ್ಷಕಿ ಶಿವಪ್ರಿಯಾ ವಂದೇ ಮಾತರಂ ಹಾಡಿದರು. ಪುತ್ತೂರು ನಗರ ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಗುರುಪ್ರಸಾದ್ ಸ್ವಾಗತಿಸಿ, ನಗರಸಭೆ ಪೌರಾಯುಕ್ತ ವಿದ್ಯಾ ಕಾಳೆ ವಂದಿಸಿದರು. ಶಿಕ್ಷಕ ಬಾಲಕೃಷ್ಣ ಪೊರ್ದಾಳ್ ನಿರ್ವಹಿಸಿದರು.

ಆಕರ್ಷಕ ಪಥಸಂಚಲನ

ಕಾರ್ಯಕ್ರಮದ ಆರಂಭದಲ್ಲಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಎದುರು ಭಾಗದಿಂದ ಆಕರ್ಷಕ ಪಥಸಂಚಲನ ನಡೆಯಿತು. ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್, ಎನ್‌ಸಿಸಿ ಕೆಡೆಟ್ಸ್, ಕಾಲೇಜ್ ಸ್ಟೂಡೆಂಟ್ ಪೊಲೀಸ್ ವಿಂಗ್ ಮುಂತಾದ ಘಟಕಗಳ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡರು. ಪುತ್ತೂರಿನ ನಿವೃತ್ತ ಸೈನಿಕರ ಸಂಘದ ಸದಸ್ಯರು ಸಮವಸ್ತ್ರಧಾರಿಗಳಾಗಿ ಪಥ ಸಂಚಲನದಲ್ಲಿ ಭಾಗವಹಿಸಿದರು. ರಾಷ್ಟ್ರಧ್ವಜದ ಮುಂಭಾಗದಲ್ಲಿ ಶಾಸಕರು ಗೌರವ ರಕ್ಷೆ ಸ್ವೀಕರಿಸಿದರು. ಬಟನ್ ಒತ್ತುತ್ತಿದ್ದಂತೆ ಮೋಟಾರ್ ಚಾಲಿತ ಶಕ್ತಿಯೊಂದಿಗೆ ಮೆಗಾ ತ್ರಿವರ್ಣ ಧ್ವಜವು 20 ನಿಮಿಷಗಳ ಅವಧಿಯಲ್ಲಿ 78 ಮೀಟರ್ ಎತ್ತರದ ಸ್ತಂಭವನ್ನೇರಿ ತುತ್ತತುದಿಯಲ್ಲಿ ರಾರಾಜಿಸಿತು. ಈ ಸಂದರ್ಭ ವಂದೇ ಮಾತರಂ, ರಾಷ್ಟ್ರಗೀತೆ ಮತ್ತು ಧ್ವಜಗೀತೆ ಹಾಡಲಾಯಿತು. ಸಭಾ ಕಾರ್ಯಕ್ರಮ ದಲ್ಲಿ ಐತಿಹಾಸಿಕ ಧ್ವಜಸ್ತಂಭದ ಕಾಮಗಾರಿ ನಡೆಸಿದ ಗುತ್ತಿಗೆದಾರ ಘನಶ್ಯಾಮ ಶೆಟ್ಟಿ ಅವರನ್ನು ಶಾಸಕರು ಸನ್ಮಾನಿಸಿದರು.

ಅಸ್ಸಾಂ ಪ್ರವಾಸಕ್ಕೆ ತೆರಳಿದ್ದ ಕಾಪು ನಿವಾಸಿ ಯುವಕ ಸಾವು

ಉಡುಪಿ: ಅಸ್ಸಾಂ ರಾಜ್ಯದ ಗುವಾಹಟಿಗೆ ಪ್ರವಾಸಕ್ಕೆ ತೆರಳಿದ್ದ ಉಡುಪಿಯ ತಂಡದಲ್ಲಿದ್ದ ಓರ್ವ ಯುವಕ ಅನಾರೋಗ್ಯದಿಂದ ಮೃತಪಟ್ಟ ಘಟನೆ ನಡೆದಿದೆ. ಅಶೋಕ್ ಆಚಾರ್ಯ (33) ಮೃತ ಯುವ. ಉಡುಪಿ ಜಿಲ್ಲೆಯ ಕಾಪು ತಾಲೂಕು ಕಟಪಾಡಿ ಸಮೀಪದ ಸರಕಾರಿ ಗುಡ್ಡೆ ನಿವಾಸಿಯಾಗಿದ್ದರು. ಪ್ರವಾಸದ ವೇಳೆ ಅಶೋಕ್ ಆಚಾರ್ಯ ಅವರಿಗೆ ತಲೆಯಲ್ಲಿ ರಕ್ತ ಹೆಪ್ಪುಗಟ್ಟಿದ ಕಾರಣ ಅಸ್ವಸ್ಥತೆ ಉಂಟಾಗಿ ತಕ್ಷಣ ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಅವರು ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ.

ಕಟಪಾಡಿ ಫ್ಲೈ ಓವರ್ ಕಾಮಗಾರಿ: ಸಂಸದ ಕೋಟ ಪ್ರಗತಿ ಪರಿಶೀಲನೆ

ಉಡುಪಿ: ಕಟಪಾಡಿ ಜಂಕ್ಷನ್ ಬಳಿ ಈಗಾಗಲೇ ಓವರ್ ಪಾಸ್ ಕಾಮಗಾರಿ ಆರಂಭವಾಗಿ ಕಾಮಗಾರಿ ಭರದಿಂದ ಸಾಗುತ್ತಿದ್ದು ಸ್ಥಳಕ್ಕೆ ಸಂಸದರಾದ ಕೋಟ ಶ್ರೀನಿವಾಸ ಪೂಜಾರಿ ಭೇಟಿ ನೀಡಿ ಕಾಮಗಾರಿಯ ಪ್ರಗತಿ ಪರಿಶೀಲನೆ ನಡೆಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಿರ್ಮಾಣ ಕಾರ್ಯ ತೃಪ್ತಿದಾಯಕ ವೇಗದಲ್ಲಿ ಸಾಗುತ್ತಿದೆ. ರಸ್ತೆಯ ಒಂದು ಬದಿಯನ್ನು ಮಾರ್ಚ್ ಕೊನೆಯ ವಾರದೊಳಗೆ ಪೂರ್ಣಗೊಳಿಸಿ ವಾಹನ ಸಂಚಾರಕ್ಕೆ ಮುಕ್ತಗೊಳಿಸುವನಿರೀಕ್ಷೆಯಿದೆ. ಹೊಸದಾಗಿ ಪೂರ್ಣಗೊಂಡ ಪ್ರದೇಶಕ್ಕೆ ಸಂಚಾರವನ್ನು ತಿರುಗಿಸಿದ ನಂತರ, ಇನ್ನೊಂದು ಬದಿಯಲ್ಲಿ ಕೆಲಸ ಪ್ರಾರಂಭವಾಗುತ್ತದೆ, ನಂತರ ಮೇಲ್ಸೇತುವೆ ಪೂರ್ಣಗೊಳ್ಳುತ್ತದೆ. ಪ್ರಾರಂಭವಾದ ದಿನಾಂಕದಿಂದ 11 ತಿಂಗಳೊಳಗೆ ಸಂಪೂರ್ಣ ಯೋಜನೆ ಪೂರ್ಣಗೊಳ್ಳಲು ನಿರ್ಧರಿಸಲಾಗಿದೆ. ಯೋಜನೆಯು ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳುವಂತೆ ನೋಡಿಕೊಳ್ಳಲು ನಾನು ಅಧಿಕಾರಿಗಳು ಮತ್ತು ಗುತ್ತಿಗೆದಾರರಿಗೆ ಸೂಚನೆ ನೀಡಿದ್ದೇನೆ ಎಂದರು.



ಈ ಸಂದರ್ಭದಲ್ಲಿ ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ, ಜಿಪಂ ಮಾಜಿ ಸದಸ್ಯೆ ಗೀತಾಂಜಲಿ ಸುವರ್ಣ, ಕಟಪಾಡಿ ಗ್ರಾಮ ಪಂಚಾಯತ್ ಮಾಜಿ ಸದಸ್ಯರಾದ ಶ್ರೀನಿವಾಸ್ ಕಿಣಿ, ಸುಭಾಸ್ ಬಲ್ಲಾಳ್, ಪವಿತ್ರ ಶೆಟ್ಟಿ ಕೋಟೆ ಗ್ರಾಮ ಪಂಚಾಯತ್ ಮಾಜಿ ಸದಸ್ಯರಾದ ಹರ್ಷಿತ್, ಕಾಪು ಮಂಡಲ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಗೋಪಾಲ ಕೃಷ್ಣ ರಾವ್, ಮೂಡಬೆಟ್ಟು ಮಹಾಶಕ್ತಿ ಕೇಂದ್ರದ ನಿತಿನ್, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಮತ್ತು ಸ್ಥಳೀಯರು ಉಪಸ್ಥಿತರಿದ್ದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ



ದಕ್ಷಿಣ ಕನ್ನಡ 33° 22° | ಉಡುಪಿ 31° 23°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು
ಬುಧವಾರ 18, ಫೆಬ್ರವರಿ 2026 e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 2

ಕಾರಿಂಜೇಶ್ವರ ದೇವಳದಲ್ಲಿ ಪಾರ್ವತಿ-ಪರಮೇಶ್ವರ ದೇವರ ಭೇಟಿ ಸಂಭ್ರಮ



ಪುಟ 3

ಕಡಬ ಪೇಟೆ: ಪಾಳು ಬಿದ್ದ ಹಳೆಯ ಪ್ರವಾಸಿ ಬಂಗಲೆಗೆ ಇನ್ನೂ ಸಿಕ್ಕಿಲ್ಲ ಮುಕ್ತಿ!

ಕ್ಷಣಕಾಲ ಗಡಗಡ ನಡುಗಿಸಿತು ತಣ್ಣೀರುಬಾವಿಯ ಐಎಂಸಿ ಘಟಕದಲ್ಲಿ ನಡೆದ 'ಅವಘಡ'



ಅಪಾಯಕಾರಿ ರಾಸಾಯನಿಕ ಘಟಕಗಳಲ್ಲಿ ಅಪಘಾತಗಳ ನಿರ್ವಹಣೆ ಕುರಿತು ಅಣಕು ಪ್ರದರ್ಶನ ಮಂಗಳವಾರ ಮಂಗಳೂರಿನ ಹೊರವಲಯ ತಣ್ಣೀರುಬಾವಿ ಐಎಂಸಿ ಘಟಕದಲ್ಲಿ ನಡೆಯಿತು. ಎಸಿ ಮೀನಾಕ್ಷಿ ಆರ್ಯ, ಕಾರ್ಖಾನೆಗಳ ಉಪನಿರ್ದೇಶಕ ರಾಜೇಶ್ ಮಿಶ್ರಕೋಟಿ, ಎನ್‌ಡಿಆರ್‌ಎಫ್ ಮುಖ್ಯಸ್ಥ ಅಜಯ್, ಜಿಲ್ಲಾ ವಿಪತ್ತು ನಿರ್ವಹಣಾಧಿಕಾರಿ ವಿಜಯ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಸುತ್ತಮುತ್ತ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆರೋಗ್ಯಕ್ಕೆ ಕಂಟಕ ತರುತ್ತಿದೆ ಉರಿ ಬಿಸಿಲು

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಿಸಿಲಿನ ತಾಪ ಮಂಗಳವಾರ ಮತ್ತಷ್ಟು ತೀವ್ರಗೊಂಡಿದ್ದು ಗರಿಷ್ಠ 35 ಡಿಗ್ರಿ ಸೆಲ್ಸಿಯೆಸ್‌ನ್ನೂ ದಾಟಿದೆ.

ಬಿಸಿಲಿಗೆ ಮೈಯೊಡ್ಡಬೇಡಿ

ಧಗಧಗಿಸುವ ವಾತಾವರಣ ಕೆಮ್ಮು, ಶ್ವಾಸಕೋಶದ ಸಮಸ್ಯೆ ಸಹಿತ ವಿವಿಧ ಅನಾರೋಗ್ಯಗಳಿಗೆ ದಾರಿ ಮಾಡಿಕೊಡುತ್ತಿದೆ. ಈ ಹಿನ್ನೆಲೆಯಲ್ಲಿ ಬಿಸಿಲಿಗೆ ಹೆಚ್ಚು ಮೈಯೊಡ್ಡದಂತೆ ಆರೋಗ್ಯ ಇಲಾಖೆ ನಾಗರಿಕರಿಗೆ ಕಿವಿಮಾತು ಹೇಳಿದೆ.

ಜಸ್ಟ್ 10 ರೂಪಾಯಿಗೆ ಇಲ್ಲಿ ಸಿಗುತ್ತಿದೆ 20 ಲೀಟರ್ ಶುದ್ಧ ನೀರು!

ಮುಲ್ಕಿ: ನಗರ ಪಂಚಾಯತ್ ವ್ಯಾಪ್ತಿಯ ಕೆ.ಎಸ್. ರಾವ್ ನಗರದ ನಾಗಬನ ಬಳಿ ಶುದ್ಧ ನೀರು ಘಟಕ ತೆರೆಯಲಾಗಿದ್ದು, ರೂ.10 ನಾಣ್ಯ ಪಾವತಿಸಿ 20 ಲೀಟರ್ ಶುದ್ಧ ನೀರು ತೆಗೆದುಕೊಳ್ಳಬಹುದು.

ಆರೋಗ್ಯ ಕಾಪಡಿಕೊಳ್ಳಿ

ಮುಲ್ಕಿ ನಗರ ಪಂಚಾಯತ್ ಸಾರ್ವಜನಿಕರು ಶುದ್ಧ ನೀರು ಘಟಕದ ಸದುಪಯೋಗ ಪಡೆದು ತಮ್ಮ ಆರೋಗ್ಯ ಕಾಪಾಡಿಕೊಳ್ಳಬೇಕಾಗಿ ಪಂಚಾಯತ್‌ನ ಮುಖ್ಯಾಧಿಕಾರಿ ಮಧುಕರ್ ಕೆ. ತಿಳಿಸಿದ್ದಾರೆ.

ಕೊಡಗು: ಹಿಂಜಾವೇ ಬಲೆಗೆ ಗೋಮಾಂಸ ಮಾರಾಟಗಾರ!

ಮಡಿಕೇರಿ: ಆಕ್ರಮವಾಗಿ ಗೋ ಮಾಂಸ ಮಾರಾಟ ಮಾಡಲು ಯತ್ನಿಸುತ್ತಿದ್ದ ಆರೋಪಿಯನ್ನು ಹಿಂದೂ ಜಾಗರಣಾ ವೇದಿಕೆಯ ಕಾರ್ಯಕರ್ತರು ಪತ್ತೆಹಚ್ಚಿ ಪೊಲೀಸರಿಗೆ ಒಪ್ಪಿಸಿದ ಘಟನೆ ಜಂಬೂರು ಗ್ರಾಮದಲ್ಲಿ ನಡೆದಿದೆ. ಸುಂಟಿಕೊಪ್ಪದ ಸುಹೈಲ್ ಎಂಬಾತ ಗೋಮಾಂಸ ಸಾಗಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಪಡೆದ ಕಾರ್ಯಕರ್ತರು, ಸ್ಥಳೀಯರ ಸಹಕಾರದಿಂದ 15 ಕೆ.ಜಿ.ಯಷ್ಟು ಗೋ ಮಾಂಸ ಸಹಿತ ಪೊಲೀಸರಿಗೊಪ್ಪಿಸಿದ್ದಾರೆ.

ಉಡುಪಿ ಜಿಲ್ಲೆಯಲ್ಲಿ ಹೆಚ್ಚುತ್ತಿದೆ ಚಿರತೆ ಕಾಟ

ಉಡುಪಿ: ಜಿಲ್ಲೆಯಲ್ಲಿ ಹಲವು ಕಡೆ ಚಿರತೆಗಳ ಉಪಟಳ ಆರಂಭವಾಗಿದೆ. ವರ್ಷಕ್ಕೊಂದು ಎರಡು ಬಾರಿ ಮಾತ್ರ ಕೆಲ ಪ್ರದೇಶಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಚಿರತೆ, ಈಗ ಎಲ್ಲೆಂದರಲ್ಲಿ ಕಾಣಸಿಗುತ್ತಿದೆ. ಜಿಲ್ಲೆಯ ಏಳು ಕಡೆಗಳಲ್ಲಿ ಚಿರತೆ ಸೆರೆಗೆ ಬೋನು ಇರಿಸಲಾಗಿದೆ. ಬೀದಿ ನಾಯಿಗಳನ್ನು ಗುರಿಯಾಗಿಸುತ್ತಿರುವ ಚಿರತೆ ಕಾಟಕ್ಕೆ ಗ್ರಾಮೀಣ ಭಾಗದ ಜನರು ಬೆಚ್ಚಿಬಿದ್ದಿದ್ದಾರೆ.

ಹೈರಾಣಾಗಿದ್ದಾರೆ ಗಂಗೊಳ್ಳಿಯ ನಾಗರಿಕರು
ಕಾಲಿಟ್ಟಲ್ಲಿ ಹೆಬ್ಬಾವು!
ಕತ್ತಲಾದರೆ ಪ್ರತ್ಯಕ್ಷ | ಕ್ಷಣದಲ್ಲಿ ಗಾಯಬ್

ಕುಂದಾಪುರ: ಮೀನುಗಾರಿಕಾ ಬಂದರು ಪ್ರದೇಶ ಗಂಗೊಳ್ಳಿಯಲ್ಲಿ ಹೆಬ್ಬಾವುಗಳು ಹೆಚ್ಚೆಚ್ಚು ಕಾಣಿಸಿಕೊಳ್ಳುತ್ತಿದ್ದು ಜನರನ್ನು ಭಯಭೀತರನ್ನಾಗಿಸಿದೆ.

ಇತ್ತೀಚಿನ ದಿನಗಳಲ್ಲಿ ಗಂಗೊಳ್ಳಿಯ ಆಸುಪಾಸು ರಾತ್ರಿ ವೇಳೆ ದೊಡ್ಡ ಗಾತ್ರದ ಮತ್ತು ಚಿಕ್ಕ ಗಾತ್ರದ ಹೆಬ್ಬಾವುಗಳು ತುಂಬಾ ಕಡೆಗಳಲ್ಲಿ ಕಾಣಿಸಿಕೊಳ್ಳುತ್ತಿದ್ದು, ನೋಡಿದ ಕ್ಷಣ ಮಾತ್ರದಲ್ಲಿ ಪೊದೆಗಳ ನಡುವೆ ನಿರ್ಜನ ಜಾಗದಲ್ಲಿ ಕಣ್ಮರೆಯಾದ ಕಾರಣ ಸಾಕಷ್ಟು ಹೆಬ್ಬಾವುಗಳು ಸೆರೆ ಹಿಡಿಯಲಾಗದೆ ತಪ್ಪಿಸಿಕೊಂಡಿವೆ.

ದಾರಿ ಮಧ್ಯದಲ್ಲಿಯೇ ಇತ್ತು!

ಭಾನುವಾರ ರಾತ್ರಿ ಗಂಗೊಳ್ಳಿ ಬಂದರು ಬೇಲಿಕೇರಿ ಬಳಿ ಬೃಹತ್ ಗಾತ್ರದ ಹೆಬ್ಬಾವು ದಾರಿ ಮಧ್ಯೆಯೇ ಕಾಣಿಸಿಕೊಂಡಿದ್ದು ಭಯಭೀತರಾದ ನಾಗರಿಕರು ಕೂಡಲೇ ಉರಗ ತಜ್ಞ, ಶೌರ್ಯ ವಿಪತ್ತು ನಿರ್ವಹಣಾ ಘಟಕ ಸದಸ್ಯ ಮಡಿ ನಾಗರಾಜ್ ಖಾರ್ವಿಗೆ ತಿಳಿಸಿದ್ದಾರೆ. ಖಾರ್ವಿ, ಶೌರ್ಯ ವಿಪತ್ತು ನಿರ್ವಹಣಾ ಘಟಕದ ಸದಸ್ಯರಾದ ವಿಶ್ವನಾಥ್ ಗಂಗೊಳ್ಳಿ ಮತ್ತು ಗಣೇಶ್ ಖಾರ್ವಿ ಅವರ ಸಹಾಯದಿಂದ ಹೆಬ್ಬಾವನ್ನು ಸುರಕ್ಷಿತವಾಗಿ ಸೆರೆ ಹಿಡಿದು ಅರಣ್ಯ ಇಲಾಖೆ ಸಿಬ್ಬಂದಿಗೆ ಹಸ್ತಾಂತರಿಸಿದ್ದಾರೆ.




ವಿವಿಧ ಗಾತ್ರದ ಹೆಬ್ಬಾವು ಗೋಚರ

ಸೆರೆ ಹಿಡಿದ ಹೆಬ್ಬಾವು ಸುಮಾರು 11 ಕೆಜಿ ತೂಕವಿದ್ದು, ಸುಮಾರು 10 ಅಡಿ ಉದ್ದ ಇದ್ದಿತು. ಪಾದಚಾರಿಗಳು ರಾತ್ರಿ ವೇಳೆ ಸಂಚರಿಸುವಾಗ ಆದಷ್ಟು ಜಾಗರೂಕರಾಗಿ ಸಂಚರಿಸುವಂತೆ ಶೌರ್ಯ ವಿಪತ್ತು ನಿರ್ವಹಣಾ ಘಟಕದ ಸದಸ್ಯರು ತಿಳಿಸಿದ್ದಾರೆ.

ಈಗ ಎಲ್ಲಾ ನೇರ ಊರಿಗೇ ಬರುತ್ತಿವೆ!

ಕರಾವಳಿ ಭಾಗದ ಜಿಲ್ಲೆಗಳಲ್ಲಿ ಕಾಡಾನೆ, ಕಾಡುಹಂದಿ, ಮುಳ್ಳುಹಂದಿ, ಹೆಬ್ಬಾವು, ನವಿಲುಗಳು ಮನೆ ಅತಿಥಿಗಳಾಗಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಡಾನೆಗಳು ಕೃಷಿ ಭೂಮಿಗೆ ಲಗ್ಗೆಯಿಡುತ್ತಿದ್ದರೆ, ಉಡುಪಿ ಜಿಲ್ಲೆಯಲ್ಲಿ ಚಿರತೆಗಳ ಹಾವಳಿ ನಾಗರಿಕರನ್ನು ಹೈರಾಣಾಗಿಸುತ್ತಿವೆ. ಈ ನಡುವೆ ಕಾಡುಹಂದಿಗಳು ಕೃಷಿ ಭೂಮಿಯಲ್ಲಿ ಅಧ್ವಾನ ನಡೆಸುತ್ತಲೇ ಇವೆ.



ಕರಾವಳಿ ಭಾಗಕ್ಕೂ ಕಾಲಿಟ್ಟ ವಿಷಗಾಳಿ
ಎಕ್ಯೂಐನಲ್ಲಿ ಮತ್ತೆ ಉಡುಪಿಗೆ ಆಪತ್ತು
ಬಿಸಿಲ ಧಗೆ ಜೊತೆ ಉಸಿರಾಟ ಸಂಕಷ್ಟ

ಮಂಗಳೂರು: ಕರಾವಳಿ ಜಿಲ್ಲೆಗಳಲ್ಲಿ ಒಂದೆಡೆ ಸತತವಾಗಿ ತಾಪಮಾನ ಏರಿಕೆಯಾಗುತ್ತಿದ್ದರೆ ಇನ್ನೊಂದೆಡೆ ಗಾಳಿಯ ಗುಣಮಟ್ಟ ಸೂಚ್ಯಂಕ ಎಕ್ಯೂಐನಲ್ಲಿನ 'ಕಳಪೆ' ಆತಂಕ ಹೆಚ್ಚಿಸಿದೆ. ಸದ್ಯ ಉಡುಪಿ ಜಿಲ್ಲೆ ಅಪಾಯದ ಮಟ್ಟದಲ್ಲಿದ್ದು ಈ ಗಾಳಿ ಗುಣಮಟ್ಟದಲ್ಲಿ ಕುಸಿತ, ಆರೋಗ್ಯದ ಮೇಲೆ ದೀರ್ಘಕಾಲಿಕ ಪರಿಣಾಮ ಬೀರುವುದಲ್ಲದೆ, ಇದರಿಂದ ಮಕ್ಕಳು, ವೃದ್ಧರು, ಉಸಿರಾಟದ ಸಮಸ್ಯೆ ಇರುವವರು ಹೆಚ್ಚು ಅಪಾಯಕ್ಕೆ ತುತ್ತಾಗುವ ಸಾಧ್ಯತೆ ಇದೆ.

ಉಡುಪಿ ಸೂಚ್ಯಂಕ 181

ಬೆಂಗಳೂರಿನಲ್ಲಿ ಕೆಲವು ದಿನಗಳ ಹಿಂದಷ್ಟೇ ತೀವ್ರ ಕಳಪೆ ಮಟ್ಟ ತಲುಪಿದ್ದ ಗಾಳಿಯ ಗುಣಮಟ್ಟ ಮಂಗಳವಾರ 175ಕ್ಕೆ ಜಿಗಿದಿದ್ದರೆ ಇತ್ತ ಕರಾವಳಿಯ ಉಡುಪಿಯಲ್ಲಿ 181 ದಾಖಲಾಗಿ ಪರಿಸ್ಥಿತಿಯನ್ನು ಇನ್ನಷ್ಟು ಗಂಭೀರವಾಗಿಸಿ ಬಿಟ್ಟಿದೆ. ತಜ್ಞರು ಇದನ್ನು ಇಲ್ಲಿನ ನಾಗರಿಕರ ಆರೋಗ್ಯದ ದೃಷ್ಟಿಯಿಂದ ಹೆಚ್ಚು ಅಪಾಯಕಾರಿ ಮಟ್ಟ ಎಂದು ಎಚ್ಚರಿಸಿದ್ದಾರೆ. »ಪುಟ 6

ಈ ಬಗ್ಗೆ ಏನೆನ್ನುತ್ತಾರೆ ಆರೋಗ್ಯ ತಜ್ಞರು?

ಗಾಳಿ ಗುಣಮಟ್ಟ ಸೂಚ್ಯಂಕ 150ಕ್ಕಿಂತ ಮೇಲಿರುವಾಗ ಉಸಿರಾಟದ ತೊಂದರೆ, ಕಣ್ಣು ಉರಿಯುವಿಕೆ, ಗಂಟಲು ಕೆರಳಿಕೆ ಮೊದಲಾದ ಸಮಸ್ಯೆ ಹೆಚ್ಚಬಹುದು. ಎಚ್ಚರಿಕೆ ಅತ್ಯಗತ್ಯವಾಗಿದೆ ಎನ್ನುತ್ತಾರೆ ಆರೋಗ್ಯ ತಜ್ಞರು.

ಏನಿದು ಎಕ್ಯೂಐ?

ಒಂದು ಪ್ರದೇಶದ ಗಾಳಿ ಎಷ್ಟು ಶುದ್ಧ, ಮಾಲಿನ್ಯಗೊಂಡಿದೆ ಎಂದು ಅಳೆಯುವ ಮಾನದಂಡ.



ಅಪಾಯ ತಪ್ಪಿಸಲು ಸದ್ಯ ಹೀಗೆ ಮಾಡಿ...

- ಅಗತ್ಯವಿಲ್ಲದೆ ಹೊರಾಂಗಣ ಚಟುವಟಿಕೆ ಕಡಿಮೆಮಾಡಿ
- ಹೊರಗೆ ಓಡಾಡುವ ವೇಳೆ ಮುಖಕ್ಕೆ ಮಾಸ್ಕ್ ಧರಿಸಿಕೊಳ್ಳಿ
- ಹೆಚ್ಚಿನ ಸಂಚಾರ ಇರುವ ಪ್ರದೇಶಗಳನ್ನು ತಪ್ಪಿಸಿಕೊಳ್ಳಿ
- ಮನೆಗಳಲ್ಲಿ ಗಾಳಿ ಶುದ್ಧೀಕರಣ ಸಾಧನ ಬಳಕೆಮಾಡಿ

ಬರೋಬ್ಬರಿ ಇಪ್ಪತ್ತು ವರ್ಷದ ಸೇವೆಗೆ ತೆರೆ | ಜನತೆಗೆ ಗಾಯದ ಮೇಲೆ ಬರೆ
ಕುಕ್ಕಿಕಟ್ಟೆ ಕುಟುಂಬ ಕಲ್ಯಾಣ ಕೇಂದ್ರಕ್ಕೆ ಬೀಗ

ಉಡುಪಿ: ನಗರದ ಕುಕ್ಕಿಕಟ್ಟೆ ಡಯಾನ ಚಿತ್ರಮಂದಿರದ ಎದುರು, ಸುಮಾರು ಇಪ್ಪತ್ತು ವರ್ಷಗಳಿಂದ ಸೇವಾ ನಿರತವಾಗಿದ್ದ ನಗರ ಕುಟುಂಬ ಕಲ್ಯಾಣ ಕೇಂದ್ರವು ಸೇವೆಯನ್ನು ಸ್ಥಗಿತಗೊಳಿಸಿದ್ದು, ಬಾಗಿಲಿಗೆ ಬೀಗ ಜಡಿಯಲಾಗಿದೆ.

ನಾಗರಿಕರಿಗೆ ಪರದಾಟದ ಪರಿಸ್ಥಿತಿ

ಪರಿಸರದ ಸುತ್ತಮುತ್ತಲಿನ ನಾಗರಿಕರು ಚಿಕಿತ್ಸೆ ಪಡೆಯಲು ಪರದಾಡಬೇಕಾದ ಪರಿಸ್ಥಿತಿ ಎದುರಾಗಿದೆ. ಶಿಶುಗಳಿಗೆ ಲಸಿಕೆ, ಚುಚ್ಚುಮದ್ದು ಹಾಗೂ ಗರ್ಭಿಣಿಯರಿಗೆ ತಪಾಸಣೆ, ಅಗತ್ಯ ಚಿಕಿತ್ಸೆಗಳು ಕ್ಲಪ್ತ ಸಮಯದಲ್ಲಿ ದೊರೆಯುತಿತ್ತು. ಅಲ್ಲದೆ ಜ್ವರಬಾಧೆ, ಶೀತ, ಕೆಮ್ಮು ಮೊದಲಾದ ವ್ಯಾಧಿಗಳಿಂದ ಬಳಲುವ ರೋಗಿಗಳು ಚಿಕಿತ್ಸೆ ಪಡೆಯಲು ಅವಕಾಶವಿತ್ತು.

ತಕ್ಷಣ ಜಿಲ್ಲಾಡಳಿತ, ಜಿಲ್ಲಾ ಆರೋಗ್ಯ ಇಲಾಖೆಯು, ಕರ್ತವ್ಯ ನಿಲ್ಲಿಸಿರುವ ಕುಕ್ಕಿಕಟ್ಟೆಯ ನಗರ ಕುಟುಂಬ ಕಲ್ಯಾಣ ಕೇಂದ್ರ ಪುನಾರಂಭಿಸಬೇಕಾಗಿದೆ. ಕಳೆದ ಹಲವು ದಿನಗಳಿಂದ ಮಕ್ಕಳಿಗೆ ಕೊಡಿಸುವ ಲಸಿಕೆ ಇಲ್ಲಿ ಲಭ್ಯವಿಲ್ಲ. »ಪುಟ 6



ಹಣತೆತ್ತು ಚಿಕಿತೆ ಪಡೆಯುವ ಪರಿಸ್ಥಿತಿ

ಕೇಂದ್ರ ಮುಚ್ಚಿರುವುದರಿಂದ ಬಡವರು ನಗರದ ಖಾಸಗಿ ಆಸ್ಪತ್ರೆಗಳಲ್ಲಿ ಹಣತೆತ್ತು ಚಿಕಿತ್ಸೆ ಪಡೆಯಬೇಕಾದ ಪರಿಸ್ಥಿತಿ ಬಂದಿದೆ. ಶಿಶು, ಗರ್ಭಿಣಿಯರಿಗೆ, ರೋಗಿಗಳಿಗೆ ಸಂಕಷ್ಟ ಎದುರಾಗಿದೆ. ಸರಕಾರದ ಉಚಿತ ಚಿಕಿತ್ಸಾ ಸೇವೆ ಪಡೆಯಲು, ನಾಗರಿಕ ಸಮಾಜವು ವಂಚಿತವಾಗದಂತೆ ತಡೆಯಬೇಕಾಗಿದ್ದು ಆಡಳಿತ ವ್ಯವಸ್ಥೆಗಳ ಕರ್ತವ್ಯವಾಗಿದೆಂಬ ಮಾತು ಕೇಳಿಬರುತ್ತಿದೆ.

ಮೀಟರ್ ರೀಡಿಂಗ್‌ಗೆ ಬಂದ ಸಿಬ್ಬಂದಿ ಮೇಲೆ ನಾಯಿ ದಾಳಿ

ಬಂಟ್ವಾಳ: ಮೆಸ್ಕಾಂ ಇಲಾಖೆಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುವ ವಿದ್ಯುತ್ ಮೀಟರ್ ರೀಡಿಂಗ್ ಕೆಲಸ ಮಾಡುವ ವ್ಯಕ್ತಿಯೋರ್ವನ ಮೇಲೆ ಸಾಕು ನಾಯಿಯೊಂದು ದಾಳಿ ಮಾಡಿದ ಘಟನೆ ನಡೆದಿದೆ. ಗಾಯಾಳುವನ್ನು ಮಂಗಳೂರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮಂಗಳೂರು ತಾಲೂಕಿಗೆ ಬರುವ ಮೂಳೂರು ಇರಾ ನಿವಾಸಿ ಸಂಪತ್, ದಾಳಿಗೆ ಒಳಗಾದವರು. ಅವರು ಬಂಟ್ವಾಳ ಮೆಸ್ಕಾಂ ಇಲಾಖೆಯಲ್ಲಿ ಹೊರಗುತ್ತಿಗೆಯ ಸೂಪರ್ ವೈಸರ್ ವೃತ್ತಿಯಲ್ಲಿದ್ದಾರೆ. »ಪುಟ 6

ದಾಳಿ ವೇಳೆ ರಕ್ಷಣೆಗೆ ಬಂದ ಸ್ಥಳೀಯರು



ಮೀಟರ್ ರೀಡಿಂಗ್ ಮಾಡಿ ಮುಖ್ಯ ರಸ್ತೆಯಲ್ಲಿ ನಡೆದುಕೊಂಡು ಬೈಕ್‌ನ ಬಳಿ ತೆರಳುತ್ತಿದ್ದಂತೆ ಶ್ವಾನ ದಾಳಿ ಮಾಡಿದ್ದು, ಪ್ರಾಣಕ್ಕೆ ಯಾವುದೇ ಅಪಾಯವಿಲ್ಲದಿದ್ದರೂ ದಾಳಿಯಿಂದ ರಕ್ಷಿಸಿಕೊಳ್ಳಲು ಇವರು ಸಾಕಷ್ಟು ದೂರ ಓಡಿ ಹೋಗಿದ್ದಾರೆ, ಬಳಿಕ ಸ್ಥಳೀಯರು ಸೇರಿ ನಾಯಿಯನ್ನು ಓಡಿಸಿದ್ದಾರೆ.

ಮುಗ್ರು ಅರಣ್ಯ ಪ್ರದೇಶದಲ್ಲಿ ಅವಘಡ | ಸಮೀಕ್ಷೆಯ ಮೊದಲ ದಿನ ನೌಕರಗೆ ಗಾಯ
ಹುಲಿ ಗಣತಿಗೆ ಬಂದವರಿಗೆ ಕಾಡಿದ ಕಾಡು ಹಂದಿ

ಉಪ್ಪಿನಂಗಡಿ: ಇಲ್ಲಿನ ವಲಯ ಅರಣ್ಯ ವ್ಯಾಪ್ತಿಯಲ್ಲಿ ಅಖಿಲ ಭಾರತ ಹುಲಿ ಗಣತಿ 2026ರ ಎರಡನೇ ಹಂತದ ಲೈನ್ ಟ್ರಾನ್ಸೆಕ್ಟ್ ಸಮೀಕ್ಷೆ ಸೋಮವಾರ ಆರಂಭಗೊಂಡಿದ್ದು ಸಮೀಕ್ಷೆಯ ಮೊದಲ ದಿನವೇ ಮುಗ್ರು ಅರಣ್ಯ ಪ್ರದೇಶದಲ್ಲಿ ಸಮೀಕ್ಷೆ ನಡೆಸುತ್ತಿದ್ದ ದಿನಗೂಲಿ ನೌಕರ ಶೇಷಪ್ಪ ಎಂಬವರಿಗೆ ಕಾಡು ಹಂದಿ ದಾಳಿ ನಡೆಸಿ ಗಾಯಗೊಳಿಸಿದೆ.

ಸವಾಲಿನ ನಡುವೆ ಪ್ರಥಮ ಹಂತ!

ಜ.5 ರಂದು ಪ್ರಥಮ ಹಂತ ಆರಂಭಗೊಂಡಾಗ ಸಿಬ್ಬಂದಿ ಕೊರತೆ, ಜೀವ ರಕ್ಷಕ ಸಾಧನಗಳ ಕೊರತೆ, ದಟ್ಟ ಅರಣ್ಯದ ಅಪಾಯ, ಸಂವಹನ ಸಾಧನಗಳ ಅಭಾವ ಇವೆಲ್ಲದಿಂದ ಸಮೀಕ್ಷೆ ಗಂಭೀರ ಸವಾಲಾಗಿ ಪರಿಣಮಿಸಿತ್ತು. 18 ತಂಡಗಳನ್ನು ರಚಿಸಿ ಪ್ರತಿಯೊಂದು ತಂಡಕ್ಕೆ ಮೂವರು ಸಿಬ್ಬಂದಿಗಳನ್ನು ನೇಮಿಸಲಾಗಿತ್ತು. ಬೆಳಿಗ್ಗೆ 6ರಿಂದ ಮಧ್ಯಾಹ್ನವರೆಗೂ ಐದು ಕಿಮೀಗೂ ಹೆಚ್ಚಿನ ದೂರ ಕಾಲ್ನಡಿಗೆಯಲ್ಲಿ ಸಂಚರಿಸಿ ಸಮೀಕ್ಷೆಯನ್ನು ಕೈಗೊಳ್ಳಲಾಗಿತ್ತು.



ನಾಲ್ಕು ದಿನಗಳ ಕಾಲ ನಡೆಯಲಿದೆ ಸಮೀಕ್ಷೆ

ಪ್ರತಿ ಅರಣ್ಯ ಬೀಟ್‌ನಲ್ಲಿ ಒಟ್ಟು ನಾಲ್ಕು ಕಿಮೀ ಉದ್ದದ ಮಾರ್ಗದಲ್ಲಿ ಸಮೀಕ್ಷೆ ನಡೆಯುತ್ತಿದೆ. ಈ ಹಂತದಲ್ಲಿ ಜಿಂಕೆ, ಸಾಂಬಾರ್, ಕಾಟಿ, ಕಾಡುಹಂದಿ ಸೇರಿದಂತೆ ಸಸ್ಯಹಾರಿ ಪ್ರಾಣಿಗಳ ನೇರ ವೀಕ್ಷಣೆ, ಪಾದಚಿಹ್ನೆಗಳು, ವಾಸಸ್ಥಳದ ಸ್ಥಿತಿಗತಿಗಳನ್ನು ದಾಖಲಿಸಲಾಗುತ್ತದೆ.

ರಾಜ್ಯಾದ್ಯಂತ ಮೂರು ದಿನಗಳ ಕಾಲ ನಡೆದ ಈ ಹಂತದಲ್ಲಿ ಹುಲಿ, ಚಿರತೆ, ಕಾಡು ನಾಯಿ, ನರಿ, ತೋಳ, ಆನೆ ಮತ್ತಿತರ ಕಾಡುಪ್ರಾಣಿಗಳ ಹೆಜ್ಜೆಗುರುತುಗಳು, ಲದ್ದಿ, ಸ್ಕ್ರಾಚ್ ಮಾರ್ಕ್‌ಗಳು ಸಂಪೂರ್ಣ ದಾಖಲಿಸಲ್ಪಟ್ಟಿದ್ದವು.

ತರಬೇತಿ ನೀಡಲಾಗಿದೆ

ಉಪ್ಪಿನಂಗಡಿ ವಲಯದ ಅರಣ್ಯ ವ್ಯಾಪ್ತಿಯಲ್ಲಿ 18 ಕಡೆಗಳಲ್ಲಿ ಎರಡನೇ ಹಂತದ ಸಮೀಕ್ಷೆ ನಡೆಯುತ್ತಿದೆ. ಸಿಬ್ಬಂದಿಗಳಿಗೆ ಎಲ್ಲಾ ರೀತಿ ತರಬೇತಿ ನೀಡಲಾಗಿದೆ ಎಂದು ವಲಯ ಅರಣ್ಯಾಧಿಕಾರಿ ರಾಘವೇಂದ್ರ ಎಚ್.ಪಿ ಹೇಳಿದ್ದಾರೆ.

ಶೇಷಪ್ಪ ಗಾಯ

ಮುಗ್ರು ಅರಣ್ಯ ಬೀಟ್‌ನಲ್ಲಿ ಬೆಳಗಿನ ಪರಿಶೀಲನೆ ವೇಳೆ ಕಾಡು ಹಂದಿ ದಾಳಿ ನಡೆಸಿ ಅರಣ್ಯ ಇಲಾಖೆಯ ದಿನಕೂಲಿ ನೌಕರ ಶೇಷಪ್ಪ ಗಾಯಗೊಂಡಿದ್ದಾರೆ.

ಪುಳಿಕುತ್ತಿ ಅಗರ್ತಿಮೂಲೆ ಪರಿಸರದಲ್ಲಿ ನಾಗರಿಕರಿಗೆ ಭೀತಿ ಹುಟ್ಟಿಸಿದೆ 'ಬೌಬೌ'!
ಸ್ಥಳೀಯ ಇಬ್ಬರ ಮೇಲೆ ದಾಳಿ | ಹುಚ್ಚು ನಾಯಿ ಶಂಕೆ

ಉಪ್ಪಳ: ಮಂಗಲ್ಪಾಡಿ ಪಂಚಾಯತ್ ವ್ಯಾಪ್ತಿ ಪುಳಿಕುತ್ತಿ ಆಗರ್ತಿಮೂಲೆಯಲ್ಲಿ ನಾಯಿ ಕಡಿದು ಇಬ್ಬರು ಗಾಯಗೊಂಡಿದ್ದಾರೆ.

ಈ ಘಟನೆ ಸ್ಥಳೀಯರಲ್ಲಿ ಆತಂಕಕ್ಕೆ ಕಾರಣವಾಗಿದೆ. ಸೋಮವಾರ ಮಧ್ಯಾಹ್ನ ವೇಳೆ ಆಗರ್ತಿಮೂಲೆಯಲ್ಲಿ ಸ್ಥಳೀಯ ನಿವಾಸಿ ಇಕ್ಬಾಲ್ ಹಾಗೂ ರಾಧಾಕೃಷ್ಣ ಎಂಬವರು ನಾಯಿ ಕಡಿತಕ್ಕೊಳಗಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಇದು ಹುಚ್ಚು ನಾಯಿ ಎಂದು ಶಂಕೆಗೊಂಡಿದ್ದು, ನಾಯಿಯನ್ನು ಸ್ಥಳೀಯರು ಹಿಂಬಾಲಿಸಿ ಕೊನೆಗೆ ಪ್ರತಾಪನಗರದ ಶಿವಶಕ್ತಿ ಮೈದಾನ ಬಳಿಯಲ್ಲಿ ಬೀದಿ ನಾಯಿಯ ಅಟ್ಟಹಾಸಕ್ಕೆ ಪರಿಹಾರ ಮಾಡಲಾಯಿತು. »ಪುಟ 6



ಇಲ್ಲಿ ಹೆಚ್ಚುತ್ತಲೇ ಇದೆ ಬೀದಿ ಶ್ವಾನಗಳ ಹಾವಳಿ

ಪುಳಿಕುತ್ತಿ, ಪ್ರತಾಪನಗರ, ಅಗರ್ತಿಮೂಲೆ ಸಹಿತ ಪರಿಸರ ಪ್ರದೇಶದಲ್ಲಿ ಬೀದಿನಾಯಿಗಳ ಕಾಟ ವ್ಯಾಪಕಗೊಳ್ಳುತ್ತಲೇ ಇವೆ.

ಎನ್‌ಎಚ್ 66ರಲ್ಲಿ ದಿನನಿತ್ಯ ಅಪಘಾತ | ಟ್ರಾಫಿಕ್ ಪೊಲೀಸರಿಂದ ಕ್ರಮ 2
ಗ್ರಾಮಗಳ ಅಭಿವೃದ್ಧಿಯಲ್ಲಿ ಸ್ಥಳೀಯರ ಸಹಕಾರ ಅತ್ಯಗತ್ಯ: ಶಾಸಕಿ ಮುರುಳ್ಯ 4
ಕೇರಳ ಎಡರಂಗ ಸರಕಾರದಿಂದ ಬಡವರಿಗೆ ಅನ್ಯಾಯ: ಬಿಜೆಪಿ ಆರೋಪ 5
ಕಾರ್ಕಳ, ಬಜಗೋಳಿ, ಮಾಳ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳ ಪ್ರಗತಿ ಪರಿಶೀಲನೆ 6

ಸುತ್ತಮುತ್ತ

ಇಂದು ಬಂಟ್ವಾಳದಲ್ಲಿ ಬಿಜೆಪಿಯಿಂದ ಜಾಗೃತಿ ಜಾಥ

ಬಂಟ್ವಾಳ: ಬಿಜೆಪಿ ಬಂಟ್ವಾಳ ಮಂಡಲ ವತಿಯಿಂದ 'ವಿಬಿ–ಜಿ ರಾಮ್ ಜಿ'ಕಾಯ್ದೆಯ ಬಗ್ಗೆ ಜನಜಾಗೃತಿ ಮೂಡಿಸಲು ಫೆ.18ರಂದು ಬೆಳಿಗ್ಗೆ 9.30ಕ್ಕೆ ಬಿ.ಸಿ.ರೋಡಿನಲ್ಲಿ ಕಾಲ್ನಡಿಗೆ ಜಾಥಾ ಹಾಗೂ ಸಭಾ ಕಾರ್ಯಕ್ರಮ ನಡೆಯಲಿದೆ. ಬಿ.ಸಿ.ರೋಡಿನ ಕೈಕಂಬ ಪೊಳಲಿ ದ್ವಾರದ ಬಳಿಯಿಂದ ಬಿಸಿ ರೋಡ್ ವರೆಗೆ ಕಾಲ್ನಡಿಗೆ ಜಾಥಾ ನಡೆಯಲಿದ್ದು, ಬಳಿಕ ಸಭಾ ಕಾರ್ಯಕ್ರಮ ನಡೆಯಲಿದೆ. ಪಕ್ಷದ ಎಲ್ಲಾ ಪದಾಧಿಕಾರಿಗಳು, ಕಾರ್ಯಕರ್ತರು ಭಾಗವಹಿಸುವಂತೆ ಪಕ್ಷದ ಪ್ರಕಟಣೆ ತಿಳಿಸಿದೆ.

ಇಂದಿನಿಂದ 23ರವರೆಗೆ ಕಜೆಕಾರಿನಲ್ಲಿ ದ್ವಾದಶ ಜ್ಯೋತಿರ್ಲಿಂಗ ದರ್ಶನ

ಬಂಟ್ವಾಳ: ಕಜೆಕಾರಿನ ಶ್ರೀ ಮಹಾದೇವ ದೇವೇಶ್ವರ ದೇವಸ್ಥಾನದ ವಠಾರದಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ವತಿಯಿಂದ ಪ್ರಸಿದ್ಧ ದ್ವಾದಶ ಜ್ಯೋತಿರ್ಲಿಂಗ ದರ್ಶನ ಕಾರ್ಯಕ್ರಮ ಫೆ.18ರಿಂದ 23ರವರೆಗೆ ನಡೆಯಲಿದೆ ಎಂದು ರಾಜಯೋಗಿನಿ ಬ್ರಹ್ಮಕುಮಾರಿ ಸರೋಜಿನಿ ತಿಳಿಸಿದರು. ಬಂಟ್ವಾಳ ಪ್ರೆಸ್ ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬ್ರಹ್ಮಕಲಶೋತ್ಸವ ಹಿನ್ನೆಲೆ ಜ್ಯೋತಿರ್ಲಿಂಗ ದರ್ಶನ ಏರ್ಪಡಿಸಲಾಗಿದೆ ಎಂದರು. ಬ್ರಹ್ಮಕುಮಾರಿ ವಿಶ್ವವಿದ್ಯಾಲಯದಲ್ಲಿ ಜಾತಿ, ಮತ ತಾರತಮ್ಯವಿಲ್ಲದೆ ಆಧ್ಯಾತ್ಮಿಕ ಶಿಕ್ಷಣ ನೀಡಲಾಗುತ್ತಿದೆ. ಸೋಮನಾಥ, ಮಲ್ಲಿಕಾರ್ಜುನ, ಮಹಾಕಾಲೇಶ್ವರ, ಓಂಕಾರೇಶ್ವರ, ವೈದ್ಯನಾಥ, ಭೀಮಾಶಂಕರ, ರಾಮೇಶ್ವರ, ನಾಗೇಶ್ವರ, ವಿಶ್ವನಾಥ, ತ್ರಯಂಭಕೇಶ್ವರ, ಕೇದಾರನಾಥ, ಗ್ರೀಷ್ಣೇಶ್ವರ ಲಿಂಗಗಳ ದರ್ಶನ ಇರಲಿದೆ ಎಂದರು. ಈ ಸಂದರ್ಭ ಬ್ರಹ್ಮಕುಮಾರರಾದ ಮಂಜುನಾಥ, ಪ್ರಕಾಶ್ ಉಪಸ್ಥಿತರಿದ್ದರು.

ಫೆ.20, 21: ಕೊಂಡೇಲ ದೈವಸ್ಥಾನದಲ್ಲಿ ನೇಮ

ಕಿನ್ನಿಗೋಳಿ: ಕಟೀಲು ಸಮೀಪದ ಕೊಂಡೇಲ ಶ್ರೀ ಕೊಂಡೇಲಾತ್ತಯ ದೈವಸ್ಥಾನದಲ್ಲಿ ಶ್ರೀ ಕೊಂಡೇಲ್ತಾಯ, ರಕ್ತೇಶ್ವರೀ ಮತ್ತು ಪಂಜುರ್ಲಿ ದೈವಗಳ ವರ್ಷಾವಧಿ ಚೌತಿ ಹಬ್ಬ ಹಾಗೂ ನೇಮ ಫೆ. 20 ಹಾಗೂ 21ಕ್ಕೆ ನಡೆಯಲಿದೆ. ಫೆ.20ಕ್ಕೆ ಸಂಜೆ ಕಲಶಾಭಿಷೇಕ , ಸತ್ಯನಾರಾಯಣ ಪೂಜೆ, ಚೌತಿ ಹಬ್ಬ, ಸಾಂಸ್ಕೃತಿಕ ಕಾರ್ಯಕ್ರಮ , ಫೆ.21ಕ್ಕೆ ಬೆಳಿಗ್ಗೆ ಕೊಂಡೇಲ್ತಾಯ ದೈವದ ಭಂಡಾರ ಇಳಿಸುವುದು. ಅನ್ನಸಂತರ್ಪಣೆ, ಸಂಜೆ ಧಾರ್ಮಿಕ ಸಭೆ ಸಾಧಕರಿಗೆ ಸನ್ಮಾನ , ರಕ್ತೇಶ್ವರೀ ದೈವದ ನೇಮ, ಕೋಂಡೇಲ್ತಾಯ ದೈವದ ನೇಮ , ಪಂಜುರ್ಲಿ ದೈವದ ನೇಮ ನಡೆಯಲಿದೆ ಎಂದು ಆಡಳಿತ ಮಂಡಳಿಯ ಅಧ್ಯಕ್ಷ ಲೋಕಯ್ಯ ಸಾಲ್ಯಾನ್ ಕೊಂಡೇಲ ತಿಳಿಸಿದ್ದಾರೆ.

ಶಿಕ್ಷಕ ಕೆ.ಪಿ. ನಿಂಗರಾಜು ಅವರಿಗೆ ಭಡ್ತಿ

ಆಲಂಕಾರು: ಸವಣೂರು ಸರಕಾರಿ ಉನ್ನತ ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕ ಕೆ.ಪಿ.



ನಿಂಗರಾಜು ಅವರು ಹಿರಿಯ ಮುಖ್ಯೋಪಾಧ್ಯಾಯರಾಗಿ ಭಡ್ತಿ ಹೊಂದಿ ಮಂಗಳೂರು ವಾಮಂಜೂರಿನ ತಿರುವೈಲಿನ ದ.ಕ. ಜಿಲ್ಲಾ ಪಂಚಾಯತ್ ಮಾದರಿ ಕನ್ನಡ ಮತ್ತು ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಗೆ ವರ್ಗಾವಣೆಗೊಂಡಿದ್ದಾರೆ. ಅವರು ಆಲಂಕಾರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ ಕರ್ತವ್ಯ ನಿರ್ವಹಿಸಿದ್ದರು.

ಗವಿನ್ ರೇಶಿಮೆ ಅವರಿಗೆ ರಾಷ್ಟ್ರ ಮಟ್ಟದಲ್ಲಿ ಬೆಳ್ಳಿ

ಉಪ್ಪಿನಂಗಡಿ: ಗುಜರಾತಿನ ಅಹಮದಾಬಾದಿನಲ್ಲಿ ನಡೆದ ರಾಷ್ಟ್ರೀಯ ಮೇಳದಲ್ಲಿ (ಇನಿಶಿಯೇಟಿವ್ ಫಾರ್ ಇನ್ನೋವೇಶನ್ ಆಂಡ್ ರಿಸರ್ಚ್



ಇನ್ ಸ್ಟೆಮ್) ಇಂದ್ರಪ್ರಸ್ಥ ವಿದ್ಯಾಲಯದ 7ನೇ ತರಗತಿಯ ಗವಿನ್ ರೇಶಿಮೆ ಅವರು 'ಹೈವ್‌ಗಾರ್ಡ್ 360' ಸ್ಮಾರ್ಟ್ ಇಲೆಕ್ಟ್ರಿಕ್ ಸ್ಮೋಕರ್ ವಿತ್ ಹೈವ್ ಮಾನಿಟರಿಂಗ್ ಸಿಸ್ಟಮ್ ಯೋಜನೆಗಾಗಿ ರಾಷ್ಟ್ರ ಮಟ್ಟದಲ್ಲಿ ಬೆಳ್ಳಿಯ ಪದಕ ಪಡೆದಿದ್ದಾರೆ. ಅವರಿಗೆ ಸಂಸ್ಥೆಯ ವಿಜ್ಞಾನ ಶಿಕ್ಷಕಿ ನಿಶಿತ ಕೆ.ಕೆ. ಹಾಗೂ ರೇಣುಕಾ ಕೆ. ಮಾರ್ಗದರ್ಶನ ನೀಡಿದ್ದಾರೆ ಎಂದು ಸಂಸ್ಥೆಯ ಮುಖ್ಯ ಶಿಕ್ಷಕಿ ವೀಣಾ ಆರ್. ಪ್ರಸಾದ್ ತಿಳಿಸಿದ್ದಾರೆ.

ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಅವರಿಗೆ ಸಾರ್ವಜನಿಕರಿಂದ ಅಹವಾಲು ಸಲ್ಲಿಕೆ | ಕ್ರಮದ ಭರವಸೆ

ಜನವಸತಿ ಪ್ರದೇಶಗಳಲ್ಲಿ ಹೆಚ್ಚುತ್ತಿದೆ ಕಾಡಾನೆಗಳ ಉಪಟಳ

ಸುಳ್ಯ: ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಅವರ ತಾಲೂಕು ಪಂಚಾಯತ್ ಶಾಸಕರ ಕಚೇರಿಯಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು.

ಸೂಕ್ತ ಕ್ರಮಕ್ಕೆ ನಿರ್ಣಯ

ಅರಂತೋಡು ಗ್ರಾಮದ ಅಡ್ತಲೆ ನಾಗರಿಕ ಹಿತರಕ್ಷಣಾ ವೇದಿಕೆ ವತಿಯಿಂದ ಶಾಸಕರಿಗೆ ಮನವಿ ಸಲ್ಲಿಸಿ, ಅಡ್ತಲೆ ಪ್ರದೇಶದಲ್ಲಿ ನಿರಂತರವಾಗಿ ಆಗುತ್ತಿರುವ ಆನೆ ಹಾವಳಿಯಿಂದ ಅಡ್ತಲೆ ಭಾಗದಲ್ಲಿ ಕೃಷಿಕರು, ಗ್ರಾಮಸ್ಥರು ಬದುಕು ನಡೆಸಲು ಆತಂಕ ಪಡುವಂತಾಗಿದ್ದು, ಸಂಜೆಯಾಗುತ್ತಲೇ ಕಾಡಾನೆಗಳು ರಸ್ತೆಗೆ ಇಳಿದು, ಜನವಸತಿ ಪ್ರದೇಶಕ್ಕೆ ಬರುತ್ತಿವೆ. ಇತ್ತೀಚೆಗೆ ನಾವು ಸಮಾಲೋಚನಾ ಸಭೆ ನಡೆಸಿ ಆನೆ ಹಾವಳಿಗೆ ಶಾಶ್ವತ ಪರಿಹಾರಕ್ಕೆ ನಿರ್ಣಯ ಕೈಗೊಂಡಿದ್ದೇವೆ. ಆದ್ದರಿಂದ ಆನೆ ಹಾವಳಿ ತಡೆಗಟ್ಟಲು ಶಾಶ್ವತ ಪರಿಹಾರ ಕ್ರಮ ಯೋಜಿಸಲು ಶಾಸಕರ ನೇತೃತ್ವದಲ್ಲಿ ಅರಣ್ಯ ಇಲಾಖೆ ಜೊತೆಗೂಡಿ ಡಿಸಿಎಫ್, ಎಸಿಎಫ್ ಸಮ್ಮುಖದಲ್ಲಿ ಅಡ್ತಲೆಯಲ್ಲಿ ಸಾರ್ವಜನಿಕರೊಂದಿಗೆ ಸಮಾಲೋಚನಾ ಸಭೆ ನಡೆಸಬೇಕು ಎಂದು ಮನವಿ ಸಲ್ಲಿಸಲಾಯಿತು.



ಸಭೆ ಕರೆಯಲು ಮನವಿ

ಕೃಷಿ ಹಾಗೂ ವಸತಿ ಪ್ರದೇಶಗಳತ್ತ ಕಾಡಾನೆ ಬರುತ್ತಿದ್ದು, ಈ ನಿಟ್ಟಿನಲ್ಲಿ ಸಭೆ ಕರೆದು ಸೂಕ್ತ ಕ್ರಮ ಕೈಗೊಳ್ಳುವಂತೆ ಮನವಿಯಲ್ಲಿ ಒತ್ತಾಯಿಸಲಾಗಿದೆ.

ಮನವಿ ಸ್ವೀಕರಿಸಿದ ಶಾಸಕರು, ಈ ಕುರಿತು ಇಲಾಖೆ ಜೊತೆಗೆ ಚರ್ಚಿಸಿ ಪೂರಕ ಕ್ರಮ ಕೈಗೊಳ್ಳುವ ಭರವಸೆ ನೀಡಿದರು. ಸುಳ್ಯದ ಅಮೃತ ಭವನದ ದುರಸ್ತಿ ಕಾರ್ಯ ಆರಂಭಿಸಲಾಗಿದ್ದು, ಅದರ ಅಭಿವೃದ್ಧಿಗೆ ಅನುದಾನ ನೀಡಬೇಕು, ಸವಣೂರು ಅಂಕತ್ತಡ್ಕ ಶಾಲಾ ಕೊಠಡಿಗೆ ಅನುದಾನ, ಚೆನ್ನಾವರ ಶಿರಾಡಿ ದೈವಸ್ಥಾನದ ಜೀರ್ಣೋದ್ಧಾರ ಕಾರ್ಯಕ್ಕೆ ಅನುದಾನ ಒದಗಿಸಬೇಕು, ಗಂಗಾ ಕಲ್ಯಾಣ ಯೋಜನೆಯಡಿ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು, ವಿವಿಧ ಕಡೆಗಳ ರಸ್ತೆಗೆ, ಶಾಲಾ ಕೊಠಡಿಗೆ ಅನುದಾನ ಒದಗಿಸುವಂತೆ ಕೋರಿ ಸಾರ್ವಜನಿಕರು ಅಹವಾಲು ಸಲ್ಲಿಸಿದರು. ಸಾರ್ವಜನಿಕ ರಸ್ತೆಯ ಕುರಿತಾಗಿ ಶಾಸಕಿ ಅಧಿಕಾರಿಗಳ ಜೊತೆಗೆ ಸಮಾಲೋಚನೆ ನಡೆಸಿದರು.

ಈ ಸಂದರ್ಭ ಸರಕಾರಿ ಸಹಾಯಕ ಹರೀಶ್ ಆಪ್ತ ಸಹಾಯಕ ಪ್ರಸಾದ್ ಕಾಟೂರ್, ಪ್ರಮುಖರಾದ ಕೇಶವ ಅಡ್ತಲೆ, ಪ್ರವೀಣ್ ಚೆನ್ನಾವರ, ಮಹೇಶ್ ರೈ ಮೇನಾಲ, ಶಂಕರ ಪೆರಾಜೆ ಮತ್ತಿತರರು ಉಪಸ್ಥಿತರಿದ್ದರು.

ಲಂಚ ಸ್ವೀಕಾರ ವೀಡಿಯೋ ವೈರಲ್: ದೂರು ಬಂದರೆ ಸೂಕ್ತ ಕ್ರಮ

ಕಡಬದಲ್ಲಿ ಅಧಿಕಾರಿಯೋರ್ವರು ಲಂಚ ಸ್ವೀಕಾರಿಸಿದ್ದಾರೆ ಎಂದು ವೈರಲ್ ಆಗುತ್ತಿರುವ ವೀಡಿಯೋಗೆ ಸಂಬಂಧಿಸಿದಂತೆ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಭಾಗೀರಥಿ ಮುರುಳ್ಯ, ಕಡಬದಲ್ಲಿ ತಾಲೂಕು ಕಚೇರಿಗೆ ಭೇಟಿ ನೀಡುವ ಸಂದರ್ಭದಲ್ಲಿ ಅಧಿಕಾರಿಗಳನ್ನು ಕರೆಸಿ ಸಾರ್ವಜನಿಕರಿಗೆ ಉತ್ತಮ ಹಾಗೂ ಕ್ಲಪ್ತ ಸಮಯದಲ್ಲಿ ಕೆಲಸ ಮಾಡಿಕೊಡುವಂತೆ ನಿರಂತರ ಸೂಚಿಸುತ್ತಿದ್ದೇನೆ. ಅಧಿಕಾರಿಗಳು ಸರಿಯಾಗಿ ಕರ್ತವ್ಯ ನಿರ್ವಹಿಸದೇ ಇರುವುದು ಕಂಡು ಬಂದಲ್ಲಿ ಅವರ ವಿರುದ್ಧ ದೂರು ಬಂದಲ್ಲಿ ಸೂಕ್ತ ಕ್ರಮ ವಹಿಸುತ್ತೇನೆ. ಕಡಬದ ವಿಚಾರದ ಬಗ್ಗೆಯೂ ಸಂಬಂಧಿಸಿದವರಿಂದ ಮಾಹಿತಿ ಪಡೆಯುತ್ತೇನೆ ಎಂದು ಹೇಳಿದರು. ಅಲ್ಲದೆ, ರೂ.25 ಕೋಟಿ ವೆಚ್ಚದ ಕಾಮಗಾರಿ ಪಟ್ಟಿ ಕುರಿತು ಪ್ರಕಟಗೊಂಡ ವರದಿಯು ಶಾಸಕರ ಕಚೇರಿಯಿಂದ ನೀಡಿದಲ್ಲ, ಶಾಸಕರ ನಿಧಿಯ ಕುರಿತು ಮುಂದೆ ಅಧಿಕೃತ ಪಟ್ಟಿಯನ್ನು ಪ್ರಕಟಪಡಿಸಲಾಗುವುದು ಎಂದು ಶಾಸಕಿ ಮುರುಳ್ಯ ಅವರು ತಿಳಿಸಿದರು.

ಉಪ್ಪಿನಂಗಡಿ ಸೂರ್ಯ ಆಸ್ಪತ್ರೆಯ ವಾರ್ಷಿಕೋತ್ಸವದಲ್ಲಿ ಡಾ. ಶ್ರೀಪತಿ ರಾವ್

ಉದಾತ್ತ ಚಿಂತನೆಯಿದ್ದರೆ ಸೇವಾ ಕಾರ್ಯ ಸಾಧ್ಯ

ಉಪ್ಪಿನಂಗಡಿ: ಸವಾಲುಗಳ ನಡುವೆ ಗ್ರಾಮೀಣ ಪ್ರದೇಶದಲ್ಲಿ ಸ್ಪೆಷಾಲಿಟಿ ಆಸ್ಪತ್ರೆಯನ್ನು ಸ್ಥಾಪಿಸಿ ಮುನ್ನಡೆಸುತ್ತಿರುವುದರ ಹಿಂದೆ ಸೂರ್ಯ ಆಸ್ಪತ್ರೆಯ ಆಡಳಿತಗಾರರ ಸಾಮಾಜಿಕ ಕಳಕಳಿ ಪ್ರಕಟೀಕರಣಗೊಂಡಿದೆ ಎಂದು ಐಎಂಎ ಪುತ್ತೂರು ವಲಯದ ಅಧ್ಯಕ್ಷ ಡಾ. ಶ್ರೀಪತಿ ರಾವ್ ತಿಳಿಸಿದರು.

ಉಪ್ಪಿನಂಗಡಿಯ ಸೂರ್ಯ ಆಸ್ಪತ್ರೆಯ ಪ್ರಥಮ ವಾರ್ಷಿಕೋತ್ಸವ ದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಆರೋಗ್ಯ ರಕ್ಷಣೆ ವ್ಯಕ್ತಿಯ ಜೀವನದ ಪ್ರಮುಖ ಘಟ್ಟ, ಯಾವುದೇ ಸಾಧನೆ ಸಾಧಿಸಲ್ಪಡಲು ಆರೋಗ್ಯ ಅತೀ ಅಗತ್ಯ. ಈ ನಿಟ್ಟಿನಲ್ಲಿ ಎಲ್ಲಾ ಬಗೆಯ ಅದರಲ್ಲೂ ಮುಖ್ಯವಾಗಿ ದೂರದ ಮಂಗಳೂರಿನ ಆಸ್ಪತ್ರೆಗಳನ್ನೇ ಅವಲಂಬಿಸಬೇಕಾಗಿದ್ದ ದೊಡ್ಡ ಮಟ್ಟದ ಶಸ್ತ್ರಚಿಕಿತ್ಸೆಗಳನ್ನು ಉಪ್ಪಿನಂಗಡಿಯಲ್ಲಿಯೇ ದೊರಕಿಸಿದ ಹಿರಿಮೆ ಡಾ.ರಾಜೇಶ್ ಸೂರ್ಯಂಬೈಲು ರವರದ್ದಾಗಿದೆ. ಮಾತ್ರವಲ್ಲದೆ ಸಂಸ್ಥೆಯ ಪ್ರಥಮ ವಾರ್ಷಿಕೋತ್ಸವವನ್ನು ಉಚಿತ ವೈದ್ಯಕೀಯ ಶಿಬಿರ ಆಯೋಜಿಸುವ ಮೂಲಕ ಸಮಾಜಕ್ಕೆ ಸಹಕಾರಿಯಾಗಿಯೂ ನಡೆಸಿದ್ದಾರೆ. ವೃತ್ತಿಯೊಳಗೆ ಮಾನವೀಯ ಮೌಲ್ಯ ಮೈತಾಳಿದಾಗ ಇಂತಹ ಉದಾತ್ತ ಯೋಚನೆ ರೂಪುಗೊಳ್ಳಲು ಸಾಧ್ಯವೆಂದರು.



ಶ್ರೀ ಕ್ಷೇತ್ರ ಧರ್ಮಸ್ಥಳದ ಸಂಪೂರ್ಣ ಸುರಕ್ಷಾ ಯೋಜನೆಯ ಪ್ರಾದೇಶಿಕ ನಿರ್ದೇಶಕ ಗಣೇಶ್ ಬಿ. ಮುಖ್ಯ ಅತಿಥಿಯಾಗಿ ಭಾಗವಹಿಸಿ, ಆರೋಗ್ಯ ವಿಮಾ ಯೋಜನೆಯಲ್ಲಿ 872 ಕೋಟಿ ಪ್ರೀಮಿಯಂ ಪಾವತಿಸಲ್ಪಟ್ಟಿದ್ದರೆ, 892 ಕೋಟಿ ವಿಮಾ ಕ್ಲೈಮ್ ಆಗಿ ಪಾವತಿಸಲ್ಪಟ್ಟಿದೆ. ಕುಟುಂಬಕ್ಕೆ ಭದ್ರತೆ ಒದಗಿಸುವ ಈ ಯೋಜನೆಯ ವ್ಯಾಪ್ತಿಯಲ್ಲಿ ಸೂರ್ಯ ಆಸ್ಪತ್ರೆಯು ಒಳಗಾಗಲಿದೆ ಎಂದರು.

ಸೂರ್ಯ ಆಸ್ಪತ್ರೆಯ ಆಡಳಿತಾಧಿಕಾರಿ ಡಾ. ಚಂದ್ರಲೇಖಾ ಮಾತನಾಡಿ, ಕಳೆದ ಒಂದು ವರ್ಷದ ಅವಧಿಯಲ್ಲಿ ನಮ್ಮ ಆಸ್ಪತ್ರೆಯಲ್ಲಿ 18,313 ಹೊರ ರೋಗಿಗಳಿಗೆ, 540 ಒಳ ರೋಗಿಗಳಿಗೆ ಚಿಕಿತ್ಸೆ ನೀಡಲಾಗಿದೆ. 190 ದೊಡ್ಡ ಮಟ್ಟದ ಶಸ್ತ್ರ ಚಿಕಿತ್ಸೆ, 395 ಸಣ್ಣ ಶಸ್ತ್ರ ಚಿಕಿತ್ಸೆಗಳು ನಡೆದಿದ್ದು, ಎಲ್ಲಾ ವಿಭಾಗಗಳ ನುರಿತ ವೈದ್ಯರಿಂದ ಸೇವೆ ಒದಗಿಸಲಾಗುತ್ತಿದೆ ಎಂದರು. ಆಸ್ಪತ್ರೆಯ ವಾರ್ಷಿಕೋತ್ಸವದ ಅಂಗವಾಗಿ ಸಾರ್ವಜನಿಕರ ಅನುಕೂಲತೆಗಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ, ಹೆಲ್ತ್ ಪ್ಯಾಕೇಜ್ ಮತ್ತು ಹೆಲ್ತ್ ಕಾರ್ಡ್ ಬಿಡುಗಡೆ ಕಾರ್ಯಕ್ರಮ ನಡೆಯಿತು. ಹಾಗೂ ಎಲುಬು, ಮೂಳೆ, ಮತ್ತು ಕೀಲು ತಪಾಸಣೆಯೂ ನಡೆಯಿತು. ಮತ್ತು ರಕ್ತ ಪರೀಕ್ಷೆ ಹಾಗೂ ಆಸ್ಪತ್ರೆಯ ಔಷಧಾಲಯದಲ್ಲಿ ಖರೀದಿಸುವ ಔಷಧಗಳಿಗೆ ವಿಶೇಷ ರಿಯಾಯಿತಿ, ಇಸಿಜಿ , ಎಕ್ಸ್ರೇ ಹಾಗೂ ರಕ್ತ ತಪಾಸಣಾ ಕಾರ್ಯಗಳಿಗೆ ಶೇ. 50ರ ರಿಯಾಯಿತಿಯನ್ನೂ ನೀಡಲಾಯಿತು.

ಸೂರ್ಯಂಬೈಲ್ ಫಾರ್ಮ್ಸ್ ಮುಖ್ಯಸ್ಥ ಶಾಂತಾರಾಮ್ ಭಟ್ ಎಸ್ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಾ. ರಾಜೇಶ್ ಸ್ವಾಗತಿಸಿ, ಆಸ್ಪತ್ರೆಯ ವ್ಯವಸ್ಥಾಪಕ ಸುಮಂತ್ ವಂದಿಸಿ, ವಿನ್ಸೆಂಟ್ ಕಾರ್ಯಕ್ರಮ ನಿರೂಪಿಸಿದರು.

ಎನ್‌ಎಚ್ 66ರಲ್ಲಿ ದಿನನಿತ್ಯವೂ ಅಪಘಾತ | ಟ್ರಾಫಿಕ್ ಪೊಲೀಸರಿಂದ ಕ್ರಮ

30 ಕಡೆಗಳಲ್ಲಿ ಎಚ್ಚರಿಕೆ ನಾಮಫಲಕ ಅಳವಡಿಕೆ

ಮುಲ್ಕಿ: ಮಂಗಳೂರು ಉತ್ತರ ಪೊಲೀಸ್ ಠಾಣಾ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ 66ರ ಹಾಗೂ ಇನ್ನಿತರ 30 ಕಡೆ ನಿದಾನವಾಗಿ ಚಲಿಸಿ ಎಂಬ ಎಚ್ಚರಿಕೆ ನಾಮಫಲಕವನ್ನು ಮಂಗಳೂರು ಪೊಲೀಸ್ ಕಮಿಷನರ್ ವತಿಯಿಂದ ಅಳವಡಿಸಲಾಗುತ್ತಿದೆ.

ಮಂಗಳೂರು ಉತ್ತರ ಪೊಲೀಸ್ ಠಾಣಾ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ 66ರ ಅಪಘಾತ ವಲಯ ಪ್ರದೇಶಗಳಾದ ಬಪ್ಪನಾಡು ಜಂಕ್ಷನ್, ಮುಲ್ಕಿ ಬಸ್ ನಿಲ್ದಾಣ ಜಂಕ್ಷನ್, ಮುಲ್ಕಿ ವಿಜಯ ಸನ್ನಿಧಿ, ಕೋಲ್ನಾಡು ಜಂಕ್ಷನ್, ಹಳೆಯಂಗಡಿ ಜಂಕ್ಷನ್, ಪಾವಂಜೆ ಜಂಕ್ಷನ್, ಮುಕ್ಕಾ ಸುರತ್ಕಲ್, ಬೈಕಂಪಾಡಿ ಸಹಿತ ಅನೇಕ ಅಪಘಾತ ವಲಯ ಪ್ರದೇಶಗಳಲ್ಲಿ ಬೃಹತ್ ಗಾತ್ರದ 'ಎಚ್ಚರಿಕೆ ನಿಧಾನವಾಗಿ ಚಲಿಸಿ' ಎಂಬ ನಾಮ ಫಲಕವನ್ನು ಅಳವಡಿಸಲಾಗುತ್ತಿದೆ ಎಂದು ಮಂಗಳೂರು ಉತ್ತರ ಪೊಲೀಸ್ ಠಾಣಾ ವ್ಯಾಪ್ತಿಯ ಪೊಲೀಸರು ತಿಳಿಸಿದ್ದಾರೆ.

ಸರ್ವಿಸ್ ರಸ್ತೆ ನಿರ್ಮಿಸಿ

ರಾಷ್ಟ್ರೀಯ ಹೆದ್ದಾರಿ ಬಪ್ಪನಾಡು ಬಳಿಯಿಂದ ಮುಕ್ಕ ವರೆಗೆ ಅರ್ಧಂಬರ್ಧ ಸರ್ವಿಸ್ ರಸ್ತೆ ಕಾಮಗಾರಿ ನಡೆದಿದ್ದು, ಪೂರ್ತಿ ಕಾಮಗಾರಿ ನಡೆಸುವಂತೆ ಸಾರ್ವಜನಿಕ ಒತ್ತಾಯಿಸಿದ್ದಾರೆ. ಎಡೆಬಿಡದೆ ವಾಹನಗಳು ಚಲಿಸುತ್ತಿರುವ ರಾಷ್ಟ್ರೀಯ ಹೆದ್ದಾರಿ 66ರ ಮುಲ್ಕಿ ಹಾಗೂ ಹಳೆಯಂಗಡಿ ಜಂಕ್ಷನ್



ಹೆಚ್ಚುತ್ತಿದೆ ಅಪಘಾತ

ಇತ್ತೀಚೆಗೆ ರಾಷ್ಟ್ರೀಯ ಹೆದ್ದಾರಿ 66ರ ಮುಲ್ಕಿ, ಹಳೆಯಂಗಡಿ,ಪಾವಂಜೆ ,ಮುಕ್ಕ ಸುರತ್ಕಲ್ ಜಂಕ್ಷನ್ ಬಳಿ ಹಲವಾರು ಅಪಘಾತಗಳು ಸಂಭವಿಸಿದ್ದು, ಅನೇಕರು ಪ್ರಾಣ ಕಳೆದುಕೊಂಡಿದ್ದಾರೆ. ಹಾಗೂ ಇನ್ನೂ ಹಲವಾರು ಗಾಯಾಳುವಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ತೀರಾ ಅಪಾಯಕಾರಿಯಾಗಿದ್ದು, ಈ ಭಾಗದಲ್ಲಿ ತುರ್ತು ಸರ್ವಿಸ್ ರಸ್ತೆ ನಿರ್ಮಾಣದ ಅಗತ್ಯವಿದೆ ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಪೊಲೀಸರ ಕೊರತೆ

ರಾಷ್ಟ್ರೀಯ ಹೆದ್ದಾರಿ ಅಪಾಯಕಾರಿ ಜಂಕ್ಷನ್ ಗಳಲ್ಲಿ ಅತಿ ವೇಗದಿಂದ ಚಲಿಸುವ ವಾಹನಗಳನ್ನು ನಿಯಂತ್ರಿಸಲು ಟ್ರಾಫಿಕ್ ಪೊಲೀಸ್ ಸಿಬ್ಬಂದಿಯ ಅವಶ್ಯಕತೆ ಇದ್ದು ಕೊರತೆ ಕಾಣುತ್ತಿದೆ. ಮಂಗಳೂರು ಉತ್ತರ ಪೊಲೀಸ್ ಠಾಣೆ ಅತಿ ವಿಶಾಲವಾಗಿದ್ದು ಕೂಳೂರಿನಿಂದ ದಕ್ಷಿಣ ಕನ್ನಡ ಜಿಲ್ಲೆಯ ಗಡಿಭಾಗದ ಬಪ್ಪನಾಡುವರೆಗೆ ಅಲ್ಲದೆ ಒಳಭಾಗದ ಕಿನ್ನಿಗೋಳಿ, ಏಳಿಂಜೆ, ಐಕಳ, ಮೂರು ಕಾವೇರಿವರೆಗೆ ವ್ಯಾಪ್ತಿಯಲ್ಲಿ ಕೆಲವೇ ಸಿಬ್ಬಂದಿಗಳ ಜೊತೆ ಮಂಗಳೂರು ಉತ್ತರ ಪೊಲೀಸ್ ಠಾಣೆಯ ಸಿಬ್ಬಂದಿಗಳು ಕಾರ್ಯನಿರ್ವಹಿಸುವುದು ಕಷ್ಟದಾಯಕವಾಗಿ ಪರಿಣಮಿಸಿದೆ

ಪೊಲೀಸ್ ಔಟ್ ಪೋಸ್ಟ್‌ಗೆ ಆಗ್ರಹ

ಮಂಗಳೂರು ಉತ್ತರ ಪೊಲೀಸ್ ಠಾಣೆ ಬೈಕಂಪಾಡಿ ಜೋಕಟ್ಟೆ ರಸ್ತೆಯ ಸುಮಾರು ಒಳಗಡೆ ಕಾರ್ಯಾ ಚರಿಸುತ್ತಿದ್ದು ಕಿನ್ನಿಗೋಳಿ, ಮುಲ್ಕಿಯಲ್ಲಿ ಅಪಘಾತವಾದರೆ ಟ್ರಾಫಿಕ್ ಪೊಲೀಸರನ್ನು ಸಂಪರ್ಕಿಸಲು ಹರಸಾಹಸ ಪಡಬೇಕಾಗುತ್ತದೆ ಮುಲ್ಕಿ ಕಿನ್ನಿಗೋಳಿ ಪರಿಸರದಲ್ಲಿ ಮಂಗಳೂರು ಉತ್ತರ ಟ್ರಾಫಿಕ್ ಪೊಲೀಸ್ ಔಟ್ ಪೋಸ್ಟ್‌ನ ಅಗತ್ಯವಿದೆ ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

'ಮನೆಯೇ ಮಂತ್ರಾಲಯ'ವೆಂಬುದು ಸುಸಂಸ್ಕೃತ ಕುಟುಂಬಕ್ಕೆ ಸಾಕ್ಷಿ: ಕಜಂಪಾಡಿ



ಬಂಟ್ವಾಳ: ಕಲ್ಲಡ್ಕ ಶ್ರೀರಾಮ ವಿದ್ಯಾಕೇಂದ್ರ ಮತ್ತು ಶ್ರೀರಾಮ ಪದವಿಪೂರ್ವ ವಿದ್ಯಾಲಯ ವಿಂಶತಿ ಸಂಭ್ರಮದ ನಿಮಿತ್ತ 'ಕುಟುಂಬ ಮಿಲನ– ವಿವೇಕ ಸಂಗಮ'ವು ಮಂಗಳೂರಿನ ಮಂಗಳಾದೇವಿ ರಾಮಕೃಷ್ಣ ಮಠದಲ್ಲಿ ನಡೆಯಿತು.

ಮಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷ ಜಿತಕಾಮಾನಂದಜಿ ಕಾರ್ಯಕ್ರಮ ಉದ್ಘಾಟಿಸಿ, ಕೌಟುಂಬಿಕ ಜೀವನದಲ್ಲಿ ಆಧ್ಯಾತ್ಮಿಕತೆ ತೊಡಗಿಸಿ ಮುನ್ನಡೆಯಬೇಕೆಂದರು.

ಮುಖ್ಯ ಅತಿಥಿ ಆರ್‌ಎಸ್‌ಎಸ್‌ನ ರಾಷ್ಟ್ರೀಯ ಕಾರ್ಯಕಾರಿಣಿಯ ಆಮಂತ್ರಿತ ಸದಸ್ಯ ಕಜಂಪಾಡಿ ಸುಬ್ರಹ್ಮಣ್ಯ ಭಟ್ ಮಾತನಾಡಿ, ಮನೆಯೇ ಮೊದಲ ಪಾಠಶಾಲೆ. ಮನೆಯೇ ಮಂತ್ರಾಲಯವೆಂಬುದು ಸುಸಂ ಸ್ಕೃತ ಕುಟುಂಬಕ್ಕೆ ಸಾಕ್ಷಿಯಾಗಿದೆ. ಸುಸಂಸ್ಕೃತ ಕುಟುಂಬ ದೇಶಭಕ್ತಿ ಮೂಡಿಸುವಲ್ಲಿ ಪ್ರಬಲವಾದುದಾಗಿದೆ ಎಂದರು.

ಇನ್ನೋರ್ವ ಅತಿಥಿ ಅಂತರಾಷ್ಟ್ರೀಯ ಖ್ಯಾತಿಯ ಜಾದುಗಾರ ಗಣೇಶ್ ಕುದ್ರೋಳಿ ಮಾತನಾಡಿ, ಶಿಕ್ಷಣದಲ್ಲಿ ಜಾದು ಎನ್ನುವ ವಿಷಯದ ಬಗ್ಗೆ ಮಾಹಿತಿ ನೀಡಿದರು.

ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘ ಅಧ್ಯಕ್ಷ ಡಾ.ಪ್ರಭಾಕರ್ ಭಟ್ ಕಲ್ಲಡ್ಕ ವಹಿಸಿ, ವ್ಯಕ್ತಿ ತನ್ನ ನಡೆ ನುಡಿ ಕಾರ್ಯವೈಖರಿಗಳಿಂದ ತನ್ನ ದೇಶಕ್ಕೆ ಸೇವೆ ಸಲ್ಲಿಸಿ ಮಾತೃಭೂಮಿಯ ಹೆಸರನ್ನು ಉಳಿಸಿ ಬೆಳೆಸಲು ಕುಟುಂಬ ಸಹಕಾರಿ ಎಂದರು. ಬಾಲಗೋಕುಲ ಕಾರ್ಯಕ್ರಮವನ್ನು ಶ್ರೀರಾಮ ವಿದ್ಯಾಕೇಂದ್ರದ ಹಿರಿಯ ವಿದ್ಯಾರ್ಥಿ ರಂಜನ್, ವಿಂಧ್ಯಾ ಲತಾ ನಡೆಸಿಕೊಟ್ಟರು. ವಿದ್ಯಾಕೇಂದ್ರದ ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿಗಳು ಭಾಗವಹಿಸಿದರು. ವಿದ್ಯಾಕೇಂದ್ರದ ಅಧ್ಯಕ್ಷ ನಾರಾ ಯಣ ಸೋಮಯಾಜಿ, ಸಂಚಾಲಕ ವಸಂತಮಾಧವ ಇದ್ದರು. ಶ್ರೀರಾಮ ವಿದ್ಯಾಕೇಂದ್ರದ ಕಾರ್ಯನಿರ್ವಹಣಾಧಿಕಾರಿ ಶ್ರೀಕೃಷ್ಣಪ್ರಸಾದ್ ಕಾಯರ್ ಕಟ್ಟೆ ಸ್ವಾಗತಿಸಿ, ಕಾಲೇಜಿನ ಪ್ರಾಂಶುಪಾಲ ವಸಂತ ಬಲ್ಲಾಳ್ ವಂದಿಸಿದರು. ಉಪನ್ಯಾಸಕಿ ಚೈತನ್ಯ ಕಾರ್ಯಕ್ರಮ ನಿರೂಪಿಸಿದರು.

ಫೆ.20-28: ಕರಾವಳಿ ಮೈದಾನದಲ್ಲಿ ಬೃಹತ್ ವಸ್ತುಪ್ರದರ್ಶನ, ಮಾರಾಟ ಮೇಳ

ಮಂಗಳೂರು: ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ರಾಜ್ಯ ಜೀವನೋಪಾಯ ಅಭಿಯಾನ, ಜಿಲ್ಲಾಡಳಿತ, ಜಿ.ಪಂ. ಹಾಗೂ ಮನಪಾ ಸಹಭಾಗಿತ್ವದಲ್ಲಿ ಮಂಗಳೂರಿನ ಕರಾವಳಿ ಉತ್ಸವ ಮೈದಾನದಲ್ಲಿ ಫೆ.20ರಿಂದ 28ರ ವರೆಗೆ ರಾಷ್ಟ್ರ ಮಟ್ಟದ ಮಹಿಳಾ ಸ್ವ–ಸಹಾಯ ಗುಂಪುಗಳ ಉತ್ಪನ್ನಗಳ ಬೃಹತ್ ವಸ್ತುಪ್ರದರ್ಶನ ಹಾಗೂ ಮಾರಾಟ ಮೇಳ 'ನಮ್ಮ ಸರಸ್ ಮೇಳ–2026' ವನ್ನು ಆಯೋಜಿಸಲಾಗಿದೆ ಎಂದು ದ.ಕ.ಜಿ.ಪಂ. ಸಿಇಒ ನರವಡೆ ವಿನಾಯಕ್ ಕಾರ್ಬಾರಿ ತಿಳಿಸಿದರು.

15 ವಿವಿಧ ರಾಜ್ಯ ಹಾಗೂ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಸ್ವ–ಸಹಾಯ ಗುಂಪಿನ ಮಹಿಳೆಯರು ತಮ್ಮ ಜಿಲ್ಲೆಯ ಪ್ರಮುಖ ಉತ್ಪನ್ನಗಳೊಂದಿಗೆ ಭಾಗವಹಿಸುತ್ತಿದ್ದು, 120 ಮಳಿಗೆಗಳಲ್ಲಿ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮತ್ತು ಪ್ರತ್ಯೇಕವಾಗಿ ಆಹಾರ ಮೇಳದಲ್ಲಿ ರಾಜ್ಯ ಹಾಗೂ ಹೊರ ರಾಜ್ಯಗಳ 30 ಲೈವ್ ಫುಡ್ ಕೋರ್ಟ್‌ಗಳನ್ನು ಸ್ಥಾಪಿಸಲಾಗುತ್ತಿದೆ. ಈ ಮೇಳಕ್ಕೆ ಸಾರ್ವಜನಿಕರಿಗೆ ಪ್ರವೇಶ ಸಂಪೂರ್ಣ ಉಚಿತವಾಗಿದ್ದು, ಪ್ರತಿ ದಿನ ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ ಮೇಳದ ಪ್ರದರ್ಶನಕ್ಕೆ ಸಾರ್ವಜನಿಕರ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ. ಪ್ರತಿದಿನ ಬೆಳಗ್ಗೆ 11.30 ರಿಂದ 1.30 ರವರೆಗೆ ನಾನಾ ತರಬೇತಿ ಹಾಗೂ ಉಪನ್ಯಾಸಗಳನ್ನು ಆಯೋಜಿಸಲಾಗಿದೆ ಎಂದರು. ಮಳಿಗೆಗಳಲ್ಲಿ ಚನ್ನಪಟ್ಟಣದ ಮರದ ಗೊಂಬೆಗಳು, ಕೊಪ್ಪಳದ ಕಿನ್ನಾಳ ಆಟದ ಸಾಮಾನುಗಳು, ಮೊಳಕಾಲ್ಮೂರು ಸೀರೆಗಳು, ಇಳಕಲ್ ಸೀರೆಗಳು, ರೇಷ್ಮೆ ಸೀರೆಗಳು, ವಿವಿಧ ಆಕರ್ಷಣೆಯ ಬಟ್ಟೆಗಳು, ನಾರಿನ ಉತ್ಪನ್ನದ ಬ್ಯಾಗ್‌ಗಳು, ಮಸಾಲಾ ಉತ್ಪನ್ನಗಳು, ಸಿರಿಧಾನ್ಯ ಉತ್ಪನ್ನಗಳು, ಮೌಲ್ಯವರ್ಧಿತ ಕರಾವಳಿ ಉತ್ಪನ್ನಗಳು, ನಾನಾ ಬಗೆಯ ಖಾದಿ ಉತ್ಪನ್ನಗಳು, ಬಾಳೆನಾರಿನಿಂದ ಉತ್ಪಾದಿಸಿದ ಉತ್ಪನ್ನಗಳು, ಗೃಹಾಲಂಕಾರಿಕ ವಸ್ತುಗಳು, ಆಯುರ್ವೇದ ಉತ್ಪನ್ನಗಳು, ಪಾರಂಪರಿಕ ವಸ್ತುಗಳು, ಗೃಹೋಪಯೋಗಿ ವಸ್ತುಗಳು, ನವೀನ ವಿನ್ಯಾಸದ ಆಭರಣಗಳು, ಆಹಾರ ಉತ್ಪನ್ನಗಳು ಮುಂತಾದವುಗಳು ಕೈಗೆಟುಕುವ ಬೆಲೆಯಲ್ಲಿ ಲಭ್ಯವಾಗಲಿದೆ. ಇದರ ಜತೆಗೆ ಅಕ್ಕ ಕೆಫೆಯಿಂದ ಅಕ್ಕ ಫುಡ್ ಕೋರ್ಟ್ ಇರಲಿದೆ ಎಂದರು.

ಸಾಂಸ್ಕೃತಿಕ ಸಂಜೆ

ಪ್ರತಿದಿನ ಸಂಜೆ 6.30ರಿಂದ 9ರ ವರೆಗೆ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಸಂಗೀತ, ನೃತ್ಯ ರೂಪಕಗಳು, ಪೊಲೀಸ್ ಬ್ಯಾಂಡ್ ರಾಜ್ಯದ ಪ್ರಖ್ಯಾತ ಗಾಯಕರಿಂದ ಸಾಂಸ್ಕೃತಿಕ ಸಂಜೆ ಏರ್ಪಡಿಸಲಾಗಿದೆ. ಫೆ.20ಕ್ಕೆ ಉದ್ಘಾಟನೆಯಲ್ಲಿ ಸಚಿವರು, ಜನಪ್ರತಿನಿಧಿಗಳು ಸೇರಿದಂತೆ ಗಣ್ಯರು ಭಾಗವಹಿಸಲಿದ್ದಾರೆ ಎಂದರು.

ಕುಮಾರಧಾರಾ ನದಿಯ ಒಡಲಿಗೆ 5 ಲಕ್ಷ ಗೌರಿ ಮೀನುಗಳ ಸೇರ್ಪಡೆ



ಉಪ್ಪಿನಂಗಡಿ: ಮೀನುಗಾರಿಕಾ ಇಲಾಖೆಯ ವತಿಯಿಂದ ಉಪ್ಪಿನಂಗಡಿ ಶ್ರೀ ಸಹಸ್ರಲಿಂಗೇಶ್ವರ–ಮಹಾಕಾಳಿ ದೇವಾಲಯದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಕೆ. ರಾಧಾಕೃಷ್ಣ ನ್ಯಾಕ್ ಅವರ 34 ನೆಕ್ಕಿಲಾಡಿಯಲ್ಲಿರುವ ಜಾಗದ ಬಳಿ ಕುಮಾರಧಾರಾ ನದಿಗೆ 5 ಲಕ್ಷ ಗೌರಿ (ಕಾಮನ್ ಕಾರ್ಪ್) ಮೀನಿನ ಮರಿಗಳನ್ನು ಬಿಡಲಾಯಿತು. ಕಾರ್ಯಕ್ರಮದಲ್ಲಿ ಶಾಸಕ ಅಶೋಕ್ ಕುಮಾರ್ ರೈ ಭಾಗವಹಿಸಿ, ಮಾತನಾಡಿದರು. ಈ ಸಂದರ್ಭ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಾಲಯದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಪಂಜಿಗುಡ್ಡೆ ಈಶ್ವರ ಭಟ್, ದೇವಾಲಯದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಕೆ. ರಾಧಾಕೃಷ್ಣ ನ್ಯಾಕ್, ರೂಪೇಶ್ ರೈ ಅಲಿಮಾರ್, ಮುಹಮ್ಮದ್ ತೌಸೀಫ್ ಯು.ಟಿ., ಡಾ. ರಾಜಾರಾಮ್ ಕೆ.ಬಿ., ಅನಿ ಮಿನೇಜಸ್, ವಿಕ್ರಂ ಶೆಟ್ಟಿ ಅಂತರ, ಗಣೇಶ್‌ರಾಜ್, ವೆಂಕಪ್ಪ ಪೂಜಾರಿ, ಸುಜಾತ ರೈ ಅಲಿಮಾರ್, ಉದಯ ಕುಮಾರ್ ಉದಯಗಿರಿ, ಅಸ್ಕರ್ ಅಲಿ, ಜತೀಂದ್ರ ಶೆಟ್ಟಿ, ಹಮೀದ್ ಪಿ.ಟಿ., ಜೆರಾಲ್ಡ್ ಮಸ್ಕರೇನಸ್, ಶಬೀರ್ ಅಹಮ್ಮದ್, ಇಸಾಕ್, ಖಾದರ್ ಆದರ್ಶನಗರ, ಉಲ್ಲಾಸ್, ಕೃಷ್ಣಪ್ಪ, ಆನಂದ ಸಾಂತ್ಯಡ್ಕ, ಫೈರುಝ್, ಇಲಾಖೆಯ ಸಹಾಯಕ ನಿರ್ದೇಶಕಿ ಮಂಜುಳಾಶ್ರೀ ಶೆಣೈ, ಮಂಗಳೂರು ಮೀನುಗಾರಿಕಾ ಇಲಾಖೆಯ ಮೇಲ್ವಿಚಾರಕ ಜಯಂತ ಕುಮಾರ್, ಭೀಮೇಶ್, ಪಿಡಿಒ ರವಿಚಂದ್ರ, ಲೆಕ್ಕ ಸಹಾಯಕ ದೇವಪ್ಪ ನಾಯ್ಕ, ಸಿಬ್ಬಂದಿ ಸಚಿನ್ ಇದ್ದರು.

ಶ್ರೀ ಕಾರಿಂಜೇಶ್ವರ ದೇವಸ್ಥಾನದಲ್ಲಿ ಮಹಾ ಶಿವರಾತ್ರಿ, ಜಾತ್ರಾ ಸಂಭ್ರಮ

ಪಾರ್ವತಿ-ಪರಮೇಶ್ವರ ದೇವರ ಭೇಟಿಯ ಸಂಭ್ರಮ

ಬಂಟ್ವಾಳ: ಇತಿಹಾಸ ಪ್ರಸಿದ್ಧ ಭೂ ಕೈಲಾಸ ಪ್ರತೀತಿಯ ಬಂಟ್ವಾಳ ತಾಲೂಕಿನ ಕಾವಳಮೂಡೂರು ಗ್ರಾಮದ ಕಾರಿಂಜ ಮಹತೋಭಾರ ಶ್ರೀ ಕಾರಿಂಜೇಶ್ವರ ದೇವಸ್ಥಾನದಲ್ಲಿ ಮಹಾ ಶಿವರಾತ್ರಿ, ಜಾತ್ರೆ ಪ್ರಯುಕ್ತ ಸೋಮವಾರ ಮಧ್ಯರಾತ್ರಿ ವಿಶೇಷ ಕಾರ್ಯಕ್ರಮದಲ್ಲೊಂದಾದ ಶ್ರೀ ಪಾರ್ವತಿ–ಪರಮೇಶ್ವರರ ಭೇಟಿ ನಡೆಯಿತು.

ಕ್ಷೇತ್ರದ ಅರ್ಚಕ ಮಿಥುನ್ ರಾಜ್ ನಾವಡ ಮತ್ತು ಜಯಶಂಕರ ಉಪಾಧ್ಯಾಯ ಹಾಗು ಶ್ಯಾಮ ಉಡುಪ ಅವರ ಸಹಕಾರದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಿತು. ರಾತ್ರಿ ಬಲ್ಲೋಡಿ ಮಾಗಣೆ ಗುತ್ತಿನಿಂದ ಶ್ರೀ ಕೊಡಮಣಿತ್ತಾಯ ದೈವದ ಭಂಡಾರ ಆಗಮಿಸಿತು. ಸಂಜೆ ತಾಳಮದ್ದಳೆ, ಮಕ್ಕಳಿಂದ ಯಕ್ಷಗಾನ ನಡೆಯಿತು. ರಾತ್ರಿ ಜಾತ್ರೋತ್ಸವದಲ್ಲಿ ಪ್ರಮುಖ ಆಕರ್ಷಣೆಯಾಗಿರುವ ಪಾರ್ವತಿ–ಪರಮೇಶ್ವರ ದೇವರ ಭೇಟಿಯ ದೃಶ್ಯವನ್ನು ಸಾವಿರಾರು ಭಕ್ತಾದಿಗಳು ಕಣ್ತುಂಬಿಕೊಂಡರು. ಮಂಗಳವಾರ ಬೆಳಿಗ್ಗೆ ಶಯನೋತ್ಸವ ಕವಾಟ ಬಂಧನ, ರಥೋತ್ಸವ, ಪ್ರಸಾದ ವಿತರಣೆ ನಡೆಯಿತು.



ಮಾಜಿ ಸಚಿವ ರಮಾನಾಥ ರೈ, ಜಿ.ಪಂ. ಮಾಜಿ ಸದಸ್ಯ ಪದ್ಮಶೇಖರ ಜೈನ್, ಬೂಡಾ ಅಧ್ಯಕ್ಷ ಬೇಬಿಕುಂದರ್, ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ವೀರೇಂದ್ರ ಬಿ.ಅಮೀನ್, ಗ್ರಾಮಣಿ ಗಣೇಶ ಮುಚ್ಚಿನ್ನಾಯ, ವ್ಯವಸ್ಥಾಪನಾ ಸಮಿತಿ ಸದಸ್ಯ ಪ್ರೇಮನಾಥ ಪೀರ್ಯಗುತ್ತು, ಉದಯ ನಾಯಕ್ ಮಾಂಗಾಜೆ, ದಯಾನಂದ ಶೆಟ್ಟಿ ಅಮೈ, ಪ್ರಶಾಂತ ನಾಯ್ಕ ಕೆದ್ದಳಿಕೆ, ಜನಾರ್ದನ ಆಚಾರ್ಯ ಬಾಳ್ತಬೈಲ್, ಧನಲಕ್ಷ್ಮಿ ಬಂಗೇರ, ರಾಧಾ ಆಚಾರ್ಯ, ಕ್ಷೇತ್ರದ ಮ್ಯಾನೇಜರ್ ವಿನಯ ಕುಮಾರ್, ಭಕ್ತಾದಿಗಳು ಭಾಗವಹಿಸಿದ್ದರು.

ಅಕ್ಷಯ ಕಾಲೇಜ್: ಇಂಟರ್‌ಶಿಪ್‌ಗೆ ವಿದ್ಯಾರ್ಥಿಗಳು ಆಯ್ಕೆ

ಪುತ್ತೂರು: ಸಂಪ್ಯದ ಅಕ್ಷಯ ಎಜ್ಯುಕೇಶನಲ್ ಎಂಡ್ ಚಾರಿಟೇಬಲ್ ಟ್ರಸ್ಟಿನ ಮುಖಾಂತರ ಕಾರ್ಯಾಚರಿಸುತ್ತಿರುವ ಅಕ್ಷಯ ಕಾಲೇಜ್ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಏವಿಯೇಷನ್ ಹಾಗೂ ಹಾಸ್ಪಿಟಾಲಿಟಿ ಸೈನ್ಸ್ ವಿಭಾಗದ ವಿದ್ಯಾರ್ಥಿಗಳು ಪ್ರಪ್ರಥಮ ಬಾರಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಇಂಟರ್‌ಶಿಪ್‌ಗೆ ಆಯ್ಕೆಯಾಗಿದ್ದು, ಸಂಸ್ಥೆಗೆ ಮತ್ತೊಂದು ಹಮ್ಮೆಯನ್ನು ತಂದಿದ್ದಾರೆ.

ಈ ಅಂತಾರಾಷ್ಟ್ರೀಯ ಇಂಟರ್ನ್‌ಶಿಪ್‌ಗೆ ತೃತೀಯ ಬಿಕಾಂ ವಿಥ್ ಏವಿಯೇಷನ್ ಆಂಡ್ ಹಾಸ್ಪಿಟಾಲಿಟಿ ಮ್ಯಾನೇಜ್‌ಮೆಂಟ್ ವಿಭಾಗದ ಉಜ್ವಲ್ ಯು. ನ್ಯಾಕ್, ಪ್ರಜ್ಞಾ ಪಿ. ಪೂಜಾರಿ, ಮೋಕ್ಷಿತಾ ಕೆ., ಕೌಶಿಕ್ ವೈ.ಎನ್., ನಿಹಾ ಪರ್ವಿನ್ ಹಾಗೂ ವರುಣ್ ದೀಪ್, ತೃತೀಯ ಬಿಎಸ್ಸಿ ಹಾಸ್ಪಿಟಾಲಿಟಿ ಸೈನ್ಸ್ ವಿಭಾಗದ ಲಿಖಿತ್ ಪಿ., ಅಖಿಲೇಶ್ ಜೆ.ಎಂ., ಸಿಂಚನ್ ಬಿ.ಎಸ್., ನಂದನ್, ಚಿತ್ರ, ಗೀತಾ ಹಾಗೂ ಬಿಂದುಶ್ರೀ



ಸಿ.ಆರ್. ತೆರಳಿದ್ದು, ಇನ್ನೂ ಸುಮಾರು 15 ವಿದ್ಯಾರ್ಥಿಗಳು ಫೆಬ್ರವರಿ ಅಂತ್ಯದಲ್ಲಿ ತೆರಳಲಿದ್ದಾರೆ. ಈಗಾಗಲೇ ಸತತ ಮೂರು ವರ್ಷಗಳಿಂದ ಏವಿಯೇಷನ್ ಕೋರ್ಸ್ ಮುಖಾಂತರ ಸುಮಾರು 40ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಲವಾರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳು ಹಾಗೂ ಏರ್‌ಲೈನ್ಸ್‌ಗಳಲ್ಲಿ ಉದ್ಯೋಗವನ್ನು ಪಡೆದುಕೊಂಡಿದ್ದಾರೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆವೃತ್ತಿಪರ ಶಿಕ್ಷಣವನ್ನು ನೀಡುವ ಸಂಸ್ಥೆಯಾಗಿದ್ದು ಪುತ್ತೂರು ಹಾಗೂ ಸುತ್ತಮುತ್ತಲಿನ ಪ್ರದೇಶಕ್ಕೆ ಏವಿಯೇಷನ್, ಎಐ ಹಾಗೂ ಹಾಸ್ಪಿಟಾಲಿಟಿ ಸೈನ್ಸ್ ಕೋರ್ಸ್ ಪರಿಚಯಿಸಿದ ಪ್ರಥಮ ಕಾಲೇಜ್ ಎಂಬ ಹೆಗ್ಗಳಿಕೆಯನ್ನು ಹೊಂದಿದೆ.

ಕಡಬ ಪೇಟೆಯಲ್ಲಿರುವ ಪಾಳು ಬಿದ್ದ 100 ವರ್ಷಗಳ ಹಳೆಯ ಪ್ರವಾಸಿ ಬಂಗಲೆಗೆ ಇನ್ನೂ ಸಿಕ್ಕಿಲ್ಲ ಮುಕ್ತಿ
ಸುಸಜ್ಜಿತ ನೂತನ ಕಟ್ಟಡಕ್ಕೆ ನಿಗದಿಯಾಗಿಲ್ಲ ಸೂಕ್ತ ನಿವೇಶನ

■ ತುಳಸಿ ಕಡಬ



ಕಡಬ: ಬರೋಬ್ಬರಿ 100 ವರ್ಷಗಳ ಇತಿಹಾಸ ಹೊಂದಿರುವ ಕಡಬದ ಸರಕಾರಿ ಪ್ರವಾಸಿ ಬಂಗಲೆ(ನಿರೀಕ್ಷಣಾ ಮಂದಿರ) ಶಿಥಿಲಗೊಂಡು ಇತಿಹಾಸದ ಪುಟ ಸೇರುವ ಕಾಲ ಸನ್ನಿಹಿತವಾಗಿದೆ. ಆದರೆ, ತಾಲೂಕು ಕೇಂದ್ರವಾಗಿರುವ ಕಡಬದಲ್ಲಿ ಅಗತ್ಯವಾಗಿ ಬೇಕಿರುವ ಪ್ರವಾಸಿ ಬಂಗಲೆ ನಿರ್ಮಿಸಲು ಸೂಕ್ತ ಜಾಗ ಮಾತ್ರ ಇನ್ನೂ ನಿಗದಿಯಾಗಿಲ್ಲ. ಹಳೆಯ ಪ್ರವಾಸಿ ಬಂಗಲೆಯನ್ನು ದುರಸ್ತಿಗೊಳಿಸುವ ಸಲುವಾಗಿ ಕೆಲವು ವರ್ಷಗಳ ಹಿಂದೆ ಪರಿಶೀಲನೆಗೆ ಆಗಮಿಸಿದ್ದ ಜಿ.ಪಂ. ಅಧಿಕಾರಿಗಳು ಕಟ್ಟಡ ಸಂಪೂರ್ಣ ಶಿಥಿಲಗೊಂಡಿದ್ದು, ದುರಸ್ತಿಗೆ ಯೋಗ್ಯವಾಗಿಲ್ಲ ಎಂದು ವರದಿ ಸಲ್ಲಿಸಿರುವ ಹಿನ್ನೆಲೆಯಲ್ಲಿ ಕಟ್ಟಡವನ್ನು ತೆರವುಗೊಳಿಸಲು ನಿರ್ಧರಿಸಲಾಗಿತ್ತು. ಆದರೆ, ಆ ಕೆಲಸ ಇದುವರೆಗೆ ಕಾರ್ಯಗತವಾಗಿಲ್ಲ. ಕಟ್ಟಡದ ಹಿಂಭಾಗ ಭಾಗಶಃ ಕುಸಿದಿದ್ದು ಯಾವುದೇ ಕ್ಷಣದಲ್ಲಿ ಕಟ್ಟಡ ಪೂರ್ತಿಯಾಗಿ ಧರಾಶಾಯಿಯಾಗುವ ಸಾಧ್ಯತೆಗಳಿವೆ. ಕಟ್ಟಡ ಕುಸಿದು ಅಪಾಯ ಸಂಭವಿಸುವ ಮೊದಲು ಈ ಶಿಥಿಲ ಕಟ್ಟಡವನ್ನು ತೆರವುಗೊಳಿಸಲು ಸಂಬಂಧಪಟ್ಟ ಇಲಾಖೆಯವರು ಕ್ರಮ ಕೈಗೊಳ್ಳಬೇಕಿದೆ.

ದಾನಿಗಳು ಕೊಟ್ಟಿದ್ದ ಜಮೀನು

ಒಂದು ಕಾಲದಲ್ಲಿ ಅತ್ಯಂತ ಚಟುವಟಿಕೆಯ ತಾಣವಾಗಿದ್ದ ಈ ಪ್ರವಾಸಿ ಬಂಗಲೆ ಇದೀಗ ಯಾವುದೇ ಚಟುವಟಿಕೆಗಳಿಲ್ಲದೆ ಪರಿಸರದಲ್ಲಿ ಗಿಡಗಂಟಿ ಬೆಳೆದು ಅನಾಥವಾಗಿದೆ. ಕಡಬದ ಕೊಡುಗೈ ದಾನಿ ಎಂದೇ ಹೆಸರು ಪಡೆದಿರುವ ದಿ. ಮೇಲೂರು ಚಂದಯ್ಯ ಶೆಟ್ಟಿ ಅವರು 1925ನೇ ಇಸವಿಯಲ್ಲಿ ಈ ಕಟ್ಟಡವನ್ನು ನಿರ್ಮಿಸಿಕೊಟ್ಟಿರುವ ಬಗ್ಗೆ ಲಭ್ಯ ದಾಖಲೆಗಳಲ್ಲಿ ಉಲ್ಲೇಖವಿದೆ. ಬಂಗಲೆ ಇರುವ ಜಮೀನು ಸೇರಿದಂತೆ ಒಟ್ಟು 2.29 ಎಕರೆ ಜಮೀನನ್ನು ಅವರು ಅಂದಿನ ಕಾಲದಲ್ಲಿ ಸರಕಾರಿ ಆಸ್ಪತ್ರೆಗೆ ದಾನವಾಗಿ ಕೊಟ್ಟಿದ್ದರು.

ಯಾರು ಕೇಳುವವರಿಲ್ಲ

ಸಮುದಾಯ ಆಸ್ಪತ್ರೆಯ ಆವರಣದಲ್ಲಿರುವ ಈ ಕಟ್ಟಡ ಆರಂಭದಲ್ಲಿ ವೈದ್ಯಾಧಿಕಾರಿಗಳ ವಸತಿಗೃಹವಾಗಿತ್ತು. ಪುತ್ತೂರು ಬಿಡಿಒ ಕಚೇರಿ ಇದರ ನಿರ್ವಹಣೆಯನ್ನು ನೋಡಿಕೊಳ್ಳುತ್ತಿತ್ತು. ಅನಂತರ 2 ಕೊಠಡಿಗಳನ್ನು ಸೇರಿಸಿ ಪುನರ್‌ನವೀಕರಣಗೊಳಿಸಿ ಈ ಕಟ್ಟಡವನ್ನು ಪ್ರವಾಸಿ ಬಂಗಲೆಯಾಗಿ ಪರಿವರ್ತಿಸಲಾಗಿತ್ತು. ಇತ್ತೀಚಿನ ಕೆಲ ವರ್ಷಗಳಲ್ಲಿ ತಾ.ಪಂ. ಹಾಗೂ ಗ್ರಾ.ಪಂ. ಆಡಳಿತ ಇದರ ನಿರ್ವಹಣೆಯ ಹೊಣೆ ಹೊತ್ತುಕೊಂಡಿದ್ದರೂ ಈಗ ಈ ಕಟ್ಟಡವನ್ನು ಯಾರೂ ಕೇಳುವವರಿಲ್ಲದಂತಾಗಿದೆ.

ಇಂದಿರಾ ಕ್ಯಾಂಟೀನ್ ನಿರ್ಮಾಣ

ಮೂಲತಃ ಸರಕಾರಿ ಸಮುದಾಯ ಆಸ್ಪತ್ರೆಗೆ ಸೇರಿದ ಈ ಜಮೀನನ್ನು ಮತ್ತೆ ಆಸ್ಪತ್ರೆಯ ಉಪಯೋಗಕ್ಕೆ ನೀಡಬೇಕೆಂದು ಈ ಹಿಂದೆ ಜಿಲ್ಲಾ ಆರೋಗ್ಯಾಧಿಕಾರಿಯವರ ಮುಖಾಂತರ ಜಿ.ಪಂ.ಗೆ ಮನವಿ ಸಲ್ಲಿಸಲಾಗಿತ್ತು. ಇದೇ ಜಾಗದಲ್ಲಿ ಇಂದಿರಾ ಕ್ಯಾಂಟೀನ್ ನಿರ್ಮಾಣವಾಗಲಿದೆ ಎನ್ನುವ ಮಾಹಿತಿಯೂ ಇದೆ.

ಬೇಡಿಕೆ ಸಲ್ಲಿಸಲಾಗಿದೆ

ಕಡಬದ ಹರಿಸ್ಟೇಶನ್‌ನಲ್ಲಿ ನಿರ್ಮಾಣಗೊಂಡ ತಾ.ಪಂ. ಕಟ್ಟಡದ ಸಮೀಪವೇ ಹೊಸ ಸುಸಜ್ಜಿತ ನಿರೀಕ್ಷಣಾ ಮಂದಿರ ನಿರ್ಮಿಸಲು ಜಮೀನನ್ನು ಗುರುತಿಸಲಾಗಿತ್ತು. ಆದರೆ, ಬಳಿಕ ತಾ.ಪಂ. ಕಟ್ಟಡದ ಆವರಣದಲ್ಲಿ ವಾಹನ ಪಾರ್ಕಿಂಗ್ ಇತ್ಯಾದಿಗಳಿಗೆ ಜಾಗದ ಅಗತ್ಯವಿರುವುದರಿಂದ ಆ ಜಮೀನನ್ನು ಕೈಬಿಡಲಾಗಿದೆ. ಹೊಸದಾಗಿ ಜಾಗ ಗುರುತಿಸಲು ಕಂದಾಯ ಇಲಾಖೆಗೆ ಬೇಡಿಕೆ ಸಲ್ಲಿಸಲಾಗಿದೆ. ಶೀಘ್ರ ಜಾಗ ಲಭಿಸುವ ನಿರೀಕ್ಷೆ ಇದೆ.

● ರಾಘವೇಂದ್ರ ನಾಯ್ಕ್, ಇಇ, ಲೋಕೋಪಯೋಗಿ ಇಲಾಖೆ, ಮಂಗಳೂರು

ಸುತ್ತಮುತ್ತ

ನಾಳೆ ವಿದ್ಯುತ್ ವ್ಯತ್ಯಯ

ಉಡುಪಿ: ವಿದ್ಯುತ್ ವಿತರಣಾ ಸ್ಥಾವರ ನಂದಿಕೂರು ಉಪಕೇಂದ್ರದಲ್ಲಿ ನಿರ್ವಹಣೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಫೆ. 19ರಂದು ಬೆಳಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ನಂದಿಕೂರು ವಿದ್ಯುತ್ ಉಪಕೇಂದ್ರದಿಂದ ಹೊರಡುವ ಬೆಳ್ಮಣ್, ಬೆಳಪು, ಇಎಚ್‌ಟಿ ಸುಜ್ಲಾನ್, ಅಡ್ವೆ ಸಾಂತೂರು, ಬಲ್ಲುಂಜೆ, ನಂದಿಕೂರು, ಎಲ್ಲೂರು, ಪಲಿಮಾರು, ಎರ್ಮಾಳು, ಬೈಟ್ ಫ್ಲಿಕ್ಸ್ ಆಶ್ ಟೆಕ್, ಬೆಳಪು, ಕುತ್ಯಾರು, ಪಣಿಯೂರು, ಉಚ್ಚಿಲ್, ಮೂಳೂರು, ಮಲ್ಲಾರ್, ಕಾಪು ಸಿಟಿ, ಮಜೂರು ಫೀಡರ್ ಮಾರ್ಗಗಳಲ್ಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಇಂದ್ರಾಳಿ, ಅನಂತನಗರ ಫೀಡರ್ ಮಾರ್ಗದಲ್ಲಿ ನಿರ್ವಹಣೆ ಕಾಮಗಾರಿಯನ್ನು ಹಯಗ್ರೀವನಗರ, ಲಕ್ಷ್ಮೀಂದ್ರನಗರ, ಇಂದ್ರಾಳಿ ರೈಲ್ವೆ ನಿಲ್ದಾಣ, ಹುಡ್ಕೋ, ಅನಂತನಗರ, ಕಲ್ಯಾಣನಗರ, ಸೋನಿಯಾ ಕ್ಲಿನಿಕ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಫೆ.28ರಂದು ಯೆನೆಪೋಯ ವಿವಿಯಲ್ಲಿ ರಾಷ್ಟ್ರೀಯ ಸಮ್ಮೇಳನ

ಮಂಗಳೂರು: ದೇರಳಕಟ್ಟೆಯ ಯೆನೆಪೋಯ ಪರಿಗಣಿತ ವಿ.ವಿ.ಯ ಯೆನೆಪೋಯ ನರ್ಸಿಂಗ್ ಕಾಲೇಜಿನ ನರ್ಸಿಂಗ್ ಶಿಕ್ಷಣ ವಿಭಾಗ ಮತ್ತು ಪ್ರಥಮ ವರ್ಷದ ಎಂ.ಎಸ್ಸಿ ವಿಭಾಗದ ವತಿಯಿಂದ ಡಿಜಿಟಲ್ ಬೋಧನ ಕಲೆ ವಿಷಯದ ಬಗ್ಗೆ ಫೆ.28ರಂದು ಬೆಳಗ್ಗೆ 10ರಿಂದ ಸಂಸ್ಥೆಯ ಯೆಂಡ್ಯೂರೆನ್ಸ್ ಸಭಾಂಗಣದಲ್ಲಿ ರಾಷ್ಟ್ರೀಯ ಸಮ್ಮೇಳನ ನಡೆಯಲಿದೆ. ಲಕ್ಷ್ಮೀ ಮೆಮೋರಿಯಲ್ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲೆ ಡಾ. ಲರಿನ್ಸಾ ಮಾರ್ಥಾ ಸ್ಯಾಮ್ಸ್ ಮತ್ತು ಯೆನೆಪೋಯ ಪರಿಗಣಿತ ವಿಶ್ವವಿದ್ಯಾಲಯದ ಕುಲಸಚಿವ ಡಾ. ಅಶ್ವಿನಿ ದತ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಯೆನೆಪೋಯ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲೆ ಡಾ. ಲೀನಾ ಕೆ.ಸಿ. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ದೇಶದ ವಿವಿಧ ಭಾಗಗಳ ತಜ್ಞರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಲಿದ್ದಾರೆ. ಈ ಸಮ್ಮೇಳನವು ಆನ್‌ಲೈನ್ ಮತ್ತು ಆಫ್‌ಲೈನ್ ಎರಡು ಮಾದರಿಗಳಲ್ಲಿ ನಡೆಯಲಿದೆ ಎಂದು ಸಮ್ಮೇಳನದ ಅಧ್ಯಕ್ಷೆ ಡಾ. ಪ್ರಿಯಾ ರೇಷ್ಮಾ ಅರಾನ್ಹಾ ಮತ್ತು ಕಾರ್ಯದರ್ಶಿ ನಿತ್ಯಶ್ರೀ ಬಿ.ವಿ.ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫೆ.21-22: ಕೊಯ್ಯೂರು ಶ್ರೀ ಬಬ್ಬುಸ್ವಾಮಿ ನೇಮ

ಮುಲ್ಕಿ: ಇಲ್ಲಿಗೆ ಸಮೀಪದ ಕೊಯ್ಯಾರು ಶ್ರೀ ಬಬ್ಬು ಸ್ವಾಮಿ ದೈವಗಳ ಸಿರಿ ಸಿಂಗಾರದ ವಾರ್ಷಿಕ ನೇಮ ಫೆ.21ರಿಂದ 22ರ ವರೆಗೆ ನಡೆಯಲಿದೆ. ಫೆ. 21ರಂದು ಶ್ರೀ ಬಬ್ಬುಸ್ವಾಮಿ ಹಾಗೂ ತನ್ನಿಮಾನಿಗ ದೈವಗಳ ನೇಮ, ಫೆ.22ರಂದು ಶ್ರೀ ಜುಮಾದಿ ಬಂಟ ದೈವಗಳ ನೇಮ ನಡೆಯಲಿದೆ.

ಫೆ. 19, 20: ಶ್ರೀನಿವಾಸ ವಿವಿ 'ಮ್ಯಾಗ್ನಾ-2026'

ಮಂಗಳೂರು: ಶ್ರೀನಿವಾಸ ವಿಶ್ವವಿದ್ಯಾಲಯ ಸಿಟಿ ಕ್ಯಾಂಪಸ್, ಪಾಂಡೇಶ್ವರದ ಎಂಬಿಎ ವಿಭಾಗದ ವತಿಯಿಂದ ಫೆ.19 ಮತ್ತು 20 ರಂದು ಎರಡು ದಿನಗಳ ರಾಷ್ಟ್ರಮಟ್ಟದ ಮ್ಯಾನೇಜ್ಮೆಂಟ್ ಹಾಗೂ ಸಾಂಸ್ಕೃತಿಕ ಹಬ್ಬ ಮ್ಯಾಗ್ನಾ 2026 ನಡೆಯಲಿದೆ. ಎಂಬಿಎ ವಿಭಾಗದ ಪ್ರಮುಖ ಕಾರ್ಯಕ್ರಮಗಳಲ್ಲಿ ಇದು ಒಂದಾಗಿದೆ. ಈ ವರ್ಷ ವಿಭಾಗವು 25 ನೇ ಮ್ಯಾಗ್ನಾ ಆಯೋಜಿಸುತ್ತಿದ್ದೇವೆ. ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ನೋಂದಣಿ ಮಾಡಿಕೊಳ್ಳಬಹುದು ಎಂದು ಕಾಲೇಜಿನ ಡೀನ್ ಡಾ. ವೆಂಕಟೇಶ್ ಎಸ್. ಅಮೀನ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಮ್ಯಾನೇಜ್ಮೆಂಟ್ ಫೆಸ್ಟ್‌ನಲ್ಲಿ ಮಾನವ ಸಂಪನ್ಮೂಲ, ಹಣಕಾಸು, ಮಾರುಕಟ್ಟೆ ಬೆಸ್ಟ್ ಮ್ಯಾನೇಜರ್, ಬೆಸ್ಟ್ ಮ್ಯಾನೇಜ್ಮೆಂಟ್ ತಂಡ ಹಾಗೂ ಬಿಸಿನೆಸ್ ಕ್ವಿಜ್ ಮುಂತಾದ ಸ್ಪರ್ಧೆಗಳು ನಡೆಯಲಿವೆ. ಪ್ರತಿಯೊಂದು ಸ್ಪರ್ಧೆಯಲ್ಲೂ ಹಲವು ಹಂತಗಳು ಇರಲಿವೆ. ಸಾಂಸ್ಕೃತಿಕ ಕಾರ್ಯಕ್ರಮಗಳಡಿಯಲ್ಲಿ ಏಕಗಾನ, ಗುಂಪು ನೃತ್ಯ, ಫ್ಯಾಷನ್ ಶೋ, ಮೆಹೆಂದಿ, ಮುಖವಿನ್ಯಾಸಕಲೆ, ರೀಲ್ ತಯಾರಿಕೆ, ಲೂಡೋ, ಫ್ರೀ ಫೈರ್ ಹಾಗೂ ಗಲ್ಲಿ ಕ್ರಿಕೆಟ್ ಸೇರಿದಂತೆ ವಿವಿಧ ಸ್ಪರ್ಧೆಗಳು ಆಯೋಜಿಸಲಾಗುತ್ತಿವೆ. ಒಟ್ಟು 16 ವಿಭಿನ್ನ ಕಾರ್ಯಕ್ರಮಗಳು ಎರಡು ದಿನಗಳು ನಡೆಯಲಿವೆ. 25ಕ್ಕಿಂತ ಹೆಚ್ಚು ಕಾಲೇಜುಗಳಿಂದ ನೋಂದಣಿಯನ್ನು ಪಡೆಯುವ ನಿರೀಕ್ಷೆಯಿದೆ ಎಂದು ತಿಳಿಸಿದರು. ಎಂಬಿಎ ವಿಭಾಗದ ಮುಖ್ಯಸ್ಥೆ ಕಾರ್ಯಕ್ರಮ ಸಂಯೋಜಕಿ ಡಾ. ಕಾವ್ಯಶ್ರೀ, ವಿದ್ಯಾರ್ಥಿ ಸಂಯೋಜಕರಾದ ಆಶ್ಲೆಲ್, ತ್ರಿಯಾದ್ ಉಪಸ್ಥಿತರಿದ್ದರು.

ಪೆರುವಾಜೆ ದೇಗುಲ: ಅಧ್ಯಕ್ಷರ ಆಯ್ಕೆಗೆ ಆಕ್ಷೇಪ ಸಲ್ಲಿಕೆ

ಸುಳ್ಯ: ಪೆರುವಾಜೆ ಜಲದುರ್ಗಾ ದೇವಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರ ಆಯ್ಕೆಯ ಸಂದರ್ಭ ಕೆಲವು ಸದಸ್ಯರು ಸಭೆಯಲ್ಲಿ ಭಾಗವಹಿಸದಂತೆ ಮಾಡಿ ಆಯ್ಕೆ ನಡೆಸಿರುವುದು ಕಾನೂನಿನ ಉಲ್ಲಂಘನೆಯಾಗಿದೆ ಎಂದು ವ್ಯವಸ್ಥಾಪನಾ ಸಮಿತಿಯ ನಾಲ್ವರು ಸದಸ್ಯರು ದೇವಸ್ಥಾನದ ಆಡಳಿತಾಧಿಕಾರಿ ಗ್ರಾ.ಪಂ. ಪಿಡಿಒಗೆ ಸೋಮವಾರ ಆಕ್ಷೇಪಣಾ ಪತ್ರ ಸಲ್ಲಿಸಿದ ಘಟನೆ ನಡೆದಿದೆ. ಸೋಮವಾರ ಬೆಳಗ್ಗೆ 9.30ಕ್ಕೆ ದೇವಸ್ಥಾನದ ಆಡಳಿತ ಕಚೇರಿಯಲ್ಲಿ ಸಮಿತಿ ಸಭೆಗಾಗಿ ಆಡಳಿತ ಕಚೇರಿಗೆ ಆಗಮಿಸಿದ್ದ ಆದರೆ, ಮಾಹಿತಿ ನೀಡದೆ ಬೇರೆ ಯಾತ್ರಿ ನಿವಾಸದಲ್ಲಿ ಸಭೆ ನಡೆಸಿದ್ದಾರೆ. ಪ್ರಧಾನ ಅರ್ಚಕ ಎಂಬ ಹೆಸರಲ್ಲಿ ಶ್ರೀನಿವಾಸ ಹೆಬ್ಬಾರ್ ಮತ ಚಲಾಯಿಸಿದ್ದು ಅವರು ಹಿಂದೆ ಅರ್ಚಕ ವೃತ್ತಿ ತೊರೆದವರು. ಆದ್ದರಿಂದ ಅಧ್ಯಕ್ಷರ ಆಯ್ಕೆ ರದ್ದುಗೊಳಿಸಿ ಹೊಸದಾಗಿ ಅಧ್ಯಕ್ಷರ ಆಯ್ಕೆಗೆ ಕ್ರಮ ಕೈಗೊಳ್ಳಬೇಕು ಎಂದು ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಅಜಯ್ ಶೆಟ್ಟಿ, ಕಿಶೋರ್ ಕುಮಾರ್, ನಿರ್ಮಲಾ ರೈ, ಸುಂದರ ಹಾಕಿ ಆಕ್ಷೇಪಣೆ ಸಲ್ಲಿಸಿದ್ದಾರೆ.

ಸುಳ್ಯ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ 1 ವರ್ಷಗಳ ಬಳಿಕ ಅಧಿಕಾರ ಸ್ವೀಕಾರ



ಸುಳ್ಯ: ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ಸಲ್ಲಿಸಿ ಅಧಿಕಾರ ಪಡೆಯುವ ಸಂಸ್ಕೃತಿಗಳು ಹೆಚ್ಚಾಗಿದೆ. ಕಾಂಗ್ರೆಸ್ ಅನ್ನುವುದು ಸಮುದ್ರದಂತೆ ಅಲ್ಲಿ ನಾಯಕತ್ವ ಮತ್ತು ಕಾರ್ಯಕರ್ತರಿಗೆ ಕೊರತೆಯಿಲ್ಲ ಎಂದು ದ.ಕ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಕೆ. ಹರೀಶ್ ಕುಮಾರ್ ಹೇಳಿದರು.

ಸುಳ್ಯ ನೂತನ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರ ಪದಗ್ರಹಣ ಸಮಾರಂಭದ ಅಧ್ಯಕ್ಷತೆ ವಹಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ನೂತನ ಬ್ಲಾಕ್ ಅಧ್ಯಕ್ಷ ರಾಧಾಕೃಷ್ಣ ಬೊಳ್ಳೂರು ಅಧಿಕಾರ ಸ್ವೀಕರಿಸಿ ಮಾತನಾಡಿ, ತಾಲೂಕಿನ ಜನತೆ ಮತ್ತು ಕಾರ್ಯಕರ್ತರ ನೋವಿಗೆ ಸ್ಪಂದಿಸಲು ಅಸಾಧ್ಯವಾದ ಸಂದರ್ಭದಲ್ಲಿ ಯಾವುದೇ ಕೆಪಿಸಿಸಿ ಅಥವಾ ರಾಜಕೀಯ ನಾಯಕರ ಮನೆ ಬಾಗಿಲಿಗೆ ತೆರಳದೆ ಸ್ಥಾನವನ್ನು ಇನ್ನೊಬ್ಬರಿಗೆ ಬಿಟ್ಟು ಕೊಡುತ್ತೇನೆ. ನಾನು ಸ್ಥಾನಕ್ಕೆ ಅಂಟಿಕೊಳ್ಳುವ ವ್ಯಕ್ತಿಯಲ್ಲ ಎಂದು ತಿಳಿಸಿದರು.

ನಿರ್ಗಮಿತ ಅಧ್ಯಕ್ಷ ಪಿ.ಸಿ. ಜಯರಾಮ ಮಾತನಾಡಿದರು. ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ ಅಧ್ಯಕ್ಷ ಟಿ.ಎಂ. ಶಾಹೀದ್, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಭರತ್ ಮುಂಡೋಡಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ಬ್ಲಾಕ್ ಉಸ್ತುವಾರಿ ಎಂ.ಎಸ್. ಮಹಮ್ಮದ್ ಶುಭ ಹಾರೈಸಿದರು. ವೇದಿಕೆಯಲ್ಲಿ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ, ಕಾಂಗ್ರೆಸ್ ವಿಧಾನಸಭಾ ಚುನಾವಣೆ ಕಾಂಗ್ರೆಸ್ ಅಭ್ಯರ್ಥಿ ಜಿ. ಕೃಷ್ಣಪ್ಪ, ಗ್ರಾಮಾಂತರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಉಷಾ ಅಂಚನ್, ಸುಳ್ಯ ಬ್ಲಾಕ್ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಗೀತಾ ಕೋಲ್ಚಾರ್, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಇಬ್ರಾಹಿಂ ನವಾಸ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕಿರಣ್ ಬುಡ್ಲೆಗುತ್ತು, ಸೂಡ ಅಧ್ಯಕ್ಷ ಕೆ.ಎಂ. ಮುಸ್ತಫ, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಶಾಹುಲ್ ಹಮೀದ್ ಕುತ್ತಮೊಟ್ಟೆ, ಕಡಬ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಭಿಲಾಷ್, ಶುಭಾಶ್ಚಂದ್ರ ಕೋಲ್ನಾಡ್, ಜೋಕಿಂ ಡಿಸೋಜಾ, ಚಿತ್ತರಂಜನ್, ಪಿ.ಪಿ. ವರ್ಗೀಸ್, ಶಾಫಿ ಕುತ್ತಮೊಟ್ಟೆ, ಸರಸ್ವತಿ ಕಾಮತ್, ಇಸ್ಮಾಯಿಲ್ ಪನಂಗಡಿ, ಸುರೇಶ್ ಎಂ.ಎಚ್., ಮಹೇಶ್ ಬೆಳ್ಳಾರ್ಕರ್, ಜಯಪ್ರಕಾಶ್ ನೆಕ್ರಪ್ಪಾಡಿ, ಎನ್‌ಎಸ್‌ಯುಐ ಅಧ್ಯಕ್ಷ ಧನುಷ್ ಕುಕ್ಕೇಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪಿ.ಎಸ್. ಗಂಗಾಧರ ಸ್ವಾಗತಿಸಿ, ಯುವ ಕಾಂಗ್ರೆಸ್ ಅಧ್ಯಕ್ಷ ಚೇತನ್ ಕಜೆಗದ್ದೆ ವಂದಿಸಿದರು. ನಗರ ಕಾಂಗ್ರೆಸ್ ಅಧ್ಯಕ್ಷ ಶಶಿಧರ ಎಂ.ಜೆ. ನಿರ್ವಹಿಸಿದರು.

ಫೆ.18-24: ಶಕ್ತಿನಗರದ ಶ್ರೀ ಮುತ್ತಪ್ಪ ಕ್ಷೇತ್ರದ ಬ್ರಹ್ಮಕಲಶೋತ್ಸವ

ಮಂಗಳೂರು: ಶಕ್ತಿನಗರದ ಶ್ರೀ ಮುತ್ತಪ್ಪ ಕ್ಷೇತ್ರದ ಬ್ರಹ್ಮಕಲಶೋತ್ಸವ ಫೆ.18ರಿಂದ 24ರವರೆಗೆ ನಡೆಯಲಿದೆ.

ತಂತ್ರಿ ಬ್ರಹ್ಮಶ್ರೀ ಪೂಂತೋಟತ್ತಿಲ್ ಪುಡವರ್ ಪರಮೇಶ್ವರನ್ ನೇತೃತ್ವದಲ್ಲಿ ಕಾರ್ಯಕ್ರಮಗಳು ನಡೆಯಲಿದೆ. ಫೆ.18 ರಂದು ಬೆಳಗ್ಗೆ 9ಕ್ಕೆ ಉಗ್ರಾಣದಲ್ಲಿ ಗಣಹೋಮ, ಸಂಜೆ 4ಕ್ಕೆ ಶಕ್ತಿನಗರದ ಶ್ರೀ ವೈದ್ಯನಾಥ ಕ್ಷೇತ್ರದಿಂದ ಹಸಿರು ಹೊರೆಕಾಣಿಕೆ ನಡೆಯಲಿದೆ. ಸಂಜೆ 6.15ಕ್ಕೆ ಉಗ್ರಾಣದ ಉದ್ಘಾಟನೆಯನ್ನು ಉದ್ಯಮಿ ಎ.ಜೆ. ಶೇಖರ್ ನೆರವೇರಿಸಲಿದ್ದಾರೆ. ಸಂಜೆ 6.45ಕ್ಕೆ ದ್ವಾರ ಉದ್ಘಾಟನೆ, ಸಂಜೆ 7ಕ್ಕೆ ಧಾರ್ಮಿಕ ಸಭಾ ಕಾರ್ಯಕ್ರಮ ನಡೆಯಲಿದೆ. ಒಡಿಯೂರು ಶ್ರೀ ಗುರುದೇವಾನಂದ ಸ್ವಾಮೀಜಿ ಆಶೀರ್ವಚನ ನೀಡಲಿದ್ದು ಕ್ಷೇತ್ರದ ಅಧ್ಯಕ್ಷ ಸತೀಶ್ ಕಾಮತ್ ಅಧ್ಯಕ್ಷತೆ ವಹಿಸಲಿದ್ದಾರೆ. ವಿವಿಧ ಗಣ್ಯರು ಭಾಗವಹಿಸಲಿದ್ದಾರೆ. ಪ್ರತೀ ದಿನ ಬೆಳಗ್ಗೆಯಿಂದಲೇ ವಿವಿಧ ಧಾರ್ಮಿಕ ಕಾರ್ಯಕ್ರಮ ಜರುಗಲಿದೆ ಸಮಿತಿ ಗೌರವಾಧ್ಯಕ್ಷ ಮೋನಪ್ಪ ಭಂಡಾರಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಫೆ.19ರಂದು ಸಂಜೆ 7 ಗಂಟೆಗೆ ಸಭಾ ಕಾರ್ಯಕ್ರಮದಲ್ಲಿ ನಿತ್ಯಾನಂದ ಆಶ್ರಮ ಕೊಂಡೆವೂರಿನ ಶ್ರೀ ಯೋಗಾನಂದ ಸರಸ್ವತಿ ಸ್ವಾಮೀಜಿ ಅವರಿಂದ ಆಶೀರ್ವಚನ ಹಾಗೂ ಕುಂಟಾರು ರವೀಶ್ ತಂತ್ರಿ ಅವರಿಂದ ಧಾರ್ಮಿಕ ಉಪನ್ಯಾಸ ನಡೆಯಲಿದೆ. ಕಿಶೋರ್ ಕೊಟ್ಟಾರಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು. ಫೆ.20 ಸಂಜೆ 7 ಗಂಟೆಗೆ ನಡೆಯುವ ಸಭಾ ಕಾರ್ಯಕ್ರಮದಲ್ಲಿ ವಜ್ರದೇಹಿ ಮಠದ ಶ್ರೀ ರಾಜಶೇಖರಾನಂದ ಸ್ವಾಮೀಜಿ ಅವರಿಂದ ಆಶೀರ್ವಚನ ಹಾಗೂ ಡಾ. ಎಂ.ಬಿ ಪುರಾಣಿಕ್ ಅವರಿಂದ ಧಾರ್ಮಿಕ ಉಪನ್ಯಾಸ ನಡೆಯಲಿದೆ. ಶಾಸಕ ಡಿ. ವೇದವ್ಯಾಸ ಕಾಮತ್ ಅಧ್ಯಕ್ಷತೆ ವಹಿಸಲಿದ್ದಾರೆ. ಫೆ.21 ರಂದು ನಡೆಯುವ ಸಭಾ ಕಾರ್ಯಕ್ರಮದಲ್ಲಿ ಶ್ರೀಧಾಮ ಮಾಣಿಲದ ಶ್ರೀ ಮೋಹನದಾಸ ಸ್ವಾಮೀಜಿ ಅವರಿಂದ ಆಶೀರ್ವಚನ, ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಪ್ರಭಾಕರ ಭಟ್ ಕಲ್ಲಡ್ಕ ಅವರಿಂದ ಧಾರ್ಮಿಕ ಉಪನ್ಯಾಸ ನಡೆಯಲಿದೆ.

ಕ್ಷೇತ್ರದಲ್ಲಿ ಫೆ.22 ರಂದು ಬೆಳಗ್ಗೆ 7 ರಿಂದ 7.45ರ ಮಧ್ಯೆ ಪುನರ್ ಪ್ರತಿಷ್ಠೆ ಹಾಗೂ ಬ್ರಹ್ಮ ಕಲಶೋತ್ಸವ ಪರಿಕಲಶ ಅಭಿಷೇಕವು ಶ್ರೀ ಮುತ್ತಪ್ಪನ್ ಟ್ರಸ್ಟ್ ಆದಿಸ್ಥಾನ ಕುನ್ನತ್ತೂರ್‌ಪಾಡಿ, ಕಣ್ಣೂರು ಅಧ್ಯಕ್ಷ ಎಸ್. ಆರ್. ಕುಂಞರಾಮನ್ ನಾಯನಾರ್ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಅಂದು ಸಂಜೆ 3 ಗಂಟೆಗೆ ಶ್ರೀ ಮಲೆ ಇಳಿಯುವುದು, ಸಂಜೆ 5 ಗಂಟೆಗೆ ಶ್ರೀ ಮುತ್ತಪ್ಪನ್ ವೇಳಾಟ್ಟಮ್ (ಕೋಲ) ನಡೆಯಲಿದೆ. ರಾತ್ರಿ 8ಗಂಟೆಗೆ ಅನ್ನಸಂತರ್ಪಣೆ ಹಾಗೂ 10 ಗಂಟೆಗೆ ಕಳಿಕ್ಕಾಪಾಟ್ ವೆಳಕಟಲ್ ನಡೆಯಲಿದೆ ಎಂದು ಹೇಳಿದರು.

ಪ್ರಮುಖರಾದ ಕಿಶೋರ್ ಕೊಟ್ಟಾರಿ, ಹರೀಶ್ ರೈ, ಶಕೀಲ ಕಾವ, ಸುಮನಾ ಶರಣ್, ಪ್ರದೀಪ್ ಕುಮಾರ್ ಇದ್ದರು.

ಕಲ್ಲಡ್ಕ ಶ್ರೀರಾಮ ವಿದ್ಯಾಸಂಸ್ಥೆಗಳ ವಾರ್ಷಿಕೋತ್ಸವ, ಸಾಮರಸ್ಯ ಸಹಭೋಜನ





ಬಂಟ್ವಾಳ: ಶ್ರೀರಾಮ ವಿದ್ಯಾಕೇಂದ್ರದ ಶ್ರೀರಾಮ ಶಿಶುಮಂದಿರ ಮತ್ತು ಶ್ರೀರಾಮ ಪೂರ್ವ ಗುರುಕುಲದ 1 ಮತ್ತು 2ನೇ ತರಗತಿಯ ಮಕ್ಕಳ ವಾರ್ಷಿಕೋತ್ಸವ ಹಾಗೂ ರಾಷ್ಟ್ರೀಯ ಸ್ವಯಂಸೇವಕ ಸಂಘದ ಎರಡನೇ ಸರಸಂಘಚಾಲಕ ಗುರೂಜಿಯವರ ಜನ್ಮದಿನದ ಪ್ರಯುಕ್ತ ಸಾಮರಸ್ಯ ಸಹಭೋಜನ ಕಾರ್ಯಕ್ರಮ ಶ್ರೀರಾಮ ಶಿಶುಮಂದಿರದ ಆವರಣದಲ್ಲಿ ನಡೆದಲಾಯಿತು.

ಸಿದ್ದಕಟ್ಟೆ ಪ್ರಥಮದರ್ಜೆ ಕಾಲೇಜಿನ ಡಾ. ಸುಮನಾ ಶೆಟ್ಟಿ ಮಕ್ಕಳ ನೃತ್ಯ ಮತ್ತು ಸಂಘ ಶತಾಬ್ದಿಯ ಪ್ರಯುಕ್ತ ಮಾಡಿದ ಕಿರು ನಾಟಕವನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಆಂಗ್ಲ ಭಾಷೆಯತ್ತ ಒಲವನ್ನು ತೋರುತ್ತಿರುವ ಈ ಸಮಯದಲ್ಲಿ ಸಂಸ್ಕೃತವನ್ನು ಕಲಿಯುತ್ತಿರುವುದು ಅಭಿನಂದನೀಯವಾಗಿದೆ ಎಂದರು.

ವಿದ್ಯಾಕೇಂದ್ರದ ಸಂಸ್ಥಾಪಕ ಡಾ. ಪ್ರಭಾಕರ ಭಟ್ ಕಲ್ಲಡ್ಕ ಮತ್ತು ಅಧ್ಯಕ್ಷ ನಾರಾಯಣ ಸೋಮಯಾಜಿ ಉಪಸ್ಥಿತರಿದ್ದರು. ಸಹಭೋಜನಕ್ಕೆ ಮಕ್ಕಳ ಮನೆಯಿಂದಲೇ ಮಾಡಿದ ಅನ್ನ, ಪಾಯಸ ಮತ್ತು ಕೊಬ್ಬರಿ ಮಿಠಾಯಿಯನ್ನು ತಾಯಂದಿರು ತಯಾರಿಸಿ ಕಳುಹಿಸಿ ಕೊಟ್ಟಿದ್ದರು. 600 ಮಂದಿ ಸಹಭೋಜನವನ್ನು ಸವಿದರು. 104 ಮನೆಗಳಿಂದ ಕೊಬ್ಬರಿ ಮಿಠಾಯಿ, 84 ಮನೆಗಳಿಂದ ಅನ್ನ 98 ಮನೆಗಳಿಂದ ಪಾಯಸ, ಒಟ್ಟು 286 ಮನೆಗಳಿಂದ ತಾಯಂದಿರು ಭೋಜನ ಪದಾರ್ಥಗಳನ್ನು ತಯಾರಿಸಿಕೊಟ್ಟು ಸಹಕರಿಸಿದರು. ಮಾತೃಭಾರತಿಯ ಸದಸ್ಯರಾದ ನೇತ್ರಾವತಿ ನಿರ್ವಹಿಸಿದರು, ಶ್ರೀರಾಮ ಪ್ರಾಥಮಿಕ ಶಾಲೆಯ ರಾಜೇಶ್ವರಿ ಮಾತಾಜಿ, ಶ್ರೀ ಗುರೂಜಿ ಮತ್ತು ಸಾಮರಸ್ಯ ಸಹಭೋಜನದ ಬಗ್ಗೆ ಮಾಹಿತಿ ನೀಡಿದರು. ಭಗಿನಿ ದೇವಕಿ ಮಾತಾಜಿ ಪ್ರೇರಣಾ ಗೀತೆ ಹಾಡಿದರು. ಶಿಶುಮಂದಿರದ ಪುಟಾಣಿ ಅನಘ ಸ್ವಾಗತಿಸಿ, ವಂಶಿಕಾ ವಂದಿಸಿದರು.

ಸ್ವಾವಲಂಬಿ ಸಾರಥಿ ಯೋಜನೆ ವಾಹನ ಫಲಾನುಭವಿಗಳಿಗೆ ಹಸ್ತಾಂತರ



ಕಾಪು: ಉಡುಪಿ ಜಿಲ್ಲೆಯ ಡಾ. ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ ಜಿಲ್ಲೆ ವತಿಯಿಂದ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಅವರ ಶಿಫಾರಸ್ಸಿನ ಮೇರೆಗೆ ಉದ್ಯಮಶೀಲತಾ ಸ್ವಾವಲಂಬಿ ಸಾರಥಿ ಯೋಜನೆಯಡಿ ಗೂಡ್ಸ್ ವಾಹನ ಹಾಗೂ ಸಹಾಯಧನ ಮಂಜೂರಾಗಿದ್ದು, ಫಲಾನುಭವಿಗಳಿಗೆ ಹಸ್ತಾಂತರಿಸಲಾಯಿತು. ಪಲಿಮಾರು ಗ್ರಾಮ ನಿವಾಸಿ ದಿನೇಶ್, ಕೊರಂಗ್ರಪಾಡಿ ಗ್ರಾಮದ ಅಭಿಲಾಶ್, ಅಲೆವೂರು ಗ್ರಾಮದ ದುರಗಪ್ಪ ಅವರಿಗೆ ಸೇರಿದಂತೆ ಒಟ್ಟು 3 ಫಲಾನುಭವಿಗಳಿಗೆ ಗೂಡ್ಸ್ ವಾಹನ ವಿತರಿಸಿ ಉದ್ಯಮಶೀಲತಾ ಯೋಜನೆಯಡಿ ಪಡುಬಿದ್ರಿ ಗ್ರಾಮ ನಿವಾಸಿ ಹರೀಶ್, ಬೊಮ್ಮರಬೆಟ್ಟು ಗ್ರಾಮದ ಮಂಜುನಾಥ್ ಟಿ.ಎಲ್, ಪಲಿಮಾರು ಗ್ರಾಮದ ಸೌಮ್ಯ ಸೇರಿದಂತೆ 3 ಫಲಾನುಭವಿಗಳಿಗೆ ಆರ್ಥಿಕ ಸಹಾಧನ ಆದೇಶ ಪತ್ರವನ್ನು ಶಾಸಕರು ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಕಾಪು ಮಂಡಲ ಬಿಜೆಪಿ ಅಧ್ಯಕ್ಷರಾದ ಜಿತೇಂದ್ರ ಶೆಟ್ಟಿ, ಪಲಿಮಾರು ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷರಾದ ಸೌಮಲತಾ ಶೆಟ್ಟಿ, ಮಾಜಿ ಉಪಾಧ್ಯಕ್ಷರಾದ ರಾಯೇಶ್ ಪೈ, ಬೈರಂಪಳ್ಳಿ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷರಾದ ಜೀಯಾನಂದ ಹೆಗಡೆ, ಹೆಜಮಾಡಿ ಗ್ರಾಮ ಪಂಚಾಯತ್ ಮಾಜಿ ಉಪಾಧ್ಯಕ್ಷರಾದ ಮೋಹನ್ ಸುವರ್ಣ, ಅಲೆವೂರು ಗ್ರಾಮ ಪಂಚಾಯತ್ ಮಾಜಿ ಸದಸ್ಯರಾದ, ಬೆಳ್ಳಂಪಳ್ಳಿ ಗ್ರಾಮ ಪಂಚಾಯತ್ ಮಾಜಿ ಸದಸ್ಯರಾದ ಹರ್ಷಿತ್, ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕರಾದ ಶಂಕರ್ ಉಪಸ್ಥಿತರಿದ್ದರು.



ಬಂಟ್ವಾಳ ತಾಲೂಕಿನ ಶ್ರೀ ಕ್ಷೇತ್ರ ಅರ್ಕುಳಕ್ಕೆ ನೂತನ ಅಶ್ವರಥದ ಸಮರ್ಪಣೆ ಮೆರವಣಿಗೆಗೆ ಶಾಸಕ ಡಾ. ಭರತ್ ಶೆಟ್ಟಿ, ಅರ್ಕುಳ ಬೀಡು ಧರ್ಮದರ್ಶಿ ವಜ್ರನಾಭ ಶೆಟ್ಟಿ ಮೆರವಣಿಗೆಗೆ ಚಾಲನೆ ನೀಡಿದರು. ಈ ವೇಳೆ ಸೇವಾಂಜಲಿ ಪ್ರತಿಷ್ಠಾನದ ಆಡಳಿತ ಟ್ರಸ್ಟಿನ ಕೃಷ್ಣಕುಮಾರ್ ಪೂಂಜ, ಕಂಪ ಸದಾನಂದ ಆಳ್ವ, ಬಾಸ್ಕರ ಚೌಟ, ತಾರಾನಾಥ ಕೊಟ್ಟಾರಿ, ಅರ್ಕುಳ ಬೀಡು ರತ್ನರಾಜ ಶೆಟ್ಟಿ ಉಪಸ್ಥಿತರಿದ್ದರು.

ಬಸವನಮೂಲ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಶಿವಕಲ್ಪೋಕ್ತ ಪೂಜೆ



ಸುಬ್ರಹ್ಮಣ್ಯ: ಕುಲ್ಕುಂದದ ಬಸವನಮೂಲದ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಶಿವರಾತ್ರಿಯನ್ನು ಆಚರಿಸಲಾಯಿತು.

ಈ ಪ್ರಯುಕ್ತ ಅಹೋರಾತ್ರಿ ಭಜನಾ ಸೇವೆ, ಶ್ರೀ ದೇವರಿಗೆ ಏಕಾದಶ ರುದ್ರಾಭಿಷೇಕ, ರಂಗಪೂಜೆ, ನಾಲ್ಕು ಯಾಮಗಳಲ್ಲಿ ಶಿವಕಲ್ಪೋಕ್ತ ಪೂಜೆ ನೆರವೇರಿತು. ದೇವಳದ ಪ್ರಧಾನ ಅರ್ಚಕ ಗಣೇಶ್ ದೀಕ್ಷಿತ್ ವೈದಿಕ ವಿಧಿವಿಧಾನಗಳು ನೆರವೇರಿತು. ಅಹೋರಾತ್ರಿ ಭಜನಾ ಸೇವೆ, ಬಳಿಕ ಶ್ರೀ ಬಸವೇಶ್ವರ ದೇವರಿಗೆ ಬೆಳಗ್ಗಿನ ಮಹಾಪೂಜೆ, ಮಧ್ಯಾಹ್ನ ರುದ್ರಾಭಿಷೇಕ, ಮಹಾಪೂಜೆ ನಡೆಯಿತು. ಸಂಜೆ ರುದ್ರಾಭಿಷೇಕ ಸಹಿತ ಶಿವಕಲ್ಪೋಕ್ತ ಪೂಜೆ, ರಾತ್ರಿ ರಂಗಪೂಜೆ ಸಹಿತ ಮಹಾಪೂಜೆ ಬಳಿಕ ನಾಲ್ಕು ಯಾಮಗಳಲ್ಲಿ ರುದ್ರಾಭಿಷೇಕ ಸಹಿತ ಶಿವಕಲ್ಪೋಕ್ತ ಪೂಜೆ ನಡೆಯಿತು. ಸೋಮವಾರ ಬೆಳಗ್ಗೆ ಶ್ರೀ ದೇವರಿಗೆ ಮಹಾಪೂಜೆ ನಡೆಯಿತು. ನಂತರ ಭಜನೆಯ ಮಂಗಳೋತ್ಸವ ನೆರವೇರಿತು.

ದೇವಳದ ಆಡಳಿತ ಮಂಡಳಿ ಅಧ್ಯಕ್ಷ ಗಿರಿಧರ ಸ್ಕಂಧ, ಉಪಾಧ್ಯಕ್ಷ ರವೀಂದ್ರ ಕುಮಾರ್ ರುದ್ರಪಾದ, ಪ್ರಮುಖರಾದ ಶಿವರಾಮ ಪಳ್ಳಿಗದ್ದೆ, ವಿಜಯ ಕುಮಾರ್ ನಡುತೋಟ, ಗಿರೀಶ್ ಆಚಾರ್ಯ ಕುಲ್ಕುಂದ, ಚಂದ್ರಶೇಖರ ಬಸವನಮೂಲೆ ಮತ್ತಿತರರು ಉಪಸ್ಥಿತರಿದ್ದರು.



ವಿಟ್ಲ ಶ್ರೀ ಪಂಚಲಿಂಗೇಶ್ವರ ದೇವಸ್ಥಾನದಲ್ಲಿ ಮಹಾ ಶಿವರಾತ್ರಿ ಪ್ರಯುಕ್ತ ಅಮ್ಮೆ ಗಿರೀಶ್ ಭಟ್ ನೇತೃತ್ವದಲ್ಲಿ ಬಿಲ್ವಾರ್ಚನೆ ನಡೆಯಿತು.

ಬೆಳ್ತಂಗಡಿ ಶಾಸಕರ ಶ್ರಮಿಕರ ಕಚೇರಿಯಿಂದ ಸಮಾಜ ಮಂದಿರದವರೆಗೆ ಬೃಹತ್ ಜಾಥಾ | ಶಾಸಕ ಹರೀಶ್ ಪೂಂಜ ಹೇಳಿಕೆ
ಕೇಂದ್ರದ ವಿಬಿ ಜಿ ರಾಮ್‌ಜಿ ಯೋಜನೆ ನರೇಗಾ ಭ್ರಷ್ಟಾಚಾರ ತೊಡೆದುಹಾಕಲಿದೆ



ಬೆಳ್ತಂಗಡಿ: ಭಾರತೀಯ ಜನತಾ ಪಾರ್ಟಿ ಬೆಳ್ತಂಗಡಿ ಮಂಡಲ ಭ್ರಷ್ಟಾಚಾರ ಮುಕ್ತ ಆಡಳಿತಕ್ಕಾಗಿ ಹಾಗೂ ವಿಕಸಿತ ಭಾರತ ಉದ್ಯೋಗ ಮತ್ತು ಜೀವನೋಪಾಯ ಮಿಷನ್ ಗ್ಯಾರಂಟಿ ಗ್ರಾಮೀಣ ವಿಬಿ ಜಿ ರಾಮ್‌ಜಿ ಯೋಜನೆ ಮಹಾತ್ಮಾಗಾಂಧಿ ನರೇಗಾ ಯೋಜನೆಯಲ್ಲಿನ ಭ್ರಷ್ಟಾಚಾರವನ್ನು ತೊಡೆದು ಹಾಕಲು ಹಾಗೂ ಕೇಂದ್ರ ಸರ್ಕಾರದ ಹೊಸ ಕಾಯ್ದೆಗೆ ಜನಜಾಗೃತಿ ಮೂಡಿಸಲು ಸೋಮವಾರ ಬೆಳ್ತಂಗಡಿ ಶಾಸಕರ ಶ್ರಮಿಕರ ಕಚೇರಿಯಿಂದ ಸಮಾಜ ಮಂದಿರದವರೆಗೆ ಬೃಹತ್ ಜಾಥಾ ನಡೆಯಿತು.

ಗ್ರಾ.ಪಂ.ಗೆ ಕೇಂದ್ರ ಅನುದಾನ ಮಾತ್ರ

ಬಳಿಕ ಸಮಾಜ ಮಂದಿರದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಶಾಸಕ ಹರೀಶ್ ಪೂಂಜ, ವಿಬಿ ಜಿ ರಾಮ್ ಜಿ ಯೋಜನೆಯನ್ನು ರಾಜ್ಯ ಕಾಂಗ್ರೆಸ್ ವಿರೋಧ ವ್ಯಕ್ತಪಡಿಸುತ್ತಿರುವುದೇ ಈ ಯೋಜನೆಗೆ ಕೇಂದ್ರ 60% ಕೊಟ್ಟರೆ, ರಾಜ್ಯ ಸರ್ಕಾರ 40% ಅನುದಾನ ಭರಿಸಬೇಕಾಗುತ್ತದೆ. ರಾಜ್ಯದ ಗ್ರಾ.ಪಂ.ಗಳು ಕೇಂದ್ರ ಸರ್ಕಾರದ ಅನುದಾನದಿಂದ ಮಾತ್ರ ಜನಸೇವೆ ಮಾಡುವ ಪರಿಸ್ಥಿತಿ ಎದುರಾಗಿದೆ. ಈಗಾಗಲೇ ಕೇಂದ್ರದಿಂದ ಬಂದಿರುವ 1200 ಕೋ. ರೂ. ಹಣ ಎಲ್ಲಿಗೆ ವಿನಿಯೋಗ ಆಗಿದೆ. ಯಾರು ತಿಂದಿದ್ದಾರೆ ಎಂಬುದೇ ಗೊತ್ತಿಲ್ಲ ಎಂದರು.

ಬಳಿಕ ಮಾತನಾಡಿದ ವಿಧಾನಪರಿಷತ್ ಶಾಸಕರಾದ ಪ್ರತಾಪ್ ಸಿಂಹ ನಾಯಕ್ ಅವರು, ರಫೇಲ್ ಬಗ್ಗೆ ಆರೋಪಿಸಿ ಮಂಗಳೂರಿನಲ್ಲಿ ಕಾಂಗ್ರೆಸ್ ಪ್ರತಿಭಟನೆ ನಡೆಸಿದಾಗ ಮಾಧ್ಯಮಮಿತ್ರರು ಪ್ರತಿಭಟನಾಕಾರರಲ್ಲಿ ರಫೇಲ್ ಬಗ್ಗೆ ಕೇಳಿದಾಗ ಅವರಿಗೆ ಅದರ ಮಾಹಿತಿಯೇ ಇರಲಿಲ್ಲ, ಅಂತಹುದೇ ಪರಿಸ್ಥಿತಿ ಈಗ ವಿಬಿ ಜಿ ರಾಮ್ ಜಿ ಯೋಜನೆಯಲ್ಲಿದೆ. ಕೇಂದ್ರದ ಈ ಯೋಜನೆಯನ್ನು ವಿರೋಧಿಸಿ ಕಾಂಗ್ರೆಸ್ ಪ್ರತಿಭಟನೆ ನಡೆಸುತ್ತಿದ್ದೋ, ಅಲ್ಲಿ ಹೋಗಿ ಪ್ರಶ್ನಿಸಿದರೆ ಅವರಿಗೆ ಆ ಬಗ್ಗೆ ಮಾಹಿತಿಯೇ ಇರುವುದಿಲ್ಲ ಎಂದು ಲೇವಡಿ ಮಾಡಿದರು.

ಈಗ ರಾಜ್ಯದಲ್ಲಿ ಏನು ಮುಖ್ಯಮಂತ್ರಿ ಖುರ್ಚಿಗಾಗಿ ಪೈಪೋಟಿ ನಡೆಯುತ್ತಿದೆಯೋ ಅದರ ಗಮನವನ್ನು ಬೇರೆಡೆ ಸೆಳೆಯಲು ಕಾಂಗ್ರೆಸ್ ಪ್ರತಿಭಟನೆಯ ನಾಟಕವಾಡುತ್ತಿದೆ ಎಂದರು.

ಸಭೆಯಲ್ಲಿ, ಬೆಳ್ತಂಗಡಿ ಮಂಡಲ ಬಿಜೆಪಿ ಅಧ್ಯಕ್ಷ ಶ್ರೀನಿವಾಸ್ ರಾವ್, ರಾಜ್ಯ ಬಿಜೆಪಿ ಅಲ್ಪಸಂಖ್ಯಾತ ಘಟಕದ ಕಾರ್ಯದರ್ಶಿ ಜೋಯಲ್ ಮೆಂಡೋನ್ಸ, ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ಮಹಿಳಾ ಕಾರ್ಯದರ್ಶಿ ವಸಂತಿ ಮಚ್ಚಿನ, ಜಿಲ್ಲಾ ಬಿಜೆಪಿ ಉಪಾಧ್ಯಕ್ಷರಾದ ಜಯಂತ್ ಕೋಟ್ಯಾನ್, ಮನ್ ಕಿ ಬಾತ್ ಜಿಲ್ಲಾ ಪ್ರಮುಖ್ ಸೀತಾರಾಮ್ ಬೆಳಾಲ್, ಬಿಜೆಪಿ ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಪ್ರಶಾಂತ್ ಪಾರೆಂಕಿ, ಜಯಾನಂದ ಗೌಡ ಉಪಸ್ಥಿತರಿದ್ದರು. ಲಾಯಿಲ ಶಕ್ತಿ ಕೇಂದ್ರ ಪ್ರಧಾನ ಕಾರ್ಯದರ್ಶಿ ಅರವಿಂದ ಲಾಯಿಲ, ರಾಜೇಶ್ ಪೆರ್ಮುಡ ಕಾರ್ಯಕ್ರಮ ನಿರೂಪಿಸಿದರು.

ಸುತ್ತಮುತ್ತ

ಜಾನುವಾರುಗಳಿಗೆ ಜಂತುಹುಳು ನಿವಾರಣಾ ಔಷಧಿ ವಿತರಣೆ

ಪೆರ್ಲ: ಎಣ್ಮಕಜೆ ಗ್ರಾಮ ಪಚಾಯತ್, ಕುಟುಂಬಶ್ರೀ ಜಿಲ್ಲಾ ಮಿಷನ್ ಕಾಸರಗೋಡು, ಎಣ್ಮಕಜೆ ಸಿಡಿಎಸ್, ಪಶುಸಂಗೋಪನಾ ಇಲಾಖೆ ಮತ್ತು ಪೆರ್ಲ ಪಶು ಚಿಕಿತ್ಸಾಲಯ ಇವುಗಳ ನೇತೃತ್ವದಲ್ಲಿ ಪಶುಸಂಗೋಪನಾ ಕ್ಷೇತ್ರದಲ್ಲಿ ವಿವಿಧ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಜೀವನ ಎಂಬ ಅಭಿಯಾನದ ಭಾಗವಾಗಿ ಸ್ವರ್ಗ ಪಶು ಚಿಕಿತ್ಸಾಲಯ ಉಪಕೇಂದ್ರದಲ್ಲಿ ಶನಿವಾರ ಸಾಕುನಾಯಿಗಳಿಗೆ ರೇಬೀಸ್ ಲಸಿಕೆ ಹಾಗೂ ಜಾನುವಾರುಗಳಿಗೆ ಜಂತುಹುಳು ನಿವಾರಣಾ ಔಷಧಿ ವಿತರಿಸಲಾಯಿತು. ಪಶು ವೈದ್ಯಾಧಿಕಾರಿ ಡಾ. ಘನಶ್ಯಾಮ್ ಜೋಶಿ, ವಾರ್ಡ್ ಸದಸ್ಯ ರಾಮಚಂದ್ರ ಎಂ., ಎ.ಎಚ್. ಮಾಸ್ಟರ್, ಸಿಆರ್‌ಪಿ ಶಶಿಕಲಾ ಕೆ., ಎಎಚ್‌ಸಿಆರ್‌ಪಿ ಜಯಾವತಿ ಎಂ., ಜಯಂತಿ, ಸಿಬ್ಬಂದಿಗಳಾದ ಜ್ಯೋತಿ, ರೇವತಿ ಮುಂತಾದವರು ಸಹಕರಿಸಿದರು.

ಬೆಳ್ಳಾಯರು ದೇವಳ: ಮಹಾಶಿವರಾತ್ರಿ ಉತ್ಸವ

ಮುಲ್ಕಿ: ಬೆಳ್ಳಾಯರು ಶ್ರೀ ಚಂದ್ರಮೌಳೀಶ್ವರ ದೇವಸ್ಥಾನದಲ್ಲಿ ಕ್ಷೇತ್ರದ ತಂತ್ರಿಗಳಾದ ವೇದಮೂರ್ತಿ ಬ್ರಹ್ಮಶ್ರೀ ದೇರೆಬೈಲು ಡಾ. ಶಿವಪ್ರಸಾದ್ ತಂತ್ರಿಗಳ ನೇತೃತ್ವದಲ್ಲಿ ಫೆ.15ಕ್ಕೆ ಮಹಾಶಿವರಾತ್ರಿ ಉತ್ಸವ ವಿಜೃಂಭಣೆಯಿಂದ ನಡೆಯಿತು. ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಪ್ರಾತಕಾಲ ವಿಶೇಷ ಪ್ರಾರ್ಥನೆ,ಬೆಳಿಗ್ಗೆ 7.20ಕ್ಕೆ ರುದ್ರಾಭಿಷೇಕ ಪೂಜೆ, ಮಧ್ಯಾಹ್ನ 12:30ಕ್ಕೆ ಮಹಾಪೂಜೆ, ರಾತ್ರಿ ರಂಗ ಪೂಜೆ ನಡೆಯಿತು.

ಬೆಳಿಗ್ಗೆ ಕ್ಷೇತ್ರದ ತಂತ್ರಿಗಳಾದ ಶಿವಪ್ರಸಾದ್ ತಂತ್ರಿಯವರು ಭಜನಾ ದೀಪ ಪ್ರಜ್ವಲನೆ ಮೂಲಕ ಭಜನ ಕಾರ್ಯಕ್ರಮಗಳಿಗೆ ಚಾಲನೆ ನೀಡಿದರು. ಬಳಿಕ ವಿವಿಧ ಭಜನಾ ಮಂಡಳಿಗಳಿಂದ ಆಹೋರಾತ್ರಿ ಭಜನಾ ಕಾರ್ಯಕ್ರಮ ನಡೆಯಿತು

ಈ ಸಂದರ್ಭ ಕ್ಷೇತ್ರದ ಆಡಳಿತ ಮೊಕ್ತೇಸರ ಪಾದೆ ಮನೆ ಜಯಂತ ರೈ, ಆರ್ಚಕ ಗೋಪಾಲ್ ಭಟ್, ಸಮಿತಿಯ ಸದಸ್ಯ ರಾಮಚಂದ್ರ ನಾಯ್ಕ ಕೋಲ್ನಾಡ್ ಗುತ್ತು, ವಿದ್ಯಾಧರ್ ಶೆಟ್ಟಿ ಕೋಲ್ನಾಡ್ ಗುತ್ತು, ಅಕ್ಷಯ್ ಭಟ್, ವಿನೋದ್ ಸಾಲ್ಯಾನ್ ಬೆಳ್ಳಾಯರು, ರೋಹಿಣಿ ಶೆಟ್ಟಿ, ಗಿರೀಶ್ ಭಟ್ ರಾಮದಾಸ್ ಭಟ್, ಸತೀಶ್ ನಾನಿಲ್, ಪ್ರವೀಣ್ ನಿರುಪಮ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ಆಡಳಿತ ಸಮಿತಿ ಅಧ್ಯಕ್ಷರಾಗಿ ಸಂತೋಷ ಕುಮಾರ್ ಚೌಟ



ಬಂಟ್ವಾಳ: ತಾಲೂಕು ಸಂಗಬೆಟ್ಟು ಗ್ರಾಮದ ಮುಗೇರಗುಡ್ಡೆ ಶ್ರೀ ಬ್ರಹ್ಮಮುಗೇರ ಮಹಾಕಾಳಿ ದೈವಸ್ಥಾನ,ಅಲೇರ ಪಂಜುರ್ಲಿ, ಸ್ವಾಮಿ ಕೊರಗಜ್ಜ ಸಾನಿಧ್ಯ ಇದರ ಆಡಳಿತ ಸಮಿತಿ ಅಧ್ಯಕ್ಷರಾಗಿ ಸಂತೋಷ ಕುಮಾರ್ ಚೌಟ ಮಾಡಂದೂರು ಆಯ್ಕೆಯಾಗಿದ್ದಾರೆ. ಇತ್ತೀಚಿಗೆ ನಡೆದ ಸಭೆಯಲ್ಲಿ ಈ ಆಯ್ಕೆ ನಡೆದಿದೆ.ಇವರು ಸ್ಥಳೀಯವಾಗಿ ಹಲವಾರು ಸಂಘ, ಸಂಸ್ಥೆಗಳು, ದೇವಸ್ಥಾನ, ದೈವಸ್ಥಾನ, ಮಂದಿರಗಳ ವಿವಿಧ ಸಮಿತಿಯಲ್ಲಿ ಕಾರ್ಯನಿರ್ವಹಿಸಿತ್ತಿದ್ದಾರೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಗಳೂರು: ಕಾಟಿಪಳ್ಳ ವಿದ್ಯುತ್ ಉಪಕೇಂದ್ರದಿಂದ ಹೊರಡುವ 11 ಕೆವಿ ಸುರತ್ಕಲ್, ಕಾನ ಮತ್ತು ತಡಂಬೈಲ್ ಫೀಡರ್‌ಗಳಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಸುರತ್ಕಲ್, ಕಾನ, ಕಟ್ಲ, ಜನತಾ ಕಾಲನಿ, ಗುಡ್ಡಕೊಪ್ಲ, ಹೊಸಬೆಟ್ಟು, ತಡಂಬೈಲ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಫೆ.19ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಮುಲ್ಕಿ ಪರಿಸರ

ಮುಲ್ಕಿ ಉಪಕೇಂದ್ರದಿಂದ ಹೊರಡುವ 11 ಕೆವಿ ವಿದ್ಯುತ್ ಮಾರ್ಗಗಳಲ್ಲಿ ತುರ್ತು ನಿರ್ವಹಣಾ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ ಮುಲ್ಕಿ, ಚಿತ್ರಾಪು, ಕಾರ್ನಾಡು, ಬಪ್ಪನಾಡು, ಕೊಳಚಿಕಂಬ್ಳ, ಗೇರುಕಟ್ಟೆ, ಕೆ.ಎಸ್.ಆರ್ ನಗರ, ಲಿಂಗಪ್ಪಯ್ಯ ಕಾಡು, ಹಳೆಯಂಗಡಿ, ಪಾವಂಜೆ, ಚೇಳ್ಯಾರು, ತೋಕೂರು, ಪಕ್ಷಿಕೆರೆ, ಎಸ್ಕೋಡಿ, ಕಿನ್ನಿಗೋಳಿ, ಪುನರೂರು, ಮೂರು ಕಾವೇರಿ, ಐಕಳ, ಕವತ್ತಾರು, ಶಿಮಂತೂರು, ಗೋಳಿಜೋರ, ಗುತ್ತಕಾಡು, ಬಲವಿನ ಗುಡ್ಡೆ, ಪದ್ಮನ್ನೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಫೆ.19ರಂದು ಬೆಳಿಗ್ಗೆ 9.30ರಿಂದ ಸಂಜೆ 6ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ರೂ.50 ಲಕ್ಷ ವೆಚ್ಚದ ಒಡೋಳಿ ಸೇತುವೆ ಉದ್ಘಾಟಿಸಿ ಶಾಸಕಿ ಭಾಗೀರಥಿ ಮುರುಳ್ಯ ಅಭಿಪ್ರಾಯ

ಗ್ರಾಮಗಳ ಅಭಿವೃದ್ಧಿಯಲ್ಲಿ ಸ್ಥಳೀಯರ ಸಹಕಾರ ಅತ್ಯಗತ್ಯ

ಕಡಬ: ಗ್ರಾಮಗಳ ಅಭಿವೃದ್ಧಿಗಾಗಿ ನೀಡುವ ಸರಕಾರದ ಅನುದಾನಗಳು ಸಮರ್ಪಕವಾಗಿ ಬಳಕೆಯಾಗಬೇಕಿದ್ದರೆ ಸ್ಥಳೀಯರ ಸಹಕಾರ ಮುಖ್ಯ. ಅಭಿವೃದ್ಧಿ ಕಾಮಗಾರಿಗಳು ನಡೆಯುವ ವೇಳೆ ಕಳಪೆ ಕಾಮಗಾರಿಗಳು ನಡೆಯದಂತೆ ಅಕಾರಿಗಳ ಜೊತೆಗೆ ಜನಪ್ರತಿನಿಗಳು ಹಾಗೂ ಸ್ಥಳೀಯರು ಕೂಡ ನಿಗಾ ವಹಿಸಬೇಕು ಎಂದು ಸುಳ್ಯ ಕ್ಷೇತ್ರದ ಶಾಸಕಿ ಭಾಗೀರಥಿ ಮುರುಳ್ಯ ಹೇಳಿದರು.

ಅವರು ರಾಜ್ಯ ವಿಪತ್ತು ಉಪಶಮನ ನಿಧಿಯಡಿ ಮಂಜೂರುಗೊಂಡ ರೂ.50 ಲಕ್ಷ ಅನುದಾನದಲ್ಲಿ ನಿರ್ಮಾಣಗೊಂಡ ಕೊಂಬಾರು ಗ್ರಾಮದ ಒಡೋಳಿ ಸೇತುವೆ ಉದ್ಘಾಟಿಸಿ ಮಾತನಾಡಿದರು.

ಗ್ರಾಮಗಳು ಅಭಿವೃದ್ಧಿಯಾದರೆ ಮಾತ್ರ ದೇಶದ ಅಭಿವೃದ್ಧಿಯಾಗಲು ಸಾಧ್ಯ. ಆದುದರಿಂದ ಗ್ರಾಮೀಣ ಭಾಗದ ಬೇಡಿಕೆಗಳನ್ನು ಆದ್ಯತೆಯ ಮೇರೆ ಈಡೇರಿಸಲಾಗುತ್ತಿದೆ. ಗ್ರಾಮೀಣ ಕೃಷಿಕರಿಗೆ ಅನುಕೂಲವಾಗುವಂತೆ ಮುಖ್ಯವಾಗಿ ರಸ್ತೆ ಅಭಿವೃದ್ಧಿ ಹಾಗೂ ಸೇತುವೆ ನಿರ್ಮಾಣದ ಕಾರ್ಯಗಳನ್ನು ಆದ್ಯತೆಯ ಮೇರೆ ಕೈಗೆತ್ತಿಕೊಳ್ಳಲಾಗುತ್ತಿದೆ. ಸ್ಥಳೀಯ



ರಿಂದ ಇನ್ನಷ್ಟು ಅಭಿವೃದ್ಧಿ ಕಾರ್ಯಗಳ ಬೇಡಿಕೆಗಳು ಇವೆ. ಅವುಗಳನ್ನು ಮುಂದಿನ ದಿನಗಳಲ್ಲಿ ಅನುದಾನ ನೀಡಿ ಈಡೇರಿಸಲಾಗುವುದು ಎಂದರು.

ಈಗಾಗಲೇ ಗ್ರಾ.ಪಂ. ಆಡಳಿತ ಮಂಡಳಿ ಅಧಿಕಾರಾವಧಿ ಮುಕ್ತಾಯದ ಹಂತದಲ್ಲಿವೆ. ಇಲ್ಲಿನ ಗ್ರಾ.ಪಂ. ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರು ಜನರ ಬೇಡಿಕೆಗಳಿಗೆ ಸೂಕ್ತವಾಗಿ ಸ್ಪಂದಿಸಿ ಜನಪರ ಕೆಲಸಗಳನ್ನು ಮಾಡುವ ಮೂಲಕ ತಮಗೆ ನೀಡಿದ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ. ಅವರಿಗೆ ಗ್ರಾಮಸ್ಥರ ಪರವಾಗಿ ಅಭಿನಂದನೆ ಸಲ್ಲಿಸುವುದಾಗಿ ಶಾಸಕರು ತಿಳಿಸಿದರು.

ಗ್ರಾ.ಪಂ. ಅಧ್ಯಕ್ಷ ಮಧುಸೂಧನ್ ಓಡೋಳಿ ಮಾತನಾಡಿ, ಗ್ರಾಮದ ಅಭಿವೃದ್ಧಿಯಲ್ಲಿ ಸಹಕರಿಸಿದ ಸರ್ವರಿಗೂ ಕೃತಜ್ಞತೆಗಳನ್ನು ಸಲ್ಲಿಸಿದರು. ಜಿ.ಪಂ. ಮಾಜಿ ಸದಸ್ಯ ಕೃಷ್ಣ ಶೆಟ್ಟಿ ಕಡಬ, ಬಿಳಿನೆಲೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ವಾಡ್ಯಪ್ಪ ಗೌಡ ಎರ್ಮಾಯಿಲ್, ಉಪಾಧ್ಯಕ್ಷ ವೆಂಕಟ್ರಮಣ ಕೋಲ್ಪೆ, ಮಾಜಿ ಅಧ್ಯಕ್ಷ ದಾಮೋದರ ಗೌಡ ಗುಂಡ್ಯ, ನಿರ್ದೇಶಕ ಸುರೇಶ್ ಕೋಲ್ಪಜೆ, ಲೋಕೋಪಯೋಗಿ ಇಲಾಖಾ ಸಹಾಯಕ ಇಂಜಿನಿಯರ್ ಪ್ರಮೋದ್ ಕುಮಾರ್ ಕೆ.ಕೆ., ಗ್ರಾ.ಪಂ. ಸದಸ್ಯ ಗಣೇಶ್ ಪಿಲಿಕಜೆ, ಜಯಶ್ರೀ ರಾಮಚಂದ್ರ ಗೌಡ, ವೀಣಾ ಜಗದೀಶ್, ಗುತ್ತಿಗೆದಾರ ಅವಿನಾಶ್ ಕೈಕಂಬ, ಪ್ರಮುಖರಾದ ಉಮೇಶ್ ಕೊಂಬಾರುಗದ್ದೆ, ನಾರಾಯಣ ನಿರಾಯ, ಪದ್ಮನಾಭ ಅನಿಲ, ಆನಂದ ಪೊರ್ದೇಲು, ಶ್ರೀಧರ ಗೌಡ ಕಾಪಾರು, ಮಂಜುನಾಥ ಪೆರುಂದೋಡಿ, ವಿಶ್ವನಾಥ ಕೊಡೆಂಕಿರಿ, ರಾಮಕೃಷ್ಣ ಹೊಳ್ಳಾರು, ಶಿವಪ್ರಸಾದ್ ಕಾಯರ್ತಡ್ಕ ಮತ್ತಿತರರು ಉಪಸ್ಥಿತರಿದ್ದರು.

2 ಕೋ.ರೂ. ವೆಚ್ಚದ ಆಲೆಟ್ಟಿ ವಾಲ್ಮಿಕಿ ಶಾಲಾ ಕಟ್ಟಡಕ್ಕೆ ಭೂಮಿಪೂಜೆ

ಸುಳ್ಯ: ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಆಲೆಟ್ಟಿ ಮಹರ್ಷಿ ವಾಲ್ಮಿಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆಗೆ ಶಾಸಕರ ವಿಶೇಷ ಅನುದಾನ ರೂ.2 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಲಿರುವ ಕಟ್ಟಡಕ್ಕೆ ಗುದ್ದಲಿ ಪೂಜೆಯನ್ನು ಮಂಗಳವಾರ ನೆರವೇರಿಸಲಾಯಿತು.

ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಗುದ್ದಲಿಪೂಜೆ ನೆರವೇರಿಸಿ, ಶಿಕ್ಷಣಕ್ಕೆಸಂಬಂಸಿದಂತೆ ಸುಳ್ಯ ಕ್ಷೇತ್ರದಲ್ಲಿ ಮೂಲ ಸೌಲಭ್ಯಗಳನ್ನು ಆದ್ಯತೆ ನೆಲೆಯಲ್ಲಿ ಸರಕಾರದ ಅನುದಾನದಲ್ಲಿ ಒದಗಿಸಲಾಗುತ್ತಿದೆ. ಆಲೆಟ್ಟಿ ವಾಲ್ಮಿಕಿ ಆಶ್ರಮ ಶಾಲೆಗೆ ರೂ.2 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಲಿರುವ ಸುಸಜ್ಜಿತ ಕಟ್ಟಡ ಮಕ್ಕಳ ಶಿಕ್ಷಣಕ್ಕೆ ಪೂರಕವಾಗಿ ಕಟ್ಟಡ ನಿರ್ಮಾಣವಾಗಲಿದೆ. ಮುಂದಿನ ಆರು ತಿಂಗಳಲ್ಲಿ ಕಾಮಗಾರಿ ಪೂರ್ಣಗೊಂಡು ಮುಂದಿನ ಶೈಕ್ಷಣಿಕ ವರ್ಷದಲ್ಲಿ ಕಟ್ಟಡ ಲೋಕಾರ್ಪಣೆಗೊಳ್ಳುವಂತಾಗಲಿ ಎಂದು ಹೇಳಿದರು.

ಪ್ರಮುಖರಾದ ಜಯಪ್ರಕಾಶ್ ಕುಂಚಡ್ಕ, ಸುಧಾಕರ ಆಲೆಟ್ಟಿ, ನಾಗರಾಜ ಬಡ್ಡಡ್ಕ, ಸತೀಶ್ ಕುಂಬಕೋಡು, ಉದಯ ಕುಮಾರ್, ಸತೀಶ್, ಸುನಿಲ್ ಗುಂಡ್ಯ, ತೀರ್ಥಕುಮಾರ್ ಕುಂಚಡ್ಕ, ವೀಣಾ ವಸಂತ ಆಲೆಟ್ಟಿ, ಶಿವಾನಂದ ರಂಗತ್ತಮಲೆ, ನಿತ್ಯಾನಂದ ಗುಂಡ್ಯ, ತೇಜಕುಮಾರ್ ಕುಡೆಕಲ್ಲು, ಕಮಲ ನಾಗಪಟ್ಟಣ, ಪ್ರೌಢ ಶಾಲಾ ಮುಖ್ಯ ಗುರು ವಿಜಯಲಕ್ಷ್ಮಿ, ಆಶ್ರಮ ಶಾಲಾ ಮುಖ್ಯ ಗುರು ಕಾವ್ಯ, ಶಿಕ್ಷಕರಾದ ಗೀತಾ, ಹೇಮಲತಾ, ಅನಿತಾ, ಲತಾ, ಅಕ್ಷತಾ, ಅಂಗನವಾಡಿ ಕಾರ್ಯಕರ್ತೆ ಮಮತಾ ಮತ್ತಿತರರು ಉಪಸ್ಥಿತರಿದ್ದರು.

ಪದ್ಯಾಣ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಮಹಾಶಿವರಾತ್ರಿ

ಜಾತ್ಯತೀತ ವ್ಯವಸ್ಥೆ ಬಲಗೊಳ್ಳಬೇಕು: ವಜ್ರದೇಹಿ ಶ್ರೀ

ವಿಟ್ಲ: ಹಿಂದು ಸಮಾಜದಲ್ಲಿ ಇರುವ ಜಾತ್ಯತೀತ ವ್ಯವಸ್ಥೆ ಬಲಗೊಳ್ಳಬೇಕು. ಹಿಂದು ಸಮಾಜವನ್ನು ಜೋಡಿಸುವ ಕೆಲಸ ಪದ್ಯಾಣದಲ್ಲಿ ಆಗುತ್ತಿದೆ. ಸಮಸ್ತ ಹಿಂದು ಸಮಾಜಕ್ಕೆ ಈ ಮಣ್ಣು ಚೈತನ್ಯ ಶೀಲವಾಗಲಿ ಎಂದು ಗುರುಪುರ ಶ್ರೀ ವಜ್ರದೇಹಿ ಮಠದ ಶ್ರೀ ರಾಜಶೇಖರಾನಂದ ಸ್ವಾಮೀಜಿ ಹೇಳಿದರು.



ಪದ್ಯಾಣ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಮಾ.30ರಿಂದ ಏ.6ರ ವರೆಗೆ ನಡೆಯಲಿರುವ ಶ್ರೀ ದೇವರ ಪುನಃ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶ ಕಾರ್ಯಕ್ರಮದ ಪೂರ್ವಭಾವಿ ಸುಧರ್ಮ ಸಭೆ ಆಶೀರ್ವಚನ ನೀಡಿದರು.

ಬೆಂಗಳೂರಿನ ಹಿರಿಯ ನ್ಯಾಯವಾದಿ ಶ್ಯಾಮಸುಂದರ್ ಎಂ.ಎಸ್. ಮಾತನಾಡಿ, ಧಾರ್ಮಿಕ ಶ್ರದ್ಧೆ, ಆಚಾರ, ವಿಚಾರಗಳನ್ನು ಅನುಸರಿಸುವವರ ಪೈಕಿ ಕನ್ನಡಿಗರು ಮುಂಚೂಣಿಯಲ್ಲಿರುವ ಹಿನ್ನೆಲೆ ದೇಶದ ನಾನಾ ಧಾರ್ಮಿಕ ಕೇಂದ್ರಗಳಲ್ಲಿ ಕರ್ನಾಟಕದ ಜನತೆ ಇರುವುದನ್ನು ಕಾಣಬಹುದು. ಪದ್ಯಾಣದಲ್ಲೊಂದು ಶಕ್ತಿಯ ಸೆಳೆತವಿದೆ ಎಂದರು.

ಪದಯಾನ ತಂಡದಿಂದ ವಿದುಷಿ ಪ್ರಣತಿ ಚೈತನ್ಯ ಪದ್ಯಾಣ ನಿರ್ದೇಶನದಲ್ಲಿ ಭರತನಾಟ್ಯ ಪ್ರದರ್ಶನ ನಡೆಯಿತು. ಬೆಂಗಳೂರಿನ ಹಿರಿಯ ನ್ಯಾಯವಾದಿ ಶ್ಯಾಮಸುಂದರ್ ಎಂ.ಎಸ್. ಸನ್ಮಾನಿಸಲಾಯಿತು. ಬೆಂಗಳೂರಿನ ಉದ್ಯಮಿ ಮುರಳಿ ಶ್ರೀನಿವಾಸಮೂರ್ತಿ, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಡಾ.ಅರುಣ ಶ್ಯಾಮ, ಬ್ರಹ್ಮಕಲಶೋತ್ಸವ ಸಮಿತಿ ಸಂಚಾಲಕ ಸೇರಾಜೆ ಗೋಪಾಲಕೃಷ್ಣ ಭಟ್, ಗೌರವಾಧ್ಯಕ್ಷ ಪದ್ಯಾಣ ರಘುರಾಮ ಕಾರಂತ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಅರವಿಂದ ಪದ್ಯಾಣ, ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ ಶ್ಯಾಮಸುದರ್ಶನ ಹೊಸಮೂಲೆ, ಜೀರ್ಣೋದ್ಧಾರ ಸಮಿತಿ ಕಾರ್ಯದರ್ಶಿ ಈಶಾನ್ಯ ಪದ್ಯಾಣ ಇದ್ದರು. ದೇವಸ್ಥಾನದ ಆಡಳಿತ ಮೊಕ್ತೇಸರ ಸತ್ಯನಾರಾಯಣ ಭಟ್ ಸೇರಾಜೆ ಸ್ವಾಗತಿಸಿ, ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯದರ್ಶಿ ಕೃಷ್ಣಎಂ.ಆರ್. ಕಡಬ ವಂದಿಸಿದರು. ಡಾ. ಗೋವಿಂದಪ್ರಸಾದ್ ಕಜೆ ಕಾರ್ಯಕ್ರಮ ನಿರ್ವಹಿಸಿದರು.

ಶಿವಾರ್ಪಣಂ, ವಿವಿಧ ಕಾರ್ಯಕ್ರಮ

ಮಹಾಶಿವರಾತ್ರಿ ಅಂಗವಾಗಿ 'ಶಿವಾರ್ಪಣಂ' ಕಾರ್ಯಕ್ರಮ ನಡೆಯಿತು. ಪೂರ್ವಾಹ್ನ ಮಹಾಗಣಪತಿ ಹೋಮ, ರುದ್ರಾಭಿಷೇಕ, ಸೀಯಾಳಾಭಿಷೇಕ, ಬಲವಾಡು ಕೂಟ, ಸಮಾರಾಧನೆ ಹಾಗೂ ಸೂರ್ಯಾಸ್ತದಿಂದ ಸೋಮವಾರ ಸೂರ್ಯೋದಯದ ತನಕ ಭಜನಾ ಸೇವೆ ರಾತ್ರಿ ಶ್ರೀ ದೇವರಿಗೆ ಏಕದಶ ರುದ್ರಾಭಿಷೇಕ, ಪಂಚಾಮೃತಾಭಿಷೇಕ ಹಾಗೂ ಶಿವರಾತ್ರಿ ಅಂಗವಾಗಿ ವಿಶೇಷ ಪೂಜೆ ನಡೆಯಿತು.

ವೀರಾಜಪೇಟೆ: ಬೃಹತ್ ಪಾದಯಾತ್ರೆಯಲ್ಲಿ ಶಾಸಕ ಪೊನ್ನಣ್ಣ ಹೇಳಿಕೆ

'ನರೇಗಾ' ಮರು ಜಾರಿವರೆಗೂ ಹೋರಾಟ

ಮಡಿಕೇರಿ: ನರೇಗಾ ಯೋಜನೆಯನ್ನು ಮರು ಜಾರಿಗೊಳಿಸುವವರೆಗೂ ನಮ್ಮ ಹೋರಾಟ ಮುಂದುವರಿಯಲಿದೆ ಎಂದು ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಹಾಗೂ ವೀರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ಘೋಷಿಸಿದರು.

ವೀರಾಜಪೇಟೆ ಬ್ಲಾಕ್ ಕಾಂಗ್ರೆಸ್ ವತಿಯಿಂದ 'ಮಹಾತ್ಮ ಗಾಂಧಿ ನರೇಗಾ ಬಚಾವೋ ಸಂಗ್ರಾಮ'ದ ಅಂಗವಾಗಿ ವೀರಾಜಪೇಟೆಯಲ್ಲಿ ನಡೆದ ಬೃಹತ್ ಪಾದಯಾತ್ರೆಯ ಬಳಿಕ ನಡೆದ ಬಹಿರಂಗ ಸಭೆಯಲ್ಲಿ ಅವರು ಮಾತನಾಡಿದರು.



ಜನತೆಗೆ ಅನ್ಯಾಯ

ನರೇಗಾ ಯೋಜನೆಯಿಂದ ಗ್ರಾಮೀಣ ಪ್ರದೇಶದಲ್ಲಿನ ಹಿಂದುಳಿದ ವರ್ಗದವರಿಗೆ ಅನುಕೂಲವಾಗುತ್ತಿತ್ತು. ಕೇಂದ್ರ ಸರ್ಕಾರದಿಂದ ಶೇ.90 ರಷ್ಟು ಅನುದಾನ ಬರುತ್ತಿತ್ತು. ಇದೀಗ ಅದನ್ನು ಕಿತ್ತುಕೊಂಡು ಕೇಂದ್ರ ಸರಕಾರ ಜನತೆಗೆ ಅನ್ಯಾಯ ಮಾಡುತ್ತಿದೆ ಎಂದು ಆರೋಪಿಸಿದರು.

ದೇಶದ ಸಂವಿಧಾನದ ಮೇಲೆ ನಂಬಿಕೆಯಿಲ್ಲದ ಕೇಂದ್ರದ ಬಿಜೆಪಿ ಸರ್ಕಾರ ಸಂವಿಧಾನವನ್ನು ಹಾಳುಗೆಡವಿದೆ. ತೆರಿಗೆ ಹಂಚಿಕೆಯಲ್ಲಿ ರಾಜ್ಯಕ್ಕೆ ನಿರಂತರ ದ್ರೋಹ ಎಸಗುತ್ತಿದೆ ಎಂದು ಪೊನ್ನಣ್ಣ ದೂರಿದರು.

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಮಾತನಾಡಿ, ಕಾಂಗ್ರೆಸ್ ಸರ್ಕಾರ ಜನತೆಗೆ ಉಪಯೋಗವಾಗುವ ಯೋಜನೆಗಳನ್ನು ಜಾರಿಗೊಳಿಸುತ್ತಿದೆ. ಆದರೆ, ಈ ಹಿಂದೆ ಕಾಂಗ್ರೆಸ್ ಜಾರಿಗೊಳಿಸಿದ ಜನೋಪಯೋಗಿ ಯೋಜನೆಗಳನ್ನು ಕೇಂದ್ರದ ಬಿಜೆಪಿ ಸರ್ಕಾರ ಹಾಳುಗೆಡವುತ್ತಿದೆ. ಇಂತಹ ಸರ್ಕಾರದ ವಿರುದ್ಧ ನಿರಂತರ ಹೋರಾಟ ಮಾಡಬೇಕಿದೆ ಎಂದರು.

ರಾಜ್ಯ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಸಿ.ಎಸ್.ಅರುಣ್ ಮಾಚಯ್ಯ ಮಾತನಾಡಿ, ಯೋಜನೆಯಿಂದ ಮಹಾತ್ಮ ಗಾಂಧಿಯ ಹೆಸರನ್ನು ತೆಗೆಯುವ ಹೀನ ಕೆಲಸವನ್ನು ಬಿಜೆಪಿ ಮಾಡಿರುವುದು ಖಂಡನೀಯ ಎಂದು ಹೇಳಿದರು.

ಕಾಂಗ್ರೆಸ್ ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ಧರ್ಮಜ ಉತ್ತಪ್ಪ ಮಾತನಾಡಿ, ಕಾಂಗ್ರೆಸ್ ಏಳಿಗೆಯನ್ನು ಸಹಿಸದ ಬಿಜೆಪಿ ಕುತಂತ್ರದ ಕೆಲಸ ಮಾಡುತ್ತಿದೆ. ಯೋಜನೆಯ ಜಾರಿಗೆ ಹೋರಾಟ ಅಗತ್ಯ ಎಂದರು.

ವಿಧಾನ ಪರಿಷತ್ ಮಾಜಿ ಸದಸ್ಯೆ ವೀಣಾ ಅಚ್ಚಯ್ಯ, ಕಾಂಗ್ರೆಸ್ ಪ್ರಚಾರ ಸಮಿತಿಯ ಟಿ.ಪಿ.ರಮೇಶ್, ವೀರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಿ ರಂಜಿ ಪೂಣಚ್ಚ, ಪೊನ್ನಂಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೀದೇರಿರ ನವೀನ್, ನಾಪೋಕ್ಲು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಇಸ್ಮಾಯಿಲ್, ಮಹಿಳಾ ಸಮಿತಿಯ ಜಿಲ್ಲಾ ಘಟಕದ ರೂಪಾ ದೇವಯ್ಯ, ಜಿಲ್ಲಾ ಅಲ್ಪ ಸಂಖ್ಯಾತರ ಘಟಕದ ಅಧ್ಯಕ್ಷ ಹನೀಫ್, ಪಕ್ಷದ ಪ್ರಮುಖರಾದ ಪಿ.ಜಿ ಅಯ್ಯಪ್ಪ, ಟಾಟು ಮೊಣ್ಣಪ್ಪ, ಕೆ.ಬಿ. ಶಾಂತಪ್ಪ ಮತ್ತಿತರರು ಸೇರಿದಂತೆ ಸಾವಿರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಪಟ್ಟಣದ ಕಾವೇರಿ ಕಾಲೇಜಿನ ಬಳಿಯಿಂದ ಪಂಜರಪೇಟೆ, ಸರ್ಕಾರಿ ಬಸ್ ನಿಲ್ದಾಣದ ರಸ್ತೆ, ದೊಡ್ಡಟ್ಟಿ ಚೌಕಿ, ಎಫ್.ಎಂ.ಸಿ ರಸ್ತೆ ಮೂಲಕ ಕಾರು ನಿಲ್ದಾಣದವರೆಗೆ ಪಕ್ಷದ ಪ್ರಮುಖರು ಹಾಗೂ ಕಾರ್ಯಕರ್ತರು ಪಾದಯಾತ್ರೆ ನಡೆಸಿದರು.

ರೋಟರಿ ಕ್ಲಬ್‌ನಿಂದ ಸವಲತ್ತು ವಿತರಣೆ



ಮಂಗಳೂರು: ರೋಟರಿ ಕ್ಲಬ್ ಮಂಗಳೂರು ಸೆಂಟ್ರಲ್ ನಿಂದ ರೋಟರಿ ಜಿಲ್ಲಾ ಗವರ್ನರ್ ಅಧಿಕೃತ ಭೇಟಿಯ ಸಂದರ್ಭ ರೋಟರಿ ಸಮಾಜ ಮುಖಿ ಸೇವಾ ಯೋಜನೆಯ ಅಡಿಯಲ್ಲಿ ವಿವಿಧ ಸವಲತ್ತುಗಳನ್ನು ಹಸ್ತಾಂತರಿಸಲಾಯಿತು.

ನಗರದ ಕದ್ರಿ ಪಾರ್ಕ್‌ಗೆ ರೂ 24,000 ವೆಚ್ಚದಲ್ಲಿ ತ್ಯಾಜ್ಯ ತೊಟ್ಟಿಗಳನ್ನು ವಿತರಿಸಲಾಯಿತು. ಜಿಲ್ಲಾ ವೆನ್ಲಾಕ್ ಆಸ್ಪತ್ರೆಗೆ 74 ಸಾವಿರ ರೂ. ವೆಚ್ಚದಲ್ಲಿ ಕುಡಿಯುವ ನೀರಿನ ಶುದ್ಧೀಕರಣ ಘಟಕವನ್ನು ಹಸ್ತಾಂತರಿಸಲಾಯಿತು. ಅಲ್ಲದೆ ವೆನ್ಲಾಕ್ ಆಸ್ಪತ್ರೆಯ ಬಡ ರೋಗಿಗಳ ಕೇರ್ ಟೇಕರ್‌ಗಳಿಗೆ ಎಂ.ಫ್ರೆಂಡ್ಸ್ ಸಂಸ್ಥೆ ನಿತ್ಯ ಊಟದ ವ್ಯವಸ್ಥೆ ಮಾಡುತ್ತಿದ್ದು, ಇದರ ಒಂದು ಹೊತ್ತಿನ ಊಟದ ವೆಚ್ಚವನ್ನು ಸಂಸ್ಥೆಯ ಮೂಲಕ ಮಾಡಲಾಯಿತು. ರೋಟರಿ 3181 ಇದರ ಜಿಲ್ಲಾ ಗವರ್ನರ್ ರಾಮಕೃಷ್ಣ ಪಿ.ಕೆ. ಅವರು ಕೂಡ ಒಂದು ಹೊತ್ತಿನ ಊಟದ ಖರ್ಚನ್ನು ಒದಗಿಸುವ ಮೂಲಕ ಗಮನಸೆಳೆದರು.

ಬಳಿಕ ನಡೆದ ಸಮಾವೇಶದಲ್ಲಿ ಮಾತನಾಡಿದ ರಾಮ ಕೃಷ್ಣ ಪಿ.ಕೆ ಅವರು, ರೋಟರಿ ದತ್ತಿ ನಿಧಿಗೆ ನೀಡುವ ದೇಣಿಗೆಯು ಮನುಷ್ಯತ್ವಕ್ಕೆ ಕೊಡುವ ಗೌರವ. ಇಂತಹ ಕಾರ್ಯಗಳು ಮುಂದುವರಿಯಬೇಕು ಎಂದರು.

ರೋಟರಿ ಸಹಾಯಕ ಗವರ್ನರ್ ಪ್ರೊ. ಚೆನ್ನಗಿರಿ ಗೌಡ, ಸಂಸ್ಥೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಇದೇ ಸಂದರ್ಭ ರೋಟರಿ ಮಾಜಿ ಗವರ್ನರ್ ಪ್ರಕಾಶ್ ಕಾರಂತ, ಮಾಜಿ ಸಹಾಯಕ ಗವರ್ನರ್ ಡಾ.ರಂಜನ್ ಅವರನ್ನು ಸನ್ಮಾನಿಸಲಾಯಿತು. ರೋಟರಿ ಮಾಜಿ ಗವರ್ನರ್ ಡಾ. ದೇವದಾಸ್ ರೈ ಅತಿಥಿಗಳನ್ನು ಪರಿಚಯಿಸಿದರು. ರೋಟರಿ ಮಾಜಿ ಸಹಾಯಕ ಗವರ್ನರ್ ರಾಜ್ ಗೋಪಾಲ್ ರೈ, ಸಾಯಿಬಾಬಾ ರಾವ್, ವಿಕಾಸ್ ಕೋಟ್ಯಾನ್ ಮತ್ತಿತರರು ಇದ್ದರು. ರೋಟರಿ ಕ್ಲಬ್ ಮಂಗಳೂರು ಸೆಂಟ್ರಲ್ ನ ಅಧ್ಯಕ್ಷ ಭಾಸ್ಕರ್ ರೈ ಕಟ್ಟ ಸ್ವಾಗತಿಸಿ, ಸಂತೋಷ್ ಶೇಟ್ ವಂದಿಸಿದರು.

ಕುಂಪಲ ಶ್ರೀ ದುರ್ಗಾಪರಮೇಶ್ವರ ಕ್ಷೇತ್ರದಲ್ಲಿ ಜಾತ್ರೆ: ಸಾಧಕರಿಗೆ ಸನ್ಮಾನ



ಉಳ್ಳಾಲ: ನಮ್ಮ ಹಿರಿಯರ ಕಾಲದಿಂದಲೂ ಕುಂಪಲ ಪ್ರದೇಶಕ್ಕೆ ಶಿವರಾತ್ರಿ ಎಂಬುವುದು ಹಬ್ಬದ ವಾತಾವರಣವಾಗಿದೆ. ಊರಿನ ಜನರನ್ನು ಒಟ್ಟಾಗಿಸಿ, ಧಾರ್ಮಿಕತೆಯನ್ನು ಬೆಳೆಸುವಲ್ಲಿ ದುರ್ಗಾಪರಮೇಶ್ವರ ಕ್ಷೇತ್ರವು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಿದೆ. ಕುಂಪಲದಲ್ಲಿ ನಡೆಯುವ ಎಲ್ಲಾ ಧಾರ್ಮಿಕ,ಸಾಮಾಜಿಕ ಕಾರ್ಯಗಳಿಗೆ ತಾನು ಸದಾ ಬೆಂಬಲಿಸುವುದಾಗಿ ಬೆಂಗಳೂರಿನ ಉದ್ಯಮಿ ಪ್ರಕಾಶ್ ಕುಂಪಲ ಹೇಳಿದರು.

ಕುಂಪಲ ಚೇತನ ನಗರದ ಶ್ರೀ ದುರ್ಗಾಪರಮೇಶ್ವರ ಕ್ಷೇತ್ರದಲ್ಲಿ ವರ್ಷಾವಧಿ ಶಿವರಾತ್ರಿ ಜಾತ್ರಾ ಮಹೋತ್ಸವದ ಪ್ರಯುಕ್ತ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ನೆರವೇರಿಸಿ, ಮಾತನಾಡಿದರು.

ವೇದಿಕೆಯಲ್ಲಿ ಕೊಲ್ಯ ಬಿಲ್ಲವ ಸೇವಾ ಸಮಾಜ ಟ್ರಸ್ಟ್‌ನ ಅಧ್ಯಕ್ಷ ವೇಣುಗೋಪಾಲ್ ಕೊಲ್ಯ, ಕ್ಷೇತ್ರದ ಪ್ರಧಾನ ಅರ್ಚಕ ಭವಾನಿ ಶಂಕರ ಶಾಂತಿ, ಸೋಮೇಶ್ವರ ಪುರಸಭಾ ಸದಸ್ಯ ಮೋಹನ್ ಶೆಟ್ಟಿ ಕುಂಪಲ, ಕುಂಪಲ ಶ್ರೀ ಬಾಲಕೃಷ್ಣ ಮಂದಿರದ ಉಪಾಧ್ಯಕ್ಷ ಗಣೇಶ್ ಅಂಚನ್, ಉದ್ಯಮಿ ಜಗದೀಶ್ ಆಚಾರ್ಯ ತೊಕ್ಕೊಟ್ಟು, ಉಳ್ಳಾಲ ತಾಲೂಕು ಜಾನಪದ ಪರಿಷತ್ ಅಧ್ಯಕ್ಷ ಪ್ರವೀಣ್.ಎಸ್.ಕುಂಪಲ, ನಿವೃತ್ತ ಎಎಸ್‌ಐ ನಾರಾಯಣ ನಾಯರ್, ಮಡಿಲು ಸೇವಾ ತಂಡದ ಅಧ್ಯಕ್ಷ ಗಜೇಂದ್ರ ಪೂಜಾರಿ, ಬಾರ್ದೆ ನಾಗರಿಕ ಸಮಿತಿಯ ಶರತ್ ಬಾರ್ದೆ ಮೊದಲಾದವರು ಉಪಸ್ಥಿತರಿದ್ದರು.

ಈ ಸಂದರ್ಭ ಗಡಿನಾಡ ಕಲಾ ಪೋಷಕ ಪ್ರಶಸ್ತಿ ಪುರಸ್ಕೃತ ಪ್ರಕಾಶ್ ಕುಂಪಲ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕಲಾವಿದ ಗಂಗಾಧರ ಎಸ್. ಪೂಜಾರಿ, ತಾಲೂಕು ಜಾನಪದ ಪರಿಷತ್‌ನ ಅಧ್ಯಕ್ಷ ಪ್ರವೀಣ್ ಎಸ್. ಕುಂಪಲ ರನ್ನು ಸನ್ಮಾನಿಸಲಾಯಿತು. ಸುಕೇಶ್ ಮಂಜನಾಡಿ ನಿರೂಪಿಸಿ, ಗೋಪಾಲಕೃಷ್ಣ ರಾವ್ ಲಾಡ್ ವಂದಿಸಿದರು.



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿ ಬಿ.ಸಿ ಟ್ರಸ್ ಬಂಟ್ವಾಳ ತಾಲೂಕು ತುಂಬೆ ವಲಯ ಕಳ್ಳಿಗೆ ಕಾರ್ಯಕ್ಷೇತ್ರದ ಚಂದ್ರಿಗೆ ಇಲ್ಲಿಯ ನಂದಾದೀಪ ಸ್ವ-ಸಹಾಯ ಸಂಘದ ಸದಸ್ಯ ಪದ್ಮಾವತಿ ಅವರ ತಾಯಿ ಕಮಲಾರಿಗೆ ವಾಟರ್ ಬೆಡ್ ವಿತರಿಸಲಾಯಿತು. ವಲಯದ ಮೇಲ್ವಿಚಾರಕಿ ಮಮತಾ, ಸೇವಾ ಪ್ರತಿನಿಧಿ ಪ್ರೀತಿ, ಒಕ್ಕೂಟದ ಪದಾಧಿಕಾರಿ ಪ್ರಮೀಳಾ, ತಾರಾನಾಥ, ಸಂಘದ ಸದಸ್ಯರು ಉಪಸ್ಥಿತರಿದ್ದರು.



ಹಳೆಯಂಗಡಿ ಸಮೀಪದ ಸಸಿಹಿತ್ಲು ಶ್ರೀ ಭಗವತಿ ದೇವಸ್ಥಾನದಲ್ಲಿ ಮಾರ್ಚ್ 4 ರಿಂದ 8ರ ತನಕ ನಡೆಯಲಿರುವ ಬ್ರಹ್ಮಕಲಶದ ಪೂರ್ವಭಾವಿಯಾಗಿ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಕ್ರಮಗಳ ಅಂಗವಾಗಿ ಭಾನುವಾರದಂದು ಭಕ್ತರಿಂದ ಬೆಳಿಗ್ಗೆಯಿಂದ ಸಂಜೆಯ ತನಕ ಕರಸೇವೆಯು ನಡೆಯಿತು. ದೇವಳದ ಆಡಳಿತ ಮಂಡಳಿಯವರು, ಜೀರ್ಣೋದ್ಧಾರ ಸಮಿತಿಯ ಪದಾಧಿಕಾರಿಗಳು ಸಹಿತ ಮೊದಲಾದವರು ಉಪಸ್ಥಿತರಿದ್ದರು.

ಹೂವಿನ ವಾಸನೆಯಿಂದ ದಿನನಿತ್ಯ ಸಂಚಾರ ಮಾಡುವುವವರಿಗೆ ತೊಂದರೆ, ಕೆಲವರಿಗೆ ಅಸ್ತಮಾ ಸಮಸ್ಯೆ: ಗ್ರಾಮಸಭೆಯಲ್ಲಿ ಗ್ರಾಮಸ್ಥರಿಂದ ಪ್ರಸ್ತಾಪ

ಕ್ಯೊಲ ಕೆ.ಸಿ.ಫಾರ್ಮ್ ಜಾಗದಲ್ಲಿನ ಅಕೇಶಿಯಾ ಮರ ತೆರವು ಮಾಡದಿದ್ದರೆ ಪ್ರತಿಭಟನೆ ಎಚ್ಚರಿಕೆ

ಕಡಬ: ಪಶು ಸಂಗೋಪನ ಇಲಾಖೆಗೆ ಸೇರಿದ ಕ್ಯೊಲ ಕೆ.ಸಿ.ಫಾರ್ಮ್ ಜಾಗದಲ್ಲಿನ ಅಕೇಶಿಯಾ ಮರಗಳನ್ನು 1 ತಿಂಗಳಿನೊಳಗೆ ತೆರವುಗೊಳಿಸುವುದಾಗಿ ಕಳೆದ ಗ್ರಾಮಸಭೆಯಲ್ಲಿ ಭರವಸೆ ನೀಡಿದ್ದರೂ ತೆರವುಗೊಳಿಸದೇ ಇರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿದ ಗ್ರಾಮಸ್ಥರು 15 ದಿನದೊಳಗೆ ಮರಗಳನ್ನು ತೆರವುಗೊಳಿಸದೇ ಇದ್ದಲ್ಲಿ ಧರಣಿ ನಡೆಸುವುದಾಗಿ ಕ್ಯೊಲ ಗ್ರಾಮಸಭೆಯಲ್ಲಿ ಗ್ರಾಮಸ್ಥರು ಎಚ್ಚರಿಸಿದರು. ಅಧ್ಯಕ್ಷೆ ಪುಷ್ಪಾ ಸುಭಾಶ್ ಶೆಟ್ಟಿ ಅಧ್ಯಕ್ಷತೆಯಲ್ಲಿ ಗ್ರಾ.ಪಂ. ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ವಿ.ಜಿ. ಚೆಲುವರಂಗಪ್ಪ ಮಾರ್ಗದರ್ಶಿ ಅಧಿಕಾರಿಯಾಗಿದ್ದರು. ವಿಷಯ ಪ್ರಸ್ತಾಪಿಸಿದ ಗ್ರಾಮಸ್ಥರಾದ ಡಿ.ಟಿ.ಭಟ್ ಹಾಗೂ ಪುರುಷೋತ್ತಮ, ಕೆ.ಸಿ.ಫಾರ್ಮ್‌ನ ಜಾಗದೊಳಗೆ



ನಾಟಿ ಮಾಡಿರುವ ಅಕೇಶಿಯಾ ಮರಗಳು ಬೆಳೆದು ನಿಂತು ಮಾರ್ಗಕ್ಕೆ ವಾಲಿಕೊಂಡಿವೆ. ಅದರ ಹೂವಿನ ವಾಸನೆಯಿಂದ ದಿನನಿತ್ಯ ಸಂಚಾರ ಮಾಡುವುವವರಿಗೆ ತೊಂದರೆಯಾಗುತ್ತಿದೆ. ಅದರಿಂದ ಕೆಲವರಿಗೆ ಅಸ್ತಮಾ ರೋಗವೂ ಕಾಣಿಸಿಕೊಂಡಿದೆ. ಈ ವಿಚಾರವನ್ನು ಕಳೆದ ಗ್ರಾಮಸಭೆಯಲ್ಲೂ ಪ್ರಸ್ತಾಪಿಸಿ ಮರಗಳನ್ನು ತೆರವುಗೊಳಿಸುವಂತೆ ಒತ್ತಾಯಿಸಿದ್ದೆವು. ಮರ ತೆರವುಗೊಳಿಸಲು ಕ್ರಮ ಕೈಗೊಳ್ಳುವುದಾಗಿ ಅಂದಿನ ಗ್ರಾಮಸಭೆಯಲ್ಲಿ ಸಾಮಾಜಿಕ ಅರಣ್ಯ ಇಲಾಖೆ ಅಧಿಕಾರಿ ಭರವಸೆ ನೀಡಿದ್ದರು. ಆದರೆ 6 ತಿಂಗಳು ಕಳೆದರೂ ಮರ ತೆರವುಗೊಳಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಗ್ರಾಮಸ್ಥರಾದ ಪ್ರಕಾಶ್, ಜುನೈದ್ ಕೆಮ್ಮಾರ, ಸೆಲಿಕತ್, ಪುರುಷೋತ್ತಮ ಗೋಕುಲನಗರ ಮತ್ತಿತರರು ಈ ವಿಚಾರಕ್ಕೆ ಧ್ವನಿಗೂಡಿಸಿದರು.

ಬಳಿಕ ಪಿಡಿಒ ಸಂದೇಶ್ ಸಾಮಾಜಿಕ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಕರೆ ಮಾಡಿ ಅಧಿಕಾರಿ ಸಭೆಗೆ ಬರುತ್ತಿರುವುದನ್ನು ಖಾತ್ರಿ ಪಡಿಸಿದರು. ಮಧ್ಯಾಹ್ನದ ವೇಳೆಗೆ ಸಭೆ ಆಗಮಿಸಿದ ಸಾಮಾಜಿಕ ಅರಣ್ಯ ಇಲಾಖೆ ಅಧಿಕಾರಿ ಯಶೋಧರ ಅವರಲ್ಲಿ ಚರ್ಚೆ ವಿಚಾರವನ್ನು ಗ್ರಾಮಸ್ಥರು ಪ್ರಸ್ತಾಪಿಸಿ, ನೀವು ಲಿಖಿತವಾಗಿ ಅನುಮತಿ ಕೊಡಿ, ನಾವೇ ಮರ ತೆರವುಗೊಳಿಸುತ್ತೇವೆ ಎಂದರು. ಆದಕ್ಕೆ ಪ್ರತಿಕ್ರಿಯಿಸಿದ ಯಶೋಧರ, ಮರ ತೆರವಿಗೆ ಸಂಬಂಧಿಸಿ ನಮ್ಮ ಹಂತದಲ್ಲಿ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ, ಆದರೂ ರಸ್ತೆ ಬದಿಯಲ್ಲಿ ಅಪಾಯಕಾರಿಯಾಗಿರುವ ಮರಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುತ್ತೇವೆ. ಉಳಿದ ಮರಗಳಿಗೆ ಮಾರ್ಕಿಂಗ್ ಮಾಡಿ ಕಳುಹಿಸುತ್ತೇವೆ ಎಂದರು. ಶಾಲೆಗಳ ಪಕ್ಕದಲ್ಲೂ ಅಕೇಶಿಯಾ ಮರಗಳು ಬೆಳೆದು ನಿಂತಿವೆ ಅವುಗಳನ್ನೂ ತೆರವುಗೊಳಿಸಬೇಕು ಎನ್ನುವ ಆಗ್ರಹ ವ್ಯಕ್ತವಾಯಿತು.

ಹೆದ್ದಾರಿ ಬದಿ ಗಿಡ ನಾಟಿ ಮಾಡಲು ವಿದ್ಯುತ್ ತಂತಿಯ ಅಡಿಯಲ್ಲೇ ಗುಂಡಿ ಅಗೆಯಲಾಗಿದೆ. ಆದಕ್ಕೆ ಮೆಸ್ಕಾಂ ಅನುಮತಿ ನೀಡಿದೆಯೇ ಎಂದು ಸದಸ್ಯ ಚಿದಾನಂದ ಪಾನ್ಯಲ್ ಪ್ರಶ್ನಿಸಿದರು. ಆದಕ್ಕೆ ಪ್ರತಿಕ್ರಿಯಿಸಿದ ಮೆಸ್ಕಾಂ ಜೆ.ಇ. ನಿತಿನ್‌ಕುಮಾರ್ ಅವರು 33ಕೆ.ವಿ.ವಿದ್ಯುತ್ ತಂತಿ ಅಡಿಯಲ್ಲಿ ಗಿಡ ನಾಟಿ ಮಾಡದಂತೆ ಮೆಸ್ಕಾಂನಿಂದ ಅರಣ್ಯ ಇಲಾಖೆಗೆ ಪತ್ರ ಬರೆಯಲಾಗಿದೆ. ಪಿಡಬ್ಲ್ಯುಡಿ ರಸ್ತೆ ಮಾರ್ಜಿನ್‌ನಲ್ಲಿ ಗಿಡ ನಾಟಿ ಮಾಡುತ್ತಿದೆ ಎಂದರು.

ಉಪಾಧ್ಯಕ್ಷ ಯತೀಶ್‌ಕುಮಾರ್ ಎಸ್.ಎಚ್., ಸದಸ್ಯರಾದ ಹರ್ಷಿತ್‌ಕುಮಾರ್, ಚಿದಾನಂದ ಪಿ., ನಝೀರ್, ಚಂದ್ರಶೇಖರ ಮಾಳ, ಸೀತಾರಾಮ ಬಲ್ತಕುಮೇರು, ಕಮಲಾಕ್ಷಿ, ಲತಾ, ಭಾರತಿ, ನೀತಾ ಎನ್., ಸಫಿಯಾ, ಜೊಹರಾಬಿ, ಶಶಿಕಲಾ ಎಂ. ಇದ್ದರು. ಕಾರ್ಯದರ್ಶಿ ಪಮ್ಮು ವರದಿ ವಾಚಿಸಿದರು.

ಸ್ಥಳೀಯರಿಗೆ ಉದ್ಯೋಗ ನೀಡಿ

ಕ್ಯೊಲದಲ್ಲಿ ಪಶುವೈದ್ಯಕೀಯ ಕಾಲೇಜಿನಲ್ಲಿ ಸ್ಥಳೀಯರಿಗೆ ಉದ್ಯೋಗ ಕೊಡಬೇಕು. ಅಲ್ಲದೇ ಈಗಿರುವ ಕೆ.ಸಿ.ಫಾರ್ಮ್ ಅನ್ನು ಪಶುವೈದ್ಯಕೀಯ ಕಾಲೇಜಿಗೆ ಬಿಟ್ಟುಕೊಡಬೇಕೆಂಬ ಬೇಡಿಕೆ ಕಾಲೇಜು ವತಿಯಿಂದ ಬಂದಿರುವ ಬಗ್ಗೆಯೂ ಮಾಹಿತಿ ಸಿಕ್ಕಿದೆ. ಅದಕ್ಕೆ ಗ್ರಾಮಸ್ಥರ ಆಕ್ಷೇಪವಿದೆ ಎಂದು ಪ್ರಕಾಶ್ ಕೆಮ್ಮಾರ ಹೇಳಿದರು. ಈ ಬಗ್ಗೆ ಸರಕಾರಕ್ಕೆ ಮನವಿ ಮಾಡಲು ನಿರ್ಣಯ ಕೈಗೊಳ್ಳಲಾಯಿತು.

ಸುತ್ತ ಮುತ್ತ

ಫೆ.22: ಕಾಸರಗೋಡು-ಕರ್ನಾಟಕ ಚುಟುಕು ಸಾಹಿತ್ಯ ಸಮ್ಮೇಳನ

ಕಾಸರಗೋಡು: ಕಾಸರಗೋಡು – ಕರ್ನಾಟಕ ಚುಟುಕು ಸಾಹಿತ್ಯ ಸಮ್ಮೇಳನ ಫೆ.22ರಂದು ಡಾ.ಕೃಷ್ಣಪ್ರಸಾದ್ ಕೂಡ್ಲು ಅಧ್ಯಕ್ಷತೆಯಲ್ಲಿ ಡಾ.ವಾಮನ್ ರಾವ್ ಬೇಕಲ್ ಸಾರಥ್ಯದ ಕನ್ನಡ ಭವನ ಪ್ರಾಯೋಜಕತ್ವದಲ್ಲಿ ನಡೆಯಲಿದೆ. ಕನ್ನಡ ಭವನದ ಅಂಗ ಸಂಸ್ಥೆಯಾದ ಕೇರಳ ರಾಜ್ಯ – ಕನ್ನಡ ಚುಟುಕು ಸಾಹಿತ್ಯ ಪರಿಷತ್ತಿನ ವರ್ಷಾಚರಣೆ ಪ್ರಯುಕ್ತ ಪರಿಷತ್‌ನ ಜಿಲ್ಲಾ ಘಟಕಗಳ ಸಹಕಾರದಲ್ಲಿ ಸಮ್ಮೇಳನ ಆಯೋಜಿಸಲಾಗಿದೆ.

ಅಂದು ಬೆಳಿಗ್ಗೆ 7ರಿಂದ ಭಜನೆ, 8.30ಕ್ಕೆ ಮೆರವಣಿಗೆ, 9ಕ್ಕೆ ಉದ್ಘಾಟನಾ ಸಮಾರಂಭ, ಗದಗ ಗೋವಿನಾಳ ಶ್ರೀ ರಮೇಶ ಗುರೂಜಿ ಹಾಗೂ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಜಿಗಳಿಂದ ಆಶೀರ್ವಚನ, ಸ್ವಾಮೀಜಿಗಳಿಗೆ ವಿಶೇಷ ಸಮ್ಮೇಳನ ಗೌರವ ಪ್ರದಾನ, ಮಹಾನ್ ಕವಿ ಸಾಹಿತಿಗಳಿಗೆ ಕವಿ ಕಾವ್ಯ ವಿಭೂಷಣ ರಾಷ್ಟ್ರೀಯ ಪ್ರಶಸ್ತಿ, ಉಚಿತ ನೇತ್ರ ತಪಾಸಣಾ ಶಿಬಿರ, ಉಚಿತ ಸಾರ್ವಜನಿಕ ವಾಚನಾಲಯ ಲೋಕಾರ್ಪಣೆ, ಕವಿಗೋಷ್ಠಿ, ವಿಚಾರ ಸಂಕಿರಣ, ನೃತ್ಯ – ಗಾನ ವೈಭವ, ಪರಿಷತ್‌ನ ಕಾರ್ಯಕರ್ತ, ಕವಿಗಳಿಗೆ ಕವಿರತ್ನ ಪ್ರಶಸ್ತಿ, ಕನ್ನಡ ಭವನ ಜಿಲ್ಲಾ ಘಟಕಗಳ ಪದಾಧಿಕಾರಿ ಕನ್ನಡ ಮುಖಂಡರಿಗೆ ಕನ್ನಡ ಪಯಸ್ವಿನಿ ಪ್ರಶಸ್ತಿ, ಪುಸ್ತಕ ಬಿಡುಗಡೆ ಮುಂತಾದ ಹತ್ತು ಹಲವು ಕಾರ್ಯಕ್ರಮ ಸಮ್ಮೇಳನದ ಭಾಗವಾಗಿ ನಡೆಯಲಿವೆ.

ಯೋಜನಾ ಸಹಾಯಕರ ನೇಮಕಾತಿ

ಕಾಸರಗೋಡು: ಪೈವಳಿಕೆ ಗ್ರಾಮ ಪಂಚಾಯತ್‌ನಲ್ಲಿ ಯೋಜನಾ ಸಹಾಯಕ ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಫೆ.20 ರಂದು ಸಂಜೆ 4 ಗಂಟೆಯೊಳಗೆ ಖುದ್ದಾಗಿ ಅಥವಾ ಇ-ಮೇಲ್ ಮೂಲಕ ಸಲ್ಲಿಸಬೇಕು. ರಾಜ್ಯ ತಾಂತ್ರಿಕ ಪರೀಕ್ಷಾ ನಿಯಂತ್ರಕರು, ತಾಂತ್ರಿಕ ಶಿಕ್ಷಣ ಮಂಡಳಿಯಿಂದ ನಡೆಸಲ್ಪಟ್ಟ ಮೂರು ವರ್ಷಗಳ ಡಿಸಿಪಿ, ಕಂಪ್ಯೂಟರ್ ಅಪ್ಲಿಕೇಶನ್ ಮತ್ತು ವ್ಯವಹಾರ ನಿರ್ವಹಣೆಯಲ್ಲಿ ಡಿಪ್ಲೊಮಾ ಅಥವಾ ಪದವಿ , ಕಂಪ್ಯೂಟರ್ ಅಪ್ಲಿಕೇಶನ್‌ನಲ್ಲಿ ಒಂದು ವರ್ಷದ ಡಿಪ್ಲೊಮಾ, ಕಂಪ್ಯೂಟರ್ ಅಪ್ಲಿಕೇಶನ್‌ನಲ್ಲಿ ಸ್ನಾತಕೋತ್ತರ ಡಿಪ್ಲೊಮಾ ವಿದ್ಯಾರ್ಹತೆಯಾಗಿದೆ. 22,290 ತಿಂಗಳ ವೇತನವಾಗಿದ್ದು, ವಯಸ್ಸಿನ ಮಿತಿ 18ರಿಂದ 30. ಮಾಹಿತಿಗೆ 9496049719 ಕರೆ ಮಾಡಬಹುದು.

ವೈಯಕ್ತಿಕ ಸಾಲದ ವ್ಯವಸ್ಥೆ

ಕಾಸರಗೋಡು: ಕೇರಳ ರಾಜ್ಯ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಕಾಸರಗೋಡು ಕಚೇರಿ 18 ರಿಂದ 60 ವರ್ಷದೊಳಗಿನ ಮಂಜೇಶ್ವರ ಮತ್ತು ಕಾಸರಗೋಡು ತಾಲೂಕುಗಳಿಗೆ ಸೇರಿದ ಉತ್ತಮವಾಗಿ ಕಾರ್ಯನಿರ್ವಹಿಸುವ ಖಾಸಗಿ ವಲಯದ ನೌಕರರು, ಸರಕಾರಿ, ಅರೆ ಸರಕಾರಿ, ಸಾರ್ವಜನಿಕ ವಲಯದ ನೌಕರರು, ಧಾರ್ಮಿಕ ಅಲ್ಪಸಂಖ್ಯಾತರು ಮತ್ತು ಇತರ ಹಿಂದುಳಿದ ವರ್ಗಗಳಿಗೆ ವೈಯಕ್ತಿಕ ಸಾಲಕ್ಕಾಗಿ ವ್ಯವಸ್ಥೆಗೊಳಿಸಿದೆ. 3 ಲಕ್ಷದಿಂದ 8 ಲಕ್ಷ ರೂ.ವರೆಗೆ ವಾರ್ಷಿಕ ಆದಾಯ ಹೊಂದಿರುವವರಿಗೆ ಶೇ.9.5 ಬಡ್ಡಿದರದಲ್ಲಿ 5 ಲಕ್ಷ ರೂ. ಮತ್ತು ಎಂಟು ಲಕ್ಷ ರೂಪಾಯಿಗಿಂತ ಹೆಚ್ಚಿನ ವಾರ್ಷಿಕ ಆದಾಯ ಹೊಂದಿರುವವರಿಗೆ ಶೇಕಡಾ 11 ಬಡ್ಡಿದರದಲ್ಲಿ 10 ಲಕ್ಷ ರೂ. ಸಾಲ ನೀಡಲಾಗುತ್ತದೆ. ಸಾಲಕ್ಕೆ ಗ್ಯಾರಂಟಿ ಕಡ್ಡಾಯವಾಗಿದೆ. ಹೆಚ್ಚಿನ ಮಾಹಿತಿಗೆ 04994227060, 04994227062, 9447730077 ಸಂಪರ್ಕಿಸಬಹುದು.

ನರ್ಸ್ ನೇಮಕಾತಿ: ಅರ್ಜಿ ಆಹ್ವಾನ

ಕಾಸರಗೋಡು: ಜಿಲ್ಲೆಯ ಸರಕಾರಿ ಸಂಸ್ಥೆಯಲ್ಲಿ ನರ್ಸ್ ಹೋಮಿಯೋ ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪ್ಲಸ್ ಟು, ಜಿಎನ್‌ಎಂ ಡಿಪ್ಲೊಮಾ ಮತ್ತು ಪ್ಯಾಲಿಯೇಟಿವ್ ನರ್ಸಿಂಗ್ (ಬಿಸಿಸಿಪಿಎನ್) ಕೋರ್ಸ್‌ನಲ್ಲಿ ಮೂಲ ಪ್ರಮಾಣಪತ್ರ ಕೋರ್ಸ್ ಮತ್ತು ಕೆಎನ್‌ಎಂಸಿ ನೋಂದಣಿ ಅಥವಾ ತತ್ಸಮಾನ ಅರ್ಹತೆ ವಿದ್ಯಾರ್ಹತೆಯಾಗಿದೆ. ವಯಸ್ಸು 18–41 ಆಗಿದೆ. ಆಸಕ್ತ ಅಭ್ಯರ್ಥಿಗಳು ತಮ್ಮ ಹೆಸರನ್ನು ಸಂಬಂಧಪಟ್ಟ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಫೆ.28ರೊಳಗೆ ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ವಿವರಗಳಿಗೆ 04994255582 ಕರೆ ಮಾಡಬಹುದು.

ಪೂರ್ವ ಪ್ರಾಥಮಿಕ ಶಿಕ್ಷಕರ ತರಬೇತಿ

ಕಾಸರಗೋಡು: ಕೇಂದ್ರ ಸರಕಾರದ ಉಪಕ್ರಮವಾದ ಬಿಸಿಐಎಲ್ ತರಬೇತಿ ವಿಭಾಗ ನಡೆಸುವ 1 ವರ್ಷ ಮತ್ತು ಆರು ತಿಂಗಳ ಪೂರ್ವ ಪ್ರಾಥಮಿಕ ಹಾಗೂ ನರ್ಸರಿ ಶಿಕ್ಷಕರ ತರಬೇತಿ ಕೋರ್ಸ್‌ಗಳಿಗೆ ಪ್ಲಸ್ ಟು ಮತ್ತು ಎಸ್ಸೆಸೆಲ್ಸಿ ಅರ್ಹತೆ ಪಡೆದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗೆ 7994449314 ಸಂಪರ್ಕಿಸಬಹುದು.

ಬಿಜೆಪಿ ಓಬಿಸಿ ಮೋರ್ಚಾ ಕಾಸರಗೋಡು ಜಿಲ್ಲಾ ಸಮಿತಿಯಿಂದ ಪ್ರತಿಭಟನಾ ಧರಣಿ

ಕೇರಳ ಎಡರಂಗ ಸರಕಾರದಿಂದ ಬಡವರಿಗೆ ಅನ್ಯಾಯ: ಆರೋಪ



ಕಾಸರಗೋಡು: ಕೇರಳದ ಎಡರಂಗ ಸರಕಾರವು ತಾವು ಬಡವರ ಪಕ್ಷವೆಂದು ಹೇಳುತ್ತಿದೆ. ಆದರೆ ಕೇರಳದ ಎಡರಂಗ ಸರಕಾರವು ರಾಜ್ಯದ ಬಡಜನರಿಗೆ ಬೇಕಾಗಿ ಏನನ್ನೂ ಮಾಡುತ್ತಿಲ್ಲ ಮತ್ತು ಅವರನ್ನು ವಂಚಿಸುತ್ತಿದೆ ಎಂದು ಬಿಜೆಪಿ ಕಾಸರಗೋಡು ಜಿಲ್ಲಾ ಉಪಾಧ್ಯಕ್ಷ ಮುರಳೀಧರ ಯಾದವ್ ಆರೋಪಿಸಿದರು.

ಓಬಿಸಿ ವರ್ಗಗಳೊಡನೆ ಕೇರಳದ ಪಿಣರಾಯಿ ವಿಜಯನ್ ಸರಕಾರ ತೋರುತ್ತಿರುವ ನಿರ್ಲಕ್ಷ್ಯ ಧೋರಣೆಯನ್ನು ಪ್ರತಿಭಟಿಸಿ ಬಿಜೆ ಓಬಿಸಿ ಮೋರ್ಚಾ ಕಾಸರಗೋಡು ಜಿಲ್ಲಾ ಸಮಿತಿ ವತಿಯಿಂದ ನಗರದ ಎಂ.ಜಿ.ರಸ್ತೆಯಲ್ಲಿರುವ ಕೇರಳ ರಾಜ್ಯ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಕಾಸರಗೋಡು ಜಿಲ್ಲಾ ಕಚೇರಿ ಮುಂಭಾಗದಲ್ಲಿ ಮಂಗಳವಾರ ಜರಗಿದ ಪ್ರತಿಭಟನಾ ಧರಣಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬಡ ಜನರನ್ನು ಸತಾಯಿಸುತ್ತಿದೆ

ಬಡವರು ತಮ್ಮ ಅವಶ್ಯಕತೆಗಳಿಗಾಗಿ ಅಭಿವೃದ್ಧಿ ನಿಗಮದ ಕಚೇರಿಗೆ ಬಂದು ಎಲ್ಲಾ ಅರ್ಹ ದಾಖಲೆಗಳನ್ನು ನೀಡಿದರೂ ಕೊನೆಯಲ್ಲಿ ಮತ್ತೆ ಮತ್ತೊಂದು ಅರ್ಜಿ ಬೇಕೆಂದು ಹೇಳಿ ಸತಾಯಿಸುತ್ತಿದೆ. ಇದಕ್ಕೆ ಸರಕಾರದಲ್ಲಿ ಹಣ ಇಲ್ಲದಿರುವುದೇ ಏಕೈಕ ಕಾರಣವೆಂದು ಅವರು ಹೇಳಿದರು.

ಓಬಿಸಿ ಮೋರ್ಚಾ ಕೇರಳ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಶೈಜು ಮಾತನಾಡಿ, ರಾಜ್ಯದ ಎಲ್ಲಾ ವ್ಯವಸ್ಥೆಗಳು ಅಲ್ಲೋಲ ಕಲ್ಲೋಲವಾಗಿವೆ. ಅಲ್ಲದೆ ಜನರಿಗೆ ನೀಡಿದ ಭರವಸೆಗಳನ್ನು ಈಡೇರಿಸಲು ರಾಜ್ಯ ಸರಕಾರಕ್ಕೆ ಸಾಧ್ಯವಾಗುತ್ತಿಲ್ಲ ಎಂದು ಆರೋಪಿಸಿದರು. ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರವು ಉತ್ತಮ ಅಭಿವೃದ್ಧಿ ಪರ ಆಡಳಿತವನ್ನು ನೀಡಿ ಹಿಂದುಳಿದ ವರ್ಗದವರನ್ನು ಮುಂದಕ್ಕೆ ಕೊಂಡೊಯ್ಯಲು ಯತ್ನಿಸುತ್ತಿದೆ. ಆದರೆ ಕೇರಳದ ಎಡರಂಗ ಸರಕಾರ ಮಾತ್ರ ಬಡವರನ್ನು ವಂಚಿಸುತ್ತಿದೆ ಎಂದು ಅವರು ಆರೋಪಿಸಿದರು.

ಓಬಿಸಿ ಮೋರ್ಚಾ ಜಿಲ್ಲಾಧ್ಯಕ್ಷ ಕೆ.ಪಿ.ವಲ್ಸರಾಜ್ ಅಧ್ಯಕ್ಷತೆ ವಹಿಸಿದ್ದರು. ಬಿಜೆಪಿ ಕಾಸರಗೋಡು ಮಂಡಲಾಧ್ಯಕ್ಷ ಗುರುಪ್ರಸಾದ್ ಪ್ರಭು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎನ್. ಬಾಬುರಾಜ್, ಜಿಲ್ಲಾ ಉಪಾಧ್ಯಕ್ಷ ಪಿ.ರಮೇಶ್, ಜಿಲ್ಲಾ ಸೆಲ್ ಕೋ ಓರ್ಡಿನೇಟರ್ ಸುಕುಮಾರ ಕುದ್ರೆಪ್ಪಾಡಿ, ಓಬಿಸಿ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ಡಿ.ಮುರಳೀ ಕುಮಾರ್, ಬಿಜೆಪಿ ಕುಂಬಳೆ ಮಂಡಲಾಧ್ಯಕ್ಷ ಸುನೀಲ್ ಅನಂತಪುರ ಮಾತನಾಡಿದರು. ಓಬಿಸಿ ಮೋರ್ಚಾ ರಾಜ್ಯ ಕಾರ್ಯದರ್ಶಿ ವಿಜಯನ್ ವಟ್ಟಿಪ್ರಂ ಸಮಾರೋಪ ಭಾಷಣ ಮಾಡಿದರು. ಕೆ.ದಯಾನಂದ ಸ್ವಾಗತಿಸಿ, ಅಶೋಕ್ ಚೆಟ್ಟಿಯಾರ್ ವಂದಿಸಿದರು.

ಭ್ರಷ್ಟಾಚಾರದಲ್ಲಿ ಮುಳುಗಿದೆ

ರಾಜ್ಯ ಸರಕಾರ ಎಲ್ಲಾ ವಲಯಗಳಲ್ಲಿ ಸಂಪೂರ್ಣ ಭ್ರಷ್ಟಾಚಾರದಿಂದ ಮುಳುಗಿ ಹೋಗಿದೆ. ಶಬರಿಮಲೆಯಲ್ಲಿ ಚಿನ್ನ ದೋಚಿ ಜನರನ್ನು ವಂಚಿಸಿದೆ. ಬಡವರು ತಮ್ಮ ಹಣಕ್ಕಾಗಿ ಹಿಂದುಳಿದ ವರ್ಗದ ಕಚೇರಿಗೆ ಬಂದಾಗ ಎಲ್ಲಾ ಸಮರ್ಪಕ ದಾಖಲೆಗಳನ್ನು ನೀಡಿದರೂ ಕೊನೆಗೆ ಜನರನ್ನು ಸತಾಯಿಸುತ್ತಿದೆ. ಈ ಮಧ್ಯೆ ಬಹುತೇಕ ಅರ್ಜಿಗಳನು ತಿರಸ್ಕರಿಸ ಲಾಗುತ್ತಿದೆ. ಪರಿಸ್ಥಿತಿ ಹೀಗೆಮುಂದುವರಿದರೆ ಮುಂದಿನ ದಿನಗಳಲ್ಲಿ ಓಬಿಸಿ ನೇತೃತ್ವ ಪ್ರಬಲ ಹೋರಾಟ ನಡೆಸಲಾಗುವುದು.

● ಕೆ.ಶೈಜು , ಓಬಿಸಿ ಮೋರ್ಚಾ ಕೇರಳ ರಾಜ್ಯ ಪ್ರಧಾನ ಕಾರ್ಯದರ್ಶಿ

ನಿರ್ಲಕ್ಷ್ಯ ಧೋರಣೆ

ರಾಜ್ಯವನ್ನು ಕಳೆದ 10 ವರ್ಷಗಳಿಂದ ಆಡಳಿತ ನಡೆಸುತ್ತಿರುವ ಎಡರಂಗ ಸರಕಾರ ಬಡವರ , ಜನಸಾಮಾನ್ಯರ ವಿರೋಧಿಯಾಗಿ ಮಾರ್ಪಟ್ಟಿದೆ. ಸಾಮಾನ್ಯ ಜನರ ಅಭಿವೃದ್ಧಿಗೆ ಪಿಣರಾಯಿ ವಿಜಯನ್ ಸರಕಾರ ಏನನ್ನೂ ಮಾಡಿಲ್ಲ, ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರ ಕೇರಳಕ್ಕೆ ಮಂಜೂರುಗೊಳಿಸುತ್ತಿರುವ ಹಲವಾರು ಯೋಜನೆ ಜಾರಿಗೊಳಿಸಲು ರಾಜ್ಯ ಸರಕಾರ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದೆ. ಜಿಲ್ಲೆಯ ಜನರಿಗೆ ಆರೋಗ್ಯ, ಶಿಕ್ಷಣ, ಉದ್ಯೋಗ, ಕೃಷಿ, ಕೈಗಾರಿಕೆ ಮುಂತಾದ ಯಾವುದೇ ರಂಗಗಳಲ್ಲಿ ನೂತನ ಯೋಜನೆಗಳು ಅನುಷ್ಠಾನಗೊಳ್ಳದೆ ವರ್ಷಗಳೇ ಕಳೆದಿವೆ.

● ಕೆ.ಪಿ.ವಲ್ಸರಾಜ್, ಅಧ್ಯಕ್ಷರು, ಓಬಿಸಿ ಮೋರ್ಚಾ ಕಾಸರಗೋಡು ಜಿಲ್ಲೆ

ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನ: ಜೀರ್ಣೋದ್ಧಾರ ಬ್ರಹ್ಮಕಲಶ ಸಮಿತಿ ಸಭೆ



ಬದಿಯಡ್ಕ: ಕುಂಬಳೆ ಸೀಮೆಯ ಇತಿಹಾಸ ಪ್ರಸಿದ್ಧ ಪೆರಡಾಲ ಶ್ರೀ ಉದನೇಶ್ವರ ದೇವಾಲಯದ ಜೀರ್ಣೋದ್ಧಾರ ನವೀಕರಣ ಕಾರ್ಯಗಳು ಅಂತಿಮ ಹಂತದಲ್ಲಿದ್ದು, ಸುಮಾರು 3 ಕೋಟಿಗಳಷ್ಟು ನವೀಕರಣ ಕಾಮಗಾರಿಗಳು ಮುಗಿಸಿ ಬ್ರಹ್ಮಕಲಶ ಸಿದ್ಧತೆಗಳು ಪ್ರಾರಂಭಗೊಂಡಿವೆ.

ಏಪ್ರಿಲ್ 17ರಿಂದ 28ರವರೆಗೆ ಶ್ರೀ ಕ್ಷೇತ್ರದ ಬ್ರಹ್ಮಕಲಶ ಕ್ಷೇತ್ರದ ಆಚಾರ್ಯ ಬ್ರಹ್ಮಶ್ರೀ ರವೀಶ ತಂತ್ರಿ ಕುಂಟಾರು ನೇತೃತ್ವದಲ್ಲಿ ನಡೆಯಲಿದೆ. ಶಿವರಾತ್ರಿಯ ಪುಣ್ಯ ದಿನದಂದು ಶ್ರೀ ಕ್ಷೇತ್ರದ ಜೀರ್ಣೋದ್ಧಾರ ಮತ್ತು ಬ್ರಹ್ಮಕಲಶದ ಮಹಾಸಭೆ ಜರಗಿತು. ಸಭೆಯಲ್ಲಿ ಕ್ಷೇತ್ರದ ಆಡಳಿತ ಮಂಡಳಿ ಅಧ್ಯಕ್ಷ ವೆಂಕಟ್ರಮಣ ಭಟ್ ಚಂಬಲ್ತಿಮಾರ್ ಅಧ್ಯಕ್ಷತೆ ವಹಿಸಿದ್ದರು.

ವಿವಿಧ ಉಪ ಸಮಿತಿಗಳ ಕಾರ್ಯಗಳ ಬಗ್ಗೆ ಅವಲೋಕನ ನಡೆಯಿತು. ಗೌರವಾಧ್ಯಕ್ಷ ಜಯದೇವ ಖಂಡಿಗೆ, ಕಾರ್ಯಾಧ್ಯಕ್ಷ ಜಗನ್ನಾಥ ರೈ ಪೆರಡಾಲ ಗುತ್ತು, ಕೋಶಾಧಿಕಾರಿ ಸೂರ್ಯನಾರಾಯಣ ಬಿ., ಆಡಳಿತ ಮಂಡಳಿ ಸದಸ್ಯ ಸೀತಾರಾಮ ನವಕ್ಕಾನ, ಮಾಜಿ ಮೊಕ್ತೇಸರ ಚಂದ್ರಹಾಸ ರೈ ಪೆರಡಾಲಗುತ್ತು, ಕೃಷ್ಣಪ್ರಸಾದ್ ರೈ, ವಾರ್ಡ್ ಸದಸ್ಯ ಗಂಗಾಧರ ಗೋಳಿಯಡ್ಕ, ಗಣೇಶಕೃಷ್ಣ ಅಳಕ್ಕೆ, ನರೇಂದ್ರ ಬಿ.ಎನ್., ಇಂಜಿನಿಯರ್ ರಾಜಗೋಪಾಲ ನವಕಾನ, ಉದಯಶಂಕರ್, ಗಣೇಶ ಪ್ರಸಾದ್ ಕಡಪ್ಪು, ರಾಘವೇಂದ್ರ ಪ್ರಸಾದ್ ಬದಿಯಡ್ಕ, ಸತ್ಯನಾರಾಯಣ ಶರ್ಮಾ, ರಾಜೇಶ್ ಮಾಸ್ತರ್ ಅಗಲ್ಪಾಡಿ ಮಾತನಾಡಿದರು.

ವಿವಿಧ ಉಪಸಮಿತಿ ಪದಾಧಿಕಾರಿಗಳು ಉಪಸ್ಥಿತರಿದರು. ಬ್ರಹ್ಮಕಲಶ ಪ್ರಧಾನ ಕಾರ್ಯದರ್ಶಿ ನಿರಂಜನ ರೈ ಪೆರಡಾಲ ಪ್ರಸ್ತಾವನೆಗೈದರು. ಡಾ.ಶ್ರೀಶಕುಮಾರ್ ಪಂಜಿತಡ್ಕ ಸ್ವಾಗತಿಸಿ, ಡಾ.ಶ್ರೀನಿಧಿ ಸರಳಾಯ ವಂದಿಸಿದರು.

ಕಾಸರಗೋಡು ಶ್ರೀ ಮಲ್ಲಿಕಾರ್ಜುನ ಕ್ಷೇತ್ರದ ವಾರ್ಷಿಕ ಜಾತ್ರೆ: ಸಿದ್ಧತಾ ಸಭೆ



ಕಾಸರಗೋಡು: ಕಾಸರಗೋಡು ನಗರದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ವಾರ್ಷಿಕ ಜಾತ್ರಾ ಮಹೋತ್ಸವ ಹಾಗೂ ಪ್ರತಿಷ್ಠಾ ದಿನ ಕಾರ್ಯಕ್ರಮ ವಿಜೃಂಭಣೆಯಿಂದ ಹಮ್ಮಿಕೊಳ್ಳುವ ಸಲುವಾಗಿ ಕಾಸರಗೋಡು ಶ್ರೀ ಮಲ್ಲಿಕಾರ್ಜುನ ಕ್ಷೇತ್ರ ಸನ್ನಿಧಿಯಲ್ಲಿ ಭಕ್ತಜನರ ಸಿದ್ಧತಾ ಸಭೆ ಜರಗಿತು.

ಕಾರ್ಯನಿರ್ವಹಣಾಧಿಕಾರಿ ಜಗದೀಶ್ ಕೂಡ್ಲು ಹಾಗೂ ಕಾಸರಗೋಡು ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿ ಗೌರವಾಧ್ಯಕ್ಷರಾದ ಜಗನ್ನಾಥ ಕಾಸರಗೋಡು ಅವರ ಸಮ್ಮುಖದಲ್ಲಿ ಸಭೆಯನ್ನು ನಡೆಸಲಾಯಿತು.

ಶ್ರೀ ಕ್ಷೇತ್ರದಲ್ಲಿ ಮಹೋತ್ಸವವನ್ನು ಆಯೋಜಿಸುವ ಪ್ರಯುಕ್ತ ವಿವಿಧ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಈ ಸಭೆಯಲ್ಲಿ ಶ್ರೀ ಮಲ್ಲಿಕಾರ್ಜುನ ಉತ್ಸವ ಸಮಿತಿಯನ್ನು ರಚಿಸಲಾಯಿತು.

ಪದಾಧಿಕಾರಿಗಳ ವಿವರ

ಉತ್ಸವ ಸಮಿತಿ ರಕ್ಷಾಧಿಕಾರಿಗಳಾಗಿ ಸಿ.ವಿ.ಪೊದುವಾಳ್, ಪಿ.ರಮೇಶ್, ಸರ್ವೋತ್ತಮ ಕಾಮತ್, ಅಧ್ಯಕ್ಷರಾಗಿ ಕೆ.ಎನ್.ರಾಮಕೃಷ್ಣ ಹೊಳ್ಳ, ಉಪಾಧ್ಯಕ್ಷರಾಗಿ ಸಾಯಿನಾಥ ರಾವ್, ಅಶೋಕ ಶಾಣಾಯ್, ಗುಣಪಾಲ ಅಮ್ಮೈ, ಕಿಶೋರ್‌ಕುಮಾರ್, ಶ್ರೀಲತಾ ಟೀಚರ್, ಪ್ರೇಮಾ ಪುರಂದರ ಶೆಟ್ಟಿ ಶಾರದಾ ಸಾಯಿನಾಥ್ ರಾವ್, ಶ್ರೀದೇವಿ ಸತ್ಯಸಾಯಿ, ಪ್ರಧಾನ ಕಾರ್ಯದರ್ಶಿಯಾಗಿ ಹರೀಶ್ ಕೆ.ಆರ್., ಜೊತೆ ಕಾರ್ಯದರ್ಶಿಗಳಾಗಿ ಸೂರಜ್ ಶೆಟ್ಟಿ, ರವಿ ಕೇಸರಿ, ನವೀನ್ ಅಶೋಕ ನಗರ, ಪುರಂದರ ಶೆಟ್ಟಿ ಕೋಶಾಧಿಕಾರಿಯಾಗಿ ಕಮಲಾಕ್ಷ ಬೀರಂತ ಬೈಲು, 101 ಮಂದಿ ಸಮಿತಿ ಸದಸ್ಯರನ್ನು ಅವಿರೋಧ ಆಯ್ಕೆ ಮಾಡಲಾಯಿತು.

ಚುಟುಕು ಸಾಹಿತ್ಯ ಸಮ್ಮೇಳನ: ಎಡನೀರು ಶ್ರೀಗಳಿಂದ ಆಮಂತ್ರಣ ಪತ್ರಿಕೆ ಬಿಡುಗಡೆ



ಕಾಸರಗೋಡು: ಕಾಸರಗೋಡು – ಕರ್ನಾಟಕ ಚುಟುಕು ಸಾಹಿತ್ಯ ಸಮ್ಮೇಳನ ಫೆ.22ರಂದು ಬೆಳಿಗ್ಗೆ 7ರಿಂದ ನುಳ್ಳಿಪ್ಪಾಡಿ ಕನ್ನಡ ಭವನ ಮತ್ತು ಗ್ರಂಥಾಲಯದ ಡಾ.ಎಂ.ಜಿ. ಆರ್.ಅರಸ್ ವೇದಿಕೆಯಲ್ಲಿ ಜರಗಲಿದೆ. ಇದರ ಆಮಂತ್ರಣ ಪತ್ರಿಕೆ ಬಿಡುಗಡೆ ಸಮಾರಂಭ ಮಂಗಳವಾರ ಬೆಳಿಗ್ಗೆ ಎಡನೀರು ಮಠದಲ್ಲಿ ಜರಗಿತು. ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಬಿಡುಗಡೆಗೊಳಿಸಿ ಶುಭಾಶೀರ್ವಾದ ನೀಡಿದರು.

ಕಾರ್ಯಕ್ರಮದಲ್ಲಿ ಸಮ್ಮೇಳನ ಸ್ವಾಗತ ಸಮಿತಿ ಅಧ್ಯಕ್ಷ ಡಾ.ವೆಂಕಟ್ರಮಣ ಹೊಳ್ಳ ಕಾರ್ಯಕ್ರಮದ ರೂಪು ರೇಖೆಗಳನ್ನು ವಿವರಿಸಿದರು. ಗೌರವಾಧ್ಯಕ್ಷ ಪ್ರದೀಪ್ ಬೇಕಲ್, ಕನ್ನಡ ಭವನ ರೂವಾರಿ ಡಾ. ವಾಮನ್ ರಾವ್ ಬೇಕಲ್ ಮತ್ತು ಸಂಧ್ಯಾರಾಣಿ ಟೀಚರ್ ಸ್ವಾಮಿಜಿಗಳಿಗೆ ಫಲಪುಷ್ಪ ನೀಡಿದರು. ಉಪಾಧ್ಯಕ್ಷ ಶಂಕರ ಜೆ.ಪಿ.ನಗರ ನಿರೂಪಿಸಿದರು. ಜಗನ್ನಾಥ ಶೆಟ್ಟಿ ವಂದಿಸಿದರು.

ಎಡನಾಡು ಕಣ್ಣೂರು ಸಹಕಾರಿ ಬ್ಯಾಂಕ್ ವಠಾರದಲ್ಲಿ ಕಾವೇರಿ ನರ್ಸರಿ ಆರಂಭ



ಕುಂಬಳೆ: ಎಡನಾಡು ಕಣ್ಣೂರು ಸೇವಾ ಸಹಕಾರಿ ಬ್ಯಾಂಕ್‌ನ ಅಂಗಸಂಸ್ಥೆಯಾದ ಕಾವೇರಿ ನರ್ಸರಿಯನ್ನು ಬ್ಯಾಂಕ್‌ನ ವಠಾರದಲ್ಲಿ ಉದ್ಘಾಟಿಸಲಾಯಿತು. ವಿವಿಧ ರೀತಿಯ ಅಡಿಕೆ, ತೆಂಗು, ಹಲವು ವಿಧದ ಹಣ್ಣಿನ ಗಿಡಗಳು ಇನ್ನು ಮುಂದೆ ಬ್ಯಾಂಕ್‌ನ ವಠಾರದಲ್ಲಿ ವಾರದ ಎಲ್ಲಾ ದಿನಗಳಲ್ಲಿ ಗ್ರಾಹಕರಿಗೆ, ಕೃಷಿಕರಿಗೆ ಲಭಿಸಲಿದೆ.

ಸಹಕಾರಿ ಇಲಾಖೆಯ ಸಹಾಯಕ ರಿಜಿಸ್ಟ್ರಾರ್ ರವೀಂದ್ರನ್ ಮಂಜೇಶ್ವರ ಉದ್ಘಾಟಿಸಿದರು. ಬ್ಯಾಂಕ್‌ನ ಅಧ್ಯಕ್ಷ ಶ್ಯಾಮರಾಜ ದೊಡ್ಡಮಾಣಿ ಅಧ್ಯಕ್ಷತೆ ವಹಿಸಿದ್ದರು. ಕ್ಯಾಂಪ್ಕೋ ಉಪಾಧ್ಯಕ್ಷ ಪದ್ಮರಾಜ ಪಟ್ಟಾಜೆ ಅತಿಥಿಯಾಗಿದ್ದರು. ಎಡನಾಡು ಕ್ಷೀರೋತ್ಪಾದಕ ಸಹಕಾರ ಸಂಘದ ಅಧ್ಯಕ್ಷ ಎಸ್.ಎನ್.ರಾವ್ ಮನ್ನಿಪ್ಪಾಡಿ, ವಾರ್ಡ್ ಸದಸ್ಯೆ ಲಕ್ಷ್ಮೀ ವಿ.ಭಟ್ ಉಪಸ್ಥಿತರಿದ್ದರು.

ಬ್ಯಾಂಕ್‌ನ ನಿರ್ದೇಶಕ ಕೃಷ್ಣಪ್ರಸಾದ್ ಸ್ವಾಗತಿಸಿ, ನಿರ್ದೇಶಕಿ ಹರಿಣಿ ಜಿ.ಕೆ.ನಾಯಕ್ ವಂದಿಸಿದರು.

ನಾರಂಪಾಡಿ ಶ್ರೀ ಉಮಾಮಹೇಶ್ವರ ಕ್ಷೇತ್ರ: ಶಿವರಾತ್ರಿ, ಜಾಗರಣೆ, ಶಿವಪಂಚಾಕ್ಷರಿ ಜಪ



ಬದಿಯಡ್ಕ: ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ಕರ್ನಾಟಕ, ಕೇಂದ್ರ ಕಚೇರಿ ತುಮಕೂರು, ನೇತ್ರಾವತಿ ವಲಯ, ದಕ್ಷಿಣ ಕನ್ನಡ ಜಿಲ್ಲೆ ಕಾಸರಗೋಡು ನಗರದ ವಿವಿಧ ಶಾಖೆಗಳ ಸಹಯೋಗದೊಂದಿಗೆ ಶ್ರೀ ಉಮಾಮಹೇಶ್ವರ ಕ್ಷೇತ್ರ ನಾರಂಪಾಡಿಯಲ್ಲಿ ಮಹಾ ಶಿವರಾತ್ರಿ ಪ್ರಯುಕ್ತ ಜಾಗರಣೆ, ಭಜನೆ, ಶಿವಪಂಚಾಕ್ಷರಿ ಜಪ, ಮೃತ್ಯುಂಜಯ ಜಪ, ಶಿವಾಷ್ಟೋತ್ತರ ಶತನಾಮಾವಳಿ ಪಠಣೆ, ಪುಷ್ಪಾರ್ಚನೆ, ಏಕಾದಶ ಯೋಗ ಶಿವ ನಮಸ್ಕಾರ ಕಾರ್ಯಕ್ರಮ ನಡೆಯಿತು.

ಡಾ.ಕೇಶವ ಭಟ್ ಮಪ್ಪಾರು ದೀಪ ಪ್ರಜ್ವಲನೆ ಮೂಲಕ ಉದ್ಘಾಟಿಸಿದರು. ನಾರಂಪಾಡಿ ಉಮಾಮಹೇಶ್ವರ ಕ್ಷೇತ್ರ ಸೇವಾ ಸಮಿತಿ ಅಧ್ಯಕ್ಷ ಬಾಲಕೃಷ್ಣ ಮಾಸ್ಟರ್, ಕಾರ್ಯದರ್ಶಿ ಹರಿನಾರಾಯಣ ಶಿರಂತಡ್ಕ, ಕಾರ್ಯಕ್ರಮದ ಸಂಚಾಲಕ ವಿಶ್ವನಾಥ ಉಪಸ್ಥಿತರಿದ್ದರು.

ನಂತರ ಯೋಗ ಬಂಧುಗಳಿಂದ ಭಜನೆ ಕುಣಿತ ಭಜನೆ, ಮೃತ್ಯುಂಜಯ ಜಪ ಮತ್ತು ಶಿವ ಪಂಚಾಕ್ಷರಿ ಜಪದ ಜೊತೆಗೆ ಅದರ ಮಹತ್ವದ ಬಗ್ಗೆ ಬೌದ್ಧಿಕ್ ನೀಡಲಾಯಿತು. ಶಿವರಾತ್ರಿ ಜಾಗರಣೆ ಮಹತ್ವ ತಿಳಿಸಿಕೊಡಲಾಯಿತು.

ಶಿವಾಷ್ಟೋತ್ತರ ಶತನಾಮಾವಳಿ ಪಠಣೆಯೊಂದಿಗೆ ಪುಷ್ಪಾರ್ಚನೆ ನಡೆಯಿತು. ದೇವಸ್ಥಾನ ಸ್ಥಳ ಪುರಾಣ, ಶಿವರಾತ್ರಿಯ ಪುರಾಣ ಕಥೆಗಳನ್ನು ತಿಳಿದುಕೊಂಡು ಕ್ಷೇತ್ರಕ್ಕೆ ಏಕಾದಶ ಪ್ರದಕ್ಷಿಣೆ ಹಾಕಲಾಯಿತು. ಪ್ರಾತಃ ಕಾಲದ ನಿತ್ಯಾಭ್ಯಾಸದ ಜೊತೆಗೆ ಏಕಾದಶ ಯೋಗ ಶಿವ ನಮಸ್ಕಾರವನ್ನು ಎಲ್ಲಾ ಯೋಗ ಬಂಧುಗಳು ಜೊತೆಯಾಗಿ ಮಾಡಿದರು. ಕುಮಾರಿ ನಳಿನಿ ನಿರೂಪಿಸಿದರು. ರವಿಶಂಕರ ವಂದಿಸಿದರು. ಅನ್ನಪೂರ್ಣೇಶ್ವರಿ ಮಂತ್ರದೊಂದಿಗೆ ಪ್ರಸಾದ ಸೇವಿಸಿ ಕಾರ್ಯಕ್ರಮ ಸಂಪನ್ನಗೊಳಿಸಲಾಯಿತು. 90ಕ್ಕೂ ಅಧಿಕ ಯೋಗ ಬಂಧುಗಳು ಮತ್ತಿತರರಿದ್ದರು.

ಬಾಡೂರು ಶ್ರೀ ದುರ್ಗಾ ಯುವಕ ಸಂಘದ ಮಹಾಸಭೆ: ನೂತನ ಪದಾಧಿಕಾರಿಗಳ ಆಯ್ಕೆ



ಕುಂಬಳೆ: ಬಾಡೂರು ಶ್ರೀ ದುರ್ಗಾ ಯುವಕ ಸಂಘದ ವಾರ್ಷಿಕ ಮಹಾಸಭೆಯು ಸಂಘದ ಕಚೇರಿಯಲ್ಲಿ ಯಶಸ್ವಿಯಾಗಿ ಜರಗಿತು. ಈ ಸಭೆಯಲ್ಲಿ ಸಂಘದ ಕಳೆದ ವರ್ಷದ ಲೆಕ್ಕಪತ್ರ ಮಂಡನೆ, ನವೀಕರಣಗೊಂಡ ನೂತನ ಕಟ್ಟಡ ನಿರ್ಮಾಣ ಖರ್ಚು ವೆಚ್ಚ ವಿವರಗಳ ಮಂಡಿಸಿ ಅನುಮೋದನೆ ಪಡೆಯಲಾಯಿತು.

ಅಲ್ಲದೆ ಮುಂಬರುವ 38ನೇ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮದ ಪೂರ್ವ ಸಿದ್ಧತೆ ಬಗ್ಗೆ ಚರ್ಚೆ ನಡೆಸಿ ಕಾರ್ಯ ಕ್ರಮದ ಯಶಸ್ಸಿಗೆ ರೂಪರೇಷೆಗಳ ಸಿದ್ಧಪಡಿಸಲಾಯಿತು. ಇದೇ ವೇಳೆ 2026ನೇ ಸಾಲಿನ ನೂತನ ಸಮಿತಿ ಆರಿಸಲಾಯಿತು.

ಗೌರವಾಧ್ಯಕ್ಷರಾಗಿ ಕೋಳಾರು ಸತೀಶ್ಚಂದ್ರ ಭಂಡಾರಿ, ಅಧ್ಯಕ್ಷರಾಗಿ ಅಭಿತ್ ಟಿ. (ಚಂದ್ರಹಾಸ), ಉಪಾಧ್ಯಕ್ಷರಾಗಿ ಶ್ರೀಧರ ಹೊಸಗದ್ದೆ ಮತ್ತು ಚಂದ್ರಹಾಸ ಸುಳ್ಯಮೆ, ಪ್ರಧಾನ ಕಾರ್ಯದರ್ಶಿಯಾಗಿ ರಕ್ಷಿತ್ ಸಿ.ಎಂ., ಜೊತೆ ಕಾರ್ಯದರ್ಶಿಗಳಾಗಿ ನಿತಿನ್ ರೈ , ರಕ್ಷಿತ್ ತೋಟ, ಕೋಶಾಧಿಕಾರಿಯಾಗಿ ಭರತ್ ವೆಂಕಟೇಶ್ ಕಾರಂತ, ಲೆಕ್ಕ ಪರಿಶೋಧಕ ರಾಗಿ ರಾಕೇಶ್ ಸಿ.ಎನ್., ಕಲಾ ಕಾರ್ಯದರ್ಶಿಯಾಗಿ ಲೋಕೇಶ್ ಎಂ.ಸಿ., ಕ್ರೀಡಾ ಕಾರ್ಯದರ್ಶಿ ಭರತ್ ಬಾಡೂರು, ಕಚೇರಿ ನಿರ್ವಹಣೆ ಪ್ರಮುಖರಾಗಿ ಅಭಿಷೇಕ್ ಆಚಾರ್ಯ ಮತ್ತು ದೀಕ್ಷಿತ್ ವಿ.ಕೆ. ಅವರನ್ನು ಆರಿಸಲಾಯಿತು.

ಸಮಿತಿ ಸದಸ್ಯರಾಗಿ ದೀಕ್ಷಿತ್ ಶೆಟ್ಟಿ , ರಾಮ ಸಿ.ಎಚ್., ಬಾಲಕೃಷ್ಣ ಸುಳ್ಯಮೆ, ಚನಿಯ ಕಿದಾರು, ಸದಾಶಿವ ಕೇರಿ, ರಾಜೇಶ್ ಪೂಜಾರಿ ಈಂದುಗುರಿ ಅವರನ್ನು ಆಯ್ಕೆ ಮಾಡಲಾಯಿತು. ಮಹಿಳಾ ಪ್ರತಿನಿಧಿಗಳಾಗಿ ಭಾರತಿ ಅಚ್ಯುತ ಪೂಜಾರಿ ಬಾಡೂರು, ಗಿರಿಜಾ ಕೃಷ್ಣ ಚಾಕಟೆಜಾಲು, ಉಮಾವತಿ ಜಯಕೇರಿ ಆಯ್ಕೆಯಾದರು.

ಉಳಿದ ಹಿರಿಯ ಸದಸ್ಯರನ್ನು ಸಲಹಾ ಸಮಿತಿಗೆ ಸೇರ್ಪಡೆಗೊಳಿಸಲಾಯಿತು.



ಕ್ಯಾಂಪ್ಕೊ ಸಂಸ್ಥೆಯ ಸಾಂತ್ವನ ಯೋಜನೆಯಡಿ ಕ್ಯಾಂಪ್ಕೊ ಬದಿಯಡ್ಕ ಶಾಖೆ ಸಕ್ರಿಯ ಸದಸ್ಯೆ ಸಂಧ್ಯಾಕುಮಾರಿಯ ಪತಿ ಹರ್ಷಕುಮಾರ್‌ರ ಆಂಜಿಯೋಪ್ಲಾಸ್ಟಿ ಚಿಕಿತ್ಸೆಗೆ ಕ್ಯಾಂಪ್ಕೊ ವತಿಯಿಂದ ನೀಡಲಾಗುವ 50 ಸಾವಿರ ರೂ. ಸಹಾಯಧನದ ಚೆಕ್‌ನ್ನು ಸಂಸ್ಥೆ ಉಪಾಧ್ಯಕ್ಷ ಪದ್ಮರಾಜ ಪಟ್ಟಾಜೆ ಸದಸ್ಯರ ನಿವಾಸದಲ್ಲಿ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಬದಿಯಡ್ಕ ಪ್ರಾದೇಶಿಕ ವ್ಯವಸ್ಥಾಪಕ ಚಂದ್ರ ಎಂ., ಬದಿಯಡ್ಕ ಶಾಖೆ ವ್ಯವಸ್ಥಾಪಕ ಶ್ಯಾಮ್‌ಪ್ರಶಾಂತ ಬಿ. ಉಪಸ್ಥಿತರಿದ್ದರು.

ಮತದಾನ ಯಂತ್ರ ಪರಿಚಯಿಸಲು ಕೇಂದ್ರ ಚುನಾವಣಾ ಆಯೋಗದಿಂದ ವಿಶಿಷ್ಟ ಪ್ರಯೋಗ

ಸಂಚಾರಿ ಪ್ರದರ್ಶನ ವ್ಯಾನ್ ಪ್ರವಾಸಕ್ಕೆ ಜಿಲ್ಲಾಧಿಕಾರಿ ಚಾಲನೆ



ಕಾಸರಗೋಡು: ಮತದಾರರಿಗೆ ಮತಯಂತ್ರಗಳು ಮತ್ತು ವಿವಿಪಿಎಟಿ ವ್ಯವಸ್ಥೆಯ ಕಾರ್ಯನಿರ್ವಹಣೆಯನ್ನು ನೇರವಾಗಿ ಪ್ರದರ್ಶಿಸಲು ಕೇಂದ್ರ ಚುನಾವಣಾ ಆಯೋಗವು ಸಿದ್ಧಪಡಿಸಿರುವ ಸಂಚಾರಿ ಪ್ರದರ್ಶನ ವ್ಯಾನ್ ಕಾಸರಗೋಡು ಜಿಲ್ಲೆಯಲ್ಲಿ ತನ್ನ ಪ್ರವಾಸವನ್ನು ಪ್ರಾರಂಭಿಸಿದೆ.

ಈ ನಿಟ್ಟಿನಲ್ಲಿ ಕಾಸರಗೋಡು ಸಿವಿಲ್ ಸ್ಟೇಷನ್ ಆವರಣದಲ್ಲಿ ಮಂಗಳವಾರ ನಡೆದ ಸಮಾರಂಭದಲ್ಲಿ ಜಿಲ್ಲಾಧಿಕಾರಿ ಕೆ.ಇನ್ಬಶೇಖರ್ ಅವರು ವ್ಯಾನ್‌ಗಳ ಪ್ರವಾಸಕ್ಕೆ ಹಸಿರು ನಿಶಾನೆ ತೋರಿದರು.

ಜಿಲ್ಲೆಗೆ ಎರಡು ವ್ಯಾನ್

ಜಿಲ್ಲೆಗೆ ಒದಗಿಸಲಾದ ಎರಡು ವ್ಯಾನ್‌ಗಳ ಪೈಕಿ ಒಂದು ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಪ್ರವಾಸ ಮಾಡಲಿದ್ದು, ಇನ್ನೊಂದು ಕಾಞಂಗಾಡು ವಿಧಾನಸಭಾ ಕ್ಷೇತ್ರದಲ್ಲಿ ಅಭಿಯಾನ ನಡೆಸುತ್ತಿದೆ. ಸಂಚಾರಿ ಪ್ರದರ್ಶನ ವ್ಯಾನ್ ಪ್ರತಿದಿನ ಹತ್ತು ಪ್ರಮುಖ ಕೇಂದ್ರಗಳ ಮೂಲಕ ಪ್ರವಾಸ ಮಾಡಲಿದೆ. ಈ ಎರಡು ಕ್ಷೇತ್ರಗಳಲ್ಲಿ ಪ್ರವಾಸ ಪೂರ್ಣಗೊಂಡ ನಂತರ ಸಂಚಾರಿ ಪ್ರದರ್ಶನ ವ್ಯಾನ್ ಇತರ ವಿಧಾನ ಸಭಾ ಕ್ಷೇತ್ರಗಳ ವಿವಿಧ ಕೇಂದ್ರಗಳಲ್ಲಿ ಪ್ರವಾಸ ಹಮ್ಮಿಕೊಳ್ಳಲಿದೆ.

ಜಿಲ್ಲೆಯ ಎಲ್ಲಾ ಮತಗಟ್ಟೆಗಳ ಮೇಲೆ ಕೇಂದ್ರೀಕರಿಸುವ ಮೂಲಕ ಗ್ರಾಮೀಣ, ನಗರ ಎಂಬ ಬೇಧವಿಲ್ಲದೆ ಎಲ್ಲಾ ಮತದಾರರಿಗೂ ಮತಯಂತ್ರದ ಕಾರ್ಯ ತಲುಪಿಸುವುದು ಈ ಯೋಜನೆ ಮುಖ್ಯ ಉದ್ದೇಶವಾಗಿದೆ.

ಅಭಿಯಾನದ ಗುರಿ

ಚುನಾವಣಾ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಖಚಿತ ಪಡಿಸುವುದು , ಮತದಾರರ ಅನುಮಾನಗಳನ್ನು ಹೋಗಲಾಡಿಸುವುದು ಈ ಅಭಿಯಾನದ ಗುರಿ.

ಮತದಾರರು ಪ್ರತಿ ಕೇಂದ್ರದಲ್ಲಿ ತಮ್ಮ ಮತಗಳನ್ನು ನೇರವಾಗಿ ಮತಯಂತ್ರದಲ್ಲಿ ನೋಂದಾಯಿಸುವ ಸೌಲಭ್ಯ ಹೊಂದಿದ್ದಾರೆ. ವ್ಯಾನ್ ಪ್ರದರ್ಶನ ಪ್ರವಾಸ ಉದ್ಘಾಟನಾ ಸಮಾರಂಭದಲ್ಲಿ ಚುನಾವಣಾ ಇಲಾಖೆಯ ಉಪ ಕಲೆಕ್ಟರ್ ಎ.ಎನ್.ಗೋಪಕುಮಾರ್, ಇಲೆಕ್ಟ್ರಾನಿಕ್ ಮತಯಂತ್ರ, ತರಬೇತಿ ನಿರ್ವಹಣಾ ನೋಡಲ್ ಅಧಿಕಾರಿ ಲಿಪು ಎಸ್.ಲಾರೆನ್ಸ್, ಸ್ವೀಪ್ ನೋಡಲ್ ಅಧಿಕಾರಿ ಕೆ.ರತೀಶ್ ಕುಮಾರ್, ಜೂನಿಯರ್ ಸೂಪರಿಂಟೆಂಡೆಂಟ್ ಎ.ರಾಜೀವನ್ ಮತ್ತಿತರರು ಉಪಸ್ಥಿತರಿದ್ದರು.

ಮುಂದಿನ ದಿನಗಳಲ್ಲಿ ಮತದಾನ ಪ್ರದರ್ಶನ ವ್ಯಾನ್‌ಗಳು ವಿವಿಧ ತಂಡಗಳ ನೇತೃತ್ವದಲ್ಲಿ ಜಿಲ್ಲೆ ಇತರ ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರವಾಸವನ್ನು ಮುಂದುವರಿಸಲಿವೆ.

ಚಿಪ್ಪಾರು ಖಂಡಿಗ ದೈವಸ್ಥಾನದಲ್ಲಿ ಬಯಲು ಕೋಲದ ಆಮಂತ್ರಣ ಪತ್ರಿಕೆಯ ಬಿಡುಗಡೆ



ಮಂಜೇಶ್ವರ: ಚಿಪ್ಪಾರು ಖಂಡಿಗ ಶ್ರೀ ವಿಷ್ಣುಮೂರ್ತಿ ವಯನಾಟ್ ಕುಲವನ್ ದೈವಸ್ಥಾನದಲ್ಲಿ ಮಾರ್ಚ್ 7ರಂದು ಜರಗಲಿರುವ ಪ್ರತಿಷ್ಠಾ ದಿನಾಚರಣೆ ಹಾಗೂ ಪುತ್ತರಿಸೇವೆ ಹಾಗೂ ಬಯಲು ಕೋಲ ಉತ್ಸವದ ಆಮಂತ್ರಣ ಪತ್ರಿಕೆ ಬಿಡುಗಡೆ ಸಮಾರಂಭ ನಡೆಯಿತು.

ಈ ಸಂದರ್ಭ ಸಮಿತಿ ಗೌರವಾಧ್ಯಕ್ಷ ಗಂಗಾಧರ್ ಬಲ್ಲಾಳ್ ಕೊಲ್ಲೂರಮೂಲೆ, ಸೀತಾರಾಮ ಬಲ್ಲಾಳ್ ಚಿಪ್ಪಾರು ಅರಮನೆ ಮತ್ತು ಅಧ್ಯಕ್ಷ ರಾಘವ ಕೆ. ಪೈವಳಿಕೆ, ರಾಮ್‌ಪ್ರಸಾದ್ ಬಲ್ಲಾಳ್. ಕುಮಾರ ಖಂಡಿಗ, ಮಾಧವ ಗುರಿಕಾರ, ರಾಜೇಶ್ ಶೆಟ್ಟಿ ಖಂಡಿಗ, ಶಿವಪ್ರಸಾದ್ ಆಚಾರ್ಯ, ಶೇಖರ ಖಂಡಿಗ, ಪುರಂದರ ಮಳಿವು ಸದಾನಂದ ಅಮ್ಮೇರಿ, ನವೀನ್ ಮಳಿವು ಮತ್ತು ಮಹಿಳಾ ಅಧ್ಯಕ್ಷ ಸುಜಾತ ನಾಗೇಂದ್ರ ಚಿಪ್ಪಾರು ಮತ್ತು ಆಶಾಲತಾ ಶೆಟ್ಟಿ ಖಂಡಿಗ ಉಪಸ್ಥಿತರಿದ್ದರು.

ನಮ್ಮ ಉಡುಪಿ

website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb

ಬುಧವಾರ 18, ಫೆಬ್ರವರಿ 2026



ಶಿರ್ವ ಸಮೀಪದ ಕಾರಣಿಕ ಕ್ಷೇತ್ರ ಪಳ್ಳಿ ಅಡಪಾಡಿ ಶ್ರೀಉಮಾಮಹೇಶ್ವರ ಶ್ರೀದುರ್ಗಾಪರಮೇಶ್ವರೀ ದೇವಳದಲ್ಲಿ ವಾರ್ಷಿಕ ಮಹಾಶಿವರಾತ್ರಿ ಉತ್ಸವ -ರಥೋತ್ಸವದ ಶುಭಾವಸರದಲ್ಲಿ ಸ್ವರ್ಣ, ಪುಷ್ಪಾಲಂಕೃತ ಶ್ರೀಉಮಾಮಹೇಶ್ವರ, ಶ್ರೀದುರ್ಗಾಪರಮೇಶ್ವರೀ ದೇವಿ.

ಇಂದು ಕೋಸ್ಟಲ್ ಸೈಕ್ಲೋಥಾನ್ ಆಗಮನ

ಉಪ್ಪುಂದ: ರಾಷ್ಟ್ರಗೀತೆ ವಂದೇ ಮಾತರಂನ 150ನೇ ವಾರ್ಷಿಕೋತ್ಸವದ ಅಂಗವಾಗಿ ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ಯೋಧರಿಂದ ಕೋಸ್ಟಲ್ ಸೈಕ್ಲೋಥಾನ್-2026 ಅಭಿಯಾನ ಫೆ.18ರಂದು ಉಡುಪಿ ಜಿಲ್ಲೆಗೆ ಆಗಮಿಸಲಿದೆ. ಕಳೆದ ವರ್ಷ ಅತ್ಯಂತ ಯಶಸ್ವಿಯಾಗಿ ನಡೆದ ಈ ಅಭಿಯಾನ ಈ ಬಾರಿ ಜ.28ರಿಂದ ಆರಂಭವಾಗಿ ಫೆ.22.ರಂದು ಸಮಾರೋಪಗೊಳ್ಳಲಿದೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ವಿದ್ಯುತ್ ವ್ಯತ್ಯಯ

ಉಡುಪಿ: ನಿಟ್ಟೂರು ವಿದ್ಯುತ್ ಉಪಕೇಂದ್ರದಿಂದ ಹೊರಡುವ, ಪುತ್ತೂರು ಫೀಡರ್ ಮಾರ್ಗದಲ್ಲಿ ತುರ್ತು ನಿರ್ವಹಣೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಫೆ. 18ರಂದು ಬೆಳಗ್ಗೆ 9.30ರಿಂದ ಸಂಜೆ 5:30 ಗಂಟೆಯವರೆಗೆ ಪೆರಂಪಳ್ಳಿ, ನೋಳೆ ಲಚ್ಚಿಲ್, ಆದಿಶಕ್ತಿ ದೇವಸ್ಥಾನ, ಮೂಡುಸಗ್ರಿ, ಅಂಬಡೆಬೆಟ್ಟು ಎಲ್.ಐ.ಟಿ ಮಾಯಗುಂಡಿ, ನಯಂಪಳ್ಳಿ, ಅಂಬಾಗಿಲು, ದೊಡ್ಡಣಗುಡ್ಡೆ ವಾಸುಕಿ ನಗರ, ಪುತ್ತೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ವಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಮೊದಲನೇ ಪುಟದಿಂದ

ಉಡುಪಿಗೆ ಆಪತ್ತು

ಎಕ್ಯೂಐ ಒಂದು ಪ್ರದೇಶದ ಗಾಳಿ ಎಷ್ಟು ಶುದ್ಧ ಅಥವಾ ಮಾಲಿನ್ಯಗೊಂಡಿದೆ ಎಂಬುದನ್ನು ಅಳೆಯುವ ಮಾನದಂಡವಾಗಿದ್ದು, ಇದು ಇದು ಗಾಳಿಯಲ್ಲಿ ಇರುವ ಹಾನಿಕಾರಕ ಕಣಗಳು ಮತ್ತು ಅನಿಲಗಳ ಪ್ರಮಾಣವನ್ನು ಅಂಕಿಗಳ ಮೂಲಕ ಅಳೆಯುತ್ತದೆ. ಎಕ್ಯೂಐ 0 ಯಿಂದ 50ರಲ್ಲಿದ್ದರೆ ಉತ್ತಮ. ಯಾವುದೇ ಸಮಸ್ಯೆ ಇಲ್ಲ. 51ರಿಂದ 100 ಸಮಾಧಾನಕರ ಆದರೆ ಸೂಕ್ಷ್ಮ ಆರೋಗ್ಯ ಸಮಸ್ಯೆ ಇದ್ದವರಿಗೆ ಸ್ವಲ್ಪ ಪರಿಣಾಮ ಬೀರಬಹುದು. 101ರಿಂದ 200 ಇದ್ದಲ್ಲಿ ಅದನ್ನು ಕಳಪೆ ಎಂದು ಗುರುತಿಸಲಾಗುತ್ತದೆ. ಇದು ಉಸಿರಾಟ ತೊಂದರೆ ಉಂಟುಮಾಡುತ್ತದೆ. 201ರಿಂದ 300 ತೀರ ಕಳಪೆಯಾಗಿದ್ದು ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ. 301ರಿಂದ ಮೇಲಕ್ಕೆ ಅಪಾಯಕಾರಿ ಎಂದು ಗುರುತಿಸಲಾಗುತ್ತದೆ ಅಲ್ಲದೆ ಇದು ಗಂಭೀರ ಆರೋಗ್ಯ ಸಮಸ್ಯೆ ಉಂಟುಮಾಡುತ್ತದೆ.

ನಾಯಿ ದಾಳಿ

ಕಳೆದ ಹತ್ತು ತಿಂಗಳಿನಿಂದ ಮೀಟರ್ ರೀಡಿಂಗ್ ಮಾಡುವ ಸಿಬ್ಬಂದಿ ಇಲ್ಲದೆ ಇರುವ ಕಾರಣಕ್ಕಾಗಿ ಬಂಟ್ವಾಳ ತಾಲೂಕಿನ ರಾಯಿ ಗ್ರಾ.ಪಂ. ಕೈತ್ರೋಡಿ ಕ್ವಾರ್ಟರ್ಸ್ ವ್ಯಾಪ್ತಿಯಲ್ಲಿ ಮನೆಮನೆಗೆ ತೆರಳಿ ಮೀಟರ್ ರೀಡಿಂಗ್ ಕೆಲಸ ಮಾಡುತ್ತಿದ್ದಾರೆ. ಸೋಮವಾರ ರಾಯಿ ಕೈತ್ರೋಡಿ ಎಂಬಲ್ಲಿ ಮನೆಯೊಂದರ ಮೀಟರ್ ರೀಡಿಂಗ್ ಮಾಡಿ ಮುಖ್ಯ ರಸ್ತೆಯಲ್ಲಿ ನಡೆದುಕೊಂಡು ಬೈಕ್‌ನ ಬಳಿ ತೆರಳುತ್ತಿದ್ದಂತೆ ಮನೆಯಂಗಳದಲ್ಲಿದ್ದ ನಾಯಿಯೊಂದು ಸಂಕೋಲೆ ತುಂಡರಿಸಿ ಒಂದು ದಾಳಿ ಮಾಡಿದೆ.

ಬೀಗ

ಈ ಪ್ರದೇಶದಲ್ಲಿ ದಿನನಿತ್ಯದ ಕೆಲಸ ಮಾಡುವವರವ ಸಂಖ್ಯೆಯೇ ಜಾಸ್ತಿ ಇದ್ದು ಸಣ್ಣಪುಟ್ಟ ಆರೋಗ್ಯ ಸಮಸ್ಯೆಗೂ ಉಡುಪಿಗೇ ಹೋಗಬೇಕಾದ ಅನಿವಾರ್ಯತೆ ಇದೆ. ಬಡರೋಗಿಗಳಿಗೆ ಪ್ರಯೋಜನವಾಗಲೆಂದು ಸರ್ಕಾರ ಉಚಿತ ಚಿಕಿತ್ಸಾ ಸೇವೆ ಒದಗಿಸಲು ನಗರ ಭಾಗದಲ್ಲೂ 'ನಗರ ಕುಟುಂಬ ಕಲ್ಯಾಣ ಕೇಂದ್ರ' ತೆರೆದಿದೆ. ಆದರೆ, ಉಡುಪಿಯಲ್ಲಿ ನಾಗರಿಕ ಸಮಾಜಕ್ಕೆ ಇಲ್ಲಿನ ಕೇಂದ್ರದ ಲಾಭ ಲಭಿಸುತ್ತಿಲ್ಲ. ಈ ಕೇಂದ್ರವನ್ನು ಪುನಾರಂಭಿಸಬೇಕು ಎನ್ನುತ್ತಾರೆ ಸಾಮಾಜಿಕ ಕಾರ್ಯಕರ್ತ ತಾರಾನಾಥ್ ಮೇಸ್ತ.

ಹುಚ್ಚು ನಾಯಿ ಶಂಕೆ

ಇದರಿಂದ ಊರವರಲ್ಲಿ ನೆಮ್ಮದಿಯನ್ನುಂಟು ಮಾಡಿದಂತಾಯಿತು.
ವಾಹನ ಸಂಚಾರದ ವೇಳೆ ಬೆನ್ನಟ್ಟುತ್ತಿದ್ದು, ಇದರಿಂದ ದ್ವಿಚಕ್ರ ವಾಹನ ಸವಾರರು, ಮಕ್ಕಳ ಸಹಿತ ಊರವರು ಆತಂಕಕ್ಕೊಳಗಾಗಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ನಾಯಿಯ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕೆಂದು ಊರವರು ಆಗ್ರಹಿಸಿದ್ದಾರೆ.

ಕಾರ್ಕಳ, ಬಜಗೋಳಿ, ಮಾಳ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳ ಪ್ರಗತಿ ಪರಿಶೀಲನೆ | ಸಂಸದ ಕೋಟ ಸೂಚನೆ

ಭೂ ಮಾಲೀಕರಿಗೆ ವೈಜ್ಞಾನಿಕ ಮೌಲ್ಯ ನಿಗದಿಪಡಿಸಿ ಪರಿಹಾರ

ಉಡುಪಿ: ಕಾರ್ಕಳದಲ್ಲಿ ಹಾದುಹೋಗುವ 169 ಎ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗೆ ಅಗತ್ಯವಿರುವ ಭೂ ಸ್ವಾಧೀನ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸುವುದರ ಜೊತೆಗೆ ಭೂ ಮಾಲೀಕರಿಗೆ ಪರಿಹಾರದ ಹಣವನ್ನು ವೈಜ್ಞಾನಿಕವಾಗಿ ಮೌಲ್ಯವನ್ನು ನಿಗದಿಪಡಿಸಿ ನೀಡಬೇಕೆಂದು ಅಧಿಕಾರಿಗಳಿಗೆ ಸಂಸದ ಕೋಟ ಶ್ರೀನಿವಾಸ ಪೂಜಾರಿ ಸೂಚನೆ ನೀಡಿದರು.

ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಕಾರ್ಕಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕಾರ್ಕಳ, ಬಜಗೋಳಿ, ಮಾಳ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಗಳ ಪ್ರಗತಿ ಮತ್ತು ಭೂ ಸ್ವಾಧೀನ ಪರಿಹಾರ ಪಾವತಿಗೆ ಸಂಬಂಧಿಸಿದಂತೆ ಚರ್ಚಿಸುವ ಕುರಿತು ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಕಾಮಗಾರಿಗೆ ಸಹಕರಿಸಿ

ರಾಷ್ಟ್ರೀಯ ಹೆದ್ದಾರಿ 169ಎಯ ಅಭಿವೃದ್ಧಿ ಕಾಮಗಾರಿ ಯನ್ನು ಕೈಗೊಳ್ಳಲು ಭೂ ಸ್ವಾಧೀನ ಪ್ರಕ್ರಿಯೆಯು ಪ್ರಗತಿಯಲ್ಲಿದ್ದು, ಅಲ್ಲಿನ ಸ್ಥಳೀಯ ಜನರು ಅನೇಕ ವರ್ಷಗಳಿಂದ ತಾವು ವಾಸವಿರುವ ಮನೆ, ಕೃಷಿ ಭೂಮಿ ಯನ್ನು ರಸ್ತೆ ಅಭಿವೃದ್ಧಿಗೆ ನೀಡುವ ಅಗತ್ಯ



ಉಂಟಾಗಿದೆ. ಅವರಿಗೆ ಪ್ರಸ್ತುತ ಮಾರು ಕಟ್ಟೆ ಅನುಗುಣವಾಗಿ ಪರಿಹಾರ ಹಣ ನೀಡಿದ್ದಲ್ಲಿ ಅವರು ಭವಿಷ್ಯ ಜೀವನ ರೂಪಿಸಿಕೊಳ್ಳಲು ಅನುಕೂಲ ವಾಗಲಿದೆ. ಇದಕ್ಕೆ ಒತ್ತು ನೀಡಬೇಕು ಎಂದರು.

ಜಿಲ್ಲಾ ವ್ಯಾಪ್ತಿಯಲ್ಲಿ ಕೈಗೊಂಡಿರುವ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳನ್ನು ಆದ್ಯತೆಯ ಮೇಲೆ ಕೈಗೊಳ್ಳುವುದರೊಂದಿಗೆ ತ್ವರಿತವಾಗಿ ಮುಗಿಸಿ, ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂದರು.

ಸ್ವಾಧೀನದ ಸ್ವತ್ತುಗಳಿಗೆ ಮಾರುಕಟ್ಟೆ ಬೆಲೆ

ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಮಾತನಾಡಿ, ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಒಳಪಡುವ ಮನೆ, ಕೃಷಿ ಜಮೀನು ಸೇರಿದಂತೆ ಮತ್ತಿತರ ಸ್ವತ್ತುಗಳನ್ನು ಅಧಿ ಕಾರಿಗಳು ನಿಖರವಾಗಿ ಪರಿವೀಕ್ಷಣೆ ಮಾಡಿ, ನೈಜತೆಗೆ ಅನುಗುಣವಾಗಿ ಪ್ರಸ್ತುತ ಮಾರುಕಟ್ಟೆ ಮೌಲ್ಯಕ್ಕೆ ನಿಗದಿಪಡಿಸಲು ಸೂಚನೆ ನೀಡಿದರು.

ಶಾಸಕ ಸುನೀಲ್ ಕುಮಾರ್ ಮಾತನಾಡಿದರು. ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ್, ಡಿಎಫ್ಒ ರುಥ್ರೇನ್ ಪಿ., ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಧಾಕರ್ ನಾಯಕ್, ಸಹಾಯಕ ಕಮೀಷನರ್ ರಶ್ಮಿ, ಜಿಲ್ಲಾ ಮಟ್ಟದ ಅನುಷ್ಠಾನಾಧಿ ಕಾರಿಗಳು, ತಹಶೀಲ್ದಾರರು, ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರದ ಅಭಿಯಂತರರುಗಳು, ಗುತ್ತಿಗೆದಾರರು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಮಲ್ಪೆ-ಕರಾವಳಿ ಜಂಕ್ಷನ್ ಕಾಮಗಾರಿ ಮುಗಿಸಿ

ಮಲ್ಪೆ-ಕರಾವಳಿ ಜಂಕ್ಷನ್ ವರೆಗಿನ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗೆ ಅಗತ್ಯವಿರುವ ಭೂಮಿಯನ್ನು ಭೂಸ್ವಾಧೀನಗೊಳಿಸುವ ಪ್ರಕ್ರಿಯೆಯನ್ನು ಚುರುಕುಗೊಳಿಸುವುದರೊಂದಿಗೆ ಪೂರ್ಣಗೊಳಿಸಿ, ಹೆದ್ದಾರಿ ಕಾಮಗಾರಿಗಳನ್ನು ಕೈಗೊಳ್ಳಬೇಕು ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಸಂಸದ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ಬೇರೆ ಜಿಲ್ಲೆಯಲ್ಲಿ ಹೆಚ್ಚು ಪರಿಹಾರ

ಭೂ ಸ್ವಾಧೀನಕ್ಕೆ ಒಳಗಾಗಿರುವ ಮನೆಯ ಅಥವಾ ಭೂಮಿಯ ಮಾಲೀಕರಿಗೆ ಗರಿಷ್ಠ ಪ್ರಮಾಣದ ಪರಿಹಾರದ ಹಣ ಒದಗಿಸಬೇಕು. ರಾಷ್ಟ್ರೀಯ ಹೆದ್ದಾರಿ 169 ಎಗೆ ನೆರೆಯ ಜಿಲ್ಲೆಯಲ್ಲಿ ಭೂ ಸ್ವಾಧೀನ ಪ್ರಕ್ರಿಯೆಗೆ ನೀಡಿರುವ ಪರಿಹಾರದ ಹಣವು ಹೆಚ್ಚು ಇದೆ. ಒಂದೇ ರಸ್ತೆಗೆ ಭೂ ಸ್ವಾಧೀನದ ಪರಿಹಾರದ ಹಣ ವ್ಯತ್ಯಾಸದಿಂದ ಭೂ ಮಾಲೀಕರಿಗೆ ಗೊಂದಲದ ವಾತಾವರಣ ಉಂಟಾಗಿದೆ. ಅಧಿಕಾರಿಗಳು ಕಾನೂನಿನ ಅನ್ವಯ ಪರಿಹಾರದ ಮೊತ್ತವನ್ನು ನಿಗದಿಗೊಳಿಸಿ, ನೀಡಬೇಕು.

● ಸುನೀಲ್‌ಕುಮಾರ್, ಕಾರ್ಕಳ ಶಾಸಕ

ಮುನಿಯಾಲು ಶ್ರೀ ಮನ್ನಾಗಮಂಡಲ: ಪೂರ್ವಭಾವಿ ದೇಗುಲಗಳಲ್ಲಿ ಪ್ರಾರ್ಥನೆ



ಕಾರ್ಕಳ: ಮುನಿಯಾಲು ಗೋಧಾಮದ ಪ್ರವರ್ತಕ ಮೂಡುಬಿದರೆ ಎಸ್‌ಕೆಎಫ್ ಉದ್ಯಮ ಸಮೂಹದ ಆಡಳಿತ ನಿರ್ದೇಶಕ ಡಾ.ಜಿ. ರಾಮಕೃಷ್ಣ ಆಚಾರ್ ದಂಪತಿ ಗೋಧಾಮದಲ್ಲಿ ಫೆ.19ರಿಂದ 21ರ ತನಕ ನಡೆಯಲಿರುವ ಶ್ರೀ ಮನ್ನಾಗಮಂಡಲ ಯಶಸ್ವಿಯಾಗಿ ನಡೆಯಲು ಎಳ್ಳಾರೆ ಇರ್ವತ್ತೂರು ಲಕ್ಷ್ಮೀಜನಾರ್ದನ ಸ್ವಾಮಿ ದೇವಸ್ಥಾನ, ಕಡ್ತಲ ಸಿರಿಬೈಲು ಶ್ರೀ ಬರ್ಬರೇಶ್ವರ ದುರ್ಗಾಪರಮೇಶ್ವರೀ ದೇವಸ್ಥಾನ, ಮುನಿಯಾಲು ಶ್ರೀ ವೆಂಕಟರಮಣ ದೇವಸ್ಥಾನ, ಮುನಿಯಾಲು ಕಾಡುಹೊಳೆ ಶ್ರೀ ಜಂಗಮೇಶ್ವರ ದೇವಸ್ಥಾನ, ವರಂಗ ಶ್ರೀ ಜೈನಮಠ ಪದ್ಮಾವತಿ ಅಮ್ಮನವರ ದೇವಸ್ಥಾನದಲ್ಲಿ ಭಾನುವಾರ ಪೂಜೆ ಸಲ್ಲಿಸಿ ಪ್ರಾರ್ಥಿಸಿದರು.

ಈ ಸಂದರ್ಭದಲ್ಲಿ ಮುನಿಯಾಲು ಡಾ.ಕೆ. ಸುದರ್ಶನ್ ಹೆಬ್ಬಾರ್, ಕಡ್ತಲ ಗ್ರಾಮ ಪಂಚಾಯತ್ ಅಧ್ಯಕ್ಷ ಸುಕೇಶ ಹೆಗ್ಡೆ, ಮುಖಂಡರಾದ ಸಂಜೀವ ಪೂಜಾರಿ ಕಡ್ತಲ, ಪತ್ರಕರ್ತ ಸುಕುಮಾರ್ ಮುನಿಯಾಲ್ ಉಪಸ್ಥಿತರಿದ್ದರು.

ತೆಂಕ: 50 ಲಕ್ಷ ರೂ. ವೆಚ್ಚದಲ್ಲಿ ವಿವಿಧ ರಸ್ತೆ ಕಾಮಗಾರಿಗೆ ಚಾಲನೆ



ಪಡುಬಿದ್ರಿ: ಕಾಪು ವಿಧಾನಸಭಾ ಕ್ಷೇತ್ರದ ತೆಂಕ ಗ್ರಾಮ ಪಂಚಾಯತ್ ವ್ಯಾಪ್ತಿಯ ವಿವಿಧ ರಸ್ತೆ ಅಭಿವೃದ್ಧಿಗೆ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಅವರ ಶಿಫಾರಸಿನ ಮೇರೆಗೆ 50 ಲಕ್ಷ ರೂ. ಅನುದಾನ ಮಂಜೂರಾಗಿದ್ದು, ಗುದ್ದಲಿ ಪೂಜೆಯನ್ನು ಶಾಸಕರು ಸೋಮವಾರ ನೆರವೇರಿಸಿದರು.

ತೆಂಕ ಗ್ರಾಮ ಪಂಚಾಯತ್ ವ್ಯಾಪ್ತಿಯ ತೆಂಕ ಕೋಡ್ದಬ್ಬು ದೈವಸ್ಥಾನಕ್ಕೆ ಹೋಗುವ ರಸ್ತೆ ಅಭಿವೃದ್ಧಿಗೆ ರೂ. 10 ಲಕ್ಷ, ತೆಂಕ ನಾಥು ಮುಖಾರಿ ಮನೆ ಹತ್ತಿರದಿಂದ ಭೋಜ ದೇವಾಡಿಗ ಮನೆ ತನಕ ರಸ್ತೆ ಅಭಿವೃದ್ಧಿಗೆ ರೂಪಾಯಿ 10 ಲಕ್ಷ, ಆದಮಾರು ರಸ್ತೆಯಿಂದ ಶ್ರೀಧರ್ ದೇವಾಡಿಗ ಮನೆ ತನಕ ರಸ್ತೆ ಅಭಿವೃದ್ಧಿಗೆ ರೂ. 10 ಲಕ್ಷ, ಬ್ರಹ್ಮಸ್ಥಾನ ಬಳಿಯಿಂದ ಕುಶಲ ಕರ್ಕೇರ ಮನೆ ಬಳಿ ರಸ್ತೆ ಅಭಿವೃದ್ಧಿಗೆ ರೂ. 10 ಲಕ್ಷ, ದಿ. ವಾರಿಜಾ ಶೆಟ್ಟಿ ಅವರ ಮನೆಯಿಂದ ಕುಸಲೊಟ್ಟು ಮಂಜತ್ತಾಯ ಮೂಲಸ್ಥಾನ ವರೆಗೆ ರಸ್ತೆ ಅಭಿವೃದ್ಧಿಗೆ ರೂ. 10 ಲಕ್ಷ ಸೇರಿದಂತೆ ಒಟ್ಟು 50 ಲಕ್ಷ ರೂಪಾಯಿ ವೆಚ್ಚದ ರಸ್ತೆ ರಸ್ತೆ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ತಾಲೂಕು ಪಂಚಾಯತ್ ಮಾಜಿ ಸದಸ್ಯರಾದ ಶಾರದಾ ಕೆ. ಪೂಜಾರಿ, ಕೇಶವ ಮೊಯಿಲಿ, ತೆಂಕ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷೆ ಸುರೇಖ ಸಿ. ಪೂಜಾರಿ, ಮಾಜಿ ಉಪಾಧ್ಯಕ್ಷ ರತ್ನಾಕರ ಕೋಟ್ಯಾನ್, ಮಾಜಿ ಸದಸ್ಯರಾದ ಜಯಶ್ರೀ, ಸಂತೋಷ್, ಮನೋಜ್ ಶೆಟ್ಟಿ ಅಮ್ಮಣ್ಣಿ ಕುಂದರ್, ಸುಂದರಿ, ಶಿವಪ್ರಸಾದ್ ಎಲ್ಲದಡಿ, ವಿನಯ್ ಹೆಗ್ಡೆ, ಮಾಜಿ ಮಂಡಲ ಅಧ್ಯಕ್ಷರಾದ ವೈ. ಗೋಪಾಲ ಶೆಟ್ಟಿ, ತೆಂಕ ಗ್ರಾಮ ಪಂಚಾಯತ್ ಕಾರ್ಯದರ್ಶಿ ವಿಜಯ್ ಹಾಗೂ ಸ್ಥಳೀಯರು ಉಪಸ್ಥಿತರಿದ್ದರು.

ವಿದ್ಯುಚ್ಛಕ್ತಿ ಖಾಸಗೀಕರಣ ವಿರುದ್ಧ ಬೈಂದೂರಿನಲ್ಲಿ ನೌಕರರ ಮುಷ್ಕರ



ಉಪ್ಪುಂದ: ಸಂಯುಕ್ತ ಹೋರಾಟ ಕರ್ನಾಟಕ ಹಾಗೂ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ಒಕ್ಕೂಟ ವತಿಯಿಂದ ಸರ್ಕಾರ ತಂದಿರುವ ಜನವಿರೋಧಿ ಮಸೂದೆಗಳಾದ ವಿದ್ಯುಚ್ಛಕ್ತಿ ಖಾಸಗೀಕರಣ ಹಾಗೂ ವಿದ್ಯುತ್ ಇಲಾಖೆಯ ಖಾಸಗೀಕರಣ ವಿರೋಧಿಸಿ ಅಖಿಲ ಭಾರತ ವಿದ್ಯುತ್ ನೌಕರರ ಶಾಂತಿಯುತ ಮುಷ್ಕರ ಬೈಂದೂರು ಉಪವಿಭಾಗದ ಮೆಸ್ಕಾಂ ಕಚೇರಿಯಲ್ಲಿ ನಡೆಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಹರೀಶ್ ಮಾತನಾಡಿ, ಈ ಮಸೂದೆಗಳು ದೇಶದ ರೈತರಿಗೆ, ಕೈಗಾರಿಕೋದ್ಯಮ, ಗೃಹ ಉಪಯೋಗಿ ಬಳಕೆದಾರರಿಗೆ ಮತ್ತು ಕಾರ್ಮಿಕರಿಗೆ ಮಾರಕವಾಗಿದೆ. ಕೇಂದ್ರ ಸರ್ಕಾರ ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣ ಮಾಡಲು ಹೊರಟಿರುವುದು ಸರಿಯಲ್ಲ, ಇದು ಕಾರ್ಮಿಕ ವಿರೋಧಿ ನೀತಿಯಾಗಿದ್ದು, ರೈತರು, ಜನಸಾಮಾನ್ಯರಿಗೆ ಹೊರೆಯಾಗಲಿದೆ. ವಿದ್ಯುತ್ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸುತ್ತಿರುವ ಸಾವಿರಾರು ನೌಕರರಿಗೆ ಇದರಿಂದ ಸಮಸ್ಯೆಯಾಗುತ್ತಿದ್ದು, ಯಾವುದೇ ಕಾರಣಕ್ಕೂ ವಿದ್ಯುತ್ ಖಾಸಗೀಕರಣ ಮಾಡಬಾರದು ಎಂದು ಆಗ್ರಹಿಸಿದರು.

ಶಿವಾನಂದ ನಾಯ್ಕ, ಸಂಜಯ್ ಕಿಣಿ, ಕೃಷ್ಣ ಮೊಗವೀರ, ವಿಜೇಂದ್ರ ಆಚಾರಿ, ವಿದ್ಯುತ್ ನೌಕರರ ಸಂಘದ ಅಧ್ಯಕ್ಷ ಕುಮಾರ್, ವಸಂತ ನಾಯ್ಕ ಹಾಗೂ ವಿದ್ಯುತ್ ನೌಕರರ ಸಂಘದ ಸದಸ್ಯರು ಹಾಜರಿದ್ದರು.

ಬೊಂಬೆಯಾಟ ಅಕಾಡೆಮಿ 'ಪ್ರತಿಭೆ ನಿಮ್ಮದು, ವೇದಿಕೆ ನಮ್ಮದು' ಸರಣಿ



ಕುಂದಾಪುರ: ಉಪ್ಪಿನಕುದ್ರು ಗೊಂಬೆಯಾಟ ಅಕಾಡೆಮಿಯ 'ಪ್ರತಿಭೆ ನಿಮ್ಮದು, ವೇದಿಕೆ ನಮ್ಮದು' ಸರಣಿಯಡಿ ಸತತ 116ನೇ ತಿಂಗಳ ಕಾರ್ಯಕ್ರಮ ಉಪ್ಪಿನಕುದ್ರು ಗೊಂಬೆ ಮನೆಯಲ್ಲಿ ಭಾನುವಾರ ಜರುಗಿತು.

ಗುರು ಕೃಷ್ಣ ಕಾಮತ್, ಮಧುಸೂದನ್ ಕಾಮತ್, ಶ್ರೀಕಾಂತ್ ನಾಯಕ್ ಸಿದ್ದಾಪುರ, ಶಾರದಾ ನಾಯಕ್ ಐರ್‌ಬೈಲ್, ವಿಶ್ವನಾಥ್ ಶ್ಯಾನುಭಾಗ್ ಹಾಗೂ ಅಕಾಡೆಮಿ ಅಧ್ಯಕ್ಷ ಭಾಸ್ಕರ್ ಕೊಗ್ಗ ಕಾಮತ್ ಉಪಸ್ಥಿತರಿದ್ದರು. ಮಧುಸೂಧನ್ ಕಾಮತ್, ಶ್ರೀಕಾಂತ್ ನಾಯಕ್ ಅವರನ್ನು ಅಕಾಡೆಮಿ ವತಿಯಿಂದ ಸನ್ಮಾನಿಸಲಾಯಿತು. ವಿಶ್ವನಾಥ್ ಶ್ಯಾನುಭಾಗ್, ಉಪ್ಪಿನಕುದ್ರು ಅವರನ್ನು ಗೌರವಿಸಲಾಯಿತು. ಶ್ರೀ ಲಕ್ಷ್ಮೀ ವೆಂಕಟರಮಣ ಮಹಿಳಾ ಭಜನಾ ಮಂಡಳಿ, ಬಾಲ ಭಜನಾ ಮಂಡಳಿ, ಸಿದ್ದಾಪುರ ಅವರಿಂದ 'ಭಜನಾ ಸಂಧ್ಯಾ' ನಡೆಯಿತು. ವಸಂತಿ ಆರ್. ಪಂಡಿತ್ ಪ್ರಾರ್ಥಿಸಿದರು. ನಾಗೇಶ್ ಶ್ಯಾನುಭಾಗ್ ನಿರೂಪಿಸಿದರು. ಉದಯ ಭಂಡಾರ್‌ಕಾರ್ ವಂದಿಸಿದರು.

ಬಿಂದುಶ್ರೀ ಪ್ರಶಸ್ತಿಗೆ ರಂಗಭೂಮಿ ಕಲಾವಿದೆ, ಶಾಸಕಿ ಉಮಾಶ್ರೀಗೆ ಆಯ್ಕೆ

ಉಪ್ಪುಂದ: ಬೈಂದೂರಿನ (ಬಿಂದುಪುರ) ಹೆಸರಿನಲ್ಲಿ ಕೊಡಮಾಡುವ ಬಿಂದುಶ್ರೀ ಪ್ರಶಸ್ತಿಗೆ ಈ ಬಾರಿ ಚಲನಚಿತ್ರ, ರಂಗಭೂಮಿ ಕಲಾವಿದೆ ಹಾಗೂ ವಿಧಾನಪರಿಷತ್ ಶಾಸಕಿ ಉಮಾಶ್ರೀ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಸಂಸ್ಥೆ ಅಧ್ಯಕ್ಷ ಆನಂದ ಮದ್ದೋಡಿ ತಿಳಿಸಿದರು.

ಉಪ್ಪುಂದದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೈಂದೂರು ಶಾರದಾ ವೇದಿಕೆಯಲ್ಲಿ ಫೆ. 19ರಿಂದ 22ರವರೆಗೆ ನಡೆಯುವ ಸುರಭಿ ಜೈಸಿರಿ ಹಾಗೂ ದಿ. ಹೊಸಾಡು ಸುಬ್ರಾಯ ಶೇರುಗಾರ್ ಸಂಸ್ಮರಣೆ ಸಾಂಸ್ಕೃತಿಕೋತ್ಸವವನ್ನು ಮಾಜಿ ಸಚಿವ ಪ್ರಮೋದ ಮಧ್ವರಾಜ್ ಉದ್ಘಾಟಿಸಲಿದ್ದು, ಉದ್ಯಮಿ ಡಾ. ಗೋವಿಂದ ಬಾಬು ಪೂಜಾರಿ ಅಧ್ಯಕ್ಷತೆ ವಹಿಸಲಿದ್ದಾರೆ. ಬಳಿಕ ಸುರಭಿಯ ಬಾಲಯಕ್ಷ ಕಲಾವಿದರಿಂದ ಕನಕಾಂಗಿ ಕಲ್ಯಾಣ ಹಾಗೂ ಯಕ್ಷ ಕಲಾವಿದರಿಂದ ಧರ್ಮಾಂಗದ ವಿಜಯ ಯಕ್ಷಗಾನ ಪ್ರದರ್ಶನಗೊಳ್ಳಲಿದೆ. ಫೆ.20ರಂದು ಶಾಸಕ ಗುರುರಾಜ ಗಂಟಿಹೊಳೆ ಅಧ್ಯಕ್ಷತೆ ಯಲ್ಲಿ ಹೈದರಾಬಾದ್ ಉದ್ಯಮಿ ಕೃಷ್ಣಮೂರ್ತಿ ಮಂಜ ಮಾರಣಕಟ್ಟೆ ನಟಿ ಉಮಾಶ್ರೀಗೆ ಬಿಂದುಶ್ರೀ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಬಳಿಕ ಭರತನಾಟ್ಯ, ಶ್ರೀ ಕೃಷ್ಣಲೀಲಾಮೃತಮ್ ಪ್ರದರ್ಶನಗೊಳ್ಳಲಿದೆ ಎಂದರು.

ಸಾಂಸ್ಕೃತಿಕೋತ್ಸವ

ಫೆ.21ರಂದು ದಿ. ಹೊಸಾಡು ಸುಬ್ರಾಯ ಶೇರುಗಾರ್ ಸಂಸ್ಮರಣೆ ಸಾಂಸ್ಕೃತಿಕೋತ್ಸವದ ಅಂಗವಾಗಿ ಮಾಜಿ ಮುಖ್ಯಮಂತ್ರಿ ಡಾ.ಎಂ. ವೀರಪ್ಪ ಮೊಯಿಲಿ ಸಂಸ್ಮರಣಾ ನುಡಿಗಳನ್ನಾಡಲಿದ್ದು, ಹೃದ್ರೋಗ ತಜ್ಞ ಡಾ. ಪ್ರಭಾಕರ ಎಚ್. ಅಧ್ಯಕ್ಷತೆ ವಹಿಸಲಿದ್ದಾರೆ. ಮಾಜಿ ಸಚಿವ ಕೃಷ್ಣ ಪಾಲೇಮಾರ್ ಶುಭಾಸಂಶನೆ ಗೈಯಲಿದ್ದು, ಮಾಜಿ



ಶಾಸಕ ಕೆ. ಗೋಪಾಲ ಪೂಜಾರಿ ಆಶಯ ನುಡಿಯನ್ನಾಡಲಿದ್ದಾರೆ. ನಂತರ ಜಾನಪದ ನಾಟ್ಯ ವೈವಿಧ್ಯ, ಖ್ಯಾತ ಹಾಸ್ಯ ಕಲಾವಿದ ಪ್ರೊ. ಕೃಷ್ಣೇಗೌಡ ಮತ್ತು ತಂಡದವರಿಂದ ಹಾಸ್ಯೋತ್ಸವ ನಡೆಯಲಿದೆ. ಫೆ.22ರಂದು ನಡೆಯುವ ಸಮಾರೋಪ ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ವಿಶೇಷ ಆಹ್ವಾನಿತರಾಗಿರುವರು. ಮಾಜಿ ಸಚಿವ ರಮಾನಾಥ ರೈ, ಸಮಾರೋಪ ನುಡಿಗಳನ್ನಾಡಲಿದ್ದಾರೆ. ಬಳಿಕ ನಾದ-ಗಾನಾಮೃತ ಕುಂಚ ಸಂಭ್ರಮ, ಮಂಗಳೂರಿನ ಸನಾತನ ನಾಟ್ಯಾಲಯದಿಂದ ಸನಾತನ ರಾಷ್ಟ್ರಾಂಜಲಿ ನಾಟ್ಯ ವೈವಿಧ್ಯ ನಡೆಯಲಿದೆ ಎಂದರು. ಸುರಭಿಪ್ರಧಾನ ಕಾರ್ಯದರ್ಶಿ ರಾಮಕೃಷ್ಣ ದೇವಾಡಿಗ, ಉಪಾಧ್ಯಕ್ಷ ಭಾಸ್ಕರ ಬಾಡ, ವೆಂಕಟ್ರಮಣ ಡಿ. ಮಯ್ಯಾಡಿ, ನಿರ್ದೇಶಕ ಸುಧಾಕರ ಪಿ. ಇದ್ದರು.

ಕುಂದಾಪುರ: ವೃತ್ತಿ ಮಾರ್ಗದರ್ಶನ, ಸ್ಪರ್ಧಾತ್ಮಕ ಪರೀಕ್ಷೆಗಳ ಮಾಹಿತಿ ಶಿಬಿರ



ಕುಂದಾಪುರ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕುಂದಾಪುರ ವತಿಯಿಂದ ತಾಲೂಕಿನ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿ ಗಳಿಗಾಗಿ ವೃತ್ತಿ ಮಾರ್ಗ ದರ್ಶನ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳ ಮಾಹಿತಿ ಶಿಬಿರ ಕುಂದಾಪುರದ ಶ್ರೀ ನಾರಾಯಣ ಗುರು ಸಭಾಭವನದಲ್ಲಿ ಮಂಗಳವಾರ ನಡೆಯಿತು.

ಕುಂದಾಪುರ ಉಪವಿಭಾಗದ ಸಹಾಯಕ ಆಯುಕ್ತೆ ರಶ್ಮಿ ಎಸ್. ಆರ್. ಉದ್ಘಾಟಿಸಿದರು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಚಕ್ರವರ್ತಿ ಅಧ್ಯಕ್ಷತೆ ವಹಿಸಿದ್ದರು. ಶ್ರೀ ನಾರಾಯಣ ಗುರು ಸಭಾಭವನದ ಅಧ್ಯಕ್ಷ ಅಶೋಕ್ ಪೂಜಾರಿ ಶುಭಾಶಂಸನೆಗೈದರು. ರಾಜ್ಯ ಮಟ್ಟದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 10ನೇ ರ‍್ಯಾಂಕ್ ಪಡೆದ ಕುಂದಾಪುರ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯದ (ಬಾಬುಕೋಡಿ ನಿವಾಸಿ) ಜ್ಞಾನವಿ ಶೆಟ್ಟಿ ಅವರನ್ನು ಸನ್ಮಾನಿಸಯಿತು. ಎಸ್ಸೆಸ್ಸೆಲ್ಸಿ, ಪಿಯುಸಿಯಲ್ಲಿ ನೂರಕ್ಕೆ ನೂರರಷ್ಟು ಫಲಿತಾಂಶ ದಾಖಲಿಸಿದ ವಿದ್ಯಾರ್ಥಿ ನಿಲಯಗಳ ಮೇಲ್ವಿಚಾರಕರು, ಉತ್ತಮ ಸೇವೆ ಸಲ್ಲಿಸಿದ ಅಡುಗೆ ಸಿಬ್ಬಂದಿ ಹಾಗೂ ಮೆಂಟರ್‌ಗಳನ್ನು ಗೌರವಿಸಲಾಯಿತು. ತಹಶೀಲ್ದಾರ್ ಪ್ರದೀಪ್ ಕುರುಡೇಕರ್, ಕುಂದಾಪುರ ಪೊಲೀಸ್ ಉಪನಿರೀಕ್ಷಕ ನಂಜನಾಯ್ಕ ಎನ್., ಉಡುಪಿಯ ಭಾರತಿ ಡಿಜಿಟಲ್ ನಿರ್ದೇಶಕ ರಂಗ ನಾಯಕ್, ಪಿಡಿಒಗಳಾದ ಮಹೇಶ್ ನಾಯ್ಕ ಮತ್ತು ಹರೀಶ್ ಕುಮಾರ್ ಶೆಟ್ಟಿ ಭಾರತದ ಸಂವಿಧಾನ, ಎಂಜಿನಿಯರಿಂಗ್ ಕ್ಷೇತ್ರ, ಕಂದಾಯ ಇಲಾಖೆ ಹಾಗೂ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆ ಮತ್ತು ಉದ್ಯೋಗಾವಕಾಶಗಳ ಬಗ್ಗೆ ಮಾಹಿತಿ ನೀಡಿದರು. ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಆಶಾದೇವಿ ನಾಯಕ್ ಇದ್ದರು. ಲತಾ ಸ್ವಾಗತಿಸಿದರು. ಶೇಖರ್ ಗೌಡ ನಿರೂಪಿಸಿದರು.

ಅಧ್ಯಕ್ಷರಾಗಿ ಲೋಕೇಶ್ ಶೆಟ್ಟಿಗಾರ್ ಆಯ್ಕೆ

ಹೆಬ್ರಿ: ಮುದ್ರಾಡಿ ಶೆಟ್ಟಿಗಾರ್ ಸಮಾಜ ಸೇವಾ ಸಂಘ ಮಹಿಳಾ ವೇದಿಕೆ ಹಾಗೂ ಯುವ ವೇದಿಕೆ ಅಜೆಕಾರು ವಲಯ ದಶಮಾನೋತ್ಸವ ಪೂರೈಸಿ, ಇತ್ತೀಚೆಗೆ ನಡೆದ ಸಭೆಯಲ್ಲಿ ಕಾರ್ಯಕಾರಿ ಸಮಿತಿ ರಚನೆಗೊಂಡಿದ್ದು, ಅಧ್ಯಕ್ಷರಾಗಿ ಲೋಕೇಶ್ ಶೆಟ್ಟಿಗಾರ್ ಕನ್ಯಾನ ಆಯ್ಕೆಯಾಗಿದ್ದಾರೆ. ಗೌರವ ಅಧ್ಯಕ್ಷರಾಗಿ ಸಂಘದ ಮಾಜಿ ಅಧ್ಯಕ್ಷರಾದ ಸನತ್ ಕುಮಾರ್, ಉಪಾಧ್ಯಕ್ಷರಾಗಿ ರಾಘವೇಂದ್ರ ಶೆಟ್ಟಿಗಾರ್ ಬಚ್ಚಪ್ಪು, ಕಾರ್ಯದರ್ಶಿಯಾಗಿ ನಾಗರಾಜ ಶೆಟ್ಟಿಗಾರ್ ಕಬ್ಬಿನಾಲೆ, ಕೋಶಾಧಿಕಾರಿಯಾಗಿ ಸದಾಶಿವ ಶೆಟ್ಟಿಗಾರ್ ಕನ್ಯಾನ, ಯುವ ವೇದಿಕೆ ಅಧ್ಯಕ್ಷರಾಗಿ ಸುಧಾಕರ್ ಕೆಲಕಿಲ, ಮಹಿಳಾ ವೇದಿಕೆ ಅಧ್ಯಕ್ಷರಾಗಿ ಅಶ್ವಿನಿ ಉಜೂರು ಹಾಗೂ ವಿವಿಧ ಹುದ್ದೆಗಳಿಗೆ ಪದಾಧಿಕಾರಿಗಳು ಆಯ್ಕೆಗೊಂಡಿದ್ದಾರೆ.



ಮಾದಯ್ಯ ಶೆಟ್ರಮನೆ ಸಪರಿವಾರ ಶ್ರೀ ಉಮಾಮಹೇಶ್ವರ ದೇವಸ್ಥಾನದ ವಾರ್ಷಿಕ ವರ್ಧಂತಿ, ಶ್ರೀ ಮನ್ಮಹಾರಥೋತ್ಸವ ಸಮಾರೋಪ

ಜೀವನದಲ್ಲಿ ಧರ್ಮ-ಅಧರ್ಮ, ಪುಣ್ಯ ಪಾಪದ ಕಲ್ಪನೆ ಇರಲಿ: ಲೋಕೇಶ ಅಡಿಗ

ಉಪ್ಪುಂದ: ಸಾರ್ವಕಾಲಿಕವಾಗಿ ಪ್ರತಿಯೊಬ್ಬರೂ ಅನುಸರಿಸಬೇಕಾದ ಮಾರ್ಗವೇ ಧರ್ಮ. ಧರ್ಮವೆಂಬುದು ಎಲ್ಲರನ್ನೂ ಒಳ್ಳೆಯತನದಲ್ಲಿ ಬದುಕುವಂತೆ ಮಾಡುವ ವ್ಯವಸ್ಥೆ. ಬೆಟ್ಟದಷ್ಟು ಆಶೋತ್ತರಗಳು ಈಡೇರಿಸಿಕೊಳ್ಳುವ ಆತುರದಲ್ಲಿ ಅನ್ಯಾಯ, ಅಧರ್ಮ ಮಿತಿಮೀರಬಾರದು ಎಂಬ ಕಾರಣಕ್ಕೆ ಧರ್ಮದ ಚೌಕಟ್ಟನ್ನು ಹಾಕಲಾಯಿತು. ಧರ್ಮದ ಹಿಂದೆ ದೈವಶಕ್ತಿ ಇದ್ದಾಗ ಮನುಷ್ಯ ಸನ್ಮಾರ್ಗದಲ್ಲಿ ನಡೆಯುತ್ತಾನೆ ಎಂದು ಶೃಂಗೇರಿ ಶ್ರೀ ಶಾರದಾಪೀಠದ ಪ್ರಾಂತೀಯ ಧರ್ಮಾಧಿಕಾರಿ ಬಡಾಕೆರೆ ಲೋಕೇಶ ಅಡಿಗ ಹೇಳಿದರು.

ಉಪ್ಪುಂದ ಮಾದಯ್ಯ ಶೆಟ್ರಮನೆ ಸಪರಿವಾರ ಶ್ರೀ ಉಮಾಮಹೇಶ್ವರ ದೇವಸ್ಥಾನದ ವಾರ್ಷಿಕ ವರ್ಧಂತಿ ಹಾಗೂ ಶ್ರೀ ಮನ್ಮಹಾರಥೋತ್ಸವದ ಸಮಾರೋಪ



ಸಮಾರಂಭದಲ್ಲಿ ಧಾರ್ಮಿಕ ಉಪನ್ಯಾಸ ನೀಡಿದರು. ನಮ್ಮನ್ನು ಮೀರಿದ ಶಕ್ತಿಯೊಂದು ಜಗತ್ತನ್ನು ನಿಯಂತ್ರಣ ಮಾಡುತ್ತಿದೆ ಎಂಬುದು ನಿತ್ಯಾನುಭವಕ್ಕೆ ಸಿದ್ಧವಾದ ಸಂಗತಿ. ಆಸ್ತಿಕನ ಬದುಕಿನ ನಡೆಯ ಹಿಂದಿನ ದೈವಶ್ರದ್ಧೆ ಹಾಗೂ ನಂಬಿಕೆ ತಪ್ಪು ಮಾಡಲು ಹಿಂಜರಿಯುವಂತೆ ಮಾಡುತ್ತದೆ. ಕೈಮೀರಿ ತಪ್ಪುಗಳಾದಾಗಲೂ ಆತ ಪಶ್ಚಾತ್ತಾಪ ಪಡುತ್ತಾನೆ. ಜೀವನದಲ್ಲಿ ಧರ್ಮ-ಅಧರ್ಮ, ಪುಣ್ಯ ಪಾಪದ ಕಲ್ಪನೆ ಇದ್ದರೆ ಮಾತ್ರ ನಾವು ಸನ್ಮಾರ್ಗದಲ್ಲಿ ನಡೆಯಲು ಸಾಧ್ಯ. ನಮ್ಮ ಇಚ್ಛೆ ಈಡೇರಬೇಕಾದರೇ ಅದಕ್ಕೆ ಪೂರಕವಾಗಿ ದೈವಿಚ್ಛೆಯೂ ಕೂಡಿಬರಬೇಕು. ಇಚ್ಛೆ ಇದ್ದು ದೈವಿಚ್ಛೆ ವಿರುದ್ಧ ದಿಕ್ಕಿನಲ್ಲಿದ್ದಾಗ ಕಾರ್ಯಸಿದ್ಧಿ ಸಾಧ್ಯವಿಲ್ಲ. ಜ್ಞಾನ, ಭಕ್ತಿ, ವೈರಾಗ್ಯಗಳೇ ಮೊದಲಾದ ಸದ್ಗುಣಗಳ ಜೊತೆಗೂಡಿ ಮಾಡುವ ನಾಮ ಸ್ಮರಣೆಯಿಂದ ಭಗವಂತನನ್ನು ತೃಪ್ತಿ ಪಡಿಸಲು ಸಾಧ್ಯವಿದೆ ಎಂದರು.

ಬೈಂದೂರು ಯಡ್ತರೆಮನೆ ಡಾ. ವೈ. ಹರೀಶಕುಮಾರ್ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಪ್ರಾಂತೀಯ ಧರ್ಮಾಧಿಕಾರಿ ಬಡಾಕೆರೆ ಲೋಕೇಶ ಅಡಿಗ ಅವರನ್ನು ಸನ್ಮಾನಿಸಲಾಯಿತು. ಮಾಜಿ ಶಾಸಕ ಬಿ.ಎಂ. ಸುಕುಮಾರ ಶೆಟ್ಟಿ, ಕೊಲ್ಲೂರು ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೆ. ಬಾಬು ಶೆಟ್ಟಿ ಉಪ್ಪುಂದ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಯು. ಸತೀಶ ಶೆಟ್ಟಿ, ಗ್ರಾ.ಪಂ. ಅಧ್ಯಕ್ಷ ಮೋಹನಚಂದ್ರ ಉಪ್ಪುಂದ, ಮಾದಯ್ಯ ಶೆಟ್ರಮನೆಯ ಯು. ಸೀತಾರಾಮ ಶೆಟ್ಟಿ, ಶೇಖರ ಶೆಟ್ಟಿ, ನಾಗಯ್ಯ ಶೆಟ್ಟಿ, ನಾರಾಯಣ ಶೆಟ್ಟಿ, ಹರೀಶಕುಮಾರ್ ಶೆಟ್ಟಿ ಇದ್ದರು. ಯುಬಿಎಸ್ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಯು.ಬಿ. ಶೆಟ್ಟಿ ಪ್ರಾಸ್ತಾವಿಸಿದರು. ಪತ್ರಕರ್ತ ಕೆ.ಸಿ. ರಾಜೇಶ ಕಾರ್ಯಕ್ರಮ ನಿರ್ವಹಿಸಿದರು.

ನಂತರ ಶ್ರೀ ರಾಮೇಶ್ವರ ಕ್ಷೇತ್ರ ಮಹಾತ್ಮೆ ಯಕ್ಷಗಾನ ತಾಳಮದ್ದಳೆ ನಡೆಯಿತು.